
# ವೇದಾಂತ ಸಂದೇಶಗಳು

## ಸಂಪುಟ 5

## ಭಾಗ - 1



ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573211, ದೂರವಾಣಿ : 08175-573820

www.adhyatmaprakasha.org

# ಶ್ರೀಶ್ರೀಗಳವರ ಕೃತಿಗಳು

## (ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ ಆಯ್ದ ಲೇಖನಗಳ ಸಂಗ್ರಹ)

1923ರಲ್ಲಿ ಪ್ರಾರಂಭವಾದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 1975ರವರೆಗೂ ಶ್ರೀ ಶ್ರೀಗಳವರೇ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ವೇದಾಂತದಲ್ಲಿ ಅಭಿರುಚಿಯನ್ನುಂಟು ಮಾಡುವಂತಹ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು ಈಗ ಹಳೆಯ ಸಂಪುಟಗಳು ದೊರಕುತ್ತಿಲ್ಲ. ಈ ಲೇಖನಗಳು ಈಗಿನ ಸನ್ನಿವೇಶಕ್ಕೂ ಸಹ ಉಪಯುಕ್ತವಾಗುತ್ತವೆ ಎಂದು ಅನೇಕ ಭಕ್ತರ ಅಪೇಕ್ಷೆಯಂತೆ ಗ್ರಂಥ ರೂಪದಲ್ಲಿ ಹೊರ ತಂದಿರುವ ಕೆಲವು ಪುಸ್ತಕಗಳ ಕಿರುಪರಿಚಯ.

### 1. ಋಗ್ವೇದೀಯ ಪುರುಷಸೂಕ್ತ (ಮಂತ್ರಾರ್ಥ ವಿವೇಚನೆ)

ಅ.ಪ್ರ. ಪತ್ರಿಕೆಯ 24ನೆ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ಪೂಜೆ ಮಾಡುವ ಪ್ರತಿಯೊಬ್ಬ ಆಸ್ತಿಕನಿಗೂ ತುಂಬ ಉಪಕಾರಿಯಾಗಿದೆ. ನಿಜವಾದ ಅರ್ಥವು ತಾತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ ಉಪಾಸನೆ, ಜ್ಞಾನಪರವಾಗಿದೆಯೆಂಬುದನ್ನು ಮಾರ್ಮಿಕವಾಗಿ ಹೃದಯಕ್ಕೆ ತಾಕುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲ ವೇದದವರಿಗೂ ಮತ್ತು ಆಸ್ತಿಕ ಮಹಾಶಯರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2011, ಪು. 115, ಬೆಲೆ. 30 ರೂ.)

### 2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ)

1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ "ಈ ತಿಂಗಳ ಸಂದೇಶ" ಎಂಬ ಶೀರ್ಷಿಕೆಯಲ್ಲಿ ಶ್ರೀಶ್ರೀಗಳವರು ಬರೆದು ಅ.ಪ್ರ. ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. "ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ, ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು" ಎಂಬಿವೇ ಮುಂತಾದ ಮಹತ್ಪೂರ್ಣವಾದ ವಿಚಾರಗಳಿಂದ ತುಂಬಿ, ತತ್ತ್ವಜಿಜ್ಞಾಸುಗಳಿಗೆ ದಾರಿದೀಪದಂತಿದೆ. ಸಂಸ್ಕೃತ ಬಾರದವರಿಗೂ, ಸರಿಯಾದ ಗುರುಗಳು ದೊರಕದವರಿಗೂ ಈ ಗ್ರಂಥವು ಮಾರ್ಗದರ್ಶನವಾಗಿದೆ.

(ಎರಡನೆಯ ಮುದ್ರಣ, 2011, ಪು. 218, ಬೆಲೆ. 50 ರೂ.)

### 3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ ಸಿರಿ)

ಬೇರೆ ಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 8, 9, 21, 26, 27ರಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇರಿವಿನ ಅರಿವು (2) ಆನಂದ ಸ್ವರೂಪವಾದ ಆತ್ಮನ ವಿಚಾರ (3) ಅಧ್ಯಾತ್ಮ ಸಾಧನಗಳು (4) ಜ್ಞಾನಸಾಧನೆಗಳು ಮತ್ತು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು ಮತ್ತು ಉಪಾಸನಾ ಕ್ರಮವನ್ನೂ ಶಾಸ್ತ್ರೀಯ ರೀತಿಯಲ್ಲಿ ತಿಳಿಸಿದೆ.

(ಮೊದಲನೆಯ ಮುದ್ರಣ, 2010, ಪು. 247, ಬೆಲೆ. 50 ರೂ.)

(ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.)

ಅಧ್ಯಾತ್ಮಗ್ರಂಥಾವಳಿ

# ವೇದಾಂತ ಸಂದೇಶಗಳು

## ಸಂಪುಟ -5

## ಭಾಗ 1

## ಶ್ರೀ ಶ್ರೀಗಳವರ ಹಿತವಚನಗಳು

ಲೇಖಕರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ : 251

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂರವಾಣಿ : 08175 273820
Visit us at www.adhyatmaprakasha.Org.
2011

**VEDANTA SANDESHAGALU, PART V, -Collection of Articles Published in Adhyatma Prakasha Magazine,**
Written by **Sri Sri Sacchidanandendra Saraswathi Swamiji;**
Published by Adhyatma Prakasha Karyalaya, Public Charitable Trust,
Holenarasipur - 573211(INDIA)
**Phone : 08175-273820**
visit us at www.adhyatmaprakasha.org.

ಮೊದಲನೆಯ ಮುದ್ರಣ : 2011 (1000 ಪ್ರತಿಗಳು)
First Edition : 2011 (1000 Copies)

ಪುಟಗಳು : 32 + 551 = 583

| | | |
|---|---|---|
| ಭಾಗ -1 | 1-146 | ಪು. |
| ಭಾಗ -2 | 147-285 | ಪು. |
| ಭಾಗ -3 | 286-415 | ಪು. |
| ಭಾಗ -4 | 416-551 | ಪು. |

**ಬೆಲೆ : ರೂ. 120/-** (ನಾಲ್ಕು ಭಾಗಗಳೂ ಸೇರಿ)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

**ಅಕ್ಷರ ಜೋಡಣೆ :**
ಪ್ರಶಾಂತ್ ಎಂಟರ್‌ಪ್ರೈಸಸ್
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂ - 28, ದೂರವಾಣಿ : 26761529

**ಮುದ್ರಣಸ್ಥಾನ :**
ಗಣೇಶ ಮಾರುತಿ ಪ್ರಿಂಟರ್ಸ್
ನಂ. 76, 6ನೇ ಮುಖ್ಯರಸ್ತೆ, 3ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು - 560 028
ದೂ. 9845347095

# ಪ್ರಕಾಶಕರ ಬಿನ್ನಹ

## ವೇದಾಂತ ಸಂದೇಶಗಳು – ಸಂಪುಟ 5

## (ಶ್ರೀ ಶ್ರೀಗಳವರ ಹಿತವಚನಗಳು)

ಬ್ರಹ್ಮೀಭೂತ ಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು 1920ರಲ್ಲಿ ಅಧ್ಯಾತ್ಮಪ್ರಕಾಶ ಕಾರ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ, 1937ರಲ್ಲಿ ಹೊಳೆನರಸೀಪುರಕ್ಕೆ ಸ್ಥಳಾಂತರಿಸಿದರು. ಜಾತಿ, ಮತ, ವರ್ಣ ಬೇಧವಿಲ್ಲದೆ ಸಾಮಾನ್ಯ ಜನರಿಗೂ ವೇದಾಂತದಲ್ಲಿ ಅಭಿರುಚಿಯನ್ನುಂಟುಮಾಡಬೇಕೆಂಬುದೇ ಅವರ ಉದ್ದೇಶವಾಗಿತ್ತು. ಈ ಕಾರ್ಯವನ್ನು ಈಡೇರಿಸಲು ಮುಖ್ಯವಾದ ಗ್ರಂಥಪ್ರಕಟಣೆ , ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ ಮತ್ತು ವಿದ್ಯಾನಿಲಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಕಾರ್ಯಾಲಯದ ಚಟುವಟಿಕೆಗಳನ್ನು ಮುಂದುವರೆಸಿದರು. 05.08.1975ರಲ್ಲಿ ಬ್ರಹ್ಮೀಭೂತರಾದ ಮೇಲೆಯೂ ಈ ಕಾರ್ಯವು ಸತತವಾಗಿ ಮುಂದುವರೆಯುತ್ತಿದೆ.

ಶ್ರೀ ಶ್ರೀಗಳವರೇ 201 ಗ್ರಂಥಗಳನ್ನು ಕನ್ನಡ, ಸಂಸ್ಕೃತ ಮತ್ತು ಆಂಗ್ಲ ಭಾಷೆಗಳಲ್ಲಿಯೂ ಮತ್ತೆ ಅವರ ಶಿಷ್ಯರುಗಳು ಬರೆದಿದ್ದ 50 ಗ್ರಂಥಗಳು, ಒಟ್ಟು 251 ಗ್ರಂಥಗಳು ಇಲ್ಲಿಯವರೆಗೆ ಕಾರ್ಯಾಲಯದ ಮೂಲಕ ಪ್ರಕಾಶನಗೊಂಡು ಎಲ್ಲಾ ಪುಸ್ತಕಗಳೂ ಮಾರಾಟಕ್ಕೆ ಸುಲಭ ಬೆಲೆಯಲ್ಲಿ ಈಗಲೂ ದೊರೆಯುತ್ತಿವೆ. ಅವರ ಅನಂತರ ಸ್ವಾಮಿಗಳವರು ಬರೆದು ಪ್ರಕಾಶಗೊಳ್ಳದೇಇದ್ದ ಬರವಣಿಗೆಗಳೂ ಗ್ರಂಥರೂಪದಲ್ಲಿ ಹೊರಬಂದಿವೆ. ಪುಸ್ತಕಗಳು ಮಾರಾಟವಾದಾಗಲೆಲ್ಲಾ ಪುನಃ ಮುದ್ರಣಕಾರ್ಯ ಮುಂದುವರೆಯುತ್ತಿದೆ. ಜನಪ್ರಿಯವಾಗಿರುವ ಪ್ರಸ್ಥಾನತ್ರಯ (ಭಗವದ್ಗೀತೆ, ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರ ಭಾಷ್ಯ) ಗ್ರಂಥಗಳು 4–5 ಬಾರಿ ಮುದ್ರಣವಾಗಿವೆ.

ಶ್ರೀ ಶ್ರೀಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 1943 ಜನವರಿಯಿಂದ ಪ್ರಾರಂಭಿಸಿ 1975ನೇ ಫೆಬ್ರವರಿಯವರೆಗೆ ಕಾಲ, ಸನ್ನಿವೇಶ, ಸಂದರ್ಭಗಳಿಗೆ ಹೊಂದುವಂತೆ ನೀತಿ ಬೋಧಕವಾದ ಲೇಖನಗಳನ್ನು 'ಶಂಕರನ ಪತ್ರಗಳು' ಎಂಬ ಶೀರ್ಷಿಕೆಯಲ್ಲಿ ಪ್ರಶ್ನೋತ್ತರ ರೂಪದಲ್ಲಿ 1–2 ಪುಟಗಳಂತೆ ಬರೆದು ಪ್ರಕಟಿಸುತ್ತಿದ್ದರು. ಈಗ ಪತ್ರಿಕೆಯ ಸಂಚಿಕೆಗಳು ಮಾರಾಟಕ್ಕೆ ಲಭ್ಯವಿಲ್ಲದ್ದರಿಂದಲೂ ಮತ್ತು ಈಗಿನ ಸನ್ನಿವೇಶ ಮತ್ತು ಜನಾಂಗಕ್ಕೆ ಈ ಲೇಖನಗಳು ಈಗಲೂ ಬಹಳ ಉಪಯುಕ್ತವಾಗಿವೆಯೆಂದು ಅನೇಕ ಭಕ್ತಾದಿಗಳ ಅಪೇಕ್ಷೆಯಂತೆ, ಸಮಿತಿಯವರು 5–6 ವರ್ಷಗಳ ಹಿಂದೆಯೇ ಅಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಪ್ರಕಟಿಸಿದ್ದ ಸುಮಾರು 4 ರಿಂದ

5 ಸಾವಿರ ಪುಟಗಳ ಈ ಸಾಹಿತ್ಯವನ್ನು 8–10 ಸಂಪುಟಗಳಲ್ಲಿ ಹೊರತರಲು ಪ್ರಯತ್ನಿಸಿದ್ದರು. ಆದರೆ ಸಂಗ್ರಹ ಮತ್ತು ವಿಷಯಗಳ ಅಡಿಯಲ್ಲಿ ವರ್ಗೀಕರಿಸಲು ಬಹಳ ತಡವಾಗಿ, ಈಗ 2–3 ವರ್ಷಗಳಿಂದೀಚೆಗೆ ಅನೇಕ ಭಕ್ತರ ಸಹಾಯದಿಂದ ಇಲ್ಲಿಯವರೆಗೆ ಕೆಳಗೆ ಸೂಚಿಸಿರುವ 4 ಸಂಪುಟಗಳು ಪ್ರಕಾಶನಗೊಂಡಿವೆ.

## ವೇದಾಂತ ಸಂದೇಶಗಳು

1. ಸಂಪುಟ –1 (ಪರಮಾರ್ಥ ಚಿಂತನೆ) : 223 ಪು. 1ನೆಯ ಮು. 9.12.2009ರಂದು (2ನೆಯ ಮು. 4.9.2011ರಂದು)
2. ಸಂಪುಟ –2 (ಉಪನಿಷತ್ತುಗಳ ಸಿರಿ) : 210 ಪು. 1ನೆಯ ಮು. 25.4.10 ರಂದು
3. ಸಂಪುಟ –3 (ಅಧ್ಯಾತ್ಮದ ಬೆಳಕು) : 356 ಪು. 1ನೆಯ ಮು. 28.12.10 ರಂದು
4. ಸಂಪುಟ –4 (ಅಧ್ಯಾತ್ಮ ಔನ್ನತ್ಯದೆಡೆಗೆ) : 334 ಪು. 1ನೆಯ ಮು. 22.5.11ರಂದು

551 ಪುಟಗಳು, 337 ಲೇಖನಗಳನ್ನೊಳಗೊಂಡು ನಾಲ್ಕು ಭಾಗಗಳಲ್ಲಿ ಪ್ರಕಟವಾಗಿ ಈಗ ಹೊರ ಬರುತ್ತಿರುವ ಗ್ರಂಥವೇ ಐದನೆಯ ಸಂಪುಟ.

ರೈಲು, ಬಸ್ಸುಗಳಲ್ಲಿ ಪ್ರಯಾಣಿಸುತ್ತಿರುವಾಗ, ದಿನದ ಅಲ್ಪ ವಿರಾಮಗಳ ಸಮಯದಲ್ಲಿ ಅಥವಾ ದಿನಕ್ಕೊಂದು ಲೇಖನದಂತೆ ಪ್ರತಿನಿತ್ಯವೂ ಓದಲು ಅನುಕೂಲವಾಗುವಂತೆ ನಾಲ್ಕು ಭಾಗಗಳಲ್ಲಿ ಪ್ರಕಟಿಸಲಾಗಿದೆ.

ವಿದ್ಯಾನಿಲಯದ ಪ್ರಧಾನಆಚಾರ್ಯರಾದ ಪೂಜ್ಯ ಶ್ರೀ ಶ್ರೀ ಅದ್ವಯಾನಂದೇಂದ್ರ ಸರಸ್ವತೀಸ್ವಾಮಿಗಳವರು, ಅನೇಕ ಭಾಷಾ ಪರಿಣಿತರೂ, ಉತ್ತಮವಾಗ್ಮಿಗಳೂ ಪಂಡಿತರೂ, ಅನೇಕ ಗ್ರಂಥಗಳ ಲೇಖಕರೂ ಆಗಿರುವ ಶತಾವಧಾನಿ ಡಾ|| ಆರ್. ಗಣೇಶ್‌ರವರು, ಶಿವಮೊಗ್ಗದಲ್ಲಿರುವ ವಯೋವೃದ್ಧರೂ, ಕಮಲ ನೆಹರು ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರೂ ಆಗಿದ್ದ ಡಾ|| ಎ.ಎಸ್. ವೇಣುಗೋಪಾಲರಾಯರು, ಸ್ವಾಮಿಗಳ ಮತ್ತು ಅವರ ಸಾರಸ್ವತ ಸೇವೆಯ ಬಗ್ಗೆ ಅನುಭವಪೂರ್ವಕ ಮತ್ತು ಪ್ರಶಂಶನಾರ್ಹವಾದ ಮುನ್ನುಡಿಗಳನ್ನು ನೀಡಿರುವ ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳು.

ಶ್ರೀಶ್ರೀಗಳವರು ದಾವಣಗೆರೆಯಲ್ಲಿ 1953ರಲ್ಲಿ ನಡೆಸಿದ ಚಾತುರ್ಮಾಸ್ಯದ ಸಮಯದಲ್ಲಿ ರಾಣೆಬೆನ್ನೂರಿನಲ್ಲಿ ವಾಸವಾಗಿದ್ದ ದಿ|| ನಾರಾಯಣರಾವ್ ಕೃಷ್ಣರಾವ್ ದೇಶಪಾಂಡೆಯವರ ಮನೆಗೆ ಬಂದು ಗೃಹಪ್ರವೇಶವನ್ನು ನೆರವೇರಿಸಿಕೊಟ್ಟಿದ್ದರು. ಪಾದಪೂಜೆಯ ಸಮಯದಲ್ಲಿ ಶ್ರೀಶ್ರೀಗಳವರ ಜತೆಯಲ್ಲಿ ತೆಗೆದ ಒಂದು ಫೋಟೋವನ್ನು ಸಹ ಇಲ್ಲಿ ಅಳವಡಿಸಿದೆ.



ನಾರಾಯಣರಾವ್ ದೇಶಪಾಂಡೆ
ಮತ್ತು ಧರ್ಮಪತ್ನಿ ಕೃಷ್ಣಾಬಾಯಿ

1953 ರಲ್ಲಿ

ಮಗ ಸೀತಾರಾಮ ದೇಶಪಾಂಡೆ
ಮಗಳು ಸರೋಜಾ ದೇಶಪಾಂಡೆ

# ಕಿರುಪರಿಚಯ

ಹಾವೇರಿಜಿಲ್ಲಾ ಹಿರೇಕರೂರುತಾಲ್ಲೂಕು ಮಾಸೂರುಗ್ರಾಮದಲ್ಲಿ ದೇಶಪಾಂಡೆವಂಶಸ್ಥರಾದ ನಾರಾಯಣರಾವ್‌ಕೃಷ್ಣರಾವ್ ದೇಶಪಾಂಡೆಯವರು 27-03-1907ರಲ್ಲಿ ಜನಿಸಿದರು. ಚಿಕ್ಕಂದಿನಲ್ಲಿಯೇ ತಂದೆಯವರನ್ನು ಕಳೆದುಕೊಂಡು ಮನೆಯಜವಾಬ್ದಾರಿಯನ್ನುಹೊತ್ತು ರಾಣಿಬೆನ್ನೂರಿನಲ್ಲಿ ವಾಸವಾಗಿದ್ದರು. ಮೊದಲಿನಿಂದಲೂ ಅಧ್ಯಾತ್ಮದಒಲವು ಇತ್ತು.

ಶ್ರೀ ಶ್ರೀಗಳವರು 1953ರಲ್ಲಿ ಹಾನ್‌ಗಲ್, 1954ರಲ್ಲಿ ಹಾವೇರಿಯಲ್ಲಿ ಒಂದು ವಾರಕಾಲ ದತ್ತಭಜನಾಸಪ್ತಾಹದಲ್ಲಿ ಮತ್ತು ದಾವಣಗೆರೆ ಹುಬ್ಬಳ್ಳಿಗಳಲ್ಲಿ ಚಾತುರ್ಮಾಸ್ಯಗಳನ್ನು ನೆರವೇರಿಸಿದಾಗ ಇವರ ಮನೆಗೆ 5-6 ಸಲ ಭೇಟಿನೀಡಿ ಉಪನ್ಯಾಸಗಳನ್ನು ನೀಡಿದ್ದರು. ಹೊಳೆನರಸೀಪುರದ ಕಾರ್ಯಾಲಯದಲ್ಲಿ 29.3.1950ರಲ್ಲಿ ಶ್ರೀ ಶ್ರೀಗಳವರ ಅಮೃತಹಸ್ತದಿಂದ ಪ್ರತಿಷ್ಠಿತವಾಗಿರುವ "ಶ್ರೀದಿಗ್ವಿಜಯರಾಮ" ದೇವರ ವಿಗ್ರಹಗಳು ಕೃಷ್ಣಶಿಲೆಯಲ್ಲಿ ರಾಣಿ ಬೆನ್ನೂರಿನಲ್ಲಿದ್ದ ಶ್ರೀಪಾಂಡುರಂಗಹನುಮಂತಾಚಾರ್ಯರೆಂಬ ಬ್ರಾಹ್ಮಣಶಿಲ್ಪಿಯಿಂದ ತಯಾರಿಸಿರುವ ಕಾರ್ಯದಲ್ಲಿ ವಿಶೇಷ ಆಸಕ್ತಿವಹಿಸಿದ್ದರು.

ಹೊಳೆನರಸೀಪುರದ ಗುರುಗಳ ಪರಿಚಯವಾಗಿ ಅವರ ಮಾರ್ಗದರ್ಶನದಲ್ಲಿ ಶಾಂಕರವೇದಾಂತದ ಅಭ್ಯಾಸಮಾಡುತ್ತಾ ಅದರ ಪ್ರಭಾವ ಇವರಲ್ಲಿ ಬೆಳೆಯಿತು. ಮುಂದೆ ಇವರೇ ದೇವರಾಯಕುಲಕರ್ಣಿಯವರಿಗೆ ಗುರುಗಳ ಪರಿಚಯಮಾಡಿಸಿ ಪಂಡಿತಪೂರ್ಣಚಟುವಟಿಕೆಗಳಿಗೆ ನಾಂದಿಹಾಡಿದರು. 95ವರ್ಷಗಳಕಾಲ ತುಂಬುಜೀವನ ನಡೆಸಿ ಆಷಾಢಶುದ್ಧ ನವಮಿ 2002ರಂದು ಸ್ವರ್ಗಸ್ಥರಾದರು. ಮಕ್ಕಳು ಅವರ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ.

ಸುಮಾರು ಆರೇಳು ತಿಂಗಳ ಹಿಂದೆ ಅವರ ಸಂಬಂಧೀಕರು ಬಂದು ನಾರಾಯಣರಾವ್ ದೇಶಪಾಂಡೆಯವರ ಸ್ಮರಣಾರ್ಥವಾಗಿ ಎಲ್ಲರೂ ಸೇರಿ ಒಟ್ಟುಗೂಡಿಸಿದ್ದ 45,000 ರೂ.ಗಳ ದೇಣಿಗೆ (Donation) ಯನ್ನು ಕೊಟ್ಟಿದುದರ ಮೊದಲನೆಯ ಪ್ರೇರಣೆಯೇ ಈ ಪುಸ್ತಕವನ್ನು ಇಷ್ಟು ಶೀಘ್ರದಲ್ಲಿ ಹೊರತರಲು ಅನುಕೂಲವಾಯಿತು. ಮತ್ತು ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ ನಮ್ಮ ಬಿನ್ನಹಕ್ಕೆ ಮನ್ನಣೆ ಕೊಟ್ಟು ಸಹಾಯ ಮಾಡಿದ ಭಕ್ತಾದಿಗಳ ಹೆಸರುಗಳ ಪಟ್ಟಿಯನ್ನು ಸಹ ಮುಂದೆ ಕೊಡಲಾಗಿದೆ. ಎಲ್ಲಾ ಭಕ್ತಾದಿಗಳ ಉದಾರಾಶ್ರಯದಿಂದ ಶೀಘ್ರವಾಗಿ ಮುದ್ರಿಸಿ ಪುಸ್ತಕವನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ಒದಗಿಸಲು ಅನುಕೂಲವಾಯಿತು.

ಅಂದವಾಗಿ ಅಕ್ಷರಜೋಡಣೆಯನ್ನು ಅತಿ ಶೀಘ್ರದಲ್ಲಿ ಶ್ರಮವಹಿಸಿ ಮಾಡಿಕೊಟ್ಟ ಪ್ರಶಾಂತ್ ಎಂಟರ್‌ಪ್ರೈಸಸ್‌ನ ಶ್ರೀಮತಿ ನಾಗರತ್ನರವರಿಗೂ, ಸಕಾಲಕ್ಕೆ ಸರಿಯಾಗಿ ಅಂದವಾದ ಮುದ್ರಣ, ಉತ್ತಮವಾದ ಕಾಗದ, ಆಕರ್ಷಕವಾದ ರಕ್ಷಾಕವಚಗಳನ್ನೊಳಗೊಂಡು ಮುದ್ರಿಸಿಕೊಟ್ಟ ಶ್ರೀ ಗಣೇಶ್ ಮಾರುತಿ ಪ್ರಿಂಟರ್ಸ್‌ನ ಶ್ರೀಶಾರದಾ ಪ್ರಸಾದ್‌ರವರಿಗೂ , ಮತ್ತುಸುಮಾರು ಆರು ತಿಂಗಳ ಸಮಯದಲ್ಲಿಗ್ರಂಥವನ್ನು ನಾಲ್ಕು ಪುಸ್ತಕಗಳಲ್ಲಿ ಒಂದೇ ಕಾಲದಲ್ಲಿ ಒಟ್ಟಿಗೆ ಲೋಕಾರ್ಪಣೆ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತ ವೃಂದದವರಿಗೂ ಕಾರ್ಯಾಲಯವು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಿದೆ.

ಎಂದಿನಂತೆ ಮಹಾಜನರು ಪುಸ್ತಕವನ್ನು ಬರಮಾಡಿಕೊಂಡು ಶ್ರೀಶ್ರೀಗಳವರ ಹಿತವಚನಗಳನ್ನು ಓದಿ ಜ್ಞಾನಾರ್ಜನೆಯನ್ನು ಹೊಂದಿ, ಕಾರ್ಯಾಲಯದಿಂದ ಸತತವಾಗಿ ನಡೆಯುತ್ತಿರುವ ಅಧ್ಯಾತ್ಮವಿದ್ಯಾ ಪ್ರಚಾರಕ್ಕೆ ಪ್ರೋತ್ಸಾಹ ನೀಡಬೇಕಾಗಿ ಪ್ರಾರ್ಥನೆ.

ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಗಳಲ್ಲಿ ಮಿಕ್ಕ ಉಪಯುಕ್ತವಾಗಿರುವ ಶ್ರೀಶ್ರೀಗಳವರ ಸಾಹಿತ್ಯವೆಲ್ಲಾ ಗ್ರಂಥರೂಪವಾಗಿ ಮಿಕ್ಕ ಸಂಪುಟಗಳು ಪ್ರಕಾಶನಗೊಳ್ಳಲಿ ಎಂದು ಭಗವಂತನನ್ನು ಪ್ರಾರ್ಥಿಸೋಣ.

ಖರ ಸಂವತ್ಸರ
ಮಾರ್ಗಶಿರ ಬಹುಳ
ಅಷ್ಟಮಿ, ಭಾನುವಾರ
ತಾ. 18-12-2011

ಪ್ರಕಾಶಕರು

## ಗ್ರಂಥ ಪ್ರಕಟನೆಗೆ ಸಹಾಯ ಮಾಡಿದ ಭಕ್ತಾದಿಗಳ ಹೆಸರುಗಳು.

### ರೂ. 5000 ಮತ್ತು ಮೇಲ್ಪಟ್ಟು

1. ಪೂಜ್ಯ ಭಗವತ್ಪಾದರು, ಕುರೂಡಿ
2. ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
3. ಹೆಚ್.ಎನ್. ವಿಶ್ವನಾಥ್, ಬೆಂ.
4. ಹೆಚ್.ಆರ್. ಗಂಗಾಧರ್, ಬೆಂ.
5. U.B.A. Ltd., ಬೆಂ.
6. ಎಸ್. ಪುಟ್ಟರಾಮಣ್ಣ, ಮೈಸೂರು
7. ಸಿ.ಎಸ್ ಗಾಯಿತ್ರಿ, ಬೆಂ.
8. ಶಕುಂತಲಾ ಛಾರಿಟಬಲ್ ಟ್ರಸ್ಟ್, ಬೆಂ.
9. ಯಮುನಾ ಸುಬ್ಬರಾವ್, ಬೆಂ.
10. ಎಮ್. ವಿ. ಶ್ರೀಧರ್, ಮೈಸೂರು
11. ಎಮ್.ಎನ್. ಮಂಜುನಾಥ್, ಲಕ್ನೋ
12. ಎಸ್. ವಿ. ಗಿರೀಶ್, ಹೈದರಾಬಾದ್
13. ಟಿ.ಎಲ್. ಹರಿಪ್ರಸಾದ್, ಬೆಂ.

### 500 ರೂ. ಮತ್ತುಮೇಲ್ಪಟ್ಟು

1. ಶ್ರೀಮತಿ ಶಾರದಮ್ಮ, ಬೆಂ.
2. ಶ್ರೀಮತಿ ಸುಶೀಲಮ್ಮ ಸಿದ್ಧಪ್ಪ, ಬೆಂ.
3. ಎನ್.ಆರ್. ಕಮಲಮ್ಮ ಬೆಂ.
4. ಹೆಚ್.ವಿ. ಆತ್ಮಾರಾಮಯ್ಯ, ಬೆಂ.
5. ಬಿ.ಎಸ್. ದೊರೆಸ್ವಾಮಿ ಅಯ್ಯರ್, ಬೆಂ.
7. ಬಿ.ಎನ್. ಮಂಜುನಾಥ್ ಬೆಂ.
8. ಬಿ.ವಿ. ವಿನಯ್, ಬೆಂ.
9. ಬಿ.ಎನ್. ಗೋಪಾಲರಾವ್, ಬೆಂ.
10. ಬಿ.ಆರ್. ಲಲಿತಮ್ಮ–ಅರುಂಧತಿಗುಪ್ತ, ಮದನಪಲ್ಲಿ
11. ಹೆಚ್.ಎಸ್.ಜಯಕುಮಾರ್, ಬೆಂ.
12. ಡಾ॥ ವೈ.ಎಸ್. ಅನಂತನಾರಾಯಣ್, ಮೈ
13. ಎಮ್.ಆರ್. ರಾಮನಾಥಯ್ಯ, ದೊಡ್ಡಮಗ್ಗೆ
14. ವಿ.ಕೆ. ಕನಾಗೊ, ಹೈದರಾಬಾದ್
15. ಸಿ.ಎಲ್. ದತ್ತಾತ್ರೇಯ, ಮೈಸೂರು
16. ಹೆಚ್.ವಿ. ಹಿರಣ್ಯಗೌಡ, ಬೆಂ.
17. ಹೆಚ್.ಎನ್. ರಂಗಸ್ವಾಮಿ, ಬೆಂ.
18. ಡಾ॥ ಎನ್.ಎಸ್. ಶ್ರೀರಾಮ್, ಮೈಸೂರು
19. ಹೆಚ್. ವೇದಮೂರ್ತಿ, ಬೆಂ.
20. ಎಸ್. ಚಂದ್ರಮೌಳಿ, ಹೊ.ನ.ಪುರ
21. ಕೆ.ವಿಜಯ ಕುಮಾರ್, ಉರವಕೊಂಡ
22. ಶಾಂತಮ್ಮ, ಬೆಂ.
23. ಸ್ವರ್ಣ ಹರಿನಾಥ್, ಬೆಂ.
24. ಎಸ್. ಅನಂತಮೂರ್ತಿ, ಬೆಂ.
25. ಆರ್. ಸಿದ್ಧಪ್ಪ, ಮೈ.
26. ಶ್ರೀಮತಿ ಗಿರಿಜಾ, ಹಾಸನ
27. ಟಿ.ಕೆ. ರುಕ್ಮಿಣಿಯಮ್ಮ ಬೆಂ.
28. ಎನ್. ಗೋಪಾಲರಾವ್, ಬೆಂ.
29. ಡಾ॥ ಕೆ.ಎಲ್.ರಾಮಸ್ವಾಮಿ, ಬೆಂ.
30. ಟಿ. ಆರ್. ಚಂದ್ರಶೇಖರ್, ಬೆಂ.
31. ಚಂದ್ರಮೋಹನ್, ಬೆಂ.
32. ಎಸ್. ಶ್ರೀನಿವಾಸಮೂರ್ತಿ, ಬೆಂ.
33. ಶ್ರೀಮತಿ ಜೆ. ಲೀಲಾವತಿ, ಬೆಂ.
34. ಸಿ.ಆರ್. ಲಲಿತಮ್ಮ, ಬೆಂ.
35. ಪಾರ್ವತಿ ಶಂಕರ್, ಬೆಂ.
36. ಶಚೀದೇವಿ, ಬೆಂ.
37. ಪದ್ಮಮೂರ್ತಿ, ಬೆಂ.
38. ಕೆ. ಸಿ. ಸುಬ್ರಹ್ಮಣ್ಯ, ಬೆಂ.
39. ಗಿರೀಶ್, ಹಾಸನ,
40. ಹೆಚ್.ಎಸ್. ಗಾಯತ್ರಿ, ಮೈಸೂರು.

# ಮುನ್ನುಡಿ

ನಮ್ಮೆಲ್ಲರ ಅದೃಷ್ಟದಂತೆ ಈಗ ''ಶಂಕರನ ಪತ್ರಗಳು'' ಎಂಬ ಐದನೆಯ ಸಂಪುಟವು ಪ್ರಕಾಶಗೊಳ್ಳುತ್ತಿದೆ. ಇದರಲ್ಲಿ 337 ಲೇಖನಗಳಿದ್ದು 580 ಪುಟಗಳಷ್ಟು ವಿಸ್ತಾರ ಗ್ರಂಥವಾಗಿದೆ. ಆದಕಾರಣ ಇದನ್ನು ಸಹ ಮತ್ತೆನಾಲ್ಕು ಭಾಗಗಳಾಗಿ ವಿಂಗಡಿಸಿ ಮುದ್ರಿಸಿದರೆ ವಾಚಕರಿಗೆ ಅನುಕೂಲವೆಂದು ತಿಳಿದು ಈ ರೀತಿ ಮುದ್ರಿಸಲಾಗುತ್ತಿದೆ. ವಿಚಾರಗಳು ಮತ್ತು ವಿಷಯಗಳು ವಿಸ್ತಾರವಾಗಿಯೂ ಆಳವಾಗಿಯೂ ಇವೆ ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಯೇ ಇಲ್ಲ. ಶ್ರೀಶ್ರೀಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಜನವರಿ 1943ರಿಂದ ಫೆಬ್ರವರಿ 1975ರ ವರೆಗೆ ಪ್ರತಿ ತಿಂಗಳೂ ಜಿಜ್ಞಾಸುಗಳಿಗೆ ರಸದೌತಣವೋ ಎಂಬಂತೆ 2–3 ಪುಟಗಳಲ್ಲಿ **ಶಂಕರನ ಪತ್ರಗಳು** ಎಂದು ಶೀರ್ಷಿಕೆಯನ್ನು ಕೊಟ್ಟು ಲೇಖನಗಳನ್ನು ಬರೆಯುತ್ತಿದ್ದರು. ಆ ಲೇಖನಗಳನ್ನು ಮುಖ್ಯವಾಗಿ ಎರಡು ಭಾಗ ಮಾಡಬಹುದು. **ಒಂದನೆಯದು** ಸಾಮಾನ್ಯವಾದ ವಿಷಯವನ್ನಿಟ್ಟುಕೊಂಡ ಲೇಖನಗಳು. ಉದಾ. ಕುಟುಂಬ ಭಾವನೆ, ಹರಿಜನ ಪ್ರೇಮ, ಉದ್ಯೋಗದ ಘನತೆ, ಧನದ ಉಪಯೋಗ, ಇತ್ಯಾದಿಗಳು. **ಎರಡನೆಯದು** ಶಾಸ್ತ್ರೀಯವಾದ ಲೇಖನಗಳು. ಪಾರಿವ್ರಾಜ್ಯ, ವೇದಾಂತವನ್ನು ಚರ್ಚಿಸುವ ಕ್ರಮ, ಆಧ್ಯಾತ್ಮಿಕ ಸಾಧನೆಗಳು, ನಿಜವಾದ ವಿದ್ಯೆ ಇವುಗಳಾಗಿವೆ.

ಸಾಮಾನ್ಯ ವಿಷಯವಾದ ಲೇಖನಗಳಲ್ಲೂ ಪರಂಪರೆಯಾಗಿ ತತ್ತ್ವವಿಚಾರಕ್ಕೆ ಇವುಗಳನ್ನು ಹೇಗೆ ಹೊಂದಿಸಿಕೊಳ್ಳುವುದು? ಎಂಬುದನ್ನು ತಿಳಿಸಿಯೇ ಇರುತ್ತಾರೆ. ಶಾಸ್ತ್ರೀಯ ಲೇಖನಗಳಲ್ಲಂತೂ ಪರಮಾರ್ಥತತ್ತ್ವವನ್ನು ಹೇಗೆ ಮನಗಾಣುವುದು? ಎಂಬುದನ್ನು ಬಲುಸುಂದರವಾಗಿ ಹೃದಯಂಗಮವಾಗಿ ಪ್ರತಿಪಾದಿಸಿರುತ್ತಾರೆ. ಶ್ರೀಶ್ರೀಗಳವರ ಮನಸ್ಸಿನಲ್ಲಿ ಶಂಕರನ ಪತ್ರಗಳು ಎಂಬ ಶೀರ್ಷಿಕೆಗೆ ಎರಡು ಅಭಿಪ್ರಾಯಗಳಿದ್ದಿರಬೇಕು. ಅದೇನೆಂದರೆ ಒಂದನೆಯದು 'ಶಂಕರ ಎಂದರೆ ಶಂಕರೋತೀತ–ಶಂಕರ' ಎಂದರೆ ಸುಖವನ್ನುಂಟು ಮಾಡುತ್ತದೆಯಾದ್ದರಿಂದ ಶಂಕರನಾದ ಪರಮಾತ್ಮನ ವಾಣಿಯಾದ ವೇದದ ಪತ್ರಗಳು ಎನ್ನುವುದು **ಮೊದಲನೆಯ** ಅರ್ಥ. ಎಂದರೆ ವೇದಗಳು ತಮಗೆ ಹೀಗೆ ಹೀಗೆ ನಡೆದುಕೊಳ್ಳಬೇಕೆಂತಲೂ ಮತ್ತೆ ಇನ್ನು ಕೆಲವು ರೀತಿಯಿಂದ ನಡೆದುಕೊಳ್ಳಬಾರದೆಂತಲೂ ತಿಳಿಸುತ್ತಿರುವ ಪತ್ರಗಳು ಎಂದರ್ಥ. **ಎರಡನೆಯದು** ಶ್ರೀ ಶಂಕರಾಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯದಲ್ಲಿ ಸಾರಿದ ದಿವ್ಯ ಸಂದೇಶಗಳ ಪತ್ರಗಳು ಎಂದರ್ಥ, ಎಂದರೆ ಅನ್ವರ್ಥ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರವರು ಸಕಲ ಮಾನವರಿಗೂ ಶ್ರೇಯಸ್ಸಾಗಲೆಂದು ಉಪದೇಶಿಸಿದ ವಿಚಾರಗಳನ್ನೊಳಗೊಂಡ ಪತ್ರಗಳು ಎಂದರ್ಥ.

ಹೇಗೆ ಆಗಲಿ ಇಲ್ಲಿರುವ ಲೇಖನಗಳು ಎಲ್ಲರಿಗೂ ಉಪಯುಕ್ತಕರವಾದದ್ದೇ ಎಂಬುದರಲ್ಲಿ ಎರಡು ಮಾತಿಲ್ಲ. ಲೇಖನಗಳೂ ಸಹ ಪುಟ್ಟ ಪುಟ್ಟ ಲೇಖನಗಳಾದ್ದರಿಂದ

ಓದುಗರಿಗೆ ಒಂದೊಂದರಲ್ಲೂ ಅಷ್ಟಷ್ಟರಮಟ್ಟಿನ ವಿಚಾರಗಳು ಅಳವಟ್ಟಂತಾಗುತ್ತದೆ. 'ಹಳ್ಳಿಗಳ ಅಭಿವೃದ್ಧಿ' (ಪು. 104) 'ಬಡತನದ ಅರ್ಥ' (ಪು. 131) ಇಂತಹ ಲೇಖನಗಳಿಂದ ಏನು ಪ್ರಯೋಜನ ? ಎಂದು ಯಾರಾದರೂ ಕೇಳಬಹುದು. ಆದರೆ ಅದರಲ್ಲೂ ನೀತಿ ತತ್ತ್ವಗಳ ವಿಚಾರಗಳು ಇದ್ದೇ ಇದೆ. ಹಳ್ಳಿಗಳ ವಾತಾವರಣಗಳು ಸರಿ ಇಲ್ಲದೇ ಹೋದರೆ ಅಥವಾ ಮನುಷ್ಯನ ಆಸೆಗೆ ಇತಿ ಮಿತಿ ಇಲ್ಲದಿದ್ದರೆ ಎಂತಹ ಕೆಡುಕುಗಳು ಕಷ್ಟಗಳುಂಟಾಗುತ್ತವೆ ಎಂಬುದು ಹಳ್ಳಿಗಳಲ್ಲಿ ವಾಸಮಾಡುವವರಿಗೇ ಗೊತ್ತು. ಮನುಷ್ಯನಿಗೆ ಆಧ್ಯಾತ್ಮಿಕ ಔನ್ನತ್ಯ ಉಂಟಾಗಬೇಕಾದರೆ ತನ್ನ ಸುತ್ತವಲಯಗಳು ಚೆನ್ನಾಗಿದ್ದರೆ ಸಾಧ್ಯವೇ ಹೊರತು ಮೂರುಹೊತ್ತು ತಾಪತ್ರಯದಲ್ಲೇ ಸಿಕ್ಕಿಕೊಂಡವನಾದರೆ ಯಾವ ಸಾಧನೆಯನ್ನು ತಾನೇ ಸಾಧಿಸಿಯಾನು? ದೂರದೇಶವನ್ನು ಕುರಿತು ಪ್ರಯಾಣಿಸುವವನಿಗೆ ಮಧ್ಯೆಮಧ್ಯೆ ಬರುವ ಕವಲುದಾರಿಗಳನ್ನು ಅಥವಾ ಅಡ್ಡದಾರಿಗಳನ್ನು ಅರಿಯದೇ ಹೋದರೆ ತನ್ನ ನಿರ್ದಿಷ್ಟ ದಾರಿಯನ್ನು ಹೇಗೆ ಮುಟ್ಟುತ್ತಾನೆ. ಆದ್ದರಿಂದ ತಪ್ಪುದಾರಿಯನ್ನು ಬಿಟ್ಟು ಸರಿಯಾದ ಮಾರ್ಗದಲ್ಲಿ ಹೋಗಿ ತನ್ನ ಗುರಿಯನ್ನು ಸೇರುವಂತೆ ಪ್ರತಿಯೊಂದು ವಿಚಾರವನ್ನು ಕೂಲಂಕಷವಾಗಿ ವಿಚಾರಮಾಡಿ ಸನ್ಮಾರ್ಗವನ್ನವಲಂಬಿಸಬೇಕು.

ಹೀಗೆ ಶ್ರೀಶ್ರೀಗಳವರು ಪ್ರಾಸಂಗಿಕವಾಗಿ 'ದೆವ್ವಗಳ ಕಾಟ' (ಪು. 331) 'ಗೋತ್ರಪ್ರವರಗಳು' (ಪು. 358), 'ಕೃಷಿ ಜೀವನ (ಪು. 390) ಇತ್ಯಾದಿ ವಿಚಾರಗಳನ್ನು ತೆಗೆದುಕೊಂಡು ವಿಚಾರವನ್ನು ಮಾಡಿದ್ದರೂ ಕಸದಲ್ಲಿ ರಸವನ್ನು ತೆಗೆ ಎಂಬ ನ್ಯಾಯದಂತೆ ಇಂತಹ ವಿಚಾರಗಳನ್ನು ಸಹ ಸಾಧಕನಾದವನು ಹೇಗೆ ವಿಚಾರ ಮಾಡಬೇಕು ಎಂದು ತೋರಿಸಿಕೊಟ್ಟಿರುತ್ತಾರೆ. ಇನ್ನು 'ಬ್ರಹ್ಮಚರ್ಯ' (ಪು. 485) 'ಭಗವದ್ಭಕ್ತಿ' (ಪು.505) 'ಆತ್ಮೈಕತ್ವವಿದ್ಯೆಯಲ್ಲಿ ನಿಷ್ಠೆ' (ಪು. 538) ಇತ್ಯಾದಿ ವಿಚಾರಗಳಂತೂ ಪಂಡಿತರೂ ಸಹ ತಲೆದೂಗುವ ಲೇಖನಗಳು ಏನಿವೆ, ಅವು ನೇರಾಗಿ ಪರಮಪುರುಷಾರ್ಥಕ್ಕೆ ಸಾಧನವಾದ ವಿಚಾರವನ್ನು ತಿಳಿಸುವ ಲೇಖನಗಳಾದ್ದರಿಂದ ಪ್ರತಿಯೊಬ್ಬ ಜಿಜ್ಞಾಸುವೂ ಅತ್ಯವಶ್ಯಕವಾಗಿ ಓದಲೇಬೇಕಾದ ಲೇಖನಗಳಾಗಿವೆ.

ಒಟ್ಟಿನಲ್ಲಿ ಈ ಗ್ರಂಥವು ಸರ್ವಾಂಗ ಸುಂದರವಾಗಿದೆಯಾದ್ದರಿಂದ ನಮ್ಮ ಕನ್ನಡನಾಡಿನ ಪ್ರತಿಯೊಬ್ಬ ವ್ಯಕ್ತಿಯೂ ಸಹ ಇದನ್ನು ಅತ್ಯವಶ್ಯವಾಗಿ ಕೊಂಡುಕೊಂಡು ಇದರಲ್ಲಿ ಪ್ರತಿಪಾದಿತವಾದ ವಿಚಾರವನ್ನು ಮನನ ಮಾಡಿ ಕೃತಾರ್ಥರಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಸರ್ವಾತ್ಮನಾದ ಶ್ರೀಮನ್ನಾರಾಯಣನು ಸರ್ವರಿಗೂ ಸದ್ಬುದ್ಧಿಯನ್ನು ಕೊಟ್ಟು ಕೃತಾರ್ಥರನ್ನಾಗಿ ಮಾಡಲೆಂದು ಹರೆಸುತ್ತಾ ಲೇಖನವನ್ನು ಇಲ್ಲಿಗೆ ಮುಗಿಸುತ್ತೇನೆ. (ವಿಭುರ್ವಿಜಯತೇತರಾಮ್ – ಪರಮಾತ್ಮನು ಸರ್ವೋತ್ಕೃಷ್ಟನಾಗಿ ಜಯಶೀಲನಾಗಿರುತ್ತಾನೆ.)

27–11–2011 — ಅದ್ವಯಾನದೇಂದ್ರಸರಸ್ವತೀಸ್ವಾಮಿ

ಶ್ರೀಃ

# ಪದಪೂಜೆ

ಲೋಕಹಿತವನ್ನು ಸಾಧಿಸುವಲ್ಲಿ ಹಲವು ಬಗೆಗಳುಂಟು. ಆದರೆ ಇವಾವುವೇ ಆದರೂ ಆತ್ಮಹಿತದ ಬೆಳಕಿನಲ್ಲಿಯೇ ಸಾಗಬೇಕು. ಎಂಥ ವಿದ್ಯೆಗಾದರೂ ಅಧ್ಯಾತ್ಮವಿದ್ಯೆಯ ಒತ್ತಾಸೆಯಿರಬೇಕಷ್ಟೆ ! ಇದಿಲ್ಲದೆ ಆಯಾ ವಿದ್ಯೆಗಳಿಗೆ ಪ್ರತಿಷ್ಠೆಯೆಂಬುದಿಲ್ಲ. ಇದನ್ನು ಅರಿಯದೆ ಭ್ರಾಂತರಾದ ಜನರು ತತ್ತ್ವಜ್ಞಾನವು ವಿವಿಧಜ್ಞಾನ ಕಲಾಶಾಖೆಗಳಂತೆ , ಜೀವಿಕಾತಂತ್ರಗಳಂತೆ ಪ್ರಯೋಜಕವಾಗಿಲ್ಲವೆಂದು ಹೇಳಿರುತ್ತಾರೆ. ಇಂಥ ತತ್ತ್ವವಿದ್ಯೆಯಾದರೂ ಮತ್ತೆ ನಾನಾಮತಗಳ ಕೋಲಾಹಲದಲ್ಲಿ ಕದಡಿಹೋಗಿರುವ ಸಂಭವವೇ ಹೆಚ್ಚು. ಈ ಎಲ್ಲ ಮತವಾದಗಳ, ಆಸ್ತಿಕ-ನಾಸ್ತಿಕ ಚರ್ಚೆಗಳ ಹಾಗೂ ಇವೆಲ್ಲವುಗಳ ಮೂಲವಾದ ಅವಿದ್ಯಾಕಲ್ಪಿತರಾಗ-ದ್ವೇಷಗಳ ಕತ್ತಲೆಯ ಮೊತ್ತವನ್ನು ಒತ್ತರಿಸುವಂತೆ ನಮ್ಮ ನಾಡಿಗೆ ಬಂದೊದಗಿದವರು ಬ್ರಹ್ಮೀಭೂತರಾದ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳೆಂಬುದರಲ್ಲಿಸಂದೇಹವಿಲ್ಲ.

ದಿಟವೇ, ಜಗತ್ತಿಗೆ ಬೆಳಕನ್ನಿತ್ತ ಮಹಾನುಭಾವರು ಅನೇಕ. ಉಪನಿಷದ್ದೃಷ್ಟಿಗಳಿಂದ ಮೊದಲ್ಗೊಂಡು ಕೃಷ್ಣ, ಬುದ್ಧ, ಶಂಕರ, ಅಲ್ಲಮ, ಗೋರಕ್ಷ, ರಾಮಕೃಷ್ಣ ರಮಣ ಮುಂತಾದ ಮಹನೀಯರ ಪಂಕ್ತಿ ಅನಾದ್ಯನಂತವೆಂಬಂತೆ ಕೋಡಿವರಿದಿದೆ ; ಪ್ಲೇಟೋ, ಅಗಸ್ಟೀನ್, ಎಕಾರ್ಟ್, ರೂಮಿ, ರುಬಿಯಾ ಮುಂತಾದ ವಿದೇಶೀ ಮಹಾತ್ಮರ ಯೋಗದಾನವೂ ಅತಿಶಯವಾದದ್ದು. ಇಂತಿದ್ದರೂ ನಮ್ಮ ನಾಡು-ನುಡಿಗಳ ಮೂಲಕ ನಮ್ಮ ಕಾಲದಲ್ಲಿ ನಿರತಿಶಯವಾದ ರೀತಿಯಲ್ಲಿ ಆತ್ಮತತ್ತ್ವವನ್ನು ನಿಸ್ಸಂದಿಗ್ಧ ವಿಧಿಯಿಂದ ಎಲ್ಲ ಬಗೆಯ ಜನರಿಗೂ ಎಟುಕುವಂತೆ ತಿಳಿಸಿಕೊಟ್ಟವರೆಂದರೆ ನಮ್ಮ ಸ್ವಾಮಿಗಳೇ.

ನಿಜವೇ, ನಮ್ಮ ನಾಡು-ನುಡಿಗಳ ಮೂಲಕ ವೇದಾಂತತತ್ತ್ವವನ್ನು ಇನ್ನಿತರ ಸಂಘ-ಸಂಸ್ಥೆಗಳೂ ವ್ಯಕ್ತಿ-ವಿದ್ವಾಂಸರೂ ಅನೂಚಾನವಾಗಿ ನಡೆಸಿಕೊಂಡು ಬಂದ ಜಾಡು ಇದ್ದೇ ಇದೆ. ಆದರೆ ಈ ಯತ್ನಗಳಾವುವೂ ನಮ್ಮ ಸ್ವಾಮಿಗಳ ದುಡಿಮೆಯಂತೆ ಸರ್ವಾಂಗ ಸಂಪೂರ್ಣವಲ್ಲ. ಏಕೆಂದರೆ ಇವು ಗುಣ-ಗಾತ್ರಗಳಲ್ಲಿಯೂ ಭಾಷಾವೈವಿಧ್ಯ - ಜಿಜ್ಞಾಸುವೈವಿಧ್ಯಗಳನ್ನು ಮುಟ್ಟುವಲ್ಲಿಯೂ ಅಸಮಾನವಾಗಿವೆ.

ಮೊತ್ತಮೊದಲಿಗೆ ಸ್ವಾಮಿಗಳ ಮಹತ್ಕಾರ್ಯದ ವೈಶಿಷ್ಟ್ಯ-ಅನನ್ಯತೆಗಳ ಹೆಗ್ಗುರುತುಗಳನ್ನು ಗಮನಿಸಬಹುದು :

1. ಯುಕ್ತ್ಯನುಭವಗಳ ಆಧಾರದ ಮೇಲೆ ಪರಮಾರ್ಥದ ಸ್ವರೂಪವು ಆತ್ಯಂತಿಕವಾಗಿ ನಿಶ್ಚಿತವಾದದ್ದು ಹಾಗೂ ಇಲ್ಲಿ ಬಳಕೆಗೊಳ್ಳುವ ಯುಕ್ತಿಗಳೂ

ಅನುಭವಗಳೂ ದೇಶ–ಕಾಲ–ವ್ಯಕ್ತಿವಿಶೇಷಗಳ ಪರಿಚ್ಛೇದಗಳಿಂದ ಮುಕ್ತವಾದ ಸರ್ವಸಾಮಾನ್ಯ ನಿರ್ವಿಶೇಷಸ್ತರದ್ದಾಗಿರುವುದು. ಜೊತೆಗೆ ಪರಮಾರ್ಥ ವೆಂಬುದು ಆತ್ಮವಶವೇ ಹೊರತು ಪರವಶವಲ್ಲವೆಂಬ ನಿಲುವು ನಿಸ್ಸಂದಿಗ್ಧವಾಗಿ ಸ್ಥಾಪಿತಗೊಂಡು ತನ್ಮೂಲಕ ಯಾವುದೇ ಮತಾತೀತನಾದ ಸ್ವತಂತ್ರ ಜಿಜ್ಞಾಸುವಿಗೆ ನೆಮ್ಮದಿ ಬಂದದ್ದು ಸ್ಮರಣೀಯ.

2. ತತ್ತ್ವಚಿಂತನೆಯ ನಿರಾಗ್ರಹವೂ ನಿಶಿತವೂ ಆದ ಸ್ವಾರಸ್ಯವು ಎಲ್ಲರಿಗೂ ಮುಟ್ಟುವಂತಾಗಿ ತನ್ಮೂಲಕ ಸ್ವಾನುಭವಶೋಧನೆಗೂ ಸಕಲವಿದ್ಯಾ ವಿಶ್ಲೇಷಣೆಗೂ ಸೊಗಸಾದ ಹಾದಿಯಾದದ್ದು ಹಿರಿಮೆಯ ಸಂಗತಿ.

3. ಸಾರ್ವತ್ರಿಕಾನುಭವ ಮತ್ತಿದನ್ನಾಧರಿಸಿದ ತರ್ಕಗಳೇ ಶಾಸ್ತ್ರವೊಂದಕ್ಕೆ ಶಾಸ್ತ್ರತ್ವವನ್ನು ಸಾಧಿಸಿಕೊಡುವಂಥ ಹದವು ಸಿದ್ಧಿಸಿ ತನ್ಮೂಲಕ ತತ್ತ್ವಚಿಂತನೆಯು ಅತ್ಯಂತ ವೈಜ್ಞಾನಿಕವೂ ಆಧುನಿಕ ಮನಸ್ಸಿಗೆ ಆಪ್ಯಾಯನವೂ ಆದದ್ದು. ಮುಖ್ಯವಾಗಿ ಯೋಗಿಪ್ರತ್ಯಕ್ಷದ ಅಭಿನಿವೇಶವು ತಪ್ಪಿ ವೇದಾಂತತತ್ತ್ವವು ಎಲ್ಲ ವಿಚಾರವಂತರ ಸೊತ್ತಾಗುವ ಹದ ಬಂದದ್ದು ಹೆಚ್ಚಿನ ಹೆಗ್ಗಳಿಕೆ.

4. ಸಚ್ಚಿದಾನಂದಗಳೇ ವೇದಾಂತದ ಬುನಾದಿಯೆಂದು ಅನನ್ಯರೀತಿಯಲ್ಲಿ ದೃಢೀಕರಿಸುವ ಮೂಲಕ ನಿರ್ವಿಶೇಷಸ್ವಾನುಭವಕ್ಕೇ ಅವಧಾರಣೆ ಸಂದು ಮತ–ಮಠ–ಗುರುವರ್ಗ–ಪವಿತ್ರಗ್ರಂಥ–ಪ್ರವಾಸಿಪರಂಪರೆ ಇತ್ಯಾದಿಗಳೆಲ್ಲ ಇದಕ್ಕೆ ಸಾಪೇಕ್ಷವಾಗಿರುವ ಸಂದರ್ಭ ಬಂದದ್ದು ದೊಡ್ಡ ಸುಧಾರಣೆ.

5. ಅಧ್ಯಾರೋಪ ಅಪವಾದವೆಂಬ ಮಹಾಪ್ರಕ್ರಿಯೆಯೂ ಇದರ ಅತ್ಯಂತ ಪ್ರಗಲ್ಭಯುಕ್ತಿಯಾದ ಅವಸ್ಥಾತ್ರಯಮೀಮಾಂಸೆಯೂ ತತ್ತ್ವಚಿಂತನೆಯ ಬುನಾದಿಯೆಂದು ಸ್ಪಷ್ಟವಾಗಿ ತಿಳಿದು ತನ್ಮೂಲಕ ಈ ಕೀಲಿಕೈ ಶ್ರೀಸಾಮಾನ್ಯನ ಕೈಗೂ ಬಂದು ಆತನಿಗೆ ಆತ್ಮಶ್ರೀ ಭಂಡಾರವು ದಕ್ಕಿದ್ದು ಮರೆಯಬಾರದ ಮಾತು.

6. ಎಲ್ಲ ಬಗೆಯ ಜ್ಞಾನಶಾಖೆಗಳಿಗೂ ಭಾವ ಶಾಖೆಗಳಿಗೂ ಜೀವಿಕಾಪ್ರಕಾರಗಳಿಗೂ ನೆಲೆ–ಬೆಲೆ ದಕ್ಕಿ ಸಕಲ ಮತಗಳ ಯುಕ್ತಾಯುಕ್ತತೆಗಳು ಅರಿವಾಗಿ ದಿಟವಾದ ಅರ್ಥದಲ್ಲಿ ಸರ್ವದರ್ಶನಸಮನ್ವಯವಾದದ್ದು ಮಿಗಿಲಾದ ಸಾಧನೆ.

ಈ ಹೆಗ್ಗಳಿಕೆಗಳ ಅನ್ವಯವನ್ನೇ ಸ್ವಾಮಿಗಳು ಮಾಡಿದ ಶಾಂಕರಭಾಷ್ಯಾನು–ವಾದಗಳಲ್ಲಿ, ಸ್ವತಂತ್ರ ವೇದಾಂತ ಗ್ರಂಥಗಳಲ್ಲಿ, ವಿವಿಧ ಮತಗಳ ಉತ್ತಮ ಕೃತಿಗಳ ಭಾಷಾಂತರ–ವ್ಯಾಖ್ಯಾನಗಳಲ್ಲಿ ವೇದಾಂತೇತಿಹಾಸ ಸಂಶೋಧನೆಯಲ್ಲಿ, ಸಂಸ್ಕೃತ

ಭಾಷೆ ಪ್ರಸಾರದಲ್ಲಿ ಕನ್ನಡ–ಇಂಗ್ಲಿಷ್–ಸಂಸ್ಕೃತ ಮಾಧ್ಯಮಗಳ ನೂರಾರು ಪ್ರಕಟನೆಗಳಲ್ಲಿ ನಿರಂತರ ವೇದಾಂತ ಪ್ರವಚನ–ಶಿಬಿರ–ಪತ್ರಿಕೋದ್ಯಮ–ಪ್ರಕಾಶನಾದಿಗಳಂಥ ಪ್ರಕಲ್ಪಗಳಲ್ಲಿ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ನಿರ್ಮಲವೂ ವಾತ್ಸಲ್ಯಪೂರ್ಣವೂ ಆದ ನೈಷ್ಠಿಕ ಜೀವನದಲ್ಲಿ ಕಾಣಬಹುದು.

ಇವರು ಮಾಡಿದಂಥ ಸಮಗ್ರಶಾಂಕರಭಾಷ್ಯಾನುವಾದಗಳು ಜಗತ್ತಿನ ಯಾವ ಭಾಷೆಯಲ್ಲಿಯೂ ಇಲ್ಲ ; ಇವರಂತೆ ಅಧಿಕಾರಿಭೇದವನ್ನರಿತು ಸರಳಾತಿಸರಳವೂ ಸಂಕ್ಷೇಪಸುಲಭವೂ ಆದ ಕೃತಿಗಳಿಂದ ಮೊದಲ್ಗೊಂಡು ಪ್ರೌಢಗಂಭೀರವೂ ವಿಸ್ತೃತವೈದುಷ್ಯವೂ ಆದ ಗ್ರಂಥಗಳವರೆಗೆ ದ್ವಿಶತಾಧಿಕ ಪುಸ್ತಕಗಳನ್ನು ಹಲವು ನುಡಿಗಳಲ್ಲಿ ನಿರ್ಮಿಸಿದವರು ಮತ್ತೊಬ್ಬರಿಲ್ಲ. ಸ್ವಯಂ ಶಂಕರರ ಅಡಿಜಾಡಿನಲ್ಲಿ ನಡೆದವರಾಗಿದ್ದರೂ ಧಮ್ಮಪದ, ವೇದಾರ್ಥಸಂಗ್ರಹ ಮುಂತಾದ ಅನೇಕ ವಿವಿಧ ಮತಗಳ ಉತ್ತಮಗ್ರಂಥಗಳನ್ನು ಹೃದಯಂಗಮವಾಗಿ ರಚಿಸಿದ ಹಿರಿಮೆ ಇವರದೇ. ಒಬ್ಬರೇ ವ್ಯಕ್ತಿಯು ಇದುವರೆಗೆ ಯಾವ ಮಹಾಸಂಸ್ಥೆ–ಮಠ–ವಿಶ್ವವಿದ್ಯಾಲಯಗಳೂ ನಡೆಸದಂಥ ಜ್ಞಾನದಾಸೋಹವನ್ನು ಮಹೋನ್ನತಸ್ತರದಲ್ಲಿ ಮಾಡಿದ ದೃಷ್ಟಾಂತ ಮತ್ತೊಂದಿಲ್ಲವೆಂಬಂತೆ ಮಾನಿತರಾದದ್ದು ಅತಿಶಯದ ಸಂಗತಿ. ಈ ಎಲ್ಲ ಕಾರಣಗಳಿಂದಲೇ ನಮ್ಮ ಸ್ವಾಮಿಗಳು ಕನ್ನಡನಾಡಿನ ಶಂಕರಾಚಾರ್ಯರೆನಿಸಿದ್ದಾರೆ. ಅಷ್ಟೇ ಅಲ್ಲ, ಆಧುನಿಕ ಜಗತ್ತಿಗೇ ಜಗದ್ಗುರುವಾಗಿದ್ದಾರೆ. ಭಾರತೀಯ ಪುನರುತ್ಥಾನವೆಂದು ಹೆಸರಾದ ಹತ್ತೊಂಬತ್ತು–ಇಪ್ಪತ್ತನೆಯ ಶತಾಬ್ದಿಗಳಲ್ಲಿ ಆತ್ಮಾನುಭವದ ಶಿಖರವನ್ನು ಮುಟ್ಟಿ ಅದನ್ನು ಸೂಚ್ಯಗ್ರವಾಗಿ ಹೇಳಿದವರ ಪೈಕಿ ಅಗ್ರೇಸರರು ರಮಣರಾದರೆ ಇಂಥ ದರ್ಶನಕ್ಕಿರುವ ಪ್ರಕ್ರಿಯಾಸ್ವಾರಸ್ಯವನ್ನೂ ಶಾಸ್ತ್ರಶುದ್ಧಿಯನ್ನೂ ಅತ್ಯದ್ಭುತವಾಗಿ ಒಕ್ಕಣಿಸಿದವರ ಪೈಕಿ ಅಗ್ರಗಣ್ಯರು ನಮ್ಮ ಸ್ವಾಮಿಗಳೇ.

ಇಂಥ ಮಹಾನುಭಾವರು ಅನೇಕವರ್ಷಗಳ ಕಾಲ ನಡೆಸಿಕೊಂಡು ಬಂದ ಪ್ರಾಮಾಣಿಕ ವೇದಾಂತಪತ್ರಿಕೆ 'ಅಧ್ಯಾತ್ಮಪ್ರಕಾಶ'ದಲ್ಲಿ ನಿಯತವಾಗಿ ಬರೆದ ಅಸಂಖ್ಯ ಲೇಖನಗಳೆಲ್ಲ ಇದೀಗ ಹಲವು ಸಂಪುಟಗಳಲ್ಲಿ ಸಂಚಯಗೊಳ್ಳುತ್ತಿರುವುದು ನಿಜವಾಗಿ ಮುದಾವಹ. ಈ ಸರಣಿಯಲ್ಲಿ ಪ್ರಸ್ತುತ ಶ್ರೀಗಳು ಸುಮಾರು ಮೂವತ್ತೆರಡು ವರ್ಷಗಳ ಕಾಲ (1943ರಿಂದ 1975) ಎಡೆಬಿಡದೆ ಬರೆಯುತ್ತ ಬಂದ **'ಶಂಕರನ ಪತ್ರಗಳು'** ಎಂಬ ವಿಶಿಷ್ಟವೂ ಅವರ ಸ್ವಭಾವದ್ಯೋತಕವೂ ಆದ ಪತ್ರಸಾಹಿತ್ಯ ಅಣಿಗೊಳ್ಳುತ್ತಿದೆ. ಓದುಗರ, ವೇದಾಂತ–ಧರ್ಮ–ಕರ್ಮ ಜಿಜ್ಞಾಸುಗಳ, ಆರ್ತರಾದ ಜನಸಾಮಾನ್ಯರ ಸಂದೇಹಗಳಿಗೆಲ್ಲ ಸ್ವಾಮಿಗಳು ನೀಡಿದ ಉತ್ತರಗಳೇ ಈ ಹೊತ್ತಿಗೆಯ ಸಾಮಗ್ರಿ.

ಪ್ರತಿಯೊಂದು ಉತ್ತರವೂ ಮನನೀಯ ದಿಟವೇ, ಇಲ್ಲಿಯ ಉತ್ತರಗಳಲ್ಲಿ ಹೆಚ್ಚಿನವು ವಿಶೇಷಧರ್ಮಗಳೂ ತೀರ ಸಾಪೇಕ್ಷಗಳೂ ಆದ ವರ್ಣ–ಜಾತಿ–ಆಶ್ರಮ–ವೃತ್ತಿ–ಉಪಾಸನೆ–ಜೀವಿಕೆ–ದೈವವಾದ ಇತ್ಯಾದಿಗಳನ್ನು ಕುರಿತ ಪ್ರಶ್ನೆಗಳಿಗೆ ಸಂಬಂಧಿಸಿದ್ದು ಧರ್ಮಶಾಸ್ತ್ರಾದಿಗಳಂಥ ಕರ್ತೃತಂತ್ರದ ಆಯಾಮಗಳನ್ನೇ ತಮ್ಮ ಸಮರ್ಥನೆ–ಸಮಜಾಯಿಷಿಗಳಿಗೆಂದು ಆಯ್ದುಕೊಂಡ ಕಾರಣ ಸ್ವಾಮಿಗಳ ಶ್ವಾಸೋಚ್ಛ್ವಾಸಗಳೇ ಆದ ಅಧ್ಯಾರೋಪಾಪವಾದಪ್ರಕ್ರಿಯೆಯ ನಿಷ್ಠುರ– ನಿರಪೇಕ್ಷನೆಲೆಯಲ್ಲಿ ನಿಂತವರಿಗೆ ಕೆಲಮಟ್ಟಿಗೆ ಮುಜುಗರವೇ ಆಗಬಹುದು. ಆದರೆ ಇಂಥ ಉತ್ತರಗಳೂ ಆ ಮಾತುಗಳಿಗೆ ನೆಲೆಗಟ್ಟಾದ ಶಾಸ್ತ್ರಸರಣಿಯೂ ಒಂದು ಸಮಾಜಸ್ಥಿತಿಗೆ, ಅದೊಂದು ಮನೋಧರ್ಮಕ್ಕೆ ಬೇಕಾದುದೂ ಹೌದು; ಹೆಚ್ಚಿನ ಸಂಖ್ಯೆಯ ಜಗಜ್ಜನರಿಗೆ ಅದೇ ಅಲ್ಲದಿದ್ದರೂ ಅಂಥ ತರ್ಕಾತೀತ ಶಿಸ್ತು ಅಪೇಕ್ಷಿತವೂ ಹೌದು. ಒಟ್ಟಿನಲ್ಲಿವು ಸಾಪೇಕ್ಷ. ಆದರೆ ಈ ಬಗೆಯ ಉತ್ತರಗಳನ್ನು ನೀಡುವಲ್ಲಿ ಸ್ವಾಮಿಗಳು ತೋರುವ ಶ್ರದ್ಧೆ, ಕಾರುಣ್ಯ, ಔದಾರ್ಯ, ಒಪ್ಪ–ಓರಣಗಳೂ ನಿಷ್ಕರ್ಷೆ –ನಿಷ್ಠೆಗಳೂ ಗಮನಾರ್ಹ. ಎಂಥ ಪ್ರಶ್ನೆಯನ್ನೂ ಅಲ್ಪವೆಂದು ಗಣಿಸದೆ ಶ್ರೋತೃ ಗೌರವವನ್ನು ತಳೆದೇ ಸಾಂಗೋಪಾಂಗವಾಗಿ, ವಿನಯ–ವಿದ್ವತ್ತೆಗಳ ಹದದಿಂದ ಸ್ನೇಹ–ನಿಷ್ಠುರಗಳ ನಿಶ್ಚಯದಿಂದ ಉತ್ತರಿಸುವ ಶ್ರೀಗಳ ಹೃದಯಕೌಶಲ ಸ್ತವನೀಯ.

ಇಂಥ ಮಹನೀಯರ ಕೃತಿಗೆ ಮೊದಲ ಮಾತಾಗಿ ಕೆಲವೊಂದು ಪಂಕ್ತಿಗಳನ್ನು ಬರೆಯುವ ಪುಣ್ಯಾವಕಾಶ ನನ್ನದಾಗಿದೆ. ಸ್ವಾಮಿಗಳ ಬರಹಗಳಿಂದ ನಾನು ಗಳಿಸಿದ ತತ್ತ್ವನಿಶ್ಚಯಕ್ಕೆ ನನ್ನೆಲ್ಲ ಬದುಕೂ ಋಣಿಯಾಗಿದೆ. ವೇದಾಂತದಲ್ಲಿ ನಾನಿನ್ನು ಮತ್ತೇನನ್ನೂ ತಿಳಿಯಬೇಕಿಲ್ಲವೆಂದೂ ದರ್ಶನಪ್ರಪಂಚದಲ್ಲಿ ನಾನು ತಿಳಿಯಬೇಕಾದುದು ಮತ್ತಾವುದೂ ಇಲ್ಲವೆಂದೂ ನನಗೆ ನನ್ನ ಮಟ್ಟಿಗೆ ತತ್ತ್ವಪರಿಪೂರ್ಣತೆಯನ್ನು ಅನುಗ್ರಹಿಸಿದ ಶ್ರೀಗಳ ಸಾಹಿತ್ಯಮಹತ್ತ್ವಕ್ಕೆ ನಾನು ಮತ್ತಾವ ರೀತಿಯಲ್ಲಿ ಕೃತಜ್ಞತೆ ಸಲ್ಲಿಸಲಿ ? ಅವರಿಗೆ ಪಾದಪೂಜೆಗಳಂಥ ಆಡಂಬರಗಳಲ್ಲಿ ಆಸ್ತೆಯಿರಲಿಲ್ಲವಾಗಿ ಈ 'ಪದಪೂಜೆ' ಯನ್ನಷ್ಟೇ ನನ್ನದಾದ ಮಿತಿಯಲ್ಲಿ ಮಾಡುತ್ತಿದ್ದೇನೆ. ಇದಕ್ಕೆ ಅವಕಾಶವನ್ನಿತ್ತ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಬಂಧುಗಳಿಗೆಲ್ಲ ವಂದನೆಗಳು.

ಉತ್ಥಾನದ್ವಾದಶೀ<br>
ಕಾಳಿದಾಸ ಜಯಂತಿ —ಆರ್. ಗಣೇಶ್<br>
(8–11–2011)

ಶ್ರೀ

# ''ಶಂಕರನ ಪತ್ರಗಳು '' ಸುಕೃತಿಯ ಜ್ಞಾನಾನಂದ ರಸಾನುಭವ –1

## (ನುಡಿನಮನ)

ಪರಮಪೂಜ್ಯ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ ಮಹೋನ್ನತ ವ್ಯಕ್ತಿತ್ವ ಈಗಾಗಲೇ ವಿದೇಶಗಳಲ್ಲಿ ಹಾಗೂ ಭಾರತದಾದ್ಯಂತ ವಿದ್ವದ್ವಲಯಗಳಲ್ಲಿ ಸುವಿಖ್ಯಾತವಾಗಿದೆ. ಪೂಜ್ಯರು ಸಂನ್ಯಾಸಗ್ರಹಣದನಂತರವೂ ತಮ್ಮ ಕ್ರಿಯಾಶೀಲತೆ ಯನ್ನು ಬದಿಗಿರಿಸಿ ಲೋಕ ವಿಮುಖರಾಗಲಿಲ್ಲ ಎಂಬುದು ಮಹತ್ವದ ಸಂಗತಿ. ಇದಕ್ಕೆ ಅವರಿಗಿದ್ದ ಪ್ರಮುಖ ಪ್ರೇರಣೆ– ತುಡಿತಗಳು ಎರಡು. ಒಂದು, ಪರಿಶುದ್ಧ ಶಾಂಕರದರ್ಶನವನ್ನು ಪ್ರಚುರಪಡಿಸುವ ಅಪರಿಮಿತ ಉತ್ಸಾಹ. ಎರಡು, ಈ ದರ್ಶನದ ಒಳನೋಟ ಉದ್ದಾಮ ಪಂಡಿತರ ಸ್ವತ್ತು ಎಂದು ಭಾವಿಸಲಾದ ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರವಲ್ಲ ಜನಸಾಮಾನ್ಯರ ಆಡುಮಾತಿನಲ್ಲೂ ಸುಲಭ ಗ್ರಾಹ್ಯವಾಗುವಂತಿರಬೇಕು ಎಂಬ ಕಳಕಳಿ. ಭಾಷ್ಯಗಳ ಬೃಹತ್ ಸಂಪುಟಗಳಲ್ಲಿ ಅವರು ಸಾಧಿಸಿದ ಅಧಿಕೃತತೆ, ಸವಿಸ್ತಾರ ಟಿಪ್ಪಣಿಗಳು, ಪರ–ವಿರೋಧಗಳೆರಡನ್ನೂ ನಿರ್ಮತ್ಸರವಾಗಿ ನೀಡಿ, ತಮ್ಮದೇ ಸಿದ್ಧಾಂತಗಳನ್ನು ಸೋಪಪತ್ತಿಕವಾಗಿ ಸೋದಾಹರಣವಾಗಿ ವಿವರಿಸಿರುವ ಅಡಿ ಟಿಪ್ಪಣಿಗಳು ನಿಜಕ್ಕೂ ಬೆರಗುಗೊಳಿಸುತ್ತವೆ. –ಅನನ್ಯ ಎನಿಸುತ್ತವೆ. ಹೋಲಿಸಬೇಕಾದರೆ ನಮ್ಮ ಪೂಜ್ಯ ಸ್ವಾಮೀಜಿಯವರನ್ನು ಆದಿಶಂಕರರಿಗೇ ಹೋಲಿಸಬೇಕು. ಇಲ್ಲಿಯೂ ಒಂದು ಮಾತನ್ನು ಸ್ಪಷ್ಟಪಡಿಸಬೇಕು. ಶ್ರೀಶಂಕರರು ಈ ಉದ್ದೇಶ ಸಾಧನೆಗಾಗಿ ಭಾಷ್ಯ, ಪ್ರಕರಣಗಳನ್ನೂ – ತಿಳಿನುಡಿಯ ಮನಮೋಹಕವಾದ ಸ್ತೋತ್ರ ಸಾಹಿತ್ಯವನ್ನೂ ದೇವತಾ ಸ್ತುತಿಗಳನ್ನೂ ಮಾಧ್ಯಮವಾಗಿ ಬಳಸಿಕೊಂಡರು, ಬೇರೆ ಬೇರೆಯಾಗಿ. ಆದರೆ ಈ ಉಭಯ ಉದ್ದೇಶವನ್ನೂ ನಮ್ಮ ಸ್ವಾಮಿಗಳು ಸವ್ಯಸಾಚಿಯಂತೆ ತಮ್ಮ ಅಡಿಟಿಪ್ಪಣಿಗಳಲ್ಲೇ ಸರಳ ಸುಂದರ ಗದ್ಯ ಪ್ರಕಾರದಲ್ಲೇ ಸಾಧಿಸಿಬಿಟ್ಟರು. ಅಧಿಕೃತತೆ– ಸರಳತೆ– ನಿರೂಪಣಾ ಕೌಶಲ್ಯದಿಂದ.

ಪ್ರಕೃತ, ನಾಲ್ಕು ಸಂಪುಟಗಳಲ್ಲಿ ಅಡಕವಾಗಿರುವ **''ಶಂಕರನಪತ್ರಗಳು''** ಎಂಬ ಶೀರ್ಷಿಕೆಯ ಲೇಖನಗಳು ಪೂಜ್ಯ ಸ್ವಾಮೀಜಿಯವರ ಸ್ಫಟಿಕ ಶುದ್ಧ ಹೃದಯ ದರ್ಪಣವೇ ಆಗಿ ಬಿಟ್ಟಿದೆ. ಲೇಖನಗಳು 1943 ಜನವರಿಯಿಂದ 1975ರ ಫೆಬ್ರವರಿವರೆಗೆ ಅಧ್ಯಾತ್ಮಪ್ರಕಾಶಪತ್ರಿಕೆಯಲ್ಲಿ ''ಪ್ರಶ್ನೋತ್ತರ'' ರೂಪದಲ್ಲಿ ಪ್ರಕಟವಾದ ಪ್ರಬೋಧಕ ಹಿತವಚನಗಳು ವಿಷಯ ವೈವಿಧ್ಯ–ವಿಸ್ತಾರಗಳು, ಎಂತಹ ಸಣ್ಣ ಸಂಶಯವನ್ನೂ ಉದಾಸೀನ ಮಾಡದೆ ಮಾತೃ ಹೃದಯದಿಂದ ತೋಳುತುಂಬಿಕೊಂಡು

ಪರಿಹರಿಸುವ ವಾತ್ಸಲ್ಯದ ಲಾಲನೆಗೆ ಕಣ್ಣು ತುಂಬಿಬರುತ್ತದೆ. ಈ ಸಂಕಲನಕ್ಕೆ 'ಮುನ್ನುಡಿ' ಬರೆಯುವ ಧಾರ್ಷ್ಟ್ಯ ನನ್ನದಲ್ಲ. 'ನುಡಿನಮನ' ಎಂದು ತಲೆಬಾಗಿಯೇನು ಅಷ್ಟೆ !

337 ಬಿಡಿ ಲೇಖನಗಳ 551 ಪುಟಗಳ ಸಂಪುಟ ಇದು. ಭೌತಿಕ ವಿಜ್ಞಾನವೂ ತತ್ತ್ವಜ್ಞಾನವೂ (ಲೇಖನ 157, ಪುಟ 286) ಎಂಬ ಗಂಭೀರ ಶೀರ್ಷಿಕೆ ಇಲ್ಲಿರುವಂತೆಯೇ ಸಂಕಟ ಬಂದಾಗ ವೆಂಕಟರಮಣ, ಲಾಭದ ವ್ಯಾಪಾರ, ಸವರನ್ನಿನ ಪೂಜೆ, ಬಡತಿಯ ಆಶೆ, ಎಂಬಂತಹ ಮೊಗದಲ್ಲಿ ಮಂದಹಾಸ ಮೂಡಿಸುವ ಶೀರ್ಷಿಕೆಗಳೂ ಇಲ್ಲಿವೆ. ವಿತಂತುಗಳ ಆಚಾರ, ಮುಪ್ಪಿನಲ್ಲಿ ಮಾಡಬೇಕಾದದ್ದು, ಲೋಕದ ದುಃಖ ನಿವಾರಣೆಗೆ ಈಗೇನು ಮಾಡಬೇಕು?, ಗೋತ್ರ ಪ್ರವರಗಳು, ಎಂಬಂತಹ ವಿಚಾರ ಪ್ರಚೋದಕ ಲೇಖನಗಳಿವೆ. ವಿಷಯ ಯಾವದೇ ಇರಲಿ ಅದನ್ನು ಹೇಗೋ ವೇದಾಂತ ಚಿಂತನೆಯತ್ತಲೇ ಕೊಂಡೊಯ್ದು ಬಿಡುವದು ಸ್ವಾಮಿಗಳ ರೀತಿ. ವೇದಾಂತ ಜೀವನದ ಅಲಂಕಾರವಲ್ಲ – ಬದುಕಿನ ಉಸಿರು. ನಾವು ತಲೆ ಕೆರೆದುಕೊಳ್ಳಲಿ, ಇಲ್ಲವೇ ತಲೆ ಕೆಡಿಸಿಕೊಳ್ಳಲಿ, ಎಚ್ಚರವಿರಲಿ, ಕನಸು ಕಾಣುತ್ತಿರಲಿ, ತನಿನಿದ್ರೆಯಲ್ಲೇ ಮುಳುಗಿರಲಿ, ಈ ವೇದಾಂತ ದರ್ಶನದ ಉಸಿರು ಆಡುತ್ತಲೋ ಹಾಡುತ್ತಲೋ ಸುಖಮೌನದಲ್ಲೋ ತುಡಿಯುತ್ತಲೇ ಇರುತ್ತದೆ. ಮುಖ್ಯವಾಗಿ ನಮ್ಮ ಸ್ವಾಮಿಗಳಿಗೆ ವೇದಾಂತ ಜೀವನ ಬಾಹಿರವಲ್ಲ! ನಮ್ಮ ಎಲ್ಲ ಕಾರ್ಯಗಳೂ, ಪೂಜೆ, ಧ್ಯಾನ, ಜಪಾದಿಗಳೂ ವೇದಾಂತ ದರ್ಶನದೀಪ್ತವೇ ಆಗಿರಬೇಕು ಎಂಬುದೇ ಅವರ ನಿಲುವು. ಶ್ರೀ ಅರಬಿಂದೊ ಅವರು "our life must be spiritualised" ಎಂದದ್ದೂ ಈ ಅರ್ಥದಲ್ಲಿಯೇ. ಅತ್ಯಂತ ಕ್ರಿಯಾಶೀಲವಾಗಿ ಗ್ರಂಥರಚನೆ, ಅಧ್ಯಾತ್ಮ ಪ್ರಕಾಶದ ಬರಹಗಳು, ಪ್ರವಚನ, ಭಾಷ್ಯ ಪಾಠಾದಿಗಳು ಮುಂತಾದವರಲ್ಲಿ ಹಗಲಿರುಳೂ ತೊಡಗಿಕೊಂಡಿದ್ದ ಆ ಧನ್ಯಜೀವಕ್ಕೆ ಸ್ವಾತ್ಮಾವಗಾಹನಕ್ಕೆ ಕೆಲವಾದರೂ ಬಿಡುವಿನ ಕ್ಷಣಗಳು – ಪರಿಪೂರ್ಣ ಮೌನದ ನಿಮಿಷಗಳು (ಅನಿಮಿಷಗಳು ಎನ್ನೋಣವೆ ? ) ಇದ್ದಿರಬಹುದಲ್ಲವೆ ? ಬ್ರಾಹ್ಮೀ ಮುಹೂರ್ತ, ಜಾಗರದ ನಿಶೆ ಇತ್ಯಾದಿ. ಅಂತಹ ಪರಿಶುದ್ಧ ಚಿತ್ತಕ್ಕೆ ಮಾತ್ರ ಹೊಸ ಹೊಳಹುಗಳು, ಹೊಸಶಬ್ದಾರ್ಥಗಳು ಮಿಂಚೀತು ಅಲ್ಲವೆ? ಶಾಂಕರಭಾಷ್ಯ ವಿವೇಚನೆಯಲ್ಲಿ ಹೇಗೋ ''ಶಂಕರನ ಪತ್ರ'' ಗಳಲ್ಲೂ ಈ ಸ್ವಾತ್ಮ ದರ್ಶನದ ಪ್ರಸನ್ನ ಮಧುರ ಶೈಲಿಯ ಪ್ರಖರ ಚಿಂತನೆಗಳ ಒಳನೋಟವನ್ನು ಅರಿತು ಆಸ್ವಾದಿಸಬಹುದಾಗಿದೆ. ಈ ನುಡಿನಮನದಲ್ಲಿ ಕೆಲವು ಮಾತ್ರ ಉದಾಹರಣೆಗಳನ್ನು ಉಲ್ಲೇಖಿಸಬಹುದಷ್ಟೆ.

1. ''.......ನದಿಯ ತೀರದಲ್ಲಿ ಏಕಾಂತ ವಾಸದಲ್ಲಿರುತ್ತೇನೆ'' ಎಂಬ ಯೋಜನೆಯಲ್ಲಿ 'ನಮ್ಮವರು ನನ್ನ ಹತ್ತಿರವಿಲ್ಲ ಎಂಬ ಭಾವವು ಅವಶ್ಯವಾಗಿ ಅಡಕವಾಗಿಯೇ ಇರಬೇಕಷ್ಟೆ ? ಇನ್ನು ಭಿಕ್ಷಕ್ಕೆ ಹೇಗೆ ? ಎಂಬ ಚಿಂತನೆಯು ಆಗಾಗ್ಗೆ

ಮನಸ್ಸಿನಲ್ಲಿ ತಟ್ಟುತ್ತದೆಯೋ ಹೇಗೆ ವಿಚಾರ ಮಾಡಿ. ಇವೆಲ್ಲ ನನ್ನದು ಎಂಬ ಬುದ್ಧಿಯ ರೂಪಗಳೇ ಆಗಿರುತ್ತವೆ. (ಲೇ. 337 ; ಪು. 550)

2. ಲೋಕದಲ್ಲಿ ಸರ್ವಥಾ ನಿರ್ಗುಣವಾದ ಅಥವಾ ನಿರ್ದೋಷವಾದ ಯಾವ ಪದಾರ್ಥವೂ ಇರುವದೇ ಇಲ್ಲ. ಆದ್ದರಿಂದ ನಮ್ಮ ಕಣ್ಣಿಗೆ ಬೀಳುವ ಪದಾರ್ಥಗಳಲ್ಲಿ ಅಥವಾ ಜನರಲ್ಲಿ ಇದ್ದಷ್ಟು ಗುಣಗಳನ್ನು ಕಂಡು ಸಂತೋಷ ಪಡುವ ಅಭ್ಯಾಸವನ್ನು ಮಾಡಬೇಕು. (ಲೇ. 275 ; ಪು. 458)

3. ಅನುಷ್ಠಾನಗಳು ಹಿಡಿತಕ್ಕೆ ಸಿಗದಷ್ಟು ದೊಡ್ಡದಾಗಬಾರದು. ಏಕೆಂದರೆ ಆಗ ಅವುಗಳು ನಿಯಮಾನುಗುಣವಾಗಿ ನಡೆಯುವಂತೆ ನೋಡಿಕೊಳ್ಳುವದು ಕಷ್ಟವಾಗುತ್ತದೆ...... ಜಪ, ಹೋಮ, ತರ್ಪಣ, ಆರಾಧನೆ, ಪಾರಾಯಣ, ಇವೆಲ್ಲಕ್ಕೂ ಏಕನಿಷ್ಠೆಯೇ ಗುರಿಯಾಗಬೇಕು. ಭಗವಂತನೊಬ್ಬನೇ ಎಲ್ಲಾ ದೇವತೆಗಳ ರೂಪದಲ್ಲಿಯೂ ತೋರಿಕೊಂಡು ಭಕ್ತರನ್ನು ಅನುಗ್ರಹಿಸುತ್ತಾನೆಂಬುದು ನಿಜ. **ಆದರೂ ಬೇರೆಬೇರೆ ದೇವತೆಗಳ ಆರಾಧನೆಯನ್ನು ಒಂದೇ ಸಲಕ್ಕೆ ಕೈಕೊಳ್ಳುವವರಿಗೆ ಚಿತ್ತವಿಕ್ಷೇಪವಾಗುವದೆಂದು ನನ್ನ ನಂಬಿಕೆ.**
(ಲೇ.211 ; ಪು. 349)

4. ಸತ್ಸಂಗದಿಂದ ಸಾಂಸಾರಿಕ ಕಾಮನೆಗಳು ಪರಿಪೂರ್ಣವಾಗಬೇಕೆಂಬ ಬಯಕೆಯನ್ನು ಎಂದಿಗೂ ಇಟ್ಟುಕೊಳ್ಳಬಾರದು. ನನ್ನ ರೋಗವು ವಾಸಿಯಾಗಬೇಕು, ನನಗೆ ಹಣವು ದೊರಕಬೇಕು. ಗಂಡು ಮಗುವಾಗಬೇಕು, ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು, ಅಧಿಕಾರವು ಅಥವಾ ಕೀರ್ತಿಯು ವೃದ್ಧಿಯಾಗಬೇಕು, ಒಳ್ಳೆಯ ನೆಂಟರು ಜೊತೆಯಾಗಬೇಕು – ಇಂಥ ಕಾಮನೆಗಳನ್ನು ಎಂದಿಗೂ ಇಟ್ಟುಕೊಳ್ಳಬಾರದು. ಇಂಥ ಯಾವದಾದರೊಂದು ಕಾಮವು ಸಫಲವಾದರೆ 'ಈ ಮಹಾತ್ಮರ ಅನುಗ್ರಹದಿಂದ ನನಗೆ ಇದು ದೊರಕಿತು' ಎಂದು ಭಾವಿಸಲೂ ಬಾರದು. ಮಹಾತ್ಮರ ಕೃಪೆಯನ್ನು ಇಂಥ ಕ್ಷುಲ್ಲಕ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವದು **ಚಿಂತಾಮಣಿಯನ್ನು ಮನೆಯ ನಾಯಿಯ ಕೊರಳಿಗೆ ಕಟ್ಟುವದಕ್ಕೆ ಉಪಯೋಗಿಸಿದಂತಾಗುವದು.**
(ಲೇ.24; ಪು. 45–46)

5. ನನ್ನ ಮನಸ್ಸಿನಲ್ಲಿರುವದನ್ನು ನಿಮಗೆ ಬಿಚ್ಚಿ ತಿಳಿಸಿದ ಹೊರತು ಬೇರೆಯ ಉಪಾಯವಿಲ್ಲ. ಆದ್ದರಿಂದ ನನ್ನ ಮಾತಿನಿಂದ ನಿಮಗೆ ಬೇಸರವಾದರೆ ಕ್ಷಮಿಸಿ. ಹಿತವೂ ಮನೋರಂಜಕವೂ ಆಗಿರುವ ಮಾತು ದುರ್ಲಭವಷ್ಟೆ ? ನೀವು ಉಪಾಧ್ಯಾಯರ ಕರ್ತವ್ಯವನ್ನು ಮಾಡಿದಿರೆಂದು ನನಗೆ ಅನ್ನಿಸಿಲ್ಲ.

ದೇಶಸ್ವಾಂತಂತ್ರ್ಯಕ್ಕಾಗಿ ದುಡಿಯುವದಕ್ಕೆ ಹೊರಟವರಿಗೆ ಸರ್ಕಾರಿ ಕೆಲಸದ ಗೋಜು ಏತಕ್ಕೆ ? ಬಂದೀಖಾನೆಯಲ್ಲಿ ಪಟ್ಟ ಸಂಕಟಕ್ಕೆ ಪಶ್ಚಾತ್ತಾಪವೇಕೆ? ಇದನ್ನು ನೀವು ಯೋಚಿಸಿಲ್ಲ, ಹುಡುಗರಿಗೆ ಪಾಠವನ್ನು ಕಲಿಸುವೆನೆಂಬ ಕರಾರಿನ ಮೇಲೆ ಕೆಲಸಕ್ಕೆ ಸೇರಿ, ಅವರನ್ನು ರಾಜಕಾರಣದಲ್ಲಿ ಧುಮುಕಿಸಿದ್ದು ದ್ರೋಹವಲ್ಲವೆ? ಈ ಸಂದರ್ಭದಲ್ಲಿ ನಿಮಗೆ ವಿಶಾಲ ಭಾವನೆಯಿತ್ತೆಂಬುದಕ್ಕಿಂತ ಯಾವದೋ ಒಂದು ರಾಜಕೀಯ ತಂಡದವರಲ್ಲಿ ಸಂಕುಚಿತವಾದ ಅಭಿಮಾನವಿತ್ತೆಂದೇ ಹೇಳಬೇಕು. ಹೀಗಿರುವದರಿಂದ ನೀವು ಸನ್ಮಾರ್ಗದಲ್ಲಿ ನಡೆಯಬೇಕೆಂದೇ ಸಂಕಲ್ಪ ಮಾಡಿದ್ದರೆ, ತಪ್ಪನ್ನು ಒಪ್ಪಿಕೊಳ್ಳಬೇಕು. ಆದದ್ದು ದುಷ್ಕರ್ಮಕ್ಕೆ ತಕ್ಕ ಪ್ರಾಯಶ್ಚಿತ್ತವೆಂದೇ ಬಗೆಯಬೇಕು. (ಲೇ. 29 ; ಪು 56–57)

6. ಉಚ್ಚ ಶ್ರೇಣಿಯ ಮಡಿಹೆಂಗಸರನ್ನು ಕಂಡವರಿಗೆ ಕಾಮ–ವಾಸನೆಯು ಶಾಂತವಾಗಬೇಕು. ಭೋಗೇಚ್ಛೆಯು ಹಿಡಿತಕ್ಕೆ ಬರಬೇಕು. ಮತ್ತೊಬ್ಬರಲ್ಲಿ ಸಹಾನುಭೂತಿ ಅರಳಬೇಕು. ಅಹಂಕಾರವು ಸಡಿಲವಾಗಬೇಕು. ಹೆಮ್ಮೆಯು ಹಿಮ್ಮೆಟ್ಟಬೇಕು. ಪೂರ್ವಾಚಾರವನ್ನು ಅನುಕರಿಸಿರುವ ವಿಧವೆಯರ ಮೇಲ್ವಿಚಾರಣೆಯಲ್ಲಿರುವ ಅನೇಕ ಗೃಹಗಳು ಪವಿತ್ರವಾಗಿ ಸುಖದ ನೆಲೆವೀಡಾಗಿರುವುದನ್ನೂ ಇನ್ನೂ ಈಗಲೂ ನಾವು ಅಲ್ಲಲ್ಲಿ ಕಾಣಬಹುದಾಗಿದೆ. ಈ ದೃಶ್ಯವು ಮೆಲ್ಲಮೆಲ್ಲನೆ ಕಣ್ಮರೆಯಾಗುತ್ತಿರುವುದು ನಮ್ಮದೇಶದ ದೌರ್ಭಾಗ್ಯವು. (ಲೇ. 35; ಪು 67 ). (ಈ ಲೇಖನ ಮಾರ್ಚ್ 1949ರಷ್ಟು ಹಿಂದಿನದು)

7. ಒಬ್ಬರು ನಮಗೆ ಕೇಡುಬಗೆದರೆ ನಾವೂ ಅವರ ವಿಷಯಕ್ಕೆ ದೋಷೋದ್ಘಾಟನೆಯನ್ನು ಮಾಡಿ ಜನರಲ್ಲಿ ದೂರನ್ನು ಹೇಳಿಕೊಳ್ಳಬೇಕೆಂಬ ಕುತೂಹಲವುಂಟಾಗಬಹುದು. ಆದರೆ ಆ ತವಕವನ್ನು ತಡೆದುಕೊಳ್ಳುವದರಿಂದ ನಮಗೆ ಶ್ರೇಯಸ್ಸಾಗುವದು. ಅವರು ನಮಗೆ ನಿಜವಾಗಿ ಕೇಡು ಮಾಡಿರುತ್ತಾರೆಯೆ? ಅಥವಾ ನಿಜವಾಗಿಯೂ ಅಪಪ್ರಚಾರಮಾಡುತ್ತಿದ್ದಾರೆಯೆ? ಎಂಬಿದನ್ನು ನಮ್ಮಲ್ಲಿ ನಾವು ನೋಡಿಕೊಳ್ಳಬೇಕು. ನಮ್ಮ ದೋಷಗಳೇನಾದರೂ ಇದ್ದರೆ ತಿದ್ದಿಕೊಳ್ಳಬೇಕು. ಇಲ್ಲದಿದ್ದರೆ ಆ ವಿಷಯವನ್ನು ಅಲ್ಲಿಗೆ ಮರೆತುಬಿಡುವದು ಒಳ್ಳೆಯದು.... ಮತ್ತೊಬ್ಬರು ನಮಗೆ ಕೇಡನ್ನುಂಟು ಮಾಡಿರುವರೆಂಬ ಕಾರಣದಿಂದ ಅವರ ಮೇಲೆ ಸೇಡು ತೀರಿಸಿಕೊಳ್ಳುವದಕ್ಕೆ ಎಂದೆಂದಿಗೂ ಪ್ರಯತ್ನಿಸಬಾರದು. ಸೇಡುತೀರಿಸಿಕೊಳ್ಳುವ ಆಲೋಚನೆಯು ಮನಸ್ಸಿಗೆ ಮಾಲಿನ್ಯವನ್ನು ಉಂಟು ಮಾಡುತ್ತದೆ. ಸದ್ವಿಚಾರಕ್ಕೆ ಎಡೆಯಿಲ್ಲದಂತೆಯೂ ಮಾಡುತ್ತದೆ. ಪರಮೇಶ್ವರನನ್ನು ಪ್ರತಿದಿನವೂ 'ಮತ್ತೊಬ್ಬರಿಗೆ ಕೇಡುಬಗೆಯದಿರುವ ಬುದ್ಧಿಯನ್ನು ಕೊಡು' ಎಂದು ಬೇಡಿಕೊಳ್ಳುತ್ತಿರಬೇಕು. 'ಎಲ್ಲರಿಗೂ ಸ್ವಸ್ತಿಯಾಗಲಿ, ಎಲ್ಲರಿಗೂ ಸದ್ಬುದ್ಧಿ

ಯುಂಟಾಗಲಿ, ಸುಖಶಾಂತಿಗಳು ದೊರಕಲಿ!' ಎಂದು ಪ್ರಾರ್ಥನೆಯ ಕಾಲಕ್ಕೆ ಹಾರೈಸುವದೇ ಉತ್ತಮವಾದ ಮಾರ್ಗ. (ಲೇ. 71; ಪು 139)

ಇಲ್ಲಿ ರೇಖಾಮಾತ್ರವಾಗಿ ಸೂಚಿಸಿರುವ ಕೆಲವೇ ಉದಾಹರಣೆಗಳು ನಮ್ಮ ಸ್ವಾಮೀಜಿಯವರ ಚಿಂತನದ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಆಯಾಮಗಳನ್ನು ಅರಿತು, ಅನುಭವಕ್ಕೆ ತಂದುಕೊಳ್ಳಲು ದಾರಿದೀಪಗಳಂತಿವೆ. ಒಬ್ಬ ವಿನೀತ ಕನ್ನಡ ಅಧ್ಯಾಪಕನಾದ ನನಗೆ ಕನ್ನಡ ಭಾಷೆಗೆ ಪೂಜ್ಯರು ನೀಡಿರುವ ಅಮೂಲ್ಯ ಕೊಡುಗೆಯೂ ಮಹತ್ವದ್ದೇ ಆಗಿ ಮತ್ತಷ್ಟು ಅಧ್ಯಯನಕ್ಕೆ ಪ್ರೇರಣೆ – ಪ್ರಚೋದನೆಗಳನ್ನು ಒದಗಿಸುತ್ತದೆ. ಸ್ವಾಮೀಜಿ ತಮ್ಮ ತಾಯ್ನುಡಿಗೆ ಹೊಸ ಚೆಲುವನ್ನೂ, ಕಸುವನ್ನೂ ತುಂಬಿ ಅದನ್ನು ಶ್ರೀಮಂತಗೊಳಿಸಿರುವ ಅಂಶವೂ ಮುಖ್ಯವೇ ಆಗುತ್ತದೆ. ದೇಶಭಕ್ತಿ – ಕರ್ತವ್ಯಗಳ ನಡುವೆ ಹೊಯ್ದಾಟಕ್ಕೆ ಸಿಲುಕಿದ ಉಪಾಧ್ಯಾಯನಿಗೆ ಸ್ವಾಮೀಜಿ ನೀಡಿದ ಮಾರ್ಗದರ್ಶನ ಸಾರ್ವಕಾಲಿಕವೂ ಸಾರ್ವದೇಶಿಯವೂ ಆಗಿದ್ದು ಅಲ್ಲಿಯ ಭಾಷೆಯ ಬಾಗು–ಬಳುಕುಗಳೂ ಸ್ವಾದಿಷ್ಟವಾದದ್ದೇ. ಹಲವು ಪತ್ರಗಳಲ್ಲಿ ವಿದ್ವನ್ಮಣಿಗಳಾದ ನಮ್ಮ ಸ್ವಾಮಿಗಳು ತೋರುವ ನಮ್ರತೆ, ವಿನಯ, ಏನಕೇನ ಪ್ರಕಾರೇಣ ಪ್ರಸಿದ್ಧಿಯ ಬೆನ್ನು ಹತ್ತುವ ಸಿದ್ಧರನ್ನು ಲಜ್ಜಿತರನ್ನಾಗಿಸದೆ ಇರದು. ಪು 81ರಲ್ಲಿ ಸ್ವಾಮಿಗಳು ನುಡಿಯುತ್ತಾರೆ. "ತಾವು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಡುವದು ನನಗೆ ಬಹಳ ಕಠಿಣವಾಗಿರುತ್ತದೆ. ಏಕೆಂದರೆ ಮೊದಲನೆಯದಾಗಿ ನಾನು ಸಮಾಜ ಸುಧಾರಕನಲ್ಲ, ಎರಡನೆಯದಾಗಿ ನಾನು ರಾಜಕೀಯ ಚಳುವಳಿಗಳಲ್ಲಿ ಯಾವಾಗಲೂ ಭಾಗವನ್ನು ತೆಗೆದುಕೊಂಡವನಲ್ಲ" (ಲೇ. 41; ಪು 81 )

ಈ ನುಡಿನಮನ ಪೂಜ್ಯ ಸ್ವಾಮೀಜಿಯವರ ಪತ್ರ ಪ್ರಸಂಗಗಳ ಸಮೀಕ್ಷೆಗಾಗಿ ಅಲ್ಲ. ಇದನ್ನು ಓದುವವರಿಗೆ ನನ್ನ ವಿನಮ್ರ ಸೂಚನೆಯೆಂದರೆ, ಅವರು ಮೇಲಿನ ಏಳು ದಿಕ್ಸೂಚಿಯನ್ನು ಆವರಣದಲ್ಲಿನ ಪುಟ ಸಂಖ್ಯೆಗಳ ಆಧಾರವನ್ನೂ ತಿರವಿ ಕೊಡುತ್ತಾ ತೃಪ್ತರಾಗುವುದು ಬೇಡ. ಈ ಸಂಪುಟಗಳ ಮೊದಲ ಪುಟದಿಂದ ಕಡೆಯ ಪುಟದ ವರೆವಿಗೂ ನಿಧಾನವಾಗಿ ಸಮಗ್ರವಾಗಿ ಓದಲಿ. ಜ್ಞಾನಾನಂದ ರಸ ಎಂಬ ದಶಮ ರಸದ ಅನುಭವವನ್ನು ಪಡೆದು ಅದನ್ನು ಅನುಭಾವವಾಗಿಸಿಕೊಳ್ಳಲು ಪ್ರಕಾಶಕರ ಶ್ರಮ ಸಾರ್ಥಕವಾಗಲಿ.

1–11–2011

ಡಾ. ಎ. ಎಸ್. ವೇಣುಗೋಪಾಲರಾವ್
ಶಿವಮೊಗ್ಗ

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| | | | | | **ಭಾಗ–I** | |
| 1. | 14 | 5 | ಜನವರಿ | 1943 | ಸಂಕಟ ಬಂದಾಗ ವೆಂಕಟರಮಣ | 1 |
| 2. | 14 | 6 | ಫೆಬ್ರವರಿ | 1943 | ಉದ್ಯೋಗಸ್ಥಾನದಲ್ಲಿಯೂ ದೇವರು. | 2 |
| 3. | 14 | 7 | ಮಾರ್ಚ್ | 1943 | ಕುಟುಂಬಭಾವನೆ | 3 |
| 4. | 14 | 9 | ಮೇ | 1943 | ಲಾಭದ ವ್ಯಾಪಾರ | 5 |
| 5. | 14 | 10 | ಜೂನ್ | 1943 | ದಾನಕ್ಕೆ ಪಾತ್ರರು | 6 |
| 6. | 14 | 12 | ಆಗಸ್ಟ್ | 1943 | ಮಕ್ಕಳ ವಿದ್ಯಾಭ್ಯಾಸ | 7 |
| 7. | 15 | 2 | ಅಕ್ಟೋಬರ್ | 1943 | ತೀರ್ಥಯಾತ್ರೆ | 8 |
| 8. | 15 | 3 | ನವಂಬರ್ | 1943 | ಸವರನ್ನಿನ ಪೂಜೆ | 9 |
| 9. | 15 | 5 | ಜನವರಿ | 1944 | ದಾನ | 10 |
| 10. | 15 | 10 | ಜೂನ್ | 1944 | ಲೋಭ | 12 |
| 11. | 15 | 11 | ಜುಲೈ | 1944 | ಅಧ್ಯಾತ್ಮವಿದ್ಯೆ | 14 |
| 12. | 15 | 12 | ಆಗಸ್ಟ್ | 1944 | ಮನಸ್ಸನ್ನು ನೇರ್ಪಡಿಸಿಕೊಳ್ಳುವುದು | 16 |
| 13. | 16 | 1 | ಸಪ್ಟೆಂಬರ್ | 1946 | ದೇವರನ್ನು ಬಯ್ಯುವ ಹುಚ್ಚು ಬೇಡ | 17 |
| 14. | 16 | 2 | ಅಕ್ಟೋಬರ್ | 1946 | ಉದ್ಯೋಗವೇ ಕರ್ಮಯೋಗವಾಗಲಿ! | 19 |
| 15. | 16 | 5 | ಜನವರಿ | 1947 | ಗುರುವಿನಲ್ಲಿ ಯಾವ ಭಾವನೆ ಇರಬೇಕು? | 21 |
| 16. | 16 | 6 | ಫೆಬ್ರವರಿ | 1947 | ವಿದ್ಯಾರ್ಥಿಗಳಿಗೆ ಸಾಧನ | 24 |
| 17. | 16 | 7 | ಮಾರ್ಚ್ | 1947 | ಹೆಣ್ಣುಮಕ್ಕಳಿಗೆ ಅಧ್ಯಾತ್ಮ ಸಾಧನ | 28 |
| 18. | 16 | 8 | ಏಪ್ರಿಲ್ | 1947 | ವ್ಯಾಪಾರದಲ್ಲಿ ಪ್ರಾಮಾಣಿಕತೆ | 30 |
| 19. | 16 | 9 | ಮೇ | 1947 | ಶಾಸ್ತ್ರವ್ಯಾಖ್ಯಾನದ ಸದುಪಯೋಗ | 32 |
| 20. | 16 | 10 | ಜೂನ್ | 1947 | ಸತತವಾಗಿ ಸಾಧನಮಾಡುವದು ಸಾಧ್ಯವೆ? | 35 |
| 21. | 16 | 11 | ಜುಲೈ | 1947 | ಉಪನಯನ | 37 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 22. | 16 | 12 | ಆಗಸ್ಟ್ | 1947 | ಭಗವನ್ನಾಮದ ಮಹಿಮೆ | 40 |
| 23. | 17 | 1 | ಸೆಪ್ಟೆಂಬರ್ | 1947 | ಸತ್ಯವನ್ನೇ ನುಡಿಯಬೇಕು | 43 |
| 24. | 17 | 3 | ನವೆಂಬರ್ | 1947 | ಸತ್ಸಂಗದ ರಹಸ್ಯ | 45 |
| 25. | 17 | 4 | ಡಿಸೆಂಬರ್ | 1947 | ಲೋಕದ ದುಃಖನಿವಾರಣೆಗೆ ಈಗೇನು ಮಾಡಬೇಕು? | 47 |
| 26. | 17 | 5 | ಜನವರಿ | 1948 | ಧನದ ಉಪಯೋಗ | 50 |
| 27. | 17 | 6 | ಫೆಬ್ರುವರಿ | 1948 | ನಗರವಾಸ | 52 |
| 28. | 17 | 7 | ಮಾರ್ಚ್ | 1948 | ವೇದಾಂತ ವಿಚಾರ | 54 |
| 29. | 17 | 8 | ಏಪ್ರಿಲ್ | 1948 | ಉಪಾಧ್ಯಾಯರ ಕರ್ತವ್ಯ | 56 |
| 30. | 17 | 9 | ಮೇ | 1948 | ಸಂಸ್ಕೃತ ಕಲಿಯುವದರಿಂದ ಪರಮಲಾಭ | 58 |
| 31. | 17 | 10 | ಜೂನ್ | 1948 | ದಾಂಭಿಕತನದಿಂದ ಹಾನಿ | 60 |
| 32. | 17 | 11 | ಜುಲೈ | 1948 | ಬಡತನವೂ ಸಿರಿತನವೂ | 61 |
| 33. | 18 | 4 | ಡಿಸೆಂಬರ್ | 1948 | ಸಾಕ್ಷಾತ್ಕಾರ | 63 |
| 34. | 18 | 6 | ಫೆಬ್ರುವರಿ | 1949 | ಸತ್ಸಂಗ | 64 |
| 35. | 18 | 7 | ಮಾರ್ಚ್ | 1949 | ವಿತಂತುಗಳ ಆಚಾರ | 66 |
| 36. | 18 | 8 | ಏಪ್ರಿಲ್ | 1949 | ಪರೀಕ್ಷೆ | 69 |
| 37. | 18 | 9 | ಮೇ | 1949 | ಜೀವನವೆಲ್ಲವೂ ಈಶ್ವರ ಪೂಜೆಯಾಗಲಿ | 71 |
| 38. | 18 | 10 | ಜೂನ್ | 1949 | ಮದುವೆಯ ಉದ್ದೇಶ | 73 |
| 39. | 18 | 11 | ಜುಲೈ | 1949 | ಮಕ್ಕಳ ವಿಷಯದಲ್ಲಿ ಕರ್ತವ್ಯ | 76 |
| 40. | 18 | 12 | ಆಗಸ್ಟ್ | 1949 | ಸಂಧ್ಯಾವಂದನ | 79 |
| 41. | 19 | 1 | ಸಪ್ಟೆಂಬರ್ | 1949 | ಹರಿಜನಪ್ರೇಮ | 81 |
| 42. | 19 | 2 | ಅಕ್ಟೋಬರ್ | 1949 | ಹರಿಜನಪ್ರೇಮ | 83 |
| 43. | 19 | 3 | ನವಂಬರ್ | 1949 | ಪರಮತಸಹನೆ | 85 |
| 44. | 19 | 4 | ಡಿಸೆಂಬರ್ | 1949 | ಪಾರಿವ್ರಾಜ್ಯ | 88 |
| 45. | 19 | 5 | ಜನವರಿ | 1950 | ಮುಪ್ಪಿನಲ್ಲಿ ಮಾಡಬೇಕಾದದ್ದು | 90 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 46. | 19 | 7 | ಮಾರ್ಚ್ | 1950 | ಮನಮೆಚ್ಚಿದಂತೆ ನಡೆಯುವದು | 92 |
| 47. | 19 | 8 | ಏಪ್ರಿಲ್ | 1950 | ಜನರನ್ನು ತಿದ್ದುವದು | 94 |
| 48. | 19 | 9 | ಮೇ | 1950 | ಉದ್ಯೋಗದ ಘನತೆ | 96 |
| 49. | 19 | 10 | ಜೂನ್ | 1950 | ಆಶ್ರಮಸಂನ್ಯಾಸ | 98 |
| 50. | 19 | 11 | ಜುಲೈ | 1950 | ಧರ್ಮಶಾಸ್ತ್ರವೂ ಸಮಾಜಸ್ಥಿತಿಯೂ | 101 |
| 51. | 19 | 12 | ಆಗಸ್ಟ್ | 1950 | ಬೆಳಗ್ಗೆ ಮುಂಚಿತವಾಗಿ ಏಳುವದು | 103 |
| 52. | 20 | 1 | ಸಪ್ಟೆಂಬರ್ | 1950 | ಹಳ್ಳಿಗಳ ಅಭಿವೃದ್ಧಿ | 104 |
| 53. | 20 | 2 | ಅಕ್ಟೋಬರ್ | 1950 | ಅಧ್ಯಾತ್ಮಸಾಧನದಿಂದಾಗುವ ಪ್ರಯೋಜನ | 106 |
| 54. | 20 | 3 | ನವಂಬರ್ | 1950 | ಉಪನ್ಯಾಸಗಳು, ಉಪದೇಶಗಳು | 108 |
| 55. | 20 | 4 | ಡಿಸೆಂಬರ್ | 1950 | ಹುಡುಗರು ಗೀತೆಯನ್ನು ಹೇಗೆ ಉಪಯೋಗಿಸಬೇಕು? | 110 |
| 56. | 20 | 5 | ಜನವರಿ | 1951 | ಸಾತ್ತ್ವಿಕವೇಷಭಾಷೆಗಳು | 113 |
| 57. | 20 | 6 | ಫೆಬ್ರವರಿ | 1951 | ವೈರಬುದ್ಧಿಯಿಂದಾಗುವ ಹಾನಿ | 116 |
| 58. | 20 | 7 | ಮಾರ್ಚ್ | 1951 | ವ್ಯವಹಾರಕ್ಕೆ ಅಂಟದೆ ಇರುವದು | 118 |
| 59. | 20 | 8 | ಏಪ್ರಿಲ್ | 1951 | ಗುರುಸೇವೆಯ ಗುಟ್ಟು | 119 |
| 60. | 20 | 9 | ಮೇ | 1951 | ಸಂನ್ಯಾಸದ್ವಯ | 122 |
| 61. | 20 | 10 | ಜೂನ್ | 1951 | ಪರಮಾರ್ಥದ ಹಸಿವು | 124 |
| 62. | 20 | 11 | ಜುಲೈ | 1951 | ಮೌನದ ಸ್ವರೂಪ | 125 |
| 63. | 20 | 12 | ಆಗಸ್ಟ್ | 1951 | ಸಾಧನಕ್ರಮ | 126 |
| 64. | 21 | 1 | ಸೆಪ್ಟೆಂಬರ್ | 1951 | ಭಗವಂತನಿಗಾಗಿ ಸರ್ವತ್ಯಾಗ | 128 |
| 65. | 21 | 2 | ಅಕ್ಟೋಬರ್ | 1951 | ಆಚಾರಗಳೂ ರಾಜಕೀಯ ನಿರ್ಬಂಧಗಳೂ | 129 |
| 66. | 21 | 3 | ನವೆಂಬರ್ | 1951 | ಬಡತಿಯ ಆಶೆ | 131 |
| 67. | 21 | 4 | ಡಿಸೆಂಬರ್ | 1951 | ಯುವಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ | 133 |

ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಕ್ರ. ಸಂ. | ಸಂ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪೃ.ಸಂ. |
|---|---|---|---|---|---|---|
| 68. | 21 | 5 | ಜನವರಿ | 1952 | ಬೇನೆ ಬಿದ್ದಾಗ ಮನಸ್ಸನ್ನು ಹೇಗಿಟ್ಟುಕೊಂಡಿರಬೇಕು? | 135 |
| 69. | 21 | 6 | ಫೆಬ್ರವರಿ | 1952 | ನಮ್ಮ ಸುತ್ತುವಳೆಯವನ್ನು ಹಿತಕರವಾಗಿ ಮಾಡಿಕೊಳ್ಳುವ ಬಗೆ | 137 |
| 70. | 21 | 7 | ಮಾರ್ಚ್ | 1952 | ನಿತ್ಯರೋಗಕ್ಕೆ ಮದ್ದು | 138 |
| 71. | 21 | 8 | ಏಪ್ರಿಲ್ | 1952 | ಮತ್ತೊಬ್ಬರ ವಿಷಯದ ಮಾತು | 139 |
| 72. | 21 | 9 | ಮೇ | 1952 | ಗೃಹಸ್ಥಧರ್ಮ | 140 |
| 73. | 21 | 10 | ಜೂನ್ | 1952 | ಸಾಧಕನ ಗುರಿ | 142 |
| 74. | 21 | 11 | ಜುಲೈ | 1952 | ನಾಮಸ್ಮರಣೆಯೂ ವ್ಯವಹಾರವು | 143 |
| 75. | 21 | 12 | ಆಗಸ್ಟ್ | 1952 | ಹವ್ಯಾಸಗಳನ್ನು ತಪ್ಪಿಸುವದು | 144 |


## ಭಾಗ–II


| | | | | | | |
|---|---|---|---|---|---|---|
| 76. | 22 | 1 | ಸೆಪ್ಟೆಂಬರ್ | 1952 | ನಾಮಸ್ಮರಣೆಗೆ ಅಡ್ಡಿಗಳು ಹೋಗುವದು ಹೇಗೆ? | 147 |
| 77. | 22 | 2 | ಅಕ್ಟೋಬರ್ | 1952 | ಅಧ್ಯಾತ್ಮಪ್ರಕಾಶವನ್ನು ಅರಿಯುವದು ಹೇಗೆ? | 148 |
| 78. | 22 | 3 | ನವೆಂಬರ್ | 1952 | ಕುಟುಂಬ ಪೋಷಣೆ | 150 |
| 79. | 22 | 4 | ಡಿಸೆಂಬರ್ | 1952 | ವ್ಯವಹಾರವೂ ಪರಮಾರ್ಥವೂ | 151 |
| 80. | 22 | 5 | ಜನವರಿ | 1953 | ಮಹಿಳೆಯರೂ ವ್ಯವಹಾರವೂ | 152 |
| 81. | 22 | 6 | ಫೆಬ್ರವರಿ | 1953 | ಆಪತ್ಕಾಲದಲ್ಲಿ ಏನು ಮಾಡಬೇಕು? | 154 |
| 82. | 22 | 7 | ಮಾರ್ಚ್ | 1953 | ವೇದಾಂತವನ್ನು ಚರ್ಚಿಸುವ ಕ್ರಮ | 156 |
| 83. | 22 | 8 | ಏಪ್ರಿಲ್ | 1953 | ಶ್ರದ್ಧಾದಿಗಳ ಆವಶ್ಯಕತೆ | 157 |
| 84. | 22 | 9 | ಮೇ | 1953 | ಹರಿಕೀರ್ತನೆ | 158 |
| 85. | 22 | 10 | ಜೂನ್ | 1953 | ವೇದಾಂತವಿಚಾರದಲ್ಲಿ ಶ್ರದ್ಧೆ | 160 |
| 86. | 22 | 11 | ಜುಲೈ | 1953 | ವೈರಬುದ್ಧಿಯನ್ನು ನುಂಗಿಕೊಳ್ಳುವದು | 161 |
| 87. | 22 | 12 | ಆಗಸ್ಟ್ | 1953 | ಮನಸ್ಸನ್ನು ನಿಗ್ರಹಮಾಡಿಕೊಳ್ಳುವದು | 163 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 88. | 23 | 1 | ಸೆಪ್ಟೆಂಬರ್ | 1953 | ಶಾಂತಿ ಸುಖಗಳು ದೊರಕುವದಕ್ಕೆ ಮಾರ್ಗ | 165 |
| 89. | 23 | 2 | ಅಕ್ಟೋಬರ್ | 1953 | ಗ್ರಾಮನೈರ್ಮಲ್ಯ ಸಭೆಯ ಕರ್ತವ್ಯ | 167 |
| 90. | 23 | 3 | ನವಂಬರ್ | 1953 | ವೇದಾಂತದಿಂದ ಧನಸಂಪಾದನೆ | 169 |
| 91. | 23 | 4 | ಡಿಸೆಂಬರ್ | 1953 | ಗೀತಾಜಯಂತಿಯ ಉತ್ಸವ | 171 |
| 92. | 23 | 5 | ಜನವರಿ | 1954 | ಸ್ವಪ್ನ ಸಿದ್ಧಿಯ ಉಪಯೋಗ | 173 |
| 93. | 23 | 6 | ಫೆಬ್ರುವರಿ | 1954 | ವ್ಯವಹಾರವೂ ಅಧ್ಯಾತ್ಮಸಾಧನವೂ | 174 |
| 94. | 23 | 8 | ಏಪ್ರಿಲ್ | 1954 | ತಾನೇ ತನಗೆ ಶತ್ರು, ತಾನೇ ತನಗೆ ಮಿತ್ರ | 176 |
| 95. | 23 | 9 | ಮೇ | 1954 | ಪರಮಾತ್ಮನನ್ನೇ ಆಶ್ರಯಿಸಿದರೆ ಸುಖ | 177 |
| 96. | 23 | 10 | ಜೂನ್ | 1954 | ದೇವರ ಲೋಕ | 179 |
| 97. | 23 | 12 | ಆಗಸ್ಟ್ | 1954 | ಈಶ್ವರನನ್ನೇ ನಂಬುವದು | 180 |
| 98. | 24 | 1 | ಸೆಪ್ಟೆಂಬರ್ | 1954 | ಪರಮಾತ್ಮನು ಲಭಿಸುವದಕ್ಕೆ ಮಾರ್ಗ | 181 |
| 99. | 24 | 2 | ಅಕ್ಟೋಬರ್ | 1954 | ಅಧ್ಯಾತ್ಮದ ಚರ್ಚಾಸಂಘ | 182 |
| 100. | 24 | 3 | ನವಂಬರ್ | 1954 | ಸತ್ಸಂಗದಿಂದಾಗುವ ಲಾಭ | 184 |
| 101. | 24 | 4 | ಡಿಸೆಂಬರ್ | 1954 | ಪರಿವ್ರಾಜಕನ ಧರ್ಮ | 186 |
| 102. | 24 | 5 | ಜನವರಿ | 1955 | ಸಂಸಾರಿಗಳಿಗೆ ಅಧ್ಯಾತ್ಮಸಾಧನೆ | 188 |
| 103. | 24 | 6 | ಫೆಬ್ರುವರಿ | 1955 | ಅನಾಸಕ್ತಿ, ಸಂನ್ಯಾಸ | 190 |
| 104. | 24 | 7 | ಮಾರ್ಚ್ | 1955 | ಅಧ್ಯಾತ್ಮಸಾಧನದ ಮೊದಲನೆಯ ಹೆಜ್ಜೆಗಳು | 193 |
| 105. | 24 | 8 | ಏಪ್ರಿಲ್ | 1955 | ದುಃಖಕ್ಕೆ ಕಾರಣ | 195 |
| 106. | 24 | 9 | ಮೇ | 1955 | ಅಧ್ಯಾತ್ಮವಿಚಾರವು ಸಫಲವಾಗುವದು ಹೇಗೆ | 197 |
| 107. | 24 | 10 | ಜುಲೈ | 1955 | ಸೇಡುತೀರಿಸಿಕೊಳ್ಳುವ ಪ್ರವೃತ್ತಿ | 199 |
| 108. | 24 | 11 | ಆಗಸ್ಟ್ | 1955 | ಆಧ್ಯಾತ್ಮಿಕಸಾಧನಗಳು | 201 |
| 109. | 25 | 1 | ಸೆಪ್ಟೆಂಬರ್ | 1955 | ಅಧ್ಯಾತ್ಮಸಾಧನೆಗೆ ಅಡ್ಡಿಗಳು | 203 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 110. | 25 | 2 | ಅಕ್ಟೋಬರ್ | 1955 | ಅಧ್ಯಾತ್ಮಸಾಧನೆಗೆ ಅವಕಾಶವನ್ನು ಕಲ್ಪಿಸಿಕೊಳ್ಳುವದು ಹೇಗೆ? | 204 |
| 111. | 25 | 3 | ನವಂಬರ್ | 1955 | ಬಾಹ್ಯಕರ್ಮಗಳಿಂದ ಅಧ್ಯಾತ್ಮಸಾಧನಕ್ಕೆ ಬಲ | 206 |
| 112. | 25 | 4 | ಡಿಸೆಂಬರ್ | 1955 | ಅಧ್ಯಾತ್ಮವಿದ್ಯೆಯಿಂದ ಲಾಭ | 207 |
| 113. | 25 | 5 | ಜನವರಿ | 1956 | ಬ್ರಾಹ್ಮಣ್ಯರಕ್ಷಣೆ | 210 |
| 114. | 25 | 6 | ಫೆಬ್ರುವರಿ | 1956 | ಅಧ್ಯಾತ್ಮಸಾಧನಗಳು ಅಳವಡುವದು ಹೇಗೆ? | 212 |
| 115. | 25 | 7 | ಮಾರ್ಚ್ | 1956 | ಧನದ ಉಪಯೋಗ | 213 |
| 116. | 25 | 8 | ಏಪ್ರಿಲ್ | 1956 | ನಿಜವಾದ ವಿದ್ಯೆ | 215 |
| 117. | 25 | 9 | ಮೇ | 1956 | ದಾನದ ತತ್ತ್ವ | 217 |
| 118. | 25 | 10 | ಜೂನ್ | 1956 | ಜೀವನದ ಧ್ಯೇಯ | 219 |
| 119. | 25 | 11 | ಜುಲೈ | 1956 | ಕಷ್ಟಕಾಲದಲ್ಲಿಯೂ ಧರ್ಮವನ್ನು ಬಿಡದೆ ಇರುವದು | 221 |
| 120. | 25 | 12 | ಆಗಸ್ಟ್ | 1956 | ತತ್ತ್ವವಿಚಾರಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದು | 223 |
| 121. | 26 | 1 | ಸೆಪ್ಟೆಂಬರ್ | 1956 | ಆಧಿವ್ಯಾದಿಗಳು | 224 |
| 122. | 26 | 2 | ಅಕ್ಟೋಬರ್ | 1956 | ವಿದ್ಯಾಭ್ಯಾಸ | 225 |
| 123. | 26 | 3 | ನವೆಂಬರ್ | 1956 | ಸದ್ಗುರುಭಕ್ತಿ | 227 |
| 124. | 26 | 4 | ಡಿಸೆಂಬರ್ | 1956 | ನಿವೃತ್ತಿಧರ್ಮಕ್ಕೆ ಸಿದ್ಧತೆ | 229 |
| 125. | 26 | 5 | ಜನವರಿ | 1957 | ಸಮತ್ವಬುದ್ಧಿ | 231 |
| 126. | 26 | 6 | ಫೆಬ್ರುವರಿ | 1957 | ಕರ್ಮದ ಫಲ | 233 |
| 127. | 26 | 7 | ಮಾರ್ಚ್ | 1957 | ಮೋಹಬಂಧದಿಂದ ಮುಕ್ತಿ | 234 |
| 128. | 26 | 8 | ಏಪ್ರಿಲ್ | 1957 | ಎಲ್ಲರನ್ನೂ ಮೆಚ್ಚಿಸುವದು | 236 |
| 129. | 26 | 9 | ಮೇ | 1957 | ವೇದಾಂತದಿಂದ ಲಾಭವಾದದ್ದಕ್ಕೆ ಗುರುತು | 237 |
| 130. | 26 | 10 | ಜೂನ್ | 1957 | ಸಾಧನೆಗೆ ಸ್ಥೈರ್ಯ ಬೇಕು | 238 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 131. | 26 | 11 | ಜುಲೈ | 1957 | ಕುಟುಂಬಪೋಷಣೆ | 239 |
| 132. | 26 | 12 | ಆಗಸ್ಟ್ | 1957 | ಜನರ ಮನಸ್ಸನ್ನು ಒಲಿಸುವದು | 240 |
| 133. | 27 | 1 | ಸೆಪ್ಟೆಂಬರ್ | 1957 | ಆಸ್ತಿಕ್ಯಬುದ್ಧಿ | 242 |
| 134. | 27 | 2 | ಅಕ್ಟೋಬರ್ | 1957 | ದರಿದ್ರನಾರಾಯಣ | 243 |
| 135. | 27 | 3 | ನವೆಂಬರ್ | 1957 | ಉಪಾಸನೆಯ ಆವಶ್ಯಕತೆ | 245 |
| 136. | 27 | 4 | ಡಿಸೆಂಬರ್ | 1957 | ಮನಸ್ಸಿಗೆ ಶಾಂತಿ | 247 |
| 137. | 27 | 5 | ಜನವರಿ | 1958 | ಬ್ರಾಹ್ಮಣ್ಯ ರಕ್ಷಣೆ | 250 |
| 138. | 27 | 6 | ಫೆಬ್ರುವರಿ | 1958 | ವಯಸ್ಸಾದ ಹಾಗೆ ಏನು ಚಿಂತಿಸಬೇಕು? | 252 |
| 139. | 27 | 7 | ಮಾರ್ಚ್ | 1958 | ಸಂನ್ಯಾಸಾಶ್ರಮವು ಸಾರ್ಥಕವಾಗುವ ಬಗೆ | 254 |
| 140. | 27 | 8 | ಏಪ್ರಿಲ್ | 1958 | ಗುರುಕೃಪೆಯು ಹೇಗೆ ಆಗುವದು? | 256 |
| 141. | 27 | 9 | ಮೇ | 1958 | ಸಾವಿನ ಅಂಜಿಕೆ | 258 |
| 142. | 27 | 10 | ಜೂನ್ | 1958 | ವಿವಾಹದ ಅರ್ಥ | 261 |
| 143. | 27 | 11 | ಜುಲೈ | 1958 | ಆರ್ಜವ | 263 |
| 144. | 27 | 12 | ಆಗಸ್ಟ್ | 1958 | ಮಹಿಳೆಯರು ಮಾಡಬಹುದಾದ ದೇಶಸೇವೆ | 265 |
| 145. | 28 | 1 | ಸೆಪ್ಟೆಂಬರ್ | 1958 | ನಿಜವಾದ ವಿದ್ಯೆ | 267 |
| 146. | 28 | 2 | ಅಕ್ಟೋಬರ್ | 1958 | ಭಗವಂತನ ನಾಮಸ್ಮರಣೆಯೇ ಅಧ್ಯಾತ್ಮಸಾಧನ | 268 |
| 147. | 28 | 3 | ನವೆಂಬರ್ | 1958 | ಪ್ರಾರಬ್ಧ ಪ್ರಯತ್ನ | 270 |
| 148. | 28 | 4 | ಡಿಸೆಂಬರ್ | 1958 | ಓದುವವರೂ ಅಧ್ಯಾತ್ಮಸಾಧನವೂ | 271 |
| 149. | 28 | 5 | ಜನವರಿ | 1959 | ವೇದಾಂತಚರ್ಚೆಯೂ ಅಧ್ಯಾತ್ಮಸಾಧನವೂ | 272 |
| 150. | 28 | 6 | ಫೆಬ್ರುವರಿ | 1959 | ಆರ್ಜವದಿಂದ ಜ್ಞಾನಪ್ರಾಪ್ತಿ | 273 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 151. | 28 | 7 | ಮಾರ್ಚ್ | 1959 | ವರ್ತಮಾನಪತ್ರಿಕೆಗಳೂ ಗ್ರಂಥಕಾಲಕ್ಷೇಪವೂ | 275 |
| 152. | 28 | 8 | ಏಪ್ರಿಲ್ | 1959 | ಜನತಾಸೇವೆ | 277 |
| 153. | 28 | 9 | ಮೇ | 1959 | ವಿವಾಹದ ಕಗ್ಗಂಟಿನ ಪ್ರಶ್ನೆ | 278 |
| 154. | 28 | 10 | ಜೂನ್ | 1959 | ಜೀವನದ ಗುರಿ | 281 |
| 155. | 28 | 11 | ಜುಲೈ | 1959 | ಸದ್ಗುರುವಿನ ಅನುಗ್ರಹ | 283 |
| 156. | 28 | 12 | ಆಗಸ್ಟ್ | 1959 | ವೈರಾಗ್ಯ ಜೀವನ | 284 |

### ಭಾಗ–III

| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 157. | 29 | 1 | ಸೆಪ್ಟೆಂಬರ್ | 1959 | ಭೌತಿಕವಿಜ್ಞಾನವೂ ತತ್ತ್ವಜ್ಞಾನವೂ | 286 |
| 158. | 29 | 2 | ಅಕ್ಟೋಬರ್ | 1959 | ಮನಸ್ಸಿನ ದುಗುಡಕ್ಕೆ ಪ್ರತೀಕಾರ | 287 |
| 159. | 29 | 3 | ನವಂಬರ್ | 1959 | ಮಿತಸಂತತಿಯೂ ಕುಟುಂಬಭರಣವೂ | 288 |
| 160. | 29 | 4 | ಡಿಸೆಂಬರ್ | 1959 | ದೀಪಾವಳಿಯಲ್ಲಿ ಮಾಡತಕ್ಕದ್ದೇನು? | 289 |
| 161. | 29 | 5 | ಜನವರಿ | 1960 | ವಿದ್ಯಾಭ್ಯಾಸವೂ ಪರಮಾರ್ಥದ ಒಲವೂ | 290 |
| 162. | 29 | 6 | ಫೆಬ್ರವರಿ | 1960 | ವೇದಾಂತವಿಚಾರದಲ್ಲಿ ಮುಂದುವರಿಯುವದು ಹೇಗೆ? | 291 |
| 163. | 29 | 7 | ಮಾರ್ಚ್ | 1960 | ವೈದ್ಯವಿದ್ಯೆ | 292 |
| 164. | 29 | 8 | ಏಪ್ರಿಲ್ | 1960 | ಇಂಗ್ಲಿಷು, ಸಂಸ್ಕೃತ | 293 |
| 165. | 29 | 9 | ಮೇ | 1960 | ವಿವಾಹದ ಪಾವಿತ್ರ್ಯ | 295 |
| 166. | 29 | 10 | ಜೂನ್ | 1960 | ಪ್ರಾರ್ಥನೆಯ ಆವಶ್ಯಕತೆ | 298 |
| 167. | 29 | 11 | ಜುಲೈ | 1960 | ಆಚಾರದ ಆವಶ್ಯಕತೆ | 299 |
| 168. | 29 | 12 | ಆಗಸ್ಟ್ | 1960 | ಆಚಾರವಿಶೇಷಗಳು | 301 |
| 169. | 30 | 1 | ಸೆಪ್ಟೆಂಬರ್ | 1960 | ಚಿತ್ತಶುದ್ಧಿ | 303 |
| 170. | 30 | 3 | ಅಕ್ಟೋಬರ್ | 1960 | ಹನುಮಂತನ ಭಾಷೆ | 304 |
| 171. | 30 | 4 | ನವಂಬರ್ | 1960 | ಅಧ್ಯಾತ್ಮಸಾಧನೆಗೆ ಅಡಚಣೆ | 305 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 172. | 30 | 5 | ಜನವರಿ | 1961 | ಜನಾಂಗದ ಒಗ್ಗಟ್ಟಿಗೆ ಉಪಾಯ | 306 |
| 173. | 30 | 6 | ಫೆಬ್ರವರಿ | 1961 | ವಿಶ್ರಾಂತಿ | 308 |
| 174. | 30 | 7 | ಮಾರ್ಚ್ | 1961 | ಸಂನ್ಯಾಸ | 309 |
| 175. | 30 | 8 | ಏಪ್ರಿಲ್ | 1961 | ಸ್ವಾಮಿಭೃತ್ಯ ಸಂಬಂಧ | 310 |
| 176. | 30 | 9 | ಮೇ | 1961 | ರಾಮನಾಮ | 311 |
| 177. | 30 | 10 | ಜೂನ್ | 1961 | ದೇವತಾರ್ಚನೆ | 312 |
| 178. | 30 | 11 | ಜುಲೈ | 1961 | ನಮ್ಮ ಕರ್ಮಕ್ಕೆ ಯಾರು ಹೊಣೆ? | 313 |
| 179. | 30 | 12 | ಆಗಸ್ಟ್ | 1961 | ರಾಮಾಯಣ ಮಹಾಭಾರತಗಳು | 314 |
| 180. | 31 | 1 | ಸೆಪ್ಟಂಬರ್ | 1961 | ಶ್ರೀಕೃಷ್ಣಭಗವಂತ | 315 |
| 181. | 31 | 2 | ಅಕ್ಟೋಬರ್ | 1961 | ಸರ್ವಸಹಾನುಭೂತಿ | 317 |
| 182. | 31 | 3 | ನವೆಂಬರ್ | 1961 | ಪರಮಾತ್ಮನ ಸಾಕ್ಷಾತ್ಕಾರ | 318 |
| 183. | 31 | 4 | ಡಿಸೆಂಬರ್ | 1961 | ಹೊರಗಿನ ವೇಷದ ಬೆಲೆ | 319 |
| 184. | 31 | 5 | ಜನವರಿ | 1962 | ವೇದಾಂತಾಭ್ಯಾಸ | 321 |
| 185. | 31 | 6 | ಫೆಬ್ರವರಿ | 1962 | ಸತ್ಸಂಗವೂ ಪರಮಾತ್ಮನ ಧ್ಯಾನವೂ | 322 |
| 186. | 31 | 7 | ಮಾರ್ಚ್ | 1962 | ವೃತ್ತಾಂತಪತ್ರಿಕೆಗಳನ್ನು ಓದುವದು | 323 |
| 187. | 31 | 8 | ಏಪ್ರಿಲ್ | 1962 | ಹಣೆಯಲ್ಲಿ ಧರ್ಮದ ಲಾಂಛನವನ್ನು ಧರಿಸುವ ಪದ್ಧತಿ | 324 |
| 188. | 31 | 9 | ಮೇ | 1962 | ಶಂಕರಜಯಂತಿ, ಶಂಕರಾರಾಧನೆ | 325 |
| 189. | 31 | 10 | ಜೂನ್ | 1962 | ಯಾವುದಕ್ಕೆ ಎಷ್ಟು ಬೆಲೆ | 326 |
| 190. | 31 | 11 | ಜುಲೈ | 1962 | ಗುರುಪೂರ್ಣಿಮೆ | 327 |
| 191. | 31 | 12 | ಆಗಸ್ಟ್ | 1962 | ಸಾಧನದಲ್ಲಿ ಸ್ಥಿರತ್ವ | 328 |
| 192. | 32 | 1 | ಸೆಪ್ಟೆಂಬರ್ | 1962 | ಸದಾಚಾರ | 329 |
| 193. | 32 | 2 | ಅಕ್ಟೋಬರ್ | 1962 | ಪ್ರೇಮವಿವಾಹ | 330 |
| 194. | 32 | 3 | ನವೆಂಬರ್ | 1962 | ದೆವ್ವಗಳಕಾಟ | 331 |
| 195. | 32 | 4 | ಡಿಸೆಂಬರ್ | 1962 | ನಾಸ್ತಿಕ್ಯ | 332 |
| 196. | 32 | 5 | ಜನವರಿ | 1963 | ಆಪತ್ಕಾಲದಲ್ಲಿ ಏನು ಮಾಡಬೇಕು ? | 334 |

**ಲೇಖನಗಳ ಮೂಲ–ವಿಷಯಾನುಕ್ರಮಣಿಕೆ**

| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 197. | 32 | 6 | ಫೆಬ್ರುವರಿ | 1963 | ಸಂನ್ಯಾಸದತತ್ತ್ವ | 335 |
| 198. | 32 | 7 | ಮಾರ್ಚ್ | 1963 | ಸಂನ್ಯಾಸಿಗಳ ಕರ್ತವ್ಯ | 336 |
| 199. | 32 | 8 | ಏಪ್ರಿಲ್ | 1963 | ಅಪರಿಹಾರ್ಯ ರೋಗಗಳು | 337 |
| 200. | 32 | 9 | ಮೇ | 1963 | ಬದುಕು ನಿತ್ಯವಲ್ಲ | 338 |
| 201. | 32 | 10 | ಜೂನ್ | 1963 | ಪ್ರಾರ್ಥನೆಯನ್ನು ಹೇಗೆ ಮಾಡಬೇಕು? | 339 |
| 202. | 32 | 11 | ಜುಲೈ | 1963 | ಈಶ್ವರನಲ್ಲಿ ಅಚಲ ಶ್ರದ್ಧೆ | 339 |
| 203. | 32 | 12 | ಆಗಸ್ಟ್ | 1963 | ಅಧ್ಯಾತ್ಮ ವಿದ್ಯೆಯ ಮಾರ್ಗ | 341 |
| 204 | 33 | 1 | ಸೆಪ್ಟಂಬರ್ | 1963 | ಕಷ್ಟಕಾಲ | 342 |
| 205. | 33 | 2 | ಅಕ್ಟೋಬರ್ | 1963 | ಜೀವನದ ಗುರಿ | 343 |
| 206. | 33 | 3 | ನವೆಂಬರ್ | 1963 | ಸತ್ಸಂಗ | 344 |
| 207. | 33 | 4 | ಡಿಸೆಂಬರ್ | 1963 | ತೀರ್ಥಕ್ಷೇತ್ರಗಳು | 345 |
| 208. | 33 | 5 | ಜನವರಿ | 1964 | ಗೀತಾ ಜಯಂತಿ | 346 |
| 209. | 33 | 6 | ಫೆಬ್ರುವರಿ | 1964 | ವೇದಾಂತ ಪ್ರಚಾರ | 347 |
| 210. | 33 | 7 | ಮಾರ್ಚ್ | 1964 | ವ್ಯಾಧಿಶಮನಕ್ಕೆ ಉಪಾಯ | 348 |
| 211. | 33 | 8 | ಏಪ್ರಿಲ್ | 1964 | ಅನುಷ್ಠಾನ | 349 |
| 212. | 33 | 9 | ಮೇ | 1964 | ಸಾತ್ವಿಕ ಮನಸ್ಸು | 350 |
| 213. | 33 | 10 | ಜೂನ್ | 1964 | ಸಂನ್ಯಾಸ | 351 |
| 214. | 33 | 11 | ಜುಲೈ | 1964 | ಶಂಕರಾರಾಧನೆ | 352 |
| 215. | 33 | 12 | ಆಗಸ್ಟ್ | 1964 | ಉಪನಯನವೂ, ಉಪಾಕರ್ಮವೂ | 354 |
| 216. | 34 | 1 | ಸೆಪ್ಟಂಬರ್ | 1964 | ಸಂನ್ಯಾಸಿಗಳೂ, ಸಾಧುಗಳೂ | 355 |
| 217. | 34 | 2 | ಅಕ್ಟೋಬರ್ | 1964 | ಮತ್ತೊಬ್ಬರಿಗಾಗಿ ಅನುಷ್ಠಾನವನ್ನು ಮಾಡುವುದು | 356 |
| 218. | 34 | 3 | ನವೆಂಬರ್ | 1964 | ಗಣಪತಿಯ ಪೂಜೆ | 357 |
| 219. | 34 | 4 | ಡಿಸೆಂಬರ್ | 1964 | ಗೋತ್ರ ಪ್ರವರಗಳು | 358 |
| 220. | 34 | 5 | ಜನವರಿ | 1965 | ಜ್ಞಾನಕ್ಕೆ ಸಾಧನ | 359 |
| 221. | 34 | 6 | ಫೆಬ್ರುವರಿ | 1965 | ಈಗಿನ ಸ್ಥಿತಿಯಲ್ಲಿಯೇ ತತ್ತ್ವಪ್ರಾಪ್ತಿ | 361 |

## ಲೇಖನಗಳ ಮೂಲ-ವಿಷಯಾನುಕ್ರಮಣಿಕೆ

| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 222. | 34 | 7 | ಮಾರ್ಚ್ | 1965 | ಅಕ್ಷರ ವಿದ್ಯೆ | 362 |
| 223. | 34 | 8 | ಏಪ್ರಿಲ್ | 1965 | ಅಧ್ಯಾತ್ಮ ವಿದ್ಯೆಯ ಗುರಿ | 363 |
| 224. | 34 | 9 | ಮೇ | 1965 | ಸಂನಿವೇಶಕ್ಕೆ ಹೊಂದಿಕೊಳ್ಳುವುದು | 364 |
| 225. | 34 | 10 | ಜೂನ್ | 1965 | ಅಧ್ಯಾತ್ಮ ವಿದ್ಯೆಯನ್ನು ಹೇಗೆ ಸಂಪಾದಿಸಿಕೊಳ್ಳಬೇಕು? | 365 |
| 226. | 34 | 11 | ಜುಲೈ | 1965 | ಕೀರ್ತಿಕಾಮ | 367 |
| 227. | 34 | 12 | ಆಗಸ್ಟ್ | 1965 | ಸದ್ಗುರುಸೇವೆ | 368 |
| 228. | 35 | 1 | ಸೆಪ್ಟಂಬರ್ | 1965 | ಸರ್ವತ್ರ ಭಗವದ್ಭಾವನೆ | 370 |
| 229. | 35 | 2 | ಅಕ್ಟೋಬರ್ | 1965 | ವಿದ್ಯಾಶಾಲೆಗಳ ಬೋಧಕರವೃತ್ತಿ | 372 |
| 230. | 35 | 3 | ನವೆಂಬರ್ | 1965 | ವೈದ್ಯವೃತ್ತಿ | 374 |
| 231. | 35 | 4 | ಡಿಸೆಂಬರ್ | 1965 | ದೇಶಭಕ್ತಿಯನ್ನು ಹೇಗೆ ತೋರಿಸಬೇಕು? | 377 |
| 232. | 35 | 5 | ಜನವರಿ | 1966 | ವೇದಾಂತ ವಿದ್ಯೆಯಿಂದ ಐಹಿಕ ಪ್ರಯೋಜನವುಂಟೇ? | 380 |
| 233. | 35 | 6 | ಫೆಬ್ರುವರಿ | 1966 | ವೇದಾಂತದಲ್ಲಿ ಎಲ್ಲರಿಗೂ ಅಧಿಕಾರವಿಲ್ಲವೇ? | 382 |
| 234. | 35 | 7 | ಮಾರ್ಚ್ | 1966 | ವೈರಾಗ್ಯಭಾವನೆ | 384 |
| 235. | 35 | 8 | ಏಪ್ರಿಲ್ | 1966 | ಜ್ಞಾನದ ತತ್ವ | 386 |
| 236. | 35 | 9 | ಮೇ | 1966 | ತರ್ಕದ ಉಪಯೋಗ | 387 |
| 237. | 35 | 10 | ಜೂನ್ | 1966 | ವಿದ್ಯಾಭ್ಯಾಸ | 389 |
| 238. | 35 | 11 | ಜುಲೈ | 1966 | ಕೃಷಿ ಜೀವನ | 390 |
| 239. | 35 | 12 | ಆಗಸ್ಟ್ | 1966 | ಗೋರಕ್ಷಣೆ | 391 |
| 240. | 36 | 1 | ಸೆಪ್ಟಂಬರ್ | 1966 | ಅದ್ವೈತಿಗಳು, ಶೈವರೊ ವೈಷ್ಣವರೊ? | 395 |
| 241. | 36 | 2 | ಅಕ್ಟೋಬರ್ | 1966 | ಪಾಂಚರಾತ್ರರನ್ನು ಶಂಕರಾಚಾರ್ಯರು ಖಂಡಿಸಿದಾರೆಯೆ? | 397 |
| 242. | 36 | 3 | ನವೆಂಬರ್ | 1966 | ಪರಮಹಂಸ ಪಾರಿವ್ರಾಜ್ಯ | 399 |
| 243. | 36 | 4 | ಡಿಸೆಂಬರ್ | 1966 | ತೀರ್ಥಯಾತ್ರೆ | 401 |
| 244. | 36 | 5 | ಜನವರಿ | 1967 | ವೇದಾಂತ ಜ್ಞಾನದ ಉಪಯೋಗ | 403 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 245. | 36 | 6 | ಫೆಬ್ರವರಿ | 1967 | ಆರ್ಜವ | 406 |
| 246. | 36 | 7 | ಮಾರ್ಚ್ | 1967 | ಆಚಾರ | 408 |
| 247. | 36 | 8 | ಏಪ್ರಿಲ್ | 1967 | ವೇದಾಂತಕ್ಕೆ ಅಧಿಕಾರ | 410 |
| 248. | 36 | 9 | ಮೇ | 1967 | ಕಾಮ್ಯ ನಿಷಿದ್ಧಗಳ ತ್ಯಾಗ | 411 |
| 249. | 36 | 10 | ಜೂನ್ | 1967 | ಸ್ತೋತ್ರಪಾಠ, ಭಜನೆ | 412 |
| 250. | 36 | 12 | ಆಗಸ್ಟ್ | 1967 | ಸದ್ಗುರುವಿನಲ್ಲಿ ಆರ್ಜವ | 414 |


## ಭಾಗ–IV


| | | | | | | |
|---|---|---|---|---|---|---|
| 251. | 37 | 1 | ಸೆಪ್ಟಂಬರ್ | 1967 | ಬುದ್ಧಿಯೂ, ಹೃದಯವೂ | 416 |
| 252. | 37 | 2 | ಅಕ್ಟೋಬರ್ | 1967 | ಆಧ್ಯಾತ್ಮಜ್ಞಾನಕ್ಕೆ ಮುಖ್ಯವಾದ ಅಡ್ಡಿ | 418 |
| 253. | 37 | 3 | ನವೆಂಬರ್ | 1967 | ನಿಜವಾದ ಆಶ್ರಮವು ಎಲ್ಲಿದೆ? | 420 |
| 254. | 37 | 4 | ಡಿಸೆಂಬರ್ | 1967 | ಕುಟುಂಬ ಪ್ರೇಮ | 421 |
| 255. | 37 | 5 | ಜನವರಿ | 1968 | ಓದುವುದಕ್ಕೆ ಆರಿಸಿಕೊಳ್ಳಬೇಕಾದ ಪುಸ್ತಕಗಳು | 422 |
| 256. | 37 | 6 | ಫೆಬ್ರವರಿ | 1968 | ವೇದಾಂತವು ಸಾರ್ವತ್ರಿಕವಲ್ಲವೆ? | 422 |
| 257. | 37 | 7 | ಮಾರ್ಚ್ | 1968 | ಬ್ರಾಹ್ಮಣ್ಯದ ಮಹತ್ವ | 423 |
| 258. | 37 | 8 | ಏಪ್ರಿಲ್ | 1968 | ಜಾತ್ಯಭಿಮಾನ | 425 |
| 259. | 37 | 9 | ಮೇ | 1968 | ನೈಷ್ಠಿಕ ಬ್ರಹ್ಮಚರ್ಯ | 427 |
| 260. | 37 | 10 | ಜೂನ್ | 1968 | ವರ್ಣಾಶ್ರಮ ವ್ಯವಸ್ಥೆ | 429 |
| 261. | 37 | 11 | ಜುಲೈ | 1968 | ಸದ್ಗುರು ಸೇವೆ | 432 |
| 262. | 37 | 12 | ಆಗಸ್ಟ್ | 1968 | ರಾಮಾಯಣ ಮಹಾಭಾರತಗಳು | 434 |
| 263. | 38 | 1 | ಸೆಪ್ಟಂಬರ್ | 1968 | ಸದಾಚಾರ | 436 |
| 264. | 38 | 2 | ಅಕ್ಟೋಬರ್ | 1968 | ಅಧ್ಯಾತ್ಮವಿಚಾರಸಂಘಗಳು | 438 |
| 265. | 38 | 3 | ನವೆಂಬರ್ | 1968 | ವಿದ್ಯಾರ್ಥಿಗಳ ಜೀವನ | 440 |
| 266. | 38 | 4 | ಡಿಸೆಂಬರ್ | 1968 | ಸರಕಾರಿಯ ನೌಕರಿ | 442 |
| 267. | 38 | 5 | ಜನವರಿ | 1969 | ಜ್ಞಾನಸಾಧನಸಂಘದವರು ಏನು ಮಾಡಬೇಕು? | 443 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 268. | 38 | 6 | ಫೆಬ್ರವರಿ | 1969 | ಪರೋಪಕಾರ | 444 |
| 269. | 38 | 7 | ಮಾರ್ಚ್ | 1969 | ಸಂನ್ಯಾಸವನ್ನು ಯಾವಾಗಹೇಗೆ ಮಾಡಬೇಕು ? | 446 |
| 270. | 38 | 8 | ಏಪ್ರಿಲ್ | 1969 | ಮೌನವನ್ನು ಹೇಗೆ ಮಾಡಬೇಕು? | 448 |
| 271. | 38 | 9 | ಮೇ | 1969 | ಅಧ್ಯಾತ್ಮವಿದ್ಯೆಯಲ್ಲಿ ಶ್ರದ್ಧೆಯ ಸ್ಥಾನ | 450 |
| 272. | 38 | 10 | ಜೂನ್ | 1969 | ಆಶ್ರಮಧರ್ಮ | 452 |
| 273. | 38 | 11 | ಜುಲೈ | 1969 | ಶ್ರದ್ಧೆ | 454 |
| 274. | 38 | 12 | ಆಗಸ್ಟ್ | 1969 | ಅಧ್ಯಾತ್ಮ ಸಾಧನವೂ ಸಿದ್ಧಾಂತವೂ | 456 |
| 275. | 39 | 1 | ಸೆಪ್ಟಂಬರ್ | 1969 | ಪರರ ಗುಣದೋಷಗಳ ವಿಮರ್ಶೆ | 458 |
| 276. | 39 | 2 | ಅಕ್ಟೋಬರ್ | 1969 | ಅಧ್ಯಾತ್ಮವಿದ್ಯಾ ಕಾಲಕ್ಷೇಪ | 459 |
| 277. | 39 | 3 | ನವೆಂಬರ್ | 1969 | ರಾಮಕೃಷ್ಣಹರಿ | 460 |
| 278. | 39 | 4 | ಡಿಸೆಂಬರ್ | 1969 | ಅಧ್ಯಾತ್ಮವಿದ್ಯೆ | 461 |
| 279. | 39 | 5 | ಜನವರಿ | 1970 | ಮನಸ್ಸಿಗೆ ಶಾಂತಿ | 461 |
| 280. | 39 | 6 | ಫೆಬ್ರವರಿ | 1970 | ವೈರಾಗ್ಯದ ಮರ್ಮ | 462 |
| 281. | 39 | 7 | ಮಾರ್ಚ್ | 1970 | ಯೋಗ ಸಿದ್ಧಿ | 464 |
| 282. | 39 | 8 | ಏಪ್ರಿಲ್ | 1970 | ಮನಃಶಾಂತಿಗೆ ಸಾಧನೆ | 466 |
| 283. | 39 | 9 | ಮೇ | 1970 | ಮರಣಕಾಲದಲ್ಲಿ ಭಗವಂತನ ಸ್ಮರಣೆ | 469 |
| 284. | 39 | 10 | ಜೂನ್ | 1970 | ಅಧ್ಯಾತ್ಮವಿದ್ಯಾ ಪ್ರಸಾರ | 469 |
| 285. | 39 | 11 | ಜುಲೈ | 1970 | ಆಶ್ರಮವಾಸ | 471 |
| 286. | 39 | 12 | ಆಗಸ್ಟ್ | 1970 | ಮನೆಯಲ್ಲಿ ಅಧ್ಯಾತ್ಮವಿದ್ಯಾಭ್ಯಾಸ | 474 |
| 287. | 40 | 1 | ಸೆಪ್ಟಂಬರ್ | 1970 | ತತ್ವವಿಚಾರ ಸಾಧನಾನುಷ್ಠಾನ | 475 |
| 288. | 40 | 2 | ಅಕ್ಟೋಬರ್ | 1970 | ವಾಸನೆ ಅಥವಾ ಸಂಸ್ಕಾರ | 477 |
| 289. | 40 | 3 | ನವೆಂಬರ್ | 1970 | ಭಕ್ತಿಯೂ, ಜ್ಞಾನವೂ | 478 |
| 290. | 40 | 4 | ಡಿಸೆಂಬರ್ | 1970 | ಈಶ್ವರನ ವಿಷಯಕ್ಕೆ ಶಂಕೆಗಳ ಸುರಿಮಳೆ | 479 |
| 291. | 40 | 5 | ಜನವರಿ | 1971 | ಪರಮಾತ್ಮ ಸಾಧನೆಯಲ್ಲಿ ಅಹಂಕಾರವು ಸಲ್ಲದು | 480 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 292. | 40 | 6 | ಫೆಬ್ರವರಿ | 1971 | ಬ್ರಾಹ್ಮಣ್ಯ | 481 |
| 293. | 40 | 7 | ಮಾರ್ಚ್ | 1971 | ಉಪನಯನ | 483 |
| 294. | 40 | 8 | ಏಪ್ರಿಲ್ | 1971 | ಬ್ರಹ್ಮಚರ್ಯ | 485 |
| 295. | 40 | 9 | ಮೇ | 1971 | ಸಂನ್ಯಾಸಾಶ್ರಮ | 488 |
| 296. | 40 | 10 | ಜೂನ್ | 1971 | ಗುರು ಸೇವೆ | 490 |
| 297. | 40 | 11 | ಜುಲೈ | 1971 | ಭಾವನೆಯ ಆವಶ್ಯಕತೆ | 491 |
| 298. | 40 | 12 | ಆಗಸ್ಟ್ | 1971 | ಭೋಗ, ಭಯ, ಕ್ರೋಧ | 493 |
| 299. | 41 | 1 | ಸೆಪ್ಟಂಬರ್ | 1971 | ಸಂನ್ಯಾಸಾಶ್ರಮ | 495 |
| 300. | 41 | 2 | ಅಕ್ಟೋಬರ್ | 1971 | ಸಾಧನಗಳ ಸ್ಥಾನ | 497 |
| 301. | 41 | 3 | ನವೆಂಬರ್ | 1971 | ತಪಸ್ಸಿನಲ್ಲಿ ಮಿತಿ | 498 |
| 302. | 41 | 4 | ಡಿಸೆಂಬರ್ | 1971 | ವೇಷ , ಭಾಷೆ | 500 |
| 303. | 41 | 5 | ಜನವರಿ | 1972 | ಯಜ್ಞದಾನ, ತಪಸ್ಸುಗಳು | 502 |
| 304. | 41 | 6 | ಫೆಬ್ರವರಿ | 1972 | ಭಗವದ್ಭಕ್ತಿ | 505 |
| 305. | 41 | 7 | ಮಾರ್ಚ್ | 1972 | ಸಂನ್ಯಾಸಾಶ್ರಮ | 507 |
| 306. | 41 | 8 | ಏಪ್ರಿಲ್ | 1972 | ಭಜನೆ | 509 |
| 307. | 41 | 9 | ಮೇ | 1972 | ಗೀತಾರ್ಥ ಪ್ರಚಾರ | 511 |
| 308. | 41 | 10 | ಜೂನ್ | 1972 | ಸರ್ವತ್ರ ಭಗವದ್ಭಾವನೆ | 512 |
| 309. | 41 | 11 | ಜುಲೈ | 1972 | ಧ್ಯಾನಯೋಗಕ್ಕೆ ಅಣಿಯಾಗುವುದು | 513 |
| 310. | 41 | 12 | ಆಗಸ್ಟ್ | 1972 | ಅಧಿಕಾರವಾದ | 515 |
| 311. | 42 | 1 | ಸೆಪ್ಟಂಬರ್ | 1972 | ಬ್ರಹ್ಮವಿದ್ಯೆಯ ಈಗಿನ ದುರವಸ್ಥೆ | 516 |
| 312. | 42 | 2 | ಅಕ್ಟೋಬರ್ | 1972 | ಸಾಧನೆಯ ಕ್ರಮ | 517 |
| 313. | 42 | 3 | ನವೆಂಬರ್ | 1972 | ಚಾತುರ್ಮಾಸ್ಯವೂ ಮಹಾಲಯವೂ | 518 |
| 314. | 42 | 4 | ಡಿಸೆಂಬರ್ | 1972 | ಪರಮಹಂಸಪರಿವ್ರಾಜ್ಯ | 519 |
| 315. | 42 | 5 | ಜನವರಿ | 1973 | ಪತಿಭಕ್ತಿ | 521 |
| 316. | 42 | 6 | ಫೆಬ್ರವರಿ | 1973 | ಉತ್ಸವಗಳು | 523 |
| 317. | 42 | 7 | ಮಾರ್ಚ್ | 1973 | ಸಾಧುಗಳ ಅನುಕರಣೆ | 526 |
| 318. | 42 | 8 | ಏಪ್ರಿಲ್ | 1973 | ಸಂನ್ಯಾಸದ ತತ್ತ್ವ | 527 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 319. | 42 | 9 | ಮೇ | 1973 | ಜಪದ ಮರ್ಮ | 528 |
| 320. | 42 | 10 | ಜೂನ್ | 1973 | ಆತ್ಮ ನಿಶ್ಚಯ | 529 |
| 321. | 42 | 11 | ಜುಲೈ | 1973 | ಅಧ್ಯಾತ್ಮವಿದ್ಯೆಯು ಯಾರಿಗಾಗಿ ಹೇಳಿದ್ದು? | 530 |
| 322. | 42 | 12 | ಆಗಸ್ಟ್ | 1973 | ಇನ್ನಾದರೂ ಕಾಲವನ್ನು ಸದುಪಯೋಗಮಾಡಿಕೊಳ್ಳಬಾರದೆ? | 531 |
| 323. | 43 | 4 | ಡಿಸೆಂಬರ್ | 1973 | ಪರಮಹಂಸನ ನಿಷ್ಠೆ | 532 |
| 324. | 43 | 5 | ಜನವರಿ | 1974 | ಭಗವಂತನಲ್ಲಿ ಮೊರೆಯಿಡುವುದು | 533 |
| 325. | 43 | 6 | ಫೆಬ್ರವರಿ | 1974 | ಅನುಭವ | 534 |
| 326. | 43 | 7 | ಮಾರ್ಚ್ | 1974 | ಆತ್ಮನ ಸರ್ವವ್ಯಾಪ್ತಿ | 535 |
| 327. | 43 | 8 | ಏಪ್ರಿಲ್ | 1974 | ಅಧ್ಯಾತ್ಮಶಾಸ್ತ್ರದ ಸದುಪಯೋಗ | 537 |
| 328. | 43 | 9 | ಮೇ | 1974 | ಆತ್ಮೈಕತ್ವವಿದ್ಯೆಯಲ್ಲಿ ನಿಷ್ಠೆ | 538 |
| 329. | 43 | 10 | ಜೂನ್ | 1974 | ಋಜುಭಾವ | 538 |
| 330. | 43 | 11 | ಜುಲೈ | 1974 | ಮಹಾವಾಕ್ಯಜಪ | 540 |
| 331. | 43 | 12 | ಆಗಸ್ಟ್ | 1974 | ಮೋಕ್ಷವೆಂಬುದು ನಿತ್ಯಸಿದ್ಧ | 541 |
| 332. | 44 | 1 | ಸೆಪ್ಟೆಂಬರ್ | 1974 | ಪಾರಿವ್ರಾಜ್ಯವು ವಿಹಿತವೆ? | 542 |
| 333. | 44 | 2 | ಅಕ್ಟೋಬರ್ | 1974 | ಎಲ್ಲಕ್ಕೂ ಹೆಚ್ಚಿನ ಓದು | 544 |
| 334. | 44 | 3 | ನವೆಂಬರ್ | 1974 | ಭಕ್ತಿಯೂ ಅನುಭವವೂ | 546 |
| 335. | 44 | 4 | ಡಿಸೆಂಬರ್ | 1974 | ವ್ಯವಹಾರವನ್ನು ಪರೀಕ್ಷೆ ಮಾಡುವುದು ಹೇಗೆ? | 547 |
| 336. | 44 | 5 | ಜನವರಿ | 1975 | ಗುರುಗಳಾಗುವ ಹವಣಿಕೆಯೇಕೆ ? | 549 |
| 337. | 44 | 6 | ಫೆಬ್ರವರಿ | 1975 | ಅಹಂಕಾರ, ಮಮಕಾರಗಳ ತ್ಯಾಗವೇ ಉತ್ತಮ ಸಾಧನ | 550 |

# ವೇದಾಂತ ಸಂದೇಶಗಳು–ಸಂಪುಟ 5

## ಭಾಗ–1

## 1. ಸಂಕಟ ಬಂದಾಗ ವೆಂಕಟರಮಣ

(ಜನವರಿ 1943)

*ತಮ್ಮ ಕಾಗದ ತಲುಪಿತು. ಈ ಕೆಟ್ಟ ಕಾಲದಲ್ಲಿ ಮನಸ್ಸನ್ನು ಹೇಗೆ ಸ್ವಸ್ಥವಾಗಿಟ್ಟುಕೊಳ್ಳಬೇಕು? ಈಗ ಹೊಟ್ಟೆ ಬಟ್ಟೆಗೆ ನೇರಾಗಿ ಸಿಕ್ಕುವ್ರದೇ ಕಷ್ಟವಾಗಿರುವಾಗ ಪರಮಾರ್ಥಸಾಧನೆ ಹೇಗೆ ಆದೀತು?–ಎಂತ ಬರೆದಿರುತ್ತೀರಿ.*

ಈಗ ನಿಜವಾಗಿಯೂ ಭಯಂಕರವಾದ ಪರಿಸ್ಥಿತಿ ಬಂದಿರುತ್ತದೆ. ಎಲ್ಲೆಲ್ಲಿಯೂ ಧಾರಣೆವಾಸಿ ಏರಿರುತ್ತದೆ. ವ್ಯಾಪಾರವು ಸಲೀಸಾಗಿ ನಡೆಯುವದಿಲ್ಲ. ಬರುವ ಆದಾಯವು ಮನೆಯ ವೆಚ್ಚಕ್ಕೆ ಸಾಲುವದಿಲ್ಲ. ನಿಜವಾಗಿಯೂ ದೇಶದಲ್ಲಿ ಅನೇಕ ಜನರಿಗೆ, ಬಹುಮಟ್ಟಿಗೆ ಎಲ್ಲಾ ಜನರಿಗೂ, 'ವ್ಯವಹಾರವು ಹೇಗೆ ಸಾಗಬೇಕು?'–ಎಂಬ ಯೋಚನೆಯು ಬಲವಾಗಿ ಮನಸ್ಸಿಗೆ ತಗಲಿಕೊಂಡಿದೆ.

ಆದರೆ ನಾನು ನಿಮ್ಮನ್ನು ಕೇಳುವದಿಷ್ಟೆ: ಯೋಚನೆಯಿಂದ ಸಂಕಟವು ಪರಿಹಾರವಾದದ್ದು ಎಲ್ಲಿಯಾದರೂ ಉಂಟೇನು? ನನಗೆ ತೋರುವದೇನೆಂದರೆ ಯೋಚನೆಯನ್ನು ಹತ್ತಿಸಿಕೊಂಡಷ್ಟೂ ಮನಸ್ಸಿಗೆ ಅಂಜಿಕೆ ಬಲವಾಗುತ್ತದೆ. ಕೆಲಸ ಮಾಡುವದಕ್ಕೆ ಬೇಕಾದ ಉತ್ಸಾಹವು ಕುಗ್ಗುತ್ತದೆ. ಯೋಚನೆಯೇ ಇಂಥ ಸಂದರ್ಭದಲ್ಲಿ ನಮಗೆ ವೈರಿಯಾಗಿರುತ್ತದೆ.

ಹಾಗಾದರೆ ನಾವು ಮನಸ್ಸಿಗೆ ಹೇಗೆ ಸ್ವಾಸ್ಥ್ಯವನ್ನು ತಂದುಕೊಳ್ಳಬೇಕು?–ಎನ್ನುವಿರಲ್ಲವೆ? ಈ ಪ್ರಶ್ನೆಗೆ ನಮ್ಮ ಹಿರಿಯರು ಉತ್ತರವನ್ನು ಹೇಳಿದ್ದಾರೆ; ಅದರಲ್ಲಿ ನನಗೆ ಪೂರ್ಣವಾದ ನಂಬಿಕೆಯಿದೆ. ನಿಮಗೆ ಮತ್ತೆ ಯಾವ ಉಪಾಯವೂ ತೋರದಿದ್ದರೆ ಇದೊಂದು ಉಪಾಯವನ್ನು ಕೆಲವು ದಿನಗಳ ಮಟ್ಟಿಗಾದರೂ ಮಾಡಿರಿ. ನನ್ನಲ್ಲಿ ನಿಮಗೆ ವಿಶ್ವಾಸವಿದೆಯಷ್ಟೆ. ಹಾಗಾದರೆ ನನ್ನ ಮಾತನ್ನು ಕೇಳಿರಿ. ಈಗ ಭಗವಂತನನ್ನೇ ನಂಬಿರಿ, ಯೋಚನೆಯನ್ನು ಬಿಡಿರಿ.

ಇದು ''ಸಂಕಟ ಬಂದಾಗ ವೆಂಕಟರಮಣ'' ಎಂಬ ಗಾದೆಗೆ ಸರಿಯಾಗುವದಿಲ್ಲವೆ?–ಎಂದು ನೀವು ಕೇಳಬಹುದು. ಆದ ಮಾತ್ರಕ್ಕೆ ಏನಾಯಿತು? ನಿಜವಾಗಿ ಇದರಿಂದ ನಿಮ್ಮ ಕಷ್ಟವು ಹೋಗುವುದಾದರೆ ಈ ಉಪಾಯವನ್ನೇಕೆ

ಅನುಸರಿಸಬಾರದು? ''ಸಂಕಟ ಬಂದಾಗ ವೆಂಕಟರಮಣ'' ಎಂಬ ಗಾದೆಯ ನಿಜವಾದ ಅರ್ಥವೇನು ಬಲ್ಲಿರಾ? ಸಂಕಟ ಬಂದಾಗಲೇ ವೆಂಕಟರಮಣನನ್ನು ನಂಬಬೇಕೆಂದು, ಅಥವಾ ಕೆಲವರು ಕೈಯಲ್ಲಿಸಾಗದವರು ಹಾಗೆಂದು ನಂಬುವರೆಂದು, ಅದರ ಅರ್ಥವಲ್ಲ. ಯಾವಾಗಲೂ ದೇವನೇ ನಮ್ಮನ್ನು ಕಾಪಾಡಬೇಕು; ಆದರೆ ಸಂಕಟ ಬಂದಾಗ ನಿಜವಾಗಿ ಆತನೇ ನಮ್ಮನ್ನು ಕಾಪಾಡುವನಲ್ಲದೆ ಮತ್ತೆಯಾರೊಬ್ಬರೂ ಕಾಪಾಡುವದಿಲ್ಲವೆಂಬುದು ನಿಶ್ಚಯ.

**ಆರ್ತಾ ವಿಷಣ್ಣಾ ಶಿಥಿಲಾಶ್ಚ ಭೀತಾ**
**ಘೋರೇಷು ಚ ವ್ಯಾಧಿಷು ವರ್ತಮಾನಾಃ ।**
**ಸಙ್ಕೀರ್ತ್ಯ ನಾರಾಯಣಶಬ್ದಮಾತ್ರಂ**
**ವಿಮುಕ್ತದುಃಖಾಃ ಸುಖಿನೋ ಭವನ್ತಿ ॥**

ಎಂಬ ಶ್ಲೋಕದ ಅಭಿಪ್ರಾಯವೇ ಇದು. ಸಂಕಟಕ್ಕೆ ಸಿಕ್ಕವರು, ವಿಷಾದದಿಂದ ಮನಸ್ಸು ಕುಗ್ಗಿದವರು, ಶರೀರದಲ್ಲಿಯೂ ಮನಸ್ಸಿನಲ್ಲಿಯೂ ದಾರ್ಢ್ಯವಿಲ್ಲದೆ ಸಡಿಲವಾಗಿರುವವರು, ಯಾವದಾದರೊಂದು ಅಂಜಿಕೆಗೆ ಒಳಗಾದವರು–ಇವರೆಲ್ಲರೂ ಮಾಡತಕ್ಕದ್ದು ಏನು? ಇದುವರೆಗೆ ಮರೆತಿದ್ದರೂ ಭಗವಂತನ ಸ್ಮರಣೆಯನ್ನು ಈಗಲಾದರೂ ತಂದುಕೊಳ್ಳಬೇಕು. ಇದುವರೆಗೆ ಪರಮಾತ್ಮನ ಚಿಂತೆಯಲ್ಲಿದ್ದವರಿಗಂತೂ ಅವಶ್ಯವಾಗಿ ಇಂಥ ಹೊತ್ತಿನಲ್ಲಿ ಆತನ ಸ್ಮರಣೆ ಬರುವುದು ಖಂಡಿತ. ಭಗವಂತನ ಸ್ಮರಣೆ ಬಂದರೆ ಹೊರಗಿನ ದುಃಸ್ಥಿತಿಯು ಮಾರ್ಪಡುವದು, ಇಲ್ಲದಿದ್ದರೆ ಬಂದ ಕಷ್ಟಕ್ಕೆ ಎದೆಗೊಡುವ ಧೈರ್ಯವಾದರೂ ಬರುವದು. ಪರಮಾರ್ಥಸಾಧನೆಯಿಂದಲೇ ವ್ಯವಹಾರವೂ ಸಲೀಸಾಗಿ ಸಾಗಿದರೆ ನಾವೇಕೆ ಅದನ್ನು ಕಡೆಗಾಣಬೇಕು?

## 2. ಉದ್ಯೋಗಸ್ಥಾನದಲ್ಲಿಯೂ ದೇವರು.

(ಫೆಬ್ರವರಿ 1943)

*ನೀವು ಬರೆದ ಕಾಗದ ಬಂದು ತಲುಪಿದೆ. ಉದ್ಯೋಗದಲ್ಲಿ ನಿಮಗೆ ಬಿಡುವೇ ಸಿಕ್ಕುವುದಿಲ್ಲವೆಂತಲೂ ಅಲ್ಲಿ ಬಗೆಬಗೆಯ ಜನರು ಬರುವದರಿಂದ ಕರ್ತವ್ಯವನ್ನು ನೆರವೇರಿಸುವ ಭರದಲ್ಲಿ ನಿಮಗೆ ಸಾತ್ತ್ವಿಕಭಾವನೆಗಳೇ ಉಂಟಾಗುವಹಾಗಿಲ್ಲವೆಂದೂ ಬರೆಯುತ್ತೀರಿ. ಸಾಯಂಕಾಲ ಮನೆಗೆ ಬಂದಾಗ ಕೈಕಾಲು ತೊಳೆದುಕೊಂಡು ಪರಮೇಶ್ವರನ ಧ್ಯಾನವನ್ನು ಮಾಡುವದರಿಂದ ಸ್ವಲ್ಪ ಸಮಾಧಾನವಾಗುತ್ತದೆ–ಎಂತ ಬರೆದಿದ್ದೀರಿ.*

ಇದೆಲ್ಲ ಸಹಜವಾಗಿಯೇ ಇದೆ. ಆದರೆ ಒಂದು ಮನೋವೃತ್ತಿಯನ್ನು ಸಂಪಾದಿಸಿಕೊಂಡರೆ ನಿಮ್ಮ ಕಷ್ಟವು ಬಗೆಹರಿಯಬಹುದೆಂತ ನನಗೆ ತೋರುತ್ತದೆ. ಅದೇನೆಂದರೆ ಪರಮೇಶ್ವರನನ್ನು ನಿಮ್ಮ ಮನೆಯ ದೇವರ ಕೋಣೆಯಲ್ಲಿಯೇ ಬಿಟ್ಟು ಹೋಗುವ ಪದ್ಧತಿಯನ್ನು ಇನ್ನು ಮೇಲೆ ಬಿಟ್ಟುಬಿಡಿರಿ. ಅವನನ್ನು ನಿಮ್ಮ ಉದ್ಯೋಗದ ಸ್ಥಾನದಲ್ಲಿಯೂ ಕಾಣುವ ಸಂಕಲ್ಪವನ್ನು ಮಾಡಿಕೊಳ್ಳಿರಿ.

ಅಲ್ಲಿ ಬಗೆಬಗೆಯ ಜನರು ಬರುತ್ತಾರಲ್ಲ!–ಎಂದು ಕಿರಿಕಿರಿ ಹತ್ತಿಸಿಕೊಳ್ಳಬೇಡಿರಿ. ವೇದದಲ್ಲಿ ಬ್ರಹ್ಮಸೂಕ್ತವೆಂಬುದೊಂದುಂಟು. ಅದರಲ್ಲಿ ಏನು ಹೇಳಿದೆ, ಬಲ್ಲಿರಾ? **"ಬೆಸ್ತರೂ ಬ್ರಹ್ಮವೇ, ಗುಲಾಮರೂ ಬ್ರಹ್ಮವೇ, ಜೂಜಾಡುವವರೂ ಬ್ರಹ್ಮವೇ." ಯಾರನ್ನು ಕಂಡರೂ 'ಪರಮೇಶ್ವರನನ್ನೇ ಇಲ್ಲಿ ಕಾಣುತ್ತಿದ್ದೇನೆ'** ಎಂಬ ಮನೋವೃತ್ತಿಯನ್ನು ಸಂಪಾದಿಸಿಕೊಳ್ಳಿರಿ. ಆಗ ನಿಮ್ಮ ಮನಸ್ಸಮಾಧಾನಕ್ಕೆ ಚ್ಯುತಿಯೇ ಇರುವದಿಲ್ಲ.

ಎಲ್ಲರಲ್ಲಿಯೂ ಒಂದೇ ವೃತ್ತಿಯಿಂದ ನಡೆದುಕೊಂಡರೆ ಕರ್ತವ್ಯವು ಹೇಗೆ ನಡೆಯಬೇಕು?–ಎಂದು ನೀವು ಕೇಳಬಹುದು. ಆದರೆ ಈ ಸಮವೃತ್ತಿಯಿಂದ ನಿಮ್ಮ ಕರ್ತವ್ಯ ಎಪಾಲನೆಗೆ ಏನೊಂದೂ ಅಡಚಣೆಯಾಗುವದಿಲ್ಲ. ಪರಮೇಶ್ವರನು ಯಾವ ರೂಪದಿಂದ ನಿಮ್ಮ ಮುಂದೆ ನಿಂತಿದ್ದರೂ ನಿಮ್ಮ ಕರ್ತವ್ಯವನ್ನು ನಡೆಯಿಸಬೇಕೆಂದೇ ಅಪೇಕ್ಷಿಸುತ್ತಾನೆ. ಯಾವ ಸಂದರ್ಭದಲ್ಲಿ ಹೇಗೆ ನಡೆಯಬೇಕೋ ಅದನ್ನು ನೀವು ಹಾಗೆಯೇ ನ್ಯಾಯವಾಗಿ ನಡೆಯಿಸಬೇಕೆಂದೇ ಅವನ ಇಚ್ಛೆ. ಪರಮೇಶ್ವರನ ಎದುರಿಗೆ ಇದೇನೆ–ಎಂಬುದನ್ನು ಮನಸ್ಸಿನಲ್ಲಿ ತಂದುಕೊಳ್ಳುವವರಿಗೆ ಕರ್ತವ್ಯವನ್ನು ಬಿಡುವದಕ್ಕೆ ಹೇಗೆ ಆದೀತು?

ನಿಮ್ಮ ಮನಸ್ಸಿನ ಬೇರೆಬೇರೆ ಅಲೆಗಳು ಕರ್ತವ್ಯಕ್ಕೆ ಅಡ್ಡಿಯಾಗುತ್ತವೆ. ನಿಮಗೆ ಅದರಿಂದ ಆಯಾಸವೂ ಆಗುತ್ತದೆ. ಆದ್ದರಿಂದ ಪರಮೇಶ್ವರನ ಸ್ಮರಣೆಯನ್ನು ಉದ್ಯೋಗಮಂದಿರದಲ್ಲಿಯೂ ತಂದುಕೊಳ್ಳುವದರಿಂದ ನಿಮಗೆ ಲಾಭವುಂಟೆಂದೇ ನನ್ನ ನಂಬಿಕೆ.

## 3. ಕುಟುಂಬಭಾವನೆ

### (ಮಾರ್ಚ್ 1943)

*ತಾವು ಬರೆದ ಕಾಗದವು ತಲುಪಿದೆ. ಕುಟುಂಬದ ಯೋಚನೆಯು ಮನಸ್ಸಿಗೆ ಬಹಳ ಕಿರಿಕಿರಿಯನ್ನು ಕೊಡುತ್ತಿದೆಯೆಂತ ಬರಿದಿದ್ದೀರಿ. ಇದನ್ನು ಕೇಳಿ ನನಗೆ ಬಹಳ ವ್ಯಸನವಾಗಿದೆ.*

*ಆದರೂ ತಾವು ಎದೆಗುಂದಬಾರದು. ಪರಮೇಶ್ವರನು ದಯಾಳುವಾದುದರಿಂದ ನಿಮ್ಮಂಥವರಿಗೂ ಸದ್ಗತಿಗೆ ಉಪಾಯವನ್ನು ಆತನು ತೋರಿಸದೆ ಇರಲಾರನು.*

ಕುಟುಂಬದ ಯೋಚನೆಯು ಕಿರಿಕಿರಿಗೆ ಕಾರಣವಾಗಿರಬಹುದು; ಆದರೆ ಕುಟುಂಬವೇನೂ ಅದಕ್ಕೆ ಕಾರಣವಲ್ಲ. ನೀವು ಯಾವುದಾದರೊಂದು ವ್ರತವನ್ನೋ ಪೂಜೆಯನ್ನೋ ಮಾಡಿದಾಗ ಪುರೋಹಿತರು ಹೇಳಿದ ಒಂದು ಸಂಕಲ್ಪವಾಕ್ಯವನ್ನು ಕೇಳಿದ ನೆನಪಿರಬಹುದು: ''ಅಸ್ಮಾಕಂ ಸಹಕುಟುಂಬಾನಾಂ ಕ್ಷೇಮಸ್ಥೈರ್ಯವಿಜಯಾಯುರಾರೋಗ್ಯೈಶ್ವರ್ಯಾಭಿವೃದ್ಧ್ಯರ್ಥಂ ಧರ್ಮಾರ್ಥಕಾಮಮೋಕ್ಷಾಖ್ಯಚತುರ್ವಿಧಪುರುಷಾರ್ಥಸಿದ್ಧ್ಯರ್ಥಮ್......'' ಕುಟುಂಬಧರ್ಮವು ಸರಿಯಾಗಿ ನಡೆಯುತ್ತಿರುವಲ್ಲಿ ಯೋಗಕ್ಷೇಮವು ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ಮನಸ್ಸಿಗೆ ಸ್ಥೈರ್ಯವುಂಟಾಗುತ್ತದೆ; ಹಿಡಿದ ಕಾರ್ಯವು ಜಯಶೀಲವಾಗುತ್ತದೆ; ಎಲ್ಲರಿಗೂ ಆರೋಗ್ಯವು ವಶವಾಗುತ್ತದೆ; ಸ್ವಾತಂತ್ರ್ಯವು ಉಕ್ಕುತ್ತದೆ; ಪುರುಷಾರ್ಥಗಳು ಒಂದೊಂದಾಗಿ ಕೈ ಸೇರುತ್ತವೆ. ಕುಟುಂಬಭಾವನೆಯು ಯಾವದಕ್ಕೆ ತಾನೆ ಅಡ್ಡಿಯಾದೀತು?

ಕುಟುಂಬದವರೆಲ್ಲರೂ ತಮ್ಮ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಾ ಒಬ್ಬರ ಹಿತವನ್ನೊಬ್ಬರು ಬಯಸುತ್ತಾ ಇದ್ದರೆ ಇಹಪರವೆರಡೂ ಸುಖಮಯವಾಗುವವು. ಆದ್ದರಿಂದ ನಮ್ಮ ಮನೆಯಲ್ಲಿ ಎಲ್ಲರಿಗೂ ನಾವು ಒಂದೇ ಕುಟುಂಬದವರು ಎಂಬ ಭಾವನೆ ಮೂಡುವಂತೆ ಮಾಡಿರಿ. ಮನೆಯಲ್ಲಿ ಕಾಲಕಾಲಕ್ಕೆ ನಡೆಯಬೇಕಾದ ಕೃತ್ಯಗಳೆಲ್ಲವೂ ಕುಟುಂಬಭಾವನೆಯಿಂದ ನಡೆಯಲಿ. ಆಗ ಅಲ್ಲಿ ಲಕ್ಷ್ಮಿಯು ನಲಿದಾಡುತ್ತಿರುವಳು.

ನಿಮ್ಮ ನೆರೆಹೊರೆಯವರೂ ಊರಿನವರೂ ಹೀಗೆಯೇ ಒಂದು ದೊಡ್ಡ ಕುಟುಂಬದಲ್ಲಿ ಅಂಗವಾಗಿರುವವರೆಂದೂ ಆ ಕುಟುಂಬದಲ್ಲಿ ನೀವೂ ನಿಮ್ಮ ಭಾಗದ ಕೆಲಸವನ್ನು ಮಾಡಬೇಕೆಂದೂ ಒಂದು ಉತ್ತಮಭಾವನೆ ಬರಲಿ! ಆಗ ನಿಮ್ಮ ಊರಿನ ಸಂಪತ್ತು ಹೇಗೆ ಬೆಳೆದೀತು, ಯೋಚಿಸಿರಿ! 'ಉದಾರಚರಿತರಾದವರಿಗೆ ವಸುಧೆಯೇ ಕುಟುಂಬವು' ಎಂಬ ಸುಭಾಷಿತವು ಅರ್ಥವತ್ತಾದದ್ದು. ಪರಮಾತ್ಮನು ನಮ್ಮೆಲ್ಲರಲ್ಲಿಯೂ ಸಮಭಾವದಿಂದಿರುತ್ತಾನೆಂಬ ಭಾವನೆಯೊಂದಿದ್ದರೆ ಇಡಿಯ ಭೂಮಂಡಲವೇ ಒಂದು ಕುಟುಂಬವಾಗುತ್ತದೆ. ಸ್ವಾರ್ಥಭಾವನೆಯನ್ನು ಬಿಟ್ಟು ವಿಶ್ವಕುಟುಂಬದ ಭಾವನೆಯನ್ನು ಮನದಂದುಕೊಂಡ ಕೂಡಲೆ ಎಲ್ಲಾ ಕಷ್ಟವೂ ಪರಿಹಾರವಾಗುವುದು ಖಂಡಿತ. ಆದ್ದರಿಂದ ಕುಟುಂಬಕ್ಕೆ ಎಂದಿಗೂ ಅಂಜಬೇಡಿರಿ.

# 4. ಲಾಭದ ವ್ಯಾಪಾರ

## (ಮೇ 1943)

*ನಿಮ್ಮ ಪತ್ರವನ್ನು ಓದಿ ಅಭಿಪ್ರಾಯವನ್ನು ತಿಳಿದುಕೊಂಡೆನು. ವ್ಯಾಪಾರದಲ್ಲಿ ಈಗ ಅಷ್ಟು ಲಾಭವು ಕಾಣಿಸುತ್ತಿಲ್ಲವೆಂತಲೂ ಹಿಂದೆ ಸರಕನ್ನು ಕೂಡಿಹಾಕಿಕೊಂಡಿದ್ದವರಿಗೆ ಹೆಚ್ಚಿನ ಲಾಭವಾಗುತ್ತದೆಯೆಂತಲೂ ಬರೆದಿದ್ದೀರಿ. ವ್ಯಾಪಾರದಲ್ಲಿ ಲಾಭನಷ್ಟಗಳುಂಟಾಗುವದು ಸಹಜವಾದ್ದರಿಂದ ಹೇಗೋ ಮನಸ್ಸನ್ನು ಗಟ್ಟಿಮಾಡಿ ಕೊಂಡಿದ್ದೇನೆಂದು ಬರೆದಿದ್ದೀರಿ. ನಿಮ್ಮ ಚಿತ್ತವೃತ್ತಿಯು ನಿಜವಾಗಿಯೂ ಶ್ಲಾಘ್ಯವಾಗಿರುತ್ತದೆ.*

ಆದರೆ ಧರ್ಮದೃಷ್ಟಿಯ ವ್ಯಾಪಾರದಿಂದ ಎಂದಿಗೂ ನಷ್ಟವಾಗಲೇ ಆರದೆಂದು ನನಗೆ ತೋರುತ್ತದೆ. ಹಿಂದಿನ ಮಾಲು ರಾಶಿಹಾಕಿದ್ದು ಎಷ್ಟು ದಿನವಿದ್ದೀತು? ಅವರೂ ಒಂದಲ್ಲ ಒಂದು ದಿನ ಹೊಸ ಮಾಲು ಕೊಳ್ಳಲೇಬೇಕಲ್ಲವೆ? ಇದಿರಲಿ. ಎಂಥ ಕಾಲವು ಬಂದರೂ ಸಿಕ್ಕಿದಷ್ಟು ಅಗ್ಗವಾಗಿ ಕೊಂಡು ಅಲ್ಪ ಲಾಭದಿಂದಲೇ ತೃಪ್ತನಾಗಿ ಜನರಿಗೆ ಬೇಕಾದ ಪದಾರ್ಥಗಳನ್ನು ಒದಗಿಸಿಕೊಡುವದೇ ವ್ಯಾಪಾರವೆನಿಸೀತೇ ಹೊರತು, ಸಮಯಸಿಕ್ಕಿತೆಂದು ರಕ್ತವನ್ನು ಹೀರುವ ತಿಗುಣೆಗಳ ಹಾಗೆ ಮಿತಿಮೀರಿ ಲಾಭವನ್ನು ಗಳಿಸುವುದು ವ್ಯಾಪಾರವು ಹೇಗಾದೀತು? ಒಬ್ಬನ ಮನೆಗೆ ಬೆಂಕಿ ಬಿದ್ದಿರುವಾಗ ''ನಮ್ಮ ಮನೆಗಷ್ಟು ಬೆಂಕಿ ಒಯ್ಯುತ್ತೇನೆ, ಆಮೇಲೆ ನೀರು ಹಾಕಿಕೊಳ್ಳಿರಿ'' ಎನ್ನುವವನ ವ್ಯಾಪಾರಕ್ಕೂ ಆ 'ವ್ಯಾಪಾರ'ಕ್ಕೂ ಹೆಚ್ಚು ಕಡಿಮೆ ಏನು?

ಪಾಪದಿಂದ ಬರುವ ಹಣವನ್ನು ಲಾಭವೆಂದು ಎಂದಿಗೂ ಎಣಿಸಬಾರದು. ಏಕೆಂದರೆ ಆ ಹಣವು ಹೆಚ್ಚಿದಂತೆಲ್ಲ ನಮ್ಮ ಪಾಪಬುದ್ಧಿ ಹೆಚ್ಚುತ್ತದೆ. ಪಾಪದಿಂದ ಎಂದಿಗೂ ಸುಖವು ಸಿಕ್ಕಲಾರದು. ಹಣದಿಂದ ಭೋಗಸಾಮಗ್ರಿಗಳ ರಾಶಿಯಾಗಬಹುದು, ಆದರೆ ಅದರಿಂದ ಸುಖವು ರಾಶಿಯಾಗುತ್ತದೆಯೆಂತ ಎಂದಿಗೂ ಭ್ರಮಿಸಬಾರದು. ಹಣವನ್ನು ದುರುಪಯೋಗಪಡಿಸಿಕೊಳ್ಳುವವರಿಗೆ ದುಃಖವುಂಟಾಗುವುದನ್ನು ನಾವೆಲ್ಲರೂ ಕಣ್ಣಾರೆ ಕಂಡಿಲ್ಲವೆ?

ಪಾಪಗಳಿಗೆ ರಾಗದ್ವೇಷಗಳು ಮೇಲಧಿಕಾರಿಗಳು, ಆ ಸರದಾರರಿಗೆ ಅಜ್ಞಾನದಿಂದಾಗುವ ಅಹಂಕಾರವೇ ಅರಸು. ಅಹಂಕಾರನ ಆಡಳಿತಕ್ಕೆ ಸಿಕ್ಕಿದವರು ಪಾಪಗಳನ್ನು ಮಾಡಿ, ಜನರನ್ನು ಪೀಡಿಸಿ, ಅಥವಾ ಮೋಸಗೊಳಿಸಿ ಹಣವನ್ನು ಗಳಿಸುವದೇ ತಮ್ಮ ಜೀವನದ ಗುರಿಯೆಂದು ಭಾವಿಸುತ್ತಾರೆ. ಅದನ್ನೇ ಲಾಭವೆಂದು ಭಾವಿಸಿ ಹಿಗ್ಗುತ್ತಾರೆ.

ನಿಜವಾದ ಲಾಭವೆಂದರೆ ಭಗವಂತನಲ್ಲಿ ಭಕ್ತಿ, ಭಗವದ್ಭಕ್ತನಿಗೆ ಸುಖಶಾಂತಿಗಳು ತಪ್ಪದೆ ಸಿಕ್ಕುವವು. ಅವನಿಗೇ ಲಾಭ, ಅವನಿಗೇ ಜಯ. ಆದ್ದರಿಂದ ನೀವು ಯಾವ ವ್ಯಾಪಾರವನ್ನು ಮಾಡಿದರೂ ಈ ಲಾಭದ ವ್ಯಾಪಾರವನ್ನು ಮಾತ್ರ ಕೈ ಬಿಡಬೇಡಿರಿ.

## 5. ದಾನಕ್ಕೆ ಪಾತ್ರರು

### (ಜೂನ್ 1943)

*ನಿಮ್ಮ ಪತ್ರದಲ್ಲಿ ದಾನದ ವಿಚಾರವಾಗಿ ಬರೆದಿರುತ್ತೀರಿ. ಭರತಖಂಡದಲ್ಲಿ ದಾನ ಬೇಡುವವರು ಹೆಚ್ಚಾಗಿರುತ್ತಾರೆಂದೂ ಅದರಿಂದ ಬಡತನವು ಏರುತ್ತಲಿರುವದೆಂದೂ ಬರೆದಿರುತ್ತೀರಿ. ಇದು ನಿಮ್ಮ ಸ್ವಂತ ಅಭಿಪ್ರಾಯವೋ, ಯಾರಾದರೂ ಹೇಳಿದ್ದೋ ತಿಳಿಯಲಿಲ್ಲ. ಆದರೂ ಈ ವಿಷಯದಲ್ಲಿ ಸಂಗ್ರಹವಾಗಿ ಬರೆಯುವೆನು.*

ದಾನವೆಂದರೆ ಪ್ರತ್ಯುಪಕಾರದಾಶೆಯಿಲ್ಲದೆ ಸರಿಯಾದ ದೇಶದಲ್ಲಿ ಸರಿಯಾದ ಕಾಲದಲ್ಲಿ ಸರಿಯಾದ ಪಾತ್ರನಿಗೆ ಏನಾದರೂ ಕೊಡುವುದು. ದೀನರು, ಕುಂಟರು, ಕುರುಡರು–ಮುಂತಾದವರಿಗೆ ಅನ್ನ ಬಟ್ಟೆಗಳನ್ನು ಕೊಡುವುದು ಪುಣ್ಯದ ಕೆಲಸವೇ ಸರಿ. ಅದರಿಂದ ಲೋಕಕ್ಕೆ ಯಾವ ಹಾನಿಯೂ ಇಲ್ಲ. ಆದರೆ ಸೋಮಾರಿಗಳಿಗೂ ಮೋಸಗಾರರಿಗೂ ಪ್ರೋತ್ಸಾಹಕರಾಗುವಂತೆ ದಾನಮಾಡುವುದು ಒಳ್ಳೆಯದೆಂದು ಯಾವ ಶಾಸ್ತ್ರದಲ್ಲಿಯೂ ಇಲ್ಲ. ಅಂಥವರಿಗೆ ಹಣವನ್ನು ಕೊಡುವದು ದಾನವೆಂದು ಭಾವಿಸುವದೂ ಸರಿಯಲ್ಲ.

ನಮ್ಮ ದೇಶದಲ್ಲಿ ದಾನಧರ್ಮಗಳಿಂದ ಬಡವರು ಹೆಚ್ಚಾಗಿರುತ್ತಾರೆಂಬುದು ಶುದ್ಧ ಸುಳ್ಳು. ಉದ್ಯೋಗವು ಜನರಿಗೆ ಸಿಕ್ಕದೆ ಇರುವದರಿಂದಲೂ ಬರುಬರುತ್ತಾ ದುಡಿಮೆಯು ಕಡಿಮೆಯಾಗುತ್ತಿರುವದರಿಂದಲೂ ಜನರು ಯತ್ನವಿಲ್ಲದೆ ಅಧರ್ಮಕ್ಕೆ ಬೀಳುತ್ತಿದ್ದಾರೆ. ಕಾಲಕ್ರಮದಲ್ಲಿ ದೊಡ್ಡವರ ಯೋಜನೆಯಿಂದ ಇದು ಸರಿಹೋಗಬೇಕಾಗಿದೆ. ಇದಿರಲಿ. ದಾನವು ಹೇಗೆ ಉತ್ತಮಫಲವನ್ನು ಕೊಟ್ಟೀತೆಂಬುದನ್ನು ತಿಳಿಯಬೇಕೆನ್ನುವವರಿಗೆ ಭಾರತದಲ್ಲಿ ಭೀಷ್ಮರು ಹೇಳಿರುವ ಉತ್ತರವು ಮನನೀಯವಾಗಿರುತ್ತದೆ. ಅದನ್ನಿಲ್ಲಿ ಸಂಗ್ರಹವಾಗಿ ಬರೆಯುವೆನು.

‘‘ಯಾರು ಸಿಟ್ಟಿಲ್ಲದವರೋ ಧರ್ಮದಲ್ಲಿಯೇ ತತ್ಪರರಾಗಿರುವರೋ ಸತ್ಯನಿಷ್ಠರಾಗಿಯೇ ಇರುವರೋ ಧರ್ಮದಲ್ಲಿ ನಿರತರಾಗಿರುವರೋ ಅಂಥ ಸಾಧು ವಿಪ್ರರಿಗೆ ಕೊಟ್ಟಿದ್ದು ಮಹಾಫಲವನ್ನು ಕೊಡುವದು; ಅಮಾನಿಗಳಾಗಿ ಎಲ್ಲವನ್ನೂ ಸಹಿಸಿಕೊಂಡು

ಜಿತೇಂದ್ರಿಯರಾಗಿ ಸರ್ವಭೂತಗಳ ಹಿತವನ್ನು ಕೋರುವ ಮೈತ್ರೀಗುಣವುಳ್ಳವರಿಗೆ ಕೊಟ್ಟದ್ದು ಉತ್ತಮಫಲವನ್ನು ಕೊಡುವದು. ಅತ್ಯಾಶೆಯಿಲ್ಲದೆ, ಶುಚಿಯಾಗಿರುತ್ತಾ ವಿದ್ಯಾವಂತರೂ ಲಜ್ಜಾವಂತರೂ ಸತ್ಯವಾದಿಗಳೂ ಆಗಿ ಸ್ವಧರ್ಮ ನಿರತರಾಗಿರುವವರಿಗೆ ಕೊಟ್ಟದ್ದು ಮಹಾಫಲವನ್ನು ಕೊಡುವದು. ಸಾಂಗವಾಗಿ ನಾಲ್ಕು ವೇದಗಳನ್ನೂ ಅಧ್ಯಯನ ಮಾಡಿ ಷಟ್ಕರ್ಮನಿರತನಾಗಿರುವವನೇ ದಾನಕ್ಕೆ ಪಾತ್ರನೆಂದು ಋಷಿಗಳು ಎಣಿಸುತ್ತಾರೆ. ಗುಣವಂತನಿಗೆ ದಾನಮಾಡಿದರೆ ಸಹಸ್ರ ಗುಣವಾಗಿ ಫಲವುಂಟಾಗುತ್ತದೆ. ಬುದ್ಧಿ, ವಿದ್ಯೆ, ಒಳ್ಳೆಯ ನಡೆನುಡಿಗಳು–ಇವುಗಳಿಂದ ಕೂಡಿದ ಒಬ್ಬನೇ ಒಬ್ಬ ದ್ವಿಜನೂ ಕುಲವನ್ನೆಲ್ಲ ಉದ್ಧರಿಸುವನು. ಅಂಥವನನ್ನು ಆದರಪೂರ್ವಕವಾಗಿ ಕರೆತಂದು ಸತ್ಕರಿಸಿ ದಾನಮಾಡಬೇಕು.''

## 6. ಮಕ್ಕಳ ವಿದ್ಯಾಭ್ಯಾಸ

(ಆಗಸ್ಟ್ 1943)

*ವಿದ್ಯಾಭ್ಯಾಸದ ವೆಚ್ಚವು ದಿನದಿನಕ್ಕೆ ಹೆಚ್ಚುತ್ತಿದೆಯೆಂದು ನೀವು ಬರೆದದ್ದನ್ನು ಓದಿ ಬಹಳ ದುಃಖವಾಯಿತು. ಹಲವು ಮಕ್ಕಳಿರುವವರಿಗೆಲ್ಲ ನಿಮ್ಮಂತೆಯೇ ವಿದ್ಯಾಭ್ಯಾಸದಲ್ಲಿ ಮಮತೆಯಿದ್ದರೆ ನಮ್ಮ ದೇಶದಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಇದೊಂದಕ್ಕಾಗಿಯೇ ಖರ್ಚುಮಾಡಬೇಕಾಗಿ ಬಂದೀತು! ಇದನ್ನು ಮನಸ್ಸಿಗೆ ತಂದುಕೊಂಡರೆ ಎದೆ ಜುಮ್ಮೆನ್ನುತ್ತದೆ.*

ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವದಕ್ಕೇ ಅವರ ಜೀವಮಾನಕ್ಕೆಲ್ಲ ಖರ್ಚಾಗಬಹುದಾದಷ್ಟು ಹಣವನ್ನು ವ್ಯಯಮಾಡಬಹುದೆ? ಈಗ ನಾವು ಅವರಿಗೆ ಕೊಡುವ ಹಣವನ್ನು ಅವರು ಸಂಪಾದಿಸುವರೆಂದು?—ಎಂದು ಕೆಲವರು ಕೇಳುತ್ತಿದ್ದಾರೆ. ಹಾಗಾದರೆ ಮಕ್ಕಳಿಗೆ ವಿದ್ಯಾಭ್ಯಾಸವೇ ಇಲ್ಲದಂತೆ ಮಾಡೋಣವೇನು?—ಎಂದು ಮತ್ತೆ ಕೆಲವರು ಪ್ರತಿಪ್ರಶ್ನೆಯನ್ನು ಹಾಕುತ್ತಿದ್ದಾರೆ.

ಈ ವಿಷಯದಲ್ಲಿ ನನಗೆ ತೋರುವದೆಂದರೆ ವಿದ್ಯಾಭ್ಯಾಸವನ್ನು ಎಂದಿಗೂ ನಿಲ್ಲಿಸಬಾರದು. ಜೀವನಕ್ಕೆ ಸೌಕರ್ಯವನ್ನೂ ಮನಸ್ಸಿಗೆ ಶಾಂತಿಯನ್ನೂ ಇಹ ಪರದಲ್ಲಿ ಸುಖಸಮಾಧಾನಗಳನ್ನೂ ಕೊಡುವ ವಿದ್ಯೆಯನ್ನು ಬಿಟ್ಟರೆ ಮನುಷ್ಯನು ಪಶುವಾಗುತ್ತಾನೆ. ಆದರೆ ವಿದ್ಯೆಯೆಂದರೆ ಜೂಜಲ್ಲ. ನಮ್ಮಲ್ಲಿರುವ ಆಸ್ತಿಯನ್ನೆಲ್ಲ ಮಾರಿ, ಹೊಟ್ಟೆಯನ್ನೂ ಕಟ್ಟಿ, ಕಷ್ಟಪಟ್ಟು ಮಕ್ಕಳಿಗೆ ಕೆಲವು ಪರೀಕ್ಷೆಗಳಲ್ಲಿ ನಂಬರು ಸಿಕ್ಕಲಿ, ಅವರ ಹೆಸರಿನ ಮುಂದೆ ಇಂಗ್ಲಿಷಿನ ಎರಡುಮೂರಕ್ಷರಗಳು ಇರುವಂತೆ ಆಗಲಿ, ಎಂದಾದರೂ ಅವರಿಗೆ

ಎಲ್ಲಿಯಾದರೂ ಸಾವಿರಾರುರೂಪಾಯಿಗಳ ಸಂಬಳವು ಸಿಕ್ಕೀತು!– ಎಂದು ಹಣವನ್ನು ಸುರಿಯುವುದು ಜೂಜಲ್ಲದೆ ಮತ್ತೇನು? ಹುಡುಗನ ಶರೀರದಾರ್ಢ್ಯ, ಮನಸ್ಸಿನ ಒಲವು, ಮುಂದಕ್ಕೆ ಅವನು ಅನುಸರಿಸಬೇಕಾಗಿರುವ ಜೀವನಕ್ರಮ–ಇವುಗಳನ್ನು ನೋಡದೆ ಯಾವದಾದರೂ ಕೆಲವು ಗ್ರಂಥಗಳ ಪಾಠಮಾಡಿಸಿದರೆ ಆಯಿತೆ?

ಇನ್ನೊಂದು ವಿಷಯ. ನಮ್ಮ ಮಕ್ಕಳೆಲ್ಲರೂ ಸರಕಾರಿಯ ಉದ್ಯೋಗಸ್ಥರೇ ಆಗಬೇಕು–ಎಂದು ಹವಣಿಸುವದಾದರೂ ಸರಿಯೆ? ಅವರಲ್ಲಿ ಯಾವನಾದರೂ ತಕ್ಕವನಿದ್ದರೆ ನಮ್ಮ ದೇಶದ ಸಂಸ್ಕೃತಿಯನ್ನುಳಿಸುವ, ಅದನ್ನು ಜನತೆಯಲ್ಲಿ ಹರಡುವ, ಇಹದಲ್ಲಿಸುಖವನ್ನೂ ಪರದಲ್ಲಿಗತಿಯನ್ನೂ ಪಡೆಯಿಸುವ ವಿದ್ಯೆಯನ್ನೇಕೆ ಕಲಿಸಬಾರದು? ಆ ವಿದ್ಯೆಯಿಂದ ಸುಖಶಾಂತಿಗಳು ಒದಗಲಾರವೆಂದು ನಿಮ್ಮ ಅಭಿಪ್ರಾಯವಿದೆಯೇನು? ಇದನ್ನು ಸಾವಧಾನವಾಗಿ ವಿಚಾರಿಸಿರಿ. ಇದೇ ವಿಷಯವನ್ನು ಕುರಿತು ನಿಮಗೆ ಮತ್ತೊಂದು ಸಲ ಪತ್ರವನ್ನು ಬರೆಯಬೇಕೆಂದಿರುವೆನು.

## 7. ತೀರ್ಥಯಾತ್ರೆ

(ಅಕ್ಟೋಬರ್1943)

*ನಿಮ್ಮ ಕಾಗದವು ತಲುಪಿ ಅಭಿಪ್ರಾಯವಾಯಿತು. ನೀವು ಕಾಶೀಯಾತ್ರೆಗೆ ಹೊರಡುವೆನೆಂದು ಬರೆದಿರುತ್ತೀರಿ. ತೀರ್ಥಯಾತ್ರೆಯ ನೆನಪು ಬಂದದ್ದು ನಿಮ್ಮ ಪುಣ್ಯವಾಸನೆಯಿಂದಲೇ. ಆಗಾಗ್ಗೆ ತೀರ್ಥಗಳನ್ನು ನೋಡಿಕೊಂಡು ಬರುವದು ಧರ್ಮ ಜಾಗೃತಿಯನ್ನುಂಟುಮಾಡಿಕೊಳ್ಳುವದಕ್ಕೆ ನಿಜವಾಗಿ ಒಂದು ಉಪಾಯವೇ ಸರಿ.*

ಆದರೆ ಈಗಿನ ಕಾಲದ ಸ್ಥಿತಿಯನ್ನು ಮನದಂದುಕೊಳ್ಳಬೇಡವೆ? ದೇಶದಲ್ಲಿ ಎಲ್ಲೆಲ್ಲಿಯೂ ಕ್ಷೋಭೆಯುಂಟಾಗಿಬಿಟ್ಟಿದೆ. ಜನರಿಗೆ ಅನ್ನಬಟ್ಟೆಗಳಿಗೂ ಕಿರಿಕಿರಿ ಯಾಗುವುದಕ್ಕೆ ಮೊದಲಾಗಿದೆ. ಪ್ರಯಾಣಕ್ಕೆ ಸೌಕರ್ಯಗಳು ಎಂದಿಗಿಂತ ತೀರ ಕಡಿಮೆ. ರೈಲು, ಮೋಟಾರು ಬಸ್ಸು, ಎತ್ತಿನ ಅಥವಾ ಕುದುರೆಯಗಾಡಿ ಯಾವದು ದೊರೆಯುವದೂ ಈಗಿನ ಕಾಲದಲ್ಲಿ ಕಷ್ಟವೇ ಆಗಿದೆ. ಇಂಥ ಕಾಲದಲ್ಲಿ ಪ್ರಯಾಣವು ಸುಖಕರವಾದೀತೆ? ಹೋದ ಸ್ಥಳಗಳಲ್ಲಿ ಮನಸ್ಸು ನೆಮ್ಮದಿಯಿಂದ ಇದ್ದೀತೆ?–ಇದನ್ನು ಆಲೋಚಿಸಿರಿ.

ಇದರ ಜೊತೆಗೆ ಇನ್ನೊಂದು ಮಾತು. ತೀರ್ಥಯಾತ್ರೆ ಎಂದರೇನು? ದೇವರ ಮಹಿಮೆಯಾಗಲಿ ಸಾಧುಸಂತರ ಮಹಿಮೆಯಾಗಲಿ ಹರಡಿರುವ ಸ್ಥಳಕ್ಕೆ ಆದರದಿಂದ

ಹೋಗಿ ಆ ಮಹಿಮೆಯ ಪರಿಣಾಮವು ನಮ್ಮ ಮನಸ್ಸಿನ ಮೇಲೆ ಆಗುವಂತೆ ಮಾಡಿಕೊಂಡು ಬರುವದೇ ಅಲ್ಲವೆ? ಆದರೆ ರೈಲುಗಾಡಿಯಲ್ಲಿ ಕುಳಿತು ಭರ್ರನೆ ಪಯಣಮಾಡಿ ರಾಮಮೋಹನ ಕಂಪೆನಿಯನವರು ಅಥವಾ ಮತ್ತೊಂದು ಕಂಪೆನಿಯವರು ಮೊದಲೇ ಗೊತ್ತು ಮಾಡಿರುವ ಸ್ಥಳಗಳಲ್ಲಿ ಅವರು ಒಪ್ಪುವಷ್ಟು ಕಾಲದವರೆಗೆ ತಂಗಿದ್ದು ಬೇಗನೆ ಮನೆಗೆ ಬಂದು ಸೇರುವದು ತೀರ್ಥಯಾತ್ರೆಯಾದೀತೆ? ಇಂಥ ಯಾತ್ರೆಯಲ್ಲಿ ನಮಗೆ ಬೇರೆ ಬೇರೆ ಸ್ಥಳಗಳನ್ನೂ ವಿನೋದಗಳನ್ನೂ ನೋಡಿ ಕಣ್ಣಿಗೆ ಹಬ್ಬವನ್ನು ಮಾಡಿಕೊಳ್ಳುವ ಸಂಭವವಿದ್ದರೂ ಅದು 'ತೀರ್ಥ' ಯಾತ್ರೆಯಾದೀತೆ? ತಾವು ದಯವಿಟ್ಟು ಇದನ್ನೂ ಆಲೋಚಿಸಬೇಕು.

ನನ್ನ ನಿಜವಾದ ಅಭಿಪ್ರಾಯವನ್ನು ನೀವು ಕೇಳಿರುವದರಿಂದ ಇಷ್ಟು ಬರೆಯ ಬೇಕಾಯಿತು. ಈಗಿನ ವಯಸ್ಸಿನಲ್ಲಿ ನೀವು ಸಾವಕಾಶವಾಗಿ ಕಾಲುನಡಗೆಯಿಂದ, ಗಂಗಾ ಸ್ಮರಣೆಯನ್ನು ಮಾಡುತ್ತಾ ಹಲವು ತಿಂಗಳುಗಳ ಪಯಣಮಾಡಿ ಕಾಶಿಯನ್ನು ಮುಟ್ಟುವದು ಸಾಧ್ಯವಿಲ್ಲ. ಕೈಯಲ್ಲಿರುವ ಅಲ್ಪ ಹಣವನ್ನು ಸ್ವೇಚ್ಛೆಯಾಗಿ ವೆಚ್ಚ ಮಾಡುವದೂ ವಿವೇಕವಾಗಿ ಕಾಣುವದಿಲ್ಲ. ಕಾಶಿಯ ವಿಶ್ವನಾಥನು ವಿಶ್ವಕ್ಕೇ ನಾಥನು; ಆತನು ಇಲ್ಲಿಯೇ ಇರುತ್ತಾನೆ. ನಾವು ಇರುವೆಡೆಯಲ್ಲಿ ಆತನ ಸ್ಮರಣೆಯನ್ನು ಮಾಡಿಕೊಂಡು ಈ ಪ್ರಯಾಣದ ಖರ್ಚಿನಲ್ಲಿ ಒಂದಿಷ್ಟು ಭಾಗವನ್ನು ಧರ್ಮಕ್ಕೆ ವಿನಿಯೋಗಿಸಿದರೆ ಅದೇ ಹೆಚ್ಚಿನ ತೀರ್ಥಯಾತ್ರೆಯಾಗುವದೆಂದು ನನ್ನ ನಿಜವಾದ ನಂಬಿಕೆ. ಈ ಪತ್ರವನ್ನು ಓದಿದ ಮೇಲೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

## 8. ಸವರನ್ನಿನ ಪೂಜೆ

### (ನವಂಬರ್ 1943)

*ತಾವು ಬರೆದ ಕಾಗದವು ತಲುಪಿತು. ಬಡತನದ ಬೇಗೆಯಿಂದ ಪಾರಾಗುವದಕ್ಕೆ ಉಪಾಯವೇನು? ಸಂಕಟಪಡುತ್ತಿರುವದೇ ನಮ್ಮ ಹಣೆಯಬರಹವೆ?–ಎಂದು ಕೊನೆಯಲ್ಲಿ ಬರೆದಿದ್ದೀರಿ.*

ನಿಮ್ಮ ಹೃದಯದಲ್ಲಿ ಆಗಿರುವ ನೋವನ್ನು ನಿಮಗಿಂತ ಮತ್ತೆ ಯಾರೂ ಚೆನ್ನಾಗಿ ಅರಿತುಕೊಳ್ಳಲಾರರು. ಬಡತನವು ನಿಜವಾಗಿಯೂ ಮನುಷ್ಯನನ್ನು ಬೆಂಕಿಯು ಬತ್ತದ ಹೊಟ್ಟನ್ನು ಸುಡುವಂತೆ ಕ್ರಮಕ್ರಮವಾಗಿ ಸುಡುತ್ತಿರುತ್ತದೆ. ಆದರೆ ಇದಕ್ಕೊಂದು ದೊಡ್ಡ ಪರಿಹಾರವಿದೆ. ಅದೇನೆಂದರೆ ಈಶ್ವರನ ಕಡೆಗೆ ಚಿತ್ತವನ್ನು ತಿರುಗಿಸುವದೇ.

ಈಶ್ವರನು ಲಕ್ಷ್ಮೀಪತಿಯು, ಸರ್ವಸ್ವತಂತ್ರನು, ದಯಾನಿಧಿಯು. ಆತನ ಕುಡಿಗಣ್ಣಿನ ನೋಟವು ಬಿದ್ದರೂ ನಮ್ಮ ಬಡತನವು ಕೂಡಲೆ ಮಾಯವಾಗುವದು.

ಆದರೆ ಐಶ್ವರ್ಯ, ಸಂಪತ್ತು–ಎಂದರೆ ಹಣವಲ್ಲ, ಹಣವೇ ಸಕಲವಿಧವಾದ ಸಂಪತ್ತೆಂದು ಮಾಡಿಕೊಂಡಿದ್ದ ಒಬ್ಬರು ತಮ್ಮ ಅನುಭವವನ್ನು ನನಗೆ ಹೀಗೆ ತಿಳಿಸಿದರು. ಅವರು ಆಪತ್ತಿಗೆ ಒದಗುವದೆಂದು ಸಾವಿರಗಟ್ಟಲೆಯಾಗಿ ಕೂಡಿಸಿ ಬ್ಯಾಂಕಿಗೆ ಹಾಕಿದ್ದರಂತೆ. ಆದರೆ ಈಗ್ಗೆ ಅವರ ಹಣವೆಲ್ಲ ಕಾಗದದ ಚೂರಾಗಿರುತ್ತದೆ! ಅವರು ಕೇಳಿದರೆ ಬ್ಯಾಂಕಿನವರೇನೋ ನೋಟುಗಳನ್ನು ಕೊಡುತ್ತಾರೆ. ಆದರೆ ಆ ಕಾಗದದಿಂದ ಹಸಿವು ಅಡಗುವ ಹಾಗಿಲ್ಲ; ಮೈಗೆ ಬಟ್ಟೆ ಸಿಕ್ಕುವಂತೆ ಇಲ್ಲ, ಇನ್ನು ಮನಸ್ಸಿಗೆ ಶಾಂತಿಯಾದರೂ ಎಲ್ಲಿ ಬರಬೇಕು?

ಆ ಮಹಾಶಯರು ದೇವರ ಪೆಟ್ಟಿಗೆಯಲ್ಲಿ ಒಂದು ಸವರನ್ನು ಇಟ್ಟುಕೊಂಡು ಪೂಜೆ ಮಾಡುತ್ತಿದ್ದರು. "ಇದರ ರಹಸ್ಯವೇನು?" ಎಂದು ನಾನು ಕೇಳಿದ್ದಕ್ಕೆ ಅವರು ಹೀಗೆಂದರು: ಹಿಂದಕ್ಕೆ ನಾನು ಪೆಟ್ಟಿಗೆಯಲ್ಲಿ ನೂರುಗಟ್ಟಲೆ ಸವರನ್ನುಗಳನ್ನು ಇಟ್ಟುಕೊಂಡಿದ್ದೆನು. ಸವರನ್ನಿನ ಬಣ್ಣವನ್ನು ನೋಡಿದ ಹೊರತು ನನ್ನ ಮನಸ್ಸಿಗೆ ತೃಪ್ತಿಯಾಗುತ್ತಿರಲಿಲ್ಲ, ಗುಡಿಯಲ್ಲಿ ದೇವರ ದರ್ಶನಮಾಡಿಕೊಳ್ಳುವಂತೆ ನಾನು ದಿನಕ್ಕೊಮ್ಮೆಯಾದರೂ ಸವರನ್ನುಗಳ ದರ್ಶನಮಾಡಿಕೊಳ್ಳುತ್ತಿದ್ದೆನು. ಆಗ ದುಡ್ಡೇ ದೊಡ್ಡಸ್ತಿಕೆಯ ಗುರುತೆಂಬ ಹುಚ್ಚು ನನಗೆ ಇದ್ದಿತು. ಆದರೆ ಈಗ ಹಾಗಿಲ್ಲ, ಯಾವ ಹಣವೂ ಜೀವನಕ್ಕೆ ಬೇಕಾದ ಆಹಾರವನ್ನಾಗಲಿ ಬಟ್ಟೆಯನ್ನಾಗಲಿ ಮನಸ್ಸಿನ ಸಮಾಧಾನವನ್ನಾಗಲಿ ಕೊಡಲಾರದು ಎಂಬ ನಿಶ್ಚಯವು ಆಗಿಬಿಟ್ಟಿದೆ. ಈ ನಿಶ್ಚಯದ ಗುರುತಾಗಿ ದೇವರಲ್ಲಿ ಈ ಸವರನ್ನನ್ನು ಒಪ್ಪಿಸಿ ದಿನವೂ ಪ್ರಾರ್ಥಿಸುತ್ತೇನೆ. ದೇವಾ, ನಿನ್ನದೇ ಆಗಿರುವ ನಿತ್ಯಾನಂದದ ಐಶ್ವರ್ಯವನ್ನು ಕೊಡು, ಮಾಯಿಕವಾದ ಐಶ್ವರ್ಯವನ್ನು ಹಿಂತೆಗೆದುಕೋ ಎಂದು."

## 9. ದಾನ

### (ಜನವರಿ 1944)

*"ಪೂರ್ವಜನ್ಮದಲ್ಲಿ ನಾನು ಯಾರಿಗೂ ದಾನಮಾಡಲಿಲ್ಲವೇನೋ, ಆದ್ದರಿಂದ ಭಗವಂತನು ನನಗೆ ಈ ಜನ್ಮದಲ್ಲಿ ಏನನ್ನೂ ಕೊಟ್ಟಿಲ್ಲ. ಆದರೆ ಈ ಜನ್ಮದಲ್ಲಿ ನಾನು ದಾನಧರ್ಮವನ್ನು ಹೇಗೆ ಮಾಡಲಿ?"* ಎಂದು ಒಬ್ಬ ಮಹಾಶಯರು ಕೇಳಿರುತ್ತಾರೆ. ಅವರಿಗೆ ನನ್ನ ಉತ್ತರವಿದು:

ದಾನವನ್ನು ಸರ್ವಥಾ ಮಾಡದ ಸ್ಥಿತಿಯನ್ನು ನಮಗೆ ದೇವರು ಕೊಟ್ಟಿರುವದಿಲ್ಲ. ಯಾರಾದರೂ ನಮ್ಮ ಮನೆಗೆ ಬಂದರೆ ಒಪ್ಪತ್ತು ಅನ್ನವನ್ನಾದರೂ ನಾವು ಕೊಡಬಲ್ಲೆವು. ಅಷ್ಟಕ್ಕೂ ಗತಿಯಿಲ್ಲದಿದ್ದರೆ ಒಂದು ಚಾಪೆಯನ್ನು ಹಾಸಿ ''ಮೇಲಕ್ಕೆ ಬನ್ನಿ, ಕುಳಿತುಕೊಳ್ಳಿರಿ'' ಎಂದು ಒಳ್ಳೆಯ ಮಾತನ್ನಾಡುವದಕ್ಕೂ ನಮಗೆ ಗತಿಯಿರುವದಿಲ್ಲವೆ? ನಮ್ಮ ಗುಡಿಸಿಲಿನಲ್ಲಿರುವಷ್ಟು ಸ್ಥಳವನ್ನು, ಕೊನೆಗೆ ಮನೆಯ ಮುಂದಿನ ಜಗಲಿಯನ್ನು, ಅವರಿಗೆ ಆದರದಿಂದ ಕೊಡುವದಕ್ಕೂ ಗತಿಯಿಲ್ಲವೆ? ಬಾಯಾರಿದವನಿಗೆ ಒಂದಿಷ್ಟು ನೀರನ್ನಾದರೂ ಕೊಡಲಾರೆವೆ? ಇದನ್ನು ನಾವು ಮನಸ್ಸಿನಲ್ಲಿ ಹೊರಳಿಸಿ ನೋಡಿಕೊಳ್ಳಬೇಕು. ''ಯಾರಾದರೂ ಬಂದು ಕೇಳಿದರೆ ಒಂದಿಷ್ಟನ್ನಾದರೂ ನಿರ್ಮತ್ಸರತೆಯಿಂದ ಕೊಡುವ ಬುದ್ಧಿಯನ್ನಿಟ್ಟುಕೊಳ್ಳುವದು ಒಳ್ಳೆಯದು. ಯಾವಾಗಲೋ ಒಂದು ಸಲ ಒಬ್ಬ ಸತ್ಪಾತ್ರನು ನಮಗೆ ದೊರಕಿ ನಮ್ಮನ್ನು ತಾರಣಮಾಡುವನು'' ಎಂದು ಮನು ಹೇಳಿರುತ್ತಾನೆ.

ಅದೇ ಸ್ಮೃತಿಯಲ್ಲಿ ಹೀಗೆ ಬರೆದಿದೆ: ನೀರನ್ನು ಕೊಟ್ಟವನಿಗೆ ತೃಪ್ತಿಯುಂಟಾಗುವದು, ಅನ್ನವನ್ನಿತ್ತವನಿಗೆ ಅಕ್ಷಯವಾದ ಸುಖವಾಗುವದು, ಎಳ್ಳನ್ನಿತ್ತವನಿಗೆ ಇಷ್ಟವಾದ ಸಂತತಿಯುಂಟಾಗುವದು, ದೀಪವನ್ನು ಕೊಟ್ಟವನಿಗೆ ನಿರ್ದುಷ್ಟವಾದ ಚಕ್ಷುರಿಂದ್ರಿಯವಿರುವದು. ನೆಲವನ್ನು ದಾನಮಾಡಿದವನಿಗೆ ನೆಲವೂ, ಚಿನ್ನವನ್ನು ಕೊಟ್ಟವನಿಗೆ ದೀರ್ಘಾಯುಸ್ಸೂ, ಮನೆಯನ್ನು ಕೊಟ್ಟವನಿಗೆ ಉತ್ತಮವಾದ ಭವನವೂ, ಬೆಳ್ಳಿಯನ್ನು ಕೊಟ್ಟವನಿಗೆ ಉತ್ತಮವಾದ ರೂಪವೂ, ಬಟ್ಟೆಯನ್ನು ದಾನಮಾಡಿದವನಿಗೆ ಚಂದ್ರಲೋಕವೂ, ಕುದುರೆಯನ್ನು ದಾನಮಾಡಿದವನಿಗೆ ಅಶ್ವಿನೀ ದೇವತೆಗಳ ಲೋಕವೂ, ಎತ್ತನ್ನು ಕೊಟ್ಟವನಿಗೆ ಸಂಪತ್ತೂ , ಗೋದಾನವನ್ನು ಮಾಡಿದವನಿಗೆ ಸೂರ್ಯಲೋಕವೂ ದೊರಕುವವು. ಯಾನವನ್ನೂ ಹಾಸಿಗೆಯನ್ನೂ ದಾನ ಮಾಡಿದವನು ಉತ್ತಮಳಾದ ಭಾರ್ಯೆಯನ್ನೂ, ಅಭಯದಾನವನ್ನು ಮಾಡಿದವನು ಐಶ್ವರ್ಯವನ್ನೂ, ಧಾನ್ಯವನ್ನು ಕೊಟ್ಟವನು ನಿತ್ಯಸೌಖ್ಯವನ್ನೂ ಹೊಂದುವರು. ಆದರೆ ವೇದವಿದ್ಯೆಯನ್ನು ದಾನಮಾಡುವದೆಂಬ ಬ್ರಹ್ಮದಾನವನ್ನು ಮಾಡಿದವನಿಗೆ ಬ್ರಹ್ಮಸಾಯುಜ್ಯವೇ ದೊರಕುವದು. ಒಟ್ಟಿನಲ್ಲಿ ಯಾವ ಭಾವದಿಂದ ಯಾವ ದಾನವನ್ನು ಮಾಡಿರುವನೋ ಅದನ್ನು ಅದೇ ಭಾವದಿಂದ ಪೂಜಿತನಾಗಿ ಪಡೆಯುತ್ತಾನೆ.

ಆದ್ದರಿಂದ ದಾನಕ್ಕೆ ಮುಖ್ಯವಾಗಿರುವದು **ಉದಾರಹೃದಯವು.** ಔದಾರ್ಯದಿಂದ ಕೊಟ್ಟ ಅಲ್ಪದಾನವು ಮಹಾಫಲವನ್ನು ಕೊಡುವದು. ಆದರೆ ಲೋಭಬುದ್ಧಿಯಿಂದ ಕೀರ್ತ್ಯಾದಿಗಳಿಗಾಗಿ ಮಾಡಿದ ಮಹಾದಾನಕ್ಕೂ ಅತ್ಯಲ್ಪಫಲವೇ ದೊರಕುವದು.

## 10. ಲೋಭ

### (ಜೂನ್ 1944)

*ಮಹಾಶಯ, ನಿಮ್ಮ ಪತ್ರಕ್ಕೆ ಉತ್ತರವನ್ನು ಬರೆಯುವದು ತಡವಾಯಿತು. ಆದರೂ ನಿಮ್ಮ ಪ್ರಶ್ನೆಯು ಈ ಕಾಲಕ್ಕೆ ಬಹುಜನರ ಮುಂದೆ ಇರಬಹುದಾದ್ದರಿಂದ ಅದಕ್ಕೆ ಉತ್ತರವನ್ನು ಈಗಲೂ ಬರೆಯಬಹುದು; ಆದರಿಂದ ನಿಮಗೇ ಅಲ್ಲದೆ ಇನ್ನೂ ಕೆಲವರಿಗೂ ಪ್ರಯೋಜನವಾಗಬಹುದು ಎಂದು ನನಗೆ ತೋರುತ್ತದೆ.*

ಕಷ್ಟ ಕಾಲದಲ್ಲಿ ಅಲ್ಪವಾದ ಆದಾಯವುಳ್ಳ ನಮ್ಮಂಥವರು ಹದವರಿಯದೆ ದಾನಮಾಡಬಹುದೆ? ಇದರಿಂದ ನಾವು ನಮ್ಮ ಕುಟುಂಬದವರ ವಿಷಯದಲ್ಲಿಯೂ ನಮ್ಮನ್ನು ಆಶ್ರಯಿಸಿರುವ ಮಿಕ್ಕವರ ವಿಷಯದಲ್ಲಿಯೂ ಕರ್ತವ್ಯಪರಾಙ್ಮುಖರಾದಂತಾಗುವದಿಲ್ಲವೆ?– ಎಂದು ಕೇಳಿರುತ್ತೀರಿ. ಕುಟುಂಬಭರಣವು ಪ್ರತಿಯೊಬ್ಬ ಗೃಹಸ್ಥನ ಮುಖ್ಯ ಕರ್ತವ್ಯವೇ ಸರಿ. ಆದರೆ ದಾನವೆಂಬುದು ಇಡಿಯ ಕುಟುಂಬಕ್ಕೇ ಕರ್ತವ್ಯವಾಗಿರುತ್ತದೆ. ಈ ವಿಷಯದಲ್ಲಿ ಅದೃಷ್ಟವಶದಿಂದ ನಿಮಗೆ ಕುಟುಂಬದವರು ಸಹಾಯಮಾಡದಿದ್ದರೆ ನೀವಾದರೂ ನಿಮ್ಮ ಮಟ್ಟಿಗೆ ಈ ಕರ್ತವ್ಯವನ್ನು ಪಾಲಿಸುವದು ಅತ್ಯವಶ್ಯವು. ಏಕೆಂದರೆ ಯಜ್ಞ, ದಾನ, ತಪಸ್ಸು–ಎಂಬ ಮೂರು ಬಗೆಯ ಶ್ರೇಯಸ್ಸಾಧನದಲ್ಲಿ ದಾನವೊಂದೇ ಕಲಿಯುಗದಲ್ಲಿ ಎಲ್ಲರಿಗೂ ಸಾಧ್ಯವಾಗಿರುವ ಸಾಧನವಾಗಿರುತ್ತದೆ.

ಇನ್ನೊಂದು ವಿಚಾರ. ಕುಟುಂಬದವರ ಅವಶ್ಯಕತೆಗಾಗಿ ದಾನವನ್ನು ಕೊರೆಮಾಡುವೆವೆನ್ನುವವರು ''ನಾವು ಲೋಭಕ್ಕೆ ಒಳಗಾಗಿ ಈ ಮಾತನ್ನಾಡುತ್ತೇವೆಯೋ ಏನು?'' ಎಂದು ತಮ್ಮನ್ನು ತಾವೇ ಕೇಳಿಕೊಳ್ಳಬೇಕು. ಏಕೆಂದರೆ ಒಬ್ಬ ಮನುಷ್ಯನಿಗೆ ಇಡಿಯ ಭೂಮಂಡಲವೇ ಸಿಕ್ಕಿದರೂ ಲೋಭದಿಂದ ಆಗುವ ಆತ್ಮನಾಶಕ್ಕೆ ಹೋಲಿಸಿದರೆ ಅದೊಂದು ಲಾಭವೆನಿಸಲಾರದು. ಲೋಭವನ್ನು ಲಾಭವೆಂದಾಗಲಿ ಧರ್ಮವೆಂದಾಗಲಿ ಎಣಿಸುವಷ್ಟು ಮೂಢತನವು ಮತ್ತೊಂದಿಲ್ಲ.

ಈ ವಿಷಯದಲ್ಲಿ ಅಂಬರೀಷಗೀತೆಯನ್ನು ನೆನಪಿಡುವದು ಒಳ್ಳೆಯದು. ಪೂರ್ವದಲ್ಲಿ ಲೋಕಸ್ಥಿತಿಯು ಬಹಳವಾಗಿ ಕೆಟ್ಟು, ಸಾಧು ಜನರಿಗೆ ಎಲ್ಲೆಲ್ಲಿಯೂ ಕಷ್ಟ ಪರಂಪರೆಗಳು ಹೆಚ್ಚಾಗಲು ಅಂಬರೀಷನು ರಾಜ್ಯಭಾರವನ್ನು ವಹಿಸಿಕೊಂಡು ಧರ್ಮದಿಂದ ರಾಜ್ಯವನ್ನು ಪಾಲಿಸುತ್ತಾ ರಾಷ್ಟ್ರವನ್ನು ನಿಷ್ಕಂಟಕವಾಗಿ ಮಾಡಿ ಕೀರ್ತಿಯನ್ನು ಗಳಿಸಿದ ಬಳಿಕ ಈ ಗಾಥೆಗಳನ್ನು ಹಾಡಿದನಂತೆ.

ಭೂಯಿಷ್ಠಾ ವಿಜಿತಾ ದೋಷಾ ನಿಹತಾಃ ಸರ್ವಶತ್ರವಃ ।
ಏಕೋ ದೋಷೋ ವರಿಷ್ಠಶ್ಚ ವಧ್ಯಃ ನ ಹತೋ ಮಯಾ ॥1॥

ಯತ್ಪ್ರಯುಕ್ತೋ ಜನ್ತುರಯಂ ವೈತೃಷ್ಣ್ಯಂ ನಾಧಿಗಚ್ಛತಿ ।
ತೃಷ್ಣಾರ್ತ ಇಹ ನಿಮ್ನಾನಿ ಧಾವಮಾನೋ ನ ಬುಧ್ಯತೇ ॥2॥

ಅಕಾರ್ಯಮಪಿ ಯೇನೇಹ ಪ್ರಯುಕ್ತಃ ಸೇವತೇ ನರಃ ।
ತಂ ಲೋಭಮಸಿಭಿಸ್ತೀಕ್ಷ್ಣೈರ್ನಿಕೃನ್ತತ ನಿಕೃನ್ತತ ॥3॥

ಲೋಭಾದ್ಧಿ ಜಾಯತೇ ತೃಷ್ಣಾ ತತಶ್ಚಿನ್ತಾ ಪ್ರವರ್ತತೇ ।
ಸ ಲಿಪ್ಸಮಾನೋ ಲಭತೇ ಭೂಯಿಷ್ಠಂ ರಾಜಸಾನ್ ಗುಣಾನ್
ತದವಾಪ್ತೌ ತು ಲಭತೇ ಭೂಯಿಷ್ಠಂ ತಾಮಸಾನ್ ಗುಣಾನ್ ॥4॥

ಸ ತೈರ್ಗುಣೈಃ ಸಂಹತದೇಹಬನ್ಧನಃ
ಪುನಃ ಪುನರ್ಜಾಯತಿ ಕರ್ಮ ಚೇಹ ತೇ ।
ಜನ್ಮಕ್ಷಯೇ ಭಿನ್ನವಿಕೀರ್ಣದೇಹೋ
ಮೃತ್ಯುಂ ಪುನರ್ಗಚ್ಛತಿ ಜನ್ಮನ್ಯೇವ ॥5॥

ತಸ್ಮಾದೇನಂ ಸಮ್ಯಗವೇಕ್ಷ್ಯ ಲೋಭಂ
ನಿಗೃಹ್ಯ ಧೃತ್ಯಾತ್ಮನಿ ರಾಜ್ಯಮಿಚ್ಛೇತ್ ।
ಏತದ್ರಾಜ್ಯಂ ನಾನ್ಯದಸ್ತೀಹ ರಾಜ್ಯ–
ಮಾತ್ಮೈವ ರಾಜಾ ವಿದಿತೋ ಯಥಾವತ್ ॥6॥

"ಅನೇಕ ದೋಷಗಳನ್ನು ಗೆದ್ದೆನು. ಶತ್ರುಗಳನ್ನೆಲ್ಲ ಜಯಿಸಿದೆನು. ಆದರೆ ಒಂದು ಮುಖ್ಯವಾದ ದೋಷವನ್ನು ಮಾತ್ರ ನಾನು ಕೊಲ್ಲಲಿಲ್ಲ. ಆ ದೋಷದಿಂದ ಪ್ರೇರಿತನಾದ ಜೀವನು ಎಂದಿಗೂ ತೃಪ್ತಿಯನ್ನು ಪಡೆಯಲಿಲ್ಲ; ಕೆಳಕೆಳಕ್ಕೆ ಓಡುತ್ತಾ ತಾನು ಬೀಳುವೆನೆಂಬ ಅಂಜಿಕೆಯೂ ಇಲ್ಲದೆ ಇರುವನು. ಅದರಿಂದ ಪ್ರೇರಿತನಾಗಿ ಮಾಡಬಾರದ್ದನ್ನು ಮಾಡಿಬಿಡುತ್ತಾನೆ. ಎಲೈ ಜನರಿರಾ, ಈ ಲೋಭವನ್ನು ಕತ್ತರಿಸಿಹಾಕಿರಿ. ಕತ್ತರಿಸಿಹಾಕಿರಿ. ಲೋಭದಿಂದ ತಹತಹವುಂಟಾಗುವದು, ಅದರಿಂದ ಹಂಬಲಿಕೆಯುಂಟಾಗುತ್ತದೆ. ಲೋಭಿಗೆ ವಿಷಯವು ಸಿಕ್ಕುವಂತಿರುವಾಗ ರಾಜಸಗುಣಗಳೂ ಸಿಕ್ಕಿದಾಗ ತಾಮಸಗುಣಗಳೂ ಹೆಚ್ಚುವದು. ಆ ಗುಣಗಳಿಂದ ಬದ್ಧನಾಗಿ ಅವನು ಮತ್ತೆ ಮತ್ತೆ ಹುಟ್ಟಿ ಸಾಯುತ್ತಿರುವನು. ಆದ್ದರಿಂದ ಈ ಲೋಭವನ್ನು ಚೆನ್ನಾಗಿ ಪರೀಕ್ಷೆ ಮಾಡಿಕೊಂಡು ಧೈರ್ಯದಿಂದ ಅದನ್ನು ನಿಗ್ರಹಿಸಿ ಆತ್ಮರಾಜ್ಯವನ್ನು ಒಲಿಸಬೇಕು ಇದಕ್ಕಿಂತ ಹೆಚ್ಚಿನ ರಾಜ್ಯವಿಲ್ಲ; ಸರಿಯಾಗಿ ಅರಿತವನಿಗೆ ಆತ್ಮನೇ ರಾಜನು."

# 11. ಅಧ್ಯಾತ್ಮವಿದ್ಯೆ

(ಜುಲೈ 1944)

*"ಅಧ್ಯಾತ್ಮವಿದ್ಯೆಯು ನಮ್ಮಂಥ ಲೌಕಿಕರಿಗೆ ಪ್ರಯೋಜನಕಾರಿಯಾದೀತೆ? ವ್ಯವಹಾರದಲ್ಲಿ ಮಗ್ನರಾಗಿರುವವರಿಗೆ ಅದರಿಂದ ಪ್ರಯೋಜನವಾದೀತೇ? ಅದರಿಂದ ನಮಗೆ ವ್ಯವಹಾರದಲ್ಲಿ ಆಗುವ ಪ್ರಯೋಜನವೇನಾದರೂ ಇದ್ದರೆ ಹೇಳಿರಿ" ಎಂದು ಒಬ್ಬ ದೊಡ್ಡ ಮನುಷ್ಯರು ಕೇಳಿರುತ್ತಾರೆ. ಈ ಬಗೆಯ ಪ್ರಶ್ನೆಗಳು ಆಗಾಗ ತಲೆ ಎತ್ತಿಕೊಳ್ಳುತ್ತಲೇ ಇರುವದರಿಂದ ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಇಲ್ಲಿ ಬರೆದಿರುವೆನು.*

ಎಲ್ಲವೂ ಆತ್ಮನೆಂಬ ಪರಮಾರ್ಥತತ್ತ್ವದಿಂದಲೇ ಬಂದಿರುತ್ತದೆ. ನಮ್ಮೆದುರಿಗೆ ಕಾಣುತ್ತಿರುವ ಪ್ರಪಂಚವೆಂಬುದು ಆ ಆತ್ಮನಿಂದ ಬಂದು ಆತನಲ್ಲಿಯೇ ನಿಂತುಕೊಂಡಿರುತ್ತದೆ. ಈ ಪ್ರಪಂಚದ ವಸ್ತುಗಳು ಆತನ ನೆರಳುಗಳಂತೆ ಇರುವವು. ನೆರಳುಗಳನ್ನು ಹಿಡಿಯುವದಕ್ಕೆ ಹೋಗುವದು ಜಾಣತನವಲ್ಲ; ಒಂದು ವೇಳೆ ನೆರಳನ್ನು ಹಿಡಿಯಬೇಕಾದರೆ ವಸ್ತುವನ್ನು ಹಿಡಿಯಬೇಕು. ಆದ್ದರಿಂದ ಆತ್ಮನನ್ನು ಮುಟ್ಟಿದರೆ ಎಲ್ಲವನ್ನೂ ಮುಟ್ಟಿದಂತೆ ಆಯಿತು. ಆತ್ಮನನ್ನು ಅರಿತರೆ ಎಲ್ಲವನ್ನೂ ಅರಿತಂತೆ ಆಯಿತು. ಆದ್ದರಿಂದ ಜ್ಞಾನಿಗಳು **ಅಧ್ಯಾತ್ಮವಿದ್ಯೆಯೇ** ನಿಜವಾದ ವಿದ್ಯೆ ಎನ್ನುತ್ತಾರೆ.

ಆತ್ಮನೇ ನಮ್ಮ ದೃಷ್ಟಿಯಿಂದ ಈಶ್ವರನೆನಿಸಿಕೊಂಡಿರುತ್ತಾನೆ. ನಾವು 'ನಾನು' 'ನಾನು' ಎಂದು ತಿಳಿದುಕೊಂಡಿರುವ ಜೀವಾತ್ಮನು ಈಶ್ವರನಲ್ಲ. ನನಗೂ ನಿಮಗೂ ಮತ್ತೆಲ್ಲರಿಗೂ, ಇಡಿಯ ಪ್ರಪಂಚಕ್ಕೂ ಒಳತಿರುಳಾದ ಪರಮಾತ್ಮನು ಈಶ್ವರನು. ಈ ಈಶ್ವರನಲ್ಲಿ ವ್ಯವಹಾರದೃಷ್ಟಿಯಿಂದ ನೋಡಿದರೆ ಅನಂತಕಲ್ಯಾಣಗುಣಗಳು ಇರುತ್ತವೆ. ಲೋಕದಲ್ಲಿ ನಮಗೆ ಎಲ್ಲೆಲ್ಲಿಯೂ ಅವ್ಯವಸ್ಥೆ ತೋರುವದಷ್ಟೆ, ಬಡತನ, ಬೇನೆ, ಚಿಂತೆ, ಅಶಾಂತಿ, ದುಃಖ–ಇವುಗಳೇ ಕಾಣುತ್ತಿರುವವಷ್ಟೆ; ಆದರೆ ಅವುಗಳ ಆತ್ಮನು ಈಶ್ವರನೇ. ಆದ್ದರಿಂದ ಅವುಗಳಲ್ಲಿ ಸಂಪತ್ತು, ಆರೋಗ್ಯ, ಸಮಾಧಾನ, ಶಾಂತಿ, ಆನಂದ–ಇವೇ ನಿಜವಾಗಿ ಅಡಗಿರುತ್ತವೆ. ಆದ್ದರಿಂದ ಅಧ್ಯಾತ್ಮವಿದ್ಯೆಯು, ಎಂದರೆ ಆತ್ಮನ ವಿಷಯವಾದ ತಿಳಿವಳಿಕೆಯು, ನಮಗೆ ಸಂಪತ್ತು ಆರೋಗ್ಯ, ಸಮಾಧಾನ, ಶಾಂತಿ, ಸುಖ–ಇವುಗಳನ್ನೇ ಕೊಡುತ್ತದೆ. ಇವುಗಳನ್ನು ಯಾರು ಬೇಕಾದರೂ ಹೊಂದಬಹುದು, ಈಗಲೇ ಇಲ್ಲಿಯೇ ಹೊಂದಬಹುದು.

"ಹಾಗಾದರೆ ಎಲ್ಲರಿಗೂ ಹಾಗೇಕೆ ತೋರುವದಿಲ್ಲ? ಬರಿಯ ಅಧ್ಯಾತ್ಮವಿದ್ಯೆಯಿಂದಲೇ ಇದೆಲ್ಲವನ್ನೂ ಪಡೆಯಬಹುದಾದರೆ ಜನರೇಕೆ ಕಷ್ಟಪಟ್ಟು ದಣಿಯುತ್ತಿದಾರೆ?"–ಎಂದು ನೀವು ಕೇಳಬಹುದು. ಈ ಪ್ರಶ್ನೆಯನ್ನು ಹಾಕುವವರಿಗೆ **ಅಧ್ಯಾತ್ಮವಿದ್ಯೆ** ಎಂದರೇನೆಂಬುದೇ ತಿಳಿಯದು. ಆ ವಿದ್ಯೆಯಿರುವವರು ಯಾವ ಕೆಲಸವನ್ನೂ ಮಾಡದೆ ಸೋಮಾರಿಗಳಾಗಿ ಕೂತುಕೊಂಡು ಮನಸ್ಸಿನಲ್ಲಿ ಏನೋ ಗುಣಿಸಿಕೊಳ್ಳುತ್ತಿದಾರೆಂದು ಅವರ ಭಾವನೆ. ನಿಜವು ಹಾಗಿಲ್ಲ. ಅಧ್ಯಾತ್ಮ ವಿದ್ಯೆಗೆ ಹೆಚ್ಚಿನ ಪ್ರಯತ್ನವು ಬೇಕು; ಈಗ ನಮಗಿರುವ ಮನಸ್ಸಿನ ದೃಷ್ಟಿಕೋಣವನ್ನು ಸಂಪೂರ್ಣವಾಗಿ ಮಾರ್ಪಡಿಸಿಕೊಳ್ಳುವ ಸಾಧನವನ್ನು ಆ ವಿದ್ಯೆಯ ಪ್ರಾಪ್ತಿಗೆ ನಾವು ಮಾಡಬೇಕಾಗುತ್ತದೆ.

ನಮ್ಮ ಮನಸ್ಸಿಗೆ ಯಾವುದಾದರೊಂದು ತಿಳಿವಳಿಕೆಯು ಸಹಜವಾಗಿ ಇದ್ದೇ ಇರುತ್ತದೆ. ಆ ತಿಳಿವಳಿಕೆ, ಅದರ ತಳಗಟ್ಟಿನ ಮೇಲೆ ನಾವು ಆಡುತ್ತಿರುವ ನುಡಿ, ನಡೆಯುತ್ತಿರುವ ನಡೆ–ಇವುಗಳಿಗೆ ತಕ್ಕಂತೆ ನಮ್ಮ ಹೊರವಳೆಯವು ತೋರಿಕೊಳ್ಳುತ್ತದೆ. ಜನರಿಗೆ ಸಾಮಾನ್ಯವಾಗಿರುವದು ಅನಾತ್ಮವಿದ್ಯೆ; ಆ ದೃಷ್ಟಿಕೋಣದಿಂದಲೇ ಅವರು ವಿಚಾರಮಾಡುತ್ತಾರೆ, ನುಡಿಯುತ್ತಾರೆ, ನಡೆಯುತ್ತಾರೆ. ಅದರ ಫಲವಾಗಿ ಅವರಿಗೆ ಪ್ರಪಂಚದಲ್ಲಿ ಕಾಮ, ಕ್ರೋಧ–ಮುಂತಾದವುಗಳು ತೋರಿಕೊಳ್ಳುವವು; ಎಲ್ಲೆಲ್ಲಿಯೂ ಅವ್ಯವಸ್ಥೆಯೂ, ಬಡತನವೂ, ರೋಗವೂ, ಚಿಂತೆಯೂ, ಶೋಕವೂ, ಮೋಹವೂ, ದುಃಖವೂ ಕಾಣಿಸಿಕೊಳ್ಳುತ್ತಿರುವವು. ಇದನ್ನೇ ತಿಳಿದವರು "ಬಂಧ" ಎನ್ನುತ್ತಿರುವರು. ಜನರನ್ನು ಯಾರೂ ಕಟ್ಟಿ ಹಾಕಿಲ್ಲ; ಅವರು ಸಲ್ಲದ ದೃಷ್ಟಿಕೋಣದಿಂದ ತಮ್ಮ ಹೊರವಳಯವನ್ನು ನೋಡಿ ಅಲ್ಲಿ ಕೆಟ್ಟ ನೋಟಗಳನ್ನು ಕಂಡು ಅವುಗಳಿಂದಾದ ದುಃಖಕ್ಕೆ ಕಟ್ಟುಬೀಳುತ್ತಿರುವರು. ಇದನ್ನು ಬಿಟ್ಟು ಅವರು ಅಧ್ಯಾತ್ಮವಿದ್ಯೆಗೆ ಒಪ್ಪಾಗಿರುವ ದೃಷ್ಟಿಕೋಣವನ್ನವಲಂಬಿಸಲಿ; ಅದರಂತೆ ನುಡಿಯುವದು, ನಡೆಯುವದು–ಹೀಗೆ ಮಾಡಲಿ. ಕೂಡಲೆ ಅವರ ಸುತ್ತಲೂ ವ್ಯವಸ್ಥೆಯೂ ಸಿರಿತನವೂ ಆರೋಗ್ಯವೂ ಸಂತೋಷವೂ ಜ್ಞಾನವೂ ಆನಂದವೂ–ಕಾಣಿಸಿಕೊಳ್ಳುವವು. ಆದ್ದರಿಂದಲೇ "ಒಂದು ಮುಹೂರ್ತವಾಗಲಿ ಒಂದು ಕ್ಷಣವಾಗಲಿ ಆತ್ಮತತ್ತ್ವವನ್ನು ಚಿಂತಿಸುವದನ್ನು ಬಿಟ್ಟರೆ ಅದೇ ಅನರ್ಥಕ್ಕೆ ಅವಕಾಶವನ್ನುಂಟುಮಾಡಿಕೊಂಡಂತೆ, ಅದೇ ಮಹಾನಷ್ಟವು. ಆತ್ಮತತ್ತ್ವವನ್ನು ಚಿಂತಿಸುವದಕ್ಕೆ ಮೊದಲು ಮಾಡಿದರೆ ಸಾಕು, ಅದೇ ಪುರುಷಾರ್ಥಕ್ಕೆ ಮೆಟ್ಟಿಲು. ಅದೇ ಪರಮಲಾಭವು"– ಎಂದು ಋಷಿಗಳು ಹೇಳುತ್ತಾರೆ.

## 12. ಮನಸ್ಸನ್ನು ನೇರ್ಪಡಿಸಿಕೊಳ್ಳುವುದು

(ಆಗಸ್ಟ್ 1944)

*ನಿಮ್ಮ ಪತ್ರವು ಬಂದಿತು. ಅಧ್ಯಾತ್ಮವಿದ್ಯೆಯನ್ನು ಅಳವಡಿಸಿಕೊಳ್ಳುವದಕ್ಕೆ ಯಾವ ಯಾವ ಗ್ರಂಥಗಳನ್ನು ಓದಬೇಕು?—ಎಂದು ಕೇಳಿರುತ್ತೀರಿ. ನೀವಾಗಲೆ ಗೀತೆ, ಸಹಸ್ರನಾಮ, ರಾಮಾಯಣ—ಇವುಗಳನ್ನು ಓದಿರುವುದಾಗಿಯೂ ಬರೆದಿರುತ್ತೀರಿ.*

ಅಧ್ಯಾತ್ಮವಿದ್ಯೆಯೆಂದರೆ ಓದುಬರಹದಂತೆ ಎಂದು ನೀವು ತಿಳಿದುಕೊಂಡಿರುವಂತೆ ತೋರುತ್ತದೆ. ಹಾಗಿದ್ದರೆ ಅದು ತಪ್ಪು ತಿಳಿವಳಿಕೆ. ಕೆಲವು ಗ್ರಂಥಗಳಲ್ಲಿರುವ ವಿಷಯಗಳನ್ನು ತಿಳಿದುಕೊಂಡರೆ, ಅವುಗಳನ್ನು ಸರಿಯಾಗಿ ಜೋಡಿಸಿಕೊಂಡು ಉಪನ್ಯಾಸ ಮಾಡುವದಕ್ಕಾಗಲಿ ಲೇಖನಗಳನ್ನು ಬರೆಯುವದಕ್ಕಾಗಲಿ ಬಂದರೆ, ಅಥವಾ ಕೆಲವು ಗಡಚಿನ ಪ್ರಶ್ನೆಗಳಿಗೆ ಉತ್ತರವನ್ನು ತಿಳಿದುಕೊಂಡರೆ, ಅಧ್ಯಾತ್ಮವಿದ್ಯೆಯಾಗುವದಿಲ್ಲ. **ಅಧ್ಯಾತ್ಮವಿದ್ಯೆಯೆಂದರೆ ನಮ್ಮ ಆತ್ಮನ, ನಮ್ಮ ನಿಜವಾದ ಸ್ವರೂಪದ, ನನ್ನ ನಿಮ್ಮ ಮತ್ತೆಲ್ಲದರ, ಒಳತಿರುಳಿನ ನಿಜವನ್ನು ಮನಗಂಡು ಅದರಲ್ಲಿಯೇ ನಿಲುಗಡೆಯನ್ನು ಹೊಂದುವದು.**

ಈ ಪ್ರಪಂಚದ ತಿರುಳಾಗಿರುವ ಆತ್ಮನು ಆನಂದದ ಗಟ್ಟಿಯಾಗಿರುವನು. ಕಲ್ಲುಸಕ್ಕರೆಯನ್ನು ಯಾವ ಕಡೆ ಸವಿದರೂ ಅದು ಸಿಹಿಯೇ ಆಗಿರುವದಿಲ್ಲವೆ? ಹಾಗೆ ಪ್ರಪಂಚವೆಂಬುದು ನಿಜವಾಗಿ ಆ ಆತ್ಮನೆಂಬ ಕಲ್ಲುಸಕ್ಕರೆಯ ಬೆಟ್ಟವಾಗಿರುವದು. ಆದರೆ ಉಪ್ಪು ತಿಂದಿರುವ ಇರುವೆಗೆ ಸಕ್ಕರೆಯೂ ಉಪ್ಪಾಗಿ ತೋರುವಂತೆ ನಮಗೆ ಇದೇ ಆನಂದದ ಗಟ್ಟಿಯು ದುಃಖದ ಬೀಡಾಗಿ ಕಾಣುತ್ತಿರುವದು; ಇದಕ್ಕೆ ನಮ್ಮ ಮನಸ್ಸಿನಲ್ಲಿರುವ ಸಂಸಾರವೇ ಕಾರಣವಾಗಿರುತ್ತದೆ.

ನಮಗೆ ಕಾಣಬರುತ್ತಿರುವ ದುಃಖವು ಪ್ರಪಂಚದಲ್ಲಿ ನಿಜವಾಗಿರುವದಿಲ್ಲ. ನಮ್ಮ ಮನಸ್ಸು ತನ್ನ ಈಗಿನ ಸ್ಥಿತಿಯಿಂದ ದುಃಖವನ್ನೇ ಕಾಣುತ್ತಿರಬೇಕಾಗಿರುವದು. ಅಷ್ಟೆ. ಆದರೂ ಇದೆಲ್ಲವೂ ಆನಂದದ ಗನಿಯಾಗಿರುತ್ತದೆ; ಇದೆಲ್ಲವೂ ಆತ್ಮನೇ; ಆತ್ಮನು ಆನಂದಮಯನಾಗಿರುತ್ತಾನೆ—ಎಂದು ಬಲ್ಲವರು ಹೇಳುತ್ತಾರೆ. ನಮಗೆ ಕಿರಿಕಿರಿಯನ್ನುಂಟುಮಾಡುತ್ತಿರುವ ಮುಪ್ಪು, ಸಾವು, ಬೇನೆ, ಚಿಂತೆ—ಇವು ಈ ತೋರಿಕೆಯ ಪ್ರಪಂಚಕ್ಕೆ ಸೇರಿದವುಗಳಾಗಿವೆ. ನಿಜವಾದ ಪ್ರಪಂಚವು ಆತ್ಮನೇ; ಆತ್ಮನು ಬ್ರಹ್ಮವೇ ಎಂದರೆ ಮಿಗಿಲಿಲ್ಲದ ಆನಂದವೇ. ನಿಜವಾಗಿ ಆನಂದವೇ ಆಗಿರುವದನ್ನು ನಾವು

ದುಃಖಮಯವಾಗಿ ಮಾಡಿಕೊಂಡಿರುವೆವು; ಇದಕ್ಕೆ ನಮ್ಮ ಮನಸ್ಸೇ ಕಾರಣವು. ಈ ನಿಜವಾದ ಆನಂದವನ್ನು ಕಂಡುಕೊಂಡು ನಲಿಯುವ ಕ್ರಮವನ್ನೇ ಅಧ್ಯಾತ್ಮವಿದ್ಯೆಯೆನ್ನುವರು.

ಆದ್ದರಿಂದ ನೀವು ಹೆಚ್ಚಾಗಿ ಗ್ರಂಥಗಳನ್ನು ಓದಬೇಕೆಂಬ ಹಂಬಲವನ್ನು ತೊರೆಯಿರಿ. ನಿಮ್ಮ ಮನಸ್ಸನ್ನು ನೇರ್ಪಡಿಸಿಕೊಂಡು ಆಗಲೇ ನಿಮ್ಮದಾಗಿರುವ ನಿಮ್ಮ ಆತ್ಮನೇ, ಸ್ವರೂಪವೇ, ತಿರುಳೇ ಆಗಿರುವ, ಆನಂದವನ್ನು ಮನಗಾಣುವುದಕ್ಕೆ ಪ್ರಯತ್ನಮಾಡಿರಿ. ನಿಮ್ಮ ಮನಸ್ಸು ಈಗ ನಿಮಗೇ ಹೊರಗಿನದಾಗಿದೆ. ನಿಮಗೆ ಬೇಡವಾದ ದುಃಖ, ದುಮ್ಮಾನ, ಹಗೆತನ, ಬಡತನ, ಬೇನೆ ಮುಂತಾದವುಗಳ ಭಾವನೆಯನ್ನು ಮಾಡುತ್ತಾ ನಿಮ್ಮ ಸುತ್ತಲೂ ಆ ದುಃಖಾದಿಗಳೇ ರೂಪುಗೊಂಡು ತೋರುವಂತೆ ಮಾಡಿಬಿಟ್ಟಿರುತ್ತದೆ. ಈಗ ನೀವು ಇವುಗಳ ಪ್ರತಿಪಕ್ಷವಾಗಿ ಸುಖ, ಸಂತೋಷ, ಪ್ರೇಮ, ಸಂಪತ್ತು ಆರೋಗ್ಯ–ಮುಂತಾದ ಶುಭಭಾವನೆಗಳನ್ನು ತುಂಬಿಕೊಳ್ಳುವ ಚಟವನ್ನು ಅದೇ ಮನಸ್ಸಿಗೆ ಹತ್ತಿಸುವದಕ್ಕೆ ಮೊದಲು ಮಾಡಿರಿ. ಆಮೇಲೆ ನಿಮ್ಮ ಸುತ್ತುವಳೆಯವೆಲ್ಲ ಸುಖಶಾಂತಿಮಯವಾಗುವದು. ಮನಸ್ಸೇ ಬಂಧನಕ್ಕೆ ಕಾರಣ, ಅದೇ ಮೋಕ್ಷಕ್ಕೆ ಕಾರಣ. ಮನಸ್ಸನ್ನು ಹೀಗೆ ಮೋಕ್ಷಕ್ಕೆ ಕಾರಣವಾಗಿ ಮಾಡಿಕೊಳ್ಳುವ ಕೌಶಲವೇ ಅಧ್ಯಾತ್ಮವಿದ್ಯೆ.

## 13. ದೇವರನ್ನು ಬಯ್ಯುವ ಹುಚ್ಚು ಬೇಡ

### (ಸೆಪ್ಟಂಬರ್ 1946)

*ನಿಮ್ಮ ಪತ್ರದಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವದು ತಡವಾಯಿತು ಕ್ಷಮಿಸಿರಿ. ನಿಮ್ಮ ಪ್ರಶ್ನೆಗಳಲ್ಲಿ ಒಂದು ಹೀಗಿದೆ: ''ಕೋಟಿಗಟ್ಟಲೆಯ ಜನರು ಹಸಿವಿನಿಂದ ಸಾಯುತ್ತಿರುವಾಗ ದೇವರು ಏತಕ್ಕೆ ಸುಮ್ಮನೆ ಇರುತ್ತಾನೆ? ಕಳೆದ ಯುದ್ಧದಲ್ಲಿ ಲೆಕ್ಕವಿಲ್ಲದಷ್ಟು ಜನರು ಪ್ರಾಣವನ್ನು ನೀಗಿಕೊಂಡಾಗ ಅವನು ಏನು ಮಾಡುತ್ತಿದ್ದನು? ಆಟಂಬಾಂಬ್ ಬಿದ್ದಾಗ ಹಿರೋಶಿಮಾ ಜನರನ್ನೇಕೆ ಉಳಿಸಲಿಲ್ಲ? ಇದೆಲ್ಲ ಅವನ ಲೀಲೆಯೆ?''*

ದೇವರೇ ಇಲ್ಲವೆಂಬ ಭ್ರಾಂತಿಯು ನಿಮಗೆ ಬಂದಿದೆಯೋ, ಇದ್ದರೂ ಉದಾಸೀನನಾದ, ನಿರ್ಘೃಣನಾದ, ಹಿಂಸಾಪ್ರಿಯನಾದ ದೇವರಿರುವದು ನಮ್ಮಗಳ ದುರದೃಷ್ಟವೆಂದು ನಿಮ್ಮ ಭಾವನೆಯೋ, ತಿಳಿಯದಾಗಿದೆ. ಮೊಟ್ಟ ಮೊದಲು ನೀವು ದೇವರೆಂದರೆ ನಮ್ಮ ಹಾಗೆಯೇ ಇರುವ, ನಮಗಿಂತ ಹೆಚ್ಚಿನ ಜ್ಞಾನಶಕ್ತಿಗಳುಳ್ಳ, ಒಬ್ಬ ವ್ಯಕ್ತಿ ಎಂಬ ಭಾವನೆಯನ್ನು ಕಳೆದುಕೊಳ್ಳುವದಕ್ಕೆ ಪ್ರಯತ್ನಮಾಡಿರಿ. ದೇವರನ್ನು ಬಯ್ದರೆ

ಲೋಕಕ್ಕೆ ಕಲ್ಯಾಣವಾದೀತೆಂಬ ಹುಚ್ಚುನಂಬಿಕೆಯನ್ನೂ ಬಿಟ್ಟುಬಿಡಿರಿ. ನೀವು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ದೇವರನ್ನು ಉಳಿಸಿಕೊಳ್ಳುವ ಅಡ್ವೋಕೇಟನು ನಾನೆಂದು ಮಾತ್ರ ಭಾವಿಸಬೇಡಿರಿ. ಆ ಭಾವನೆಯವರಿಗೆ ನನ್ನ ಉತ್ತರವೇ ಇರುವದಿಲ್ಲ.

ಸದ್ಯಕ್ಕೆ ಇಷ್ಟನ್ನು ನೆನಪಿಡಿರಿ. ದೇವರು ಸರ್ವವ್ಯಾಪಕನು, ನಿಮ್ಮ ನಮ್ಮ ಎಲ್ಲರ ಆತ್ಮನು. ಆತನ ನಿಯಮಕ್ಕೆ ಒಳಪಡದೆ ಯಾವದೂ ಆಗುತ್ತಿರುವದಿಲ್ಲ. ಅಜ್ಞಾನದಿಂದ ಜನರು ಹಸಿವು ಬಾಯಾರಿಕೆಗಳಿಂದ ಸಾಯುತ್ತಿರುವದು ನಿಜ. ಆದರೆ ಉದಾರ ಭಾವದಿಂದ ತುಂಬಿತುಳುಕಾಡುತ್ತಿರುವ ಆ ಪರಮಾತ್ಮನ ದಯೆಯಿಂದ ಇನ್ನೂ ಮಾನವಲೋಕದಲ್ಲಿ ಬೇಕಾದಷ್ಟು ಆಹಾರವಿದೆ. ಮೂರ್ಖರಾದ ಮಾನವರು ಅದನ್ನು ರಾಶಿಹಾಕಿಕೊಂಡು ಮತ್ತೊಬ್ಬರಿಗೆ ಕೊಡದೆ ಲೋಕಕ್ಕೆ ಸಂಕಟವನ್ನು ತಂದೊಡ್ಡುತ್ತಿದ್ದಾರೆ. ಲೋಕದಲ್ಲಿ ದೇವರ ನಿಯಮದಂತೆ ಈಗಲೂ ಮಳೆ ಬರುತ್ತಿದೆ, ಭೂಮಿಯು ಪೈರನ್ನು ಬೆಳೆಯುವ ಸಿದ್ಧತೆಯನ್ನು ಪಡೆದಿದೆ. ಆದರೆ ಮನುಷ್ಯನು ಮೋಸ, ಕಲಹ, ಕೊಲೆ–ಇವುಗಳಿಂದ ಆವಿಷ್ಟನಾಗಿ ಈಶ್ವರನ ದಯಾಳುತ್ವವನ್ನು ಉಪಯೋಗಿಸಿಕೊಳ್ಳದೆ ತಾನೂ ಸಂಕಟಕ್ಕೆ ಈಡಾಗಿ ಮತ್ತೊಬ್ಬರನ್ನೂ ಕಷ್ಟದಲ್ಲಿ ಮುಳುಗಿಸುತ್ತಿದಾನೆ! ಮಾನವರೆಲ್ಲರೂ ಒಬ್ಬನೇ ಪರಮಾತ್ಮನ ಅಂಶಗಳೆಂದೂ ಅವರೆಲ್ಲರೂ ಅಣ್ಣತಮ್ಮಂದಿರಾಗಿ ಬಾಳಬೇಕೆಂದೂ ದೇವರ ಅಪೇಕ್ಷೆ. ಆ ಭಗವಂತನ ಭಕ್ತರಾದ ಮಹನೀಯರೆಲ್ಲರೂ ಹಾಗೆಂದೇ ಸಾರುತ್ತಿದಾರೆ. ಈ ತಿಳಿವಳಿಕೆಯು ಹೃದಯದಲ್ಲಿ ಮೂಡುವ ಮನಃಸಾಕ್ಷಿಯನ್ನು ಭಗವಂತನು ನಮಗೆಲ್ಲರಿಗೂ ಕೊಟ್ಟಿರುತ್ತಾನೆ. ಆದರೆ ಅದನ್ನು ಮೆಟ್ಟಿ ನಾವು ಒಬ್ಬರನ್ನೊಬ್ಬರು ದ್ವೇಷಿಸುತ್ತಾ ಘೋರವಾದ ಯುದ್ಧವನ್ನು ಹೂಡಿಕೊಂಡು ರಮ್ಯವಾದ ಭೂಮಂಡಲವನ್ನು ರಕ್ತದ ಕೋಡಿಯು ಹರಿಯುವ ಕದನದ ಹೊಲವಾಗಿ ಮಾಡಿಕೊಂಡೆವು. "ಆಟಂ" ತಿಳಿವಳಿಕೆಯು ಲೋಕೋಪಕಾರವಾದ ಮಹಾಕಾರ್ಯಗಳನ್ನು ಮಾಡುವದಕ್ಕೆ ಉಪಯೋಗವಾಗ ಬಹುದು. ಈ ಜ್ಞಾನವನ್ನು ಕೆಲವು ಭೌತಿಕವಿಜ್ಞಾನಶಾಸ್ತ್ರಜ್ಞರಿಗೆ ಈಶ್ವರನು ಅನುಗ್ರಹಿಸಿದನು. ಆದರೆ ಆ ಶಾಸ್ತ್ರಜ್ಞರಲ್ಲಿ ಕೆಲವರು ರಾಜಕೀಯ ಪಕ್ಷದವರು ತೋರಿಸಿದ ಆಸೆಗಳಿಗೆ ಮರುಳಾಗಿ ಅಥವಾ ಅವರ ಬೆದರಿಕೆಗಳಿಗೆ ಅಂಜಿ ನಿರಪರಾಧಿಗಳನ್ನು ಕೊಲ್ಲುವ ಘಾತುಕವಾದ ಬಾಂಬನ್ನು ಮಾಡಿಕೊಟ್ಟರು!

ಇದೆಲ್ಲ ಪರಮೇಶ್ವರನ ಲೀಲೆಯೆ?– ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವ ಸ್ಥಲವು ಇದಲ್ಲ. ಪರಮಾತ್ಮನಿಗೆ ಸೃಷ್ಟಿಯಂತೆ ಸಂಹಾರವೂ ಒಂದು ಲೀಲೆಯೇ ಸರಿ. ಆದರೆ ಅವನು ನಮ್ಮಂತೆ ವ್ಯಕ್ತಿಯಲ್ಲವಾದ್ದರಿಂದ ಅವನಿಗೆ ಈ ಸೃಷ್ಟಿಸಂಹಾರಗಳಿಂದ ಯಾವ ಪುಣ್ಯಪಾಪಗಳೂ ತಟ್ಟುವಂತೆ ಇರುವದಿಲ್ಲ. ಸದ್ಯಕ್ಕೆ ಇಷ್ಟು ತಿಳಿದುಕೊಂಡರೆ

ಸಾಕಾಗಿದೆ. ಪರಮೇಶ್ವರನು ಮಾನವರನ್ನು ಸೃಷ್ಟಿಸುವಾಗ ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಪಡೆಯುವ ಸ್ವಾತಂತ್ರ್ಯವನ್ನೂ ತಿಳಿವಳಿಕೆಯನ್ನೂ ಅವರಿಗೆ ಕೊಟ್ಟಿರುತ್ತಾನೆ. ಆ ಸ್ವಾತಂತ್ರ್ಯವನ್ನು ದುರುಪಯೋಗಮಾಡಿಕೊಂಡರೆ ದುಃಖವಾಗುವಂತೆ ನಿಯಮಿಸಿ ನಮ್ಮೆಲ್ಲರನ್ನೂ ಸರಿಯಾದ ಮಾರ್ಗಕ್ಕೆ ತಿರುಗಿಸುವ ದಯಾಪೂರಿತ ಸ್ವಾತಂತ್ರ್ಯವನ್ನು ತಾನೇ ಉಳಿಸಿಕೊಂಡಿರುತ್ತಾನೆ.

ಪರಮೇಶ್ವರನು ನಮ್ಮಗಳಂತೆ ಒಬ್ಬ ವ್ಯಕ್ತಿಯಲ್ಲ. ಆತನನ್ನು ಬಯ್ದರೆ ಅವನು ಅದಕ್ಕೆ ಬೆದರಿ ನಮ್ಮ ಇಷ್ಟಾರ್ಥವನ್ನು ನೆರವೇರಿಸುವದಿಲ್ಲ; ಹೊಗಳಿದರೆ ಹಿಗ್ಗಿ ಹೊನ್ನಿನ ಅಥವಾ ಅನ್ನದ ಮಳೆಯನ್ನು ಸುರಿಸುವದಿಲ್ಲ. ಆತನ ಸಂಕಲ್ಪದಂತೆ ಎಲ್ಲವೂ ನಿಯಮದಿಂದ ನಡೆಯುತ್ತಲೇ ಇರುವದು. ಆತನು ನಾರಾಯಣನು, ಮನುಷ್ಯರಿಗೆಲ್ಲ ಪರಮಗತಿಯ; ಶಂಕರನು, ಎಲ್ಲರಿಗೂ ಯಾವಾಗಲೂ ಹಿತವನ್ನೇ ಮಾಡುತ್ತಿರುವವನು. ಆತನ ಭಕ್ತಿಯನ್ನು ಸಂಪಾದಿಸಿಕೊಂಡು, ಆತನ ನಿಯಮದಂತೆ ನಡೆಯುವ ಸಂಕಲ್ಪವನ್ನು ಮಾಡುವದೊಂದೇ ಸುಖಶಾಂತಿಗಳಿಗೆ ಹಾದಿ. ಆತನ ಅನುಗ್ರಹದಿಂದ ನಿಮಗೂ ಆ ಹಾದಿಯು ಸಿಕ್ಕಲಿ!

## 14. ಉದ್ಯೋಗವೇ ಕರ್ಮಯೋಗವಾಗಲಿ!

### (ಅಕ್ಟೋಬರ್ 1946)

*ನಿಮ್ಮ ಪತ್ರವನ್ನು ಓದಿದೆನು. ನಿಮಗೆ ಸ್ವಲ್ಪವೂ ಬಿಡುವೇ ಇಲ್ಲವೆಂದು ಬರೆಯುತ್ತೀರಿ. ಹಗಲೆಲ್ಲ ಕಚೇರಿಯಲ್ಲಿ ಕೆಲಸಮಾಡಿ ಮನೆಗೆ ಬರುವದರಿಂದ ಸಂಜೆಯಲ್ಲಿ ಏನು ಮಾಡುವದಕ್ಕೂ ನನ್ನ ಮನಸ್ಸಿಗೆ ಬೇಡವಾಗಿರುತ್ತದೆ; ಊಟ ಮಾಡಿದ ಕೂಡಲೆ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆನಿಸುತ್ತದೆ ಎಂದು ಬರೆಯುತ್ತೀರಿ. ಇದನ್ನು ಕೇಳಿ ನನಗೂ ವ್ಯಸನವಾಯಿತು.*

ಆದರೆ ನಿಮಗೆ ಪರಮಾರ್ಥಸಾಧನೆಗೆ ಅವಕಾಶವಿಲ್ಲವೆಂದು ನನಗೆ ತೋರುವದಿಲ್ಲ. ನೀವು ಯಾವ ಕೆಲಸವನ್ನೇ ಮಾಡಿರಿ, ಅದರಲ್ಲಿಯೇ ಸಾಧನವನ್ನು ಬೆರೆಯಿಸಿಕೊಳ್ಳುವದಕ್ಕೆ ಬರುತ್ತದೆ. ಯಾವಾಗಲೂ ಡವಾಲಿಯನ್ನು ಹಾಕಿಕೊಂಡು ಸೊಂಟ ಪಟ್ಟಿಯನ್ನು ಕಟ್ಟಿಕೊಂಡೇ ನಿಂತಿರಬೇಕಾಗಬಹುದು; ಆಗಾಗ್ಗೆ ಹುದ್ದೇದಾರರು ನಿಮ್ಮನ್ನು ಕೂಗುತ್ತಲೇ ಇರಬಹುದು; ಅವರು ಸ್ವಲ್ಪ ಸಿಡುಕಿನ ಸ್ವಭಾವದವರೂ ಆಗಿರಬಹುದು. ಇಷ್ಟೆಲ್ಲ ಆದರೂ ನೀವೇಕೆ ನಿರಾಶರಾಗಬೇಕು? ಈಗ ನಾನು ಹೇಳುವ ಒಂದು ಸಣ್ಣ ಸಾಧನವನ್ನು ಮಾಡಿ ನೋಡಿರಿ. ಇದರಲ್ಲಿ ಏನಾದರೂ ನಿಮಗೆ ಅಡಚಣೆ ಕಂಡು ಬಂದರೆ ಬರೆಯಿರಿ.

ಮೊಟ್ಟ ಮೊದಲು "ನಾನು ಕಚೇರಿಯ ಜವಾನನು ಸಣ್ಣತಲಬಿನವನು, ಎಲ್ಲರೂ ನನ್ನನ್ನು ನಿಕೃಷ್ಟಭಾವದಿಂದ ಕಾಣುತ್ತಾರೆ; ಕುಟುಂಬಪೋಷಣೆಗೆ ಮುಂದೆ ದಾರಿಯೇ ತೋಚುತ್ತಲಿಲ್ಲ" ಎಂಬ ಹೀನಭಾವನೆಯನ್ನು ಮನಸ್ಸಿನಿಂದ ಓಡಿಸಿರಿ. "ನಾನಿರುವುದು ವೈಕುಂಠ, ನನ್ನ ಸ್ವಾಮಿಯು ಶ್ರೀಮನ್ನಾರಾಯಣನು, ಆತನ ದ್ವಾರಪಾಲಕನಾಗಿರುವವನು ನಾನು, ಸ್ವಾಮಿಯ ದಯೆಯಿಂದ ನನಗೆ ಯಾವ ತೊಂದರೆಯೂ ಇಲ್ಲ" ಎಂಬ ಹಿರಿಯಭಾವನೆಗೆ ಮನಸ್ಸಿನಲ್ಲಿ ಇಂಬುಗೊಡಿರಿ. ಹುದ್ದೇದಾರರು ಕೂಗಿದ ಒಡನೆ ಉತ್ಸಾಹದಿಂದ ಹೋಗಿ ಅವರನ್ನೂ ಕಾಣಿರಿ, ಮನಸ್ಸಿಗೆ ಅಸಮಾಧಾನವನ್ನು ತಂದುಕೊಳ್ಳಬೇಡಿರಿ. ಅವರು ಸಮಾಧಾನದಿಂದ ಮಾತನಾಡಲಿ, ದುಡಿಕಿನಿಂದ ಏನನ್ನಾದರೂ ಹೇಳಲಿ, ವಿನಯದಿಂದಲೇ ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಡಿರಿ. ನಗೆಮುಖದಿಂದಲೇ ಅವರು ಹೇಳುವ ಕೆಲಸವನ್ನು ಮಾಡಿರಿ. ಅವರನ್ನು ನೋಡುವದಕ್ಕೆ ಬರುವ ಜನರಿಗೆ ಸ್ವಲ್ಪವೂ ಆತಂಕವನ್ನುಂಟು ಮಾಡಬೇಡಿ. ಒಂದು ವೇಳೆ ಏನಾದರೂ ಕಾರಣದಿಂದ ಯಾರನ್ನೂ ಬಿಡಬಾರದು ಎಂದು ಹುದ್ದೇದಾರರು ಹೇಳಿದ್ದರೆ ಆ ವಿಷಯವನ್ನು ವಿನಯದಿಂದಲೇ ಬಂದವರಿಗೆ ತಿಳಿಸಿ.

ಕೆಲಸವನ್ನು ಮಾಡುವಾಗ, ಕೆಲಸವನ್ನು ಬಿಟ್ಟು ಮನೆಗೆ ಬರುವಾಗ, ಮನೆಗೆ ಬಂದು ನಿದ್ರೆಗೆ ಹೋಗುವ ತನಕ, ನಮಗೆ ಅಡ್ಡಿಯಿಲ್ಲದಾಗಲೆಲ್ಲ ಪರಮೇಶ್ವರನ ನಾಮವನ್ನು ಜಪಿಸಿರಿ. 'ನಾರಾಯಣ' ಎಂಬ ಒಂದು ನಾಮವೇ ಸಾಕು. ಅದನ್ನು ಬಾಯಿಯಲ್ಲಿ ಉಚ್ಚರಿಸುವದಕ್ಕೆ ಅವಕಾಶವಿಲ್ಲದಾಗ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿರಬೇಕು. ನರರಿಗೆಲ್ಲ ಪರಮೇಶ್ವರನೇ ಗತಿಯು ಎಂಬುದು ಈ ನಾಮದ ಅರ್ಥವೆಂದು ಮನಸ್ಸಿಗೆ ತಂದುಕೊಳ್ಳಿರಿ. ರಾತ್ರೆಯಲ್ಲಿ ಮಲಗುವ ಮುಂಚೆ ಮತ್ತು ಬೆಳಗ್ಗೆ ಹಾಸಿಗೆಯಿಂದ ಎದ್ದ ಕೂಡಲೇ ನಾರಾಯಣ ಸ್ಮರಣೆಯನ್ನು ಮಾಡಿರಿ. ನಾರಾಯಣನನ್ನು ಪ್ರಾರ್ಥನೆ ಮಾಡಿ, ನಾರಾಯಣನಿಗೆ ವಂದನೆ ಮಾಡಿರಿ.

ಇಷ್ಟನ್ನು ನೀವು ತಪ್ಪದೆ ಒಂದು ತಿಂಗಳು ಮನಃಪೂರ್ವಕವಾಗಿ ಮಾಡಿದರೆ ನಿಮ್ಮ ಶರೀರದ ಆಯಾಸವು ಕಡಿಮೆಯಾಗುತ್ತದೆ, ನಿಮ್ಮ ಮನಸ್ಸು ಪ್ರಸನ್ನನಾಗುತ್ತದೆ, ಮುಖದ ಮೇಲೆ ಶಾಂತಿಯ ಪ್ರಭೆ ಬೀರುತ್ತದೆ. ನಿಮ್ಮ ಯಜಮಾನರ ಮೇಲೂ ಇದರ ಪರಿಣಾಮವಾಗುತ್ತದೆ, ಇಷ್ಟೇ ಅಲ್ಲ ನಿಮ್ಮ ವ್ಯವಹಾರದಲ್ಲಿಯೂ ನಿಮ್ಮ ಹೊರಗಿನ ಕಷ್ಟಗಳು ಸ್ವಲ್ಪ ಮಟ್ಟಿಗಾದರೂ ಪರಿಹಾರವಾಗುತ್ತದೆ–ಎಂದು ನನ್ನ ಅಲ್ಪಮತಿಗೆ ತೋರುತ್ತದೆ. ಇದು ಸರಿಯೋ ಅಲ್ಲವೋ ನೀವೇ ಅನುಭವದಿಂದ ತಿಳಿದು ಮತ್ತೊಂದು ಪತ್ರವನ್ನು ಬರೆಯಬೇಕೆಂದು ಬೇಡುತ್ತೇವೆ.

# 15. ಗುರುವಿನಲ್ಲಿ ಯಾವ ಭಾವನೆ ಇರಬೇಕು?

(ಜನವರಿ 1947)

*ನಿಮ್ಮ ಪತ್ರಕ್ಕೆ ಉತ್ತರವನ್ನು ಬರೆಯಬೇಕೆಂಬ ತವಕವಿದ್ದರೂ ಒಂದೆರಡು ತಿಂಗಳಿಂದ ಅವಕಾಶವಾಗಲಿಲ್ಲ. ಈಗ ನಿಮ್ಮ ಪ್ರಶ್ನೆಗೆ ಸಂಗ್ರಹವಾಗಿ ಉತ್ತರವನ್ನು ಬರೆಯುವೆನು.*

''ನಮ್ಮ ಗುರುಗಳು ಈಗ ಏಕೋ ನನ್ನಲ್ಲಿ ಅಷ್ಟು ಅನುರಾಗವನ್ನು ತೋರಿಸುವಂತೆ ಕಾಣುವದಿಲ್ಲ; ಅವರ ಹತ್ತಿರ ನೂರಾರು ಮಂದಿ ಶಿಷ್ಯರು ಬಂದು ಹೋಗುತ್ತಿರುವದರಿಂದ ನನ್ನ ವಿಷಯದಲ್ಲಿ ಅವರಿಗೆ ಅಸಡ್ಡೆಯಾಗಿರಬಹುದೋ ಏನೋ ಎನ್ನಿಸುತ್ತದೆ. ಅವರು ಎಂದಿನಂತೆ ನನ್ನಲ್ಲಿ ಪ್ರಸನ್ನರಾಗಿರಬೇಕಾದರೆ, ಅವರ ಅನುಗ್ರಹವು ನನ್ನಲ್ಲಿ ಪೂರ್ಣವಾಗಿ ನೆಲಸಬೇಕಾದರೆ, ಏನು ಮಾಡಬೇಕು? ಸ್ವಲ್ಪ ತಿಳಿವಳಿಕೆಯನ್ನು ಕೊಡಬೇಕು'' ಎಂದು ಬರೆದಿರುತ್ತೀರಿ.

ಇಂಥ ಪ್ರಶ್ನೆಗೆ ಉತ್ತರವನ್ನು ಕೊಡುವುದಕ್ಕೆ ತುಂಬ ಎಚ್ಚರಿಕೆಯೂ, ಜಾಣತನವೂ, ಸಹಾನುಭೂತಿಯೂ ಅವಶ್ಯವಾಗಿರುತ್ತದೆ. ಮತ್ತೊಬ್ಬರ ಗುರುಗಳ ವಿಷಯಕ್ಕೆ ನನ್ನ ಅಭಿಪ್ರಾಯವನ್ನು ಕೊಡುವದು ಕಷ್ಟವೇ ಸರಿ. ಸಾಧಾರಣವಾಗಿ ಒಬ್ಬರನ್ನು ಗುರುಗಳೆಂದು ಆರಿಸಿಕೊಳ್ಳುವಾಗ ಅವರಲ್ಲಿರುವ ಸಾತ್ತ್ವಿಕತೆ, ಜ್ಞಾನದ ಮಟ್ಟ, ಉಪದೇಶದಲ್ಲಿ ದಕ್ಷತೆ, ಕಾರುಣ್ಯ-ಮುಂತಾದ ಸದ್ಗುಣಗಳನ್ನು ನೋಡಿಯೇ ವಿವೇಕಿಗಳಾದವರು ಶರಣುಹೊಕ್ಕಿರುತ್ತಾರೆ. ಹೀಗಿರುವಲ್ಲಿ ''ಗುರುಗಳು ಇತ್ತೀಚೆಗೆ ಸ್ವಲ್ಪ ಬದಲಾಯಿಸಿದಂತೆ ಕಾಣುತ್ತಾರೆ'' ಎಂದು ತೋರಿದರೆ ಅದಕ್ಕೇನು ಕಾರಣವಿರಬಹುದು? ಒಂದೋ ತಾವು ಮೊದಲು ಇವರೊಬ್ಬ ಮಹಾಪುರುಷರೆಂದು ತಿಳಿದುಕೊಂಡಿದ್ದಾಗ ವಿಚಾರಮಾಡದೆ ಅವಸರದಿಂದ ನಿರ್ಣಯಮಾಡಿಕೊಂಡಿರಬೇಕು; ಹಾಗಿಲ್ಲದಿದ್ದರೆ ಶಿಷ್ಯರಾದ ತಮ್ಮ ನಡೆಯಲ್ಲಿ ಅಥವಾ ಭಾವನೆಯಲ್ಲಿ ಈಗ ಏನೋ ಮಾರ್ಪಾಡಾಗಿರಬೇಕು, ಅಲ್ಲವೆ?

ಗುರುವನ್ನು ಈಶ್ವರಬುದ್ಧಿಯಿಂದ ಕಾಣಬೇಕೆಂಬ ತತ್ತ್ವವನ್ನು ಕೆಲವು ಧರ್ಮ ಪಂಥಗಳಲ್ಲಿ ಒಪ್ಪಿರುವದಿಲ್ಲ. ಈಶ್ವರನಿಗೆ ಸಮನಾದವನು ಯಾರೂ ಇಲ್ಲವಾದ್ದರಿಂದ ಮನುಷ್ಯರಾದವರಲ್ಲಿ ಈಶ್ವರಭಾವನೆಯನ್ನು ಮಾಡುವದು ಎಂದಿಗೂ ಶ್ರೇಯಸ್ಕರವಾಗ ಲಾರದು ಎಂದು ಆ ಧರ್ಮದವರು ವಾದಿಸುತ್ತಾರೆ. ಆದರೆ ಸನಾತನಧರ್ಮವನ್ನು ಅನುಸರಿಸುವ ನಾವುಗಳು ಈ ವಾದವನ್ನು ಅಂಗೀಕರಿಸುವದಕ್ಕೆ ಬರುವದಿಲ್ಲ. ''ಯಾರಿಗೆ ಪರಮೇಶ್ವರನಲ್ಲಿ ಪರಮಭಕ್ತಿಯಿರುವದೋ ಮತ್ತು ಸದ್ಗುರುವಿನಲ್ಲಿಯೂ ಅಷ್ಟೇ ಪರಿಮಾಣದ ಭಕ್ತಿಯು ಇರುವದೋ ಅವರಿಗೇ ಬ್ರಹ್ಮವಿದ್ಯೆಯ ಮರ್ಮವು

ಹೊಳೆಯುತ್ತದೆ'' ಎಂದು ಉಪನಿಷತ್ತಿನಲ್ಲಿ ಕಂಠೋಕ್ತವಾಗಿ ಹೇಳಿರುತ್ತದೆ. ಈ ಅಭಿಪ್ರಾಯಕ್ಕೆ ಮೂಲವಾಗಿರುವ ತತ್ತ್ವವೇನೆಂದರೆ ಪರಮಾತ್ಮನ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡು ಅದರಲ್ಲಿಯೇ ನೆಲೆನಿಂತಿರುವವರು ಪರಮಾತ್ಮನಿಗೆ ಅಭಿನ್ನರಾಗಿ ಬಿಟ್ಟಿರುವರು. ''ಬ್ರಹ್ಮವಿದ್ ಬ್ರಹ್ಮೈವ ಭವತಿ'' ಎಂಬುದನ್ನು ಸಾರುವದೇ ಉಪನಿಷತ್ತುಗಳಲ್ಲಿರುವ ವಿಶೇಷವು. ಹೀಗೆ ಪರಮಾತ್ಮನಿಗೆ ಅನನ್ಯರಾಗಿರುವ ಗುರುಗಳು ಉಪದೇಶಿಸಿದರೇ ತತ್ತ್ವವು ಶಿಷ್ಯನಿಗೆ ತಪ್ಪದೆ ಅನುಭವಕ್ಕೆ ಬರುವದು; ಹಾಗಲ್ಲದೆ ಬರಿಯ ಪುಸ್ತಕಜ್ಞಾನಿಗಳಾದ ಗುರುಗಳು ಉಪದೇಶಿಸಿದರೆ ಅದು ಎಂದಿಗೂ ಕಾರ್ಯಕಾರಿಯಾಗಲಾರದು. ಆದ್ದರಿಂದ ''ಗುರುಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ । ಗುರುಃ ಸಾಕ್ಷಾತ್ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ'' ಎಂದು ಗುರುಸ್ಮರಣರೂಪವಾದ ಮಂಗಲವನ್ನು ಹೇಳಿಕೊಂಡೇ ಸತ್ಕರ್ಮಗಳನ್ನು ಆರಂಭಿಸುವ ವಾಡಿಕೆಯು ಸನಾತನಧರ್ಮದವರಲ್ಲಿ ಉಂಟಾಗಿರುತ್ತದೆ.

ಆದರೆ ಇಂಥ ಸದ್ಗುರುಗಳು ದೊರೆಯುವದು ಬಹಳ ಕಷ್ಟ. ನಾವು ಗುರುಗಳೆಂದು ಆರಿಸಿಕೊಳ್ಳುವ ಮನುಷ್ಯರು ಪಾಪರಹಿತರಾಗಿ, ಶ್ರೋತ್ರಿಯರಾಗಿ, ಬ್ರಹ್ಮನಿಷ್ಠರಾಗಿ ಇದ್ದರೆ ಅದು ಮಹಾಭಾಗ್ಯವೇ ಸರಿ. ಹಾಗಿಲ್ಲದಿದ್ದರೆ ನಮಗೆ ಸಿಕ್ಕುವಷ್ಟು ಹೆಚ್ಚಿನ ಮಟ್ಟದ ಸಾತ್ತ್ವಿಕರೂ ವಿಚಾರಪರರೂ ಉಪದೇಶದಕ್ಷರೂ ದಯಾವಂತರೂ ಆದವರನ್ನೇ ಗುರುಭಾವನೆಯಿಂದ ಸೇವಿಸಿ ಅವರಿಂದ ಲಭಿಸುವಷ್ಟು ಉತ್ತಮೋಪದೇಶಗಳನ್ನು ಹೊಂದುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಸದ್ಗುರುಗಳು ನಮ್ಮ ತಂದೆಯಂತೆ ಇದ್ದರೆ, ಇಂಥ ಮುಮುಕ್ಷುಗಳು ನಮ್ಮ ಅಣ್ಣಂದಿರಾಗಿರುತ್ತಾರೆ. ಅವರು ತಾವೂ ತತ್ತ್ವಾನುಭವಿಗಳಾದ ಸದ್ಗುರುಗಳನ್ನು ಹುಡುಕುತ್ತಾ ಸನ್ಮಾರ್ಗದಲ್ಲಿಯೇ ನಡೆಯುತ್ತಿರುವದರಿಂದ ನಮ್ಮನ್ನು ಸನ್ಮಾರ್ಗದಲ್ಲಿಯೇ ಕರೆದುಕೊಂಡು ಹೋಗುವದಕ್ಕೆ ನೆರವಾಗುವರೆಂಬುದಕ್ಕೆ ಸಂಶಯವಿಲ್ಲ.

ಆದರೆ ಇಲ್ಲಿ ಒಂದು ಎಚ್ಚರಿಕೆಯು ಅವಶ್ಯ. ತೀರ್ಥ, ಶಾಸ್ತ್ರ, ಮಂತ್ರ, ದೇವತಾವಿಗ್ರಹ, ಗುರು–ಇವರಲ್ಲಿ ನಮಗೆ ಎಂಥ ಭಾವನೆಯಿರುವದೊ ಅಂಥ ಸಿದ್ಧಿಯೇ ಆಗುವದೆಂದು ದೊಡ್ಡವರ ಉಕ್ತಿಯಿದೆ. ಸದ್ಭಾವನೆಯಿಂದ ಸೇವಿಸಿದರೆ ತೀರ್ಥಾದಿಗಳು ನಮಗೆ ಪಾವನ ಸಾಧನಗಳಾಗುವುವು; ಆದರೆ ಅಸದ್ಭಾವನೆಯಿಂದ ಇವುಗಳನ್ನು ಉಪಯೋಗಿಸಿದರೆ ನಮ್ಮ ಭಾವನೆಗೆ ತಕ್ಕಂತೆಯೇ ಫಲವಾಗಿ ಬಿಡುತ್ತದೆ. ತೀರ್ಥಾದಿಗಳಲ್ಲಿ ಪರಮೇಶ್ವರನ ಸನ್ನಿಧಿಯಿದ್ದರೂ ಅವುಗಳನ್ನು ಭಾವದಿಂದ ಸೇವಿಸದವರಿಗೆ ಆ ಸನ್ನಿಧಿಯ ಸಂಬಂಧವಾಗುವದಿಲ್ಲ. ಗುರುವಿನಲ್ಲಿ ಈಶ್ವರತ್ವವಿರುತ್ತದೆ, ಮನುಷ್ಯತ್ವವೂ

ತೋರಿಕೊಳ್ಳುತ್ತಿರುತ್ತದೆ. ಗುರುವಿನಲ್ಲಿರುವ ಈಶ್ವರತ್ವವನ್ನು ಮರೆತು ಮನುಷ್ಯಸ್ವಭಾವದ ಕುಂದುಕೊರತೆಗಳನ್ನು ಎಣಿಸುವದು ಮುತ್ತನ್ನು ತೆಗೆದುಹಾಕಿ ಮುತ್ತಿನ ಚಿಪ್ಪನ್ನು ಇಟ್ಟುಕೊಂಡಂತೆ. ಕೆಲವರು ಗುರುವಿನಲ್ಲಿ ದೊಡ್ಡಸ್ತಿಕೆಯನ್ನು ಒಪ್ಪುತ್ತಾರೆ, ಆದರೆ ಆತನಲ್ಲಿ ಇಂಥಿಂಥ ದೋಷಗಳು ಇಲ್ಲದಿದ್ದರೆ ಚೆನ್ನಾಗಿತ್ತೆಂದೂ ಹೇಳುತ್ತಿರುತ್ತಾರೆ. ಅಂಥವರು ಕಪ್ಪೆಯನ್ನು ತಿನ್ನಲೂ ಆರದೆ ಉಗುಳಲೂ ಆರದ ಗಂಟಲಿನಲ್ಲಿ ಸಿಕ್ಕಿಸಿಕೊಂಡು ನರಳುವ ಸಣ್ಣ ಹಾವುಗಳಂತೆ ಇರುವರು. ಗುರುವಿನಲ್ಲಿ ಪೂಜ್ಯಬುದ್ಧಿಯಿದ್ದರೆ ಅವರ ದೋಷಗಳನ್ನು ಕಾಣುವ ಭಾವನೆಯು ತಪ್ಪೆಂದು ಖಂಡಿತವಾಗಿ ತಿಳಿದುಕೊಳ್ಳಬೇಕು. ಗುರುವಿನಿಂದ ತಿಳಿದುಕೊಳ್ಳತಕ್ಕದ್ದೇ ಏನೂ ಇಲ್ಲವೆಂದು ನಿಶ್ಚಯವಾದರೆ ಅಂಥವನು ತೋರಿಕೆಯ ಗುರುವೆಂದು ಕೂಡಲೆ ಆತನನ್ನು ಬಿಟ್ಟುಹೋಗಿಬಿಡಬೇಕು. ಪರಮೇಶ್ವರನೇ ನಿಜವಾಗಿ ನಮ್ಮೆಲ್ಲರಿಗೂ ಆದಿ ಗುರು. ಆತನನ್ನು ನಂಬಿ ಭಾವಪೂರ್ವಕವಾಗಿ ಭಜಿಸುತ್ತಿದ್ದರೆ ಸಚ್ಛಾಸ್ತ್ರವೂ ಸದ್ಗುರುವೂ ನಮಗೆ ದೊರೆತೇ ದೊರೆಯುವವು.

ನಿಮ್ಮ ಗುರುಗಳಿಂದ ಹಿಂದೆ ನಿಮಗೆ ಯಾವದಾದರೂ ಅಧ್ಯಾತ್ಮಿಕ ಲಾಭವು ಆಗಿದೆಯೆ, ಇಲ್ಲವೆ? ಅವರ ಉಪದೇಶವು ನಿಮ್ಮ ಹೃದಯಕ್ಕೆ ಮೆಚ್ಚಾಗಿತ್ತೆ ಇಲ್ಲವೆ? ಅದರಿಂದ ನಿಮ್ಮ ಮನಸ್ಸು ಮೇಲು ಮಟ್ಟಕ್ಕೆ ಏರಿದ ಅನುಭವವು ನಿಮ್ಮ ಅನುಭವಕ್ಕೆ ಬಂದಿತ್ತೆ, ಇಲ್ಲವೆ? ಅವರ ನಡೆನುಡಿಗಳಿಂದ ನಿಮ್ಮ ಸಾಧನಕ್ಕೆ ಸೂಚನೆ ಏನಾದರೂ ದೊರೆತಿತ್ತೆ, ಇಲ್ಲವೆ? ಇದನ್ನು ಸಾವಧಾನವಾಗಿ ಯೋಚಿಸಿಕೊಳ್ಳಿರಿ. ಬಹುಕಾಲದಿಂದ ನೀವು ಅವರನ್ನು ಸೇವಿಸಿಕೊಂಡು ಬಂದಿದ್ದರೆ ಅವರಿಂದ ನಿಮಗೆ ಯಾವದಾದರೊಂದು ಪ್ರಯೋಜನವು ಆಗಿರಬೇಕೆಂದೇ ಹೇಳಬೇಕಾಗುತ್ತದೆ. ಆದರೂ ಇಂಥ ಯಾವದೊಂದು ಪ್ರಯೋಜನವೂ ನಿಮ್ಮ ಅನುಭವಕ್ಕೆ ಬರಲಿಲ್ಲವಾದರೆ ಅವರು ನಿಜವಾಗಿ ಗುರುಗಳೂ ಆಗಿರಲಿಲ್ಲ, ನೀವು ಶಿಷ್ಯರೂ ಆಗಿರಲಿಲ್ಲ ಎನ್ನಬೇಕಾಗುವದು. ಮುಮುಕ್ಷುಗಳಾದವರಿಗೆ ಪರಮೇಶ್ವರನ ಕೃಪೆಯಿಂದ ಸದ್ಗುರುವಿನ ಪಾದಸೇವೆಯು ದೊರೆಯುತ್ತದೆ, ಪಾಪಿಗಳಾದವರಿಗೆ ಸತ್ಪುರುಷರ ಸಹವಾಸವು ಯಾವದಾದರೊಂದು ನಿಮಿತ್ತದಿಂದ ತಪ್ಪಿಹೋಗುತ್ತದೆ. ಆದ್ದರಿಂದ ಗುರುಗಳ ವಿಷಯದಲ್ಲಿ ನಮಗೆ ಕುತ್ಸಿತಬುದ್ಧಿಯುಂಟಾದಾಗ ಮೊಟ್ಟ ಮೊದಲು ನಮ್ಮ ಹೃದಯದಲ್ಲಿ ಯಾವದಾದರೂ ಮಾರ್ಪಾಡು ಆಗಿದೆಯೆ? ಎಂಬುವನ್ನು ನೋಡಿಕೊಳ್ಳುವದು ಒಳ್ಳೆಯದು.

ನನ್ನ ಈ ಉತ್ತರದಿಂದ ನಿಮಗೆ ಕೆಲವು ಸೂಚನೆಗಳಾದರೂ ದೊರಕಿರ ಬಹುದೆಂದು ನನ್ನ ನಂಬಿಕೆ. ನಿಮಗೆ ಸದ್ಗುರುವಿನ ಅನುಗ್ರಹವುಂಟಾಗಲೆಂಬುದೇ ನನ್ನ ಹಾರೈಕೆ.

## 16. ವಿದ್ಯಾರ್ಥಿಗಳಿಗೆ ಸಾಧನ

**(ಫೆಬ್ರವರಿ 1947)**

*ಮಹಾಶಯ, ಚಿಕ್ಕವಯಸ್ಸಿನಲ್ಲಿ ಅಧ್ಯಾತ್ಮವಿಚಾರದ ಕಡೆಗೆ ಬುದ್ಧಿಯು ತಿರುಗುವದೊಂದು ಪುಣ್ಯದ ಫಲವು. ನೀನು ಇನ್ನೂ ಹೈಸ್ಕೂಲಿನಲ್ಲಿರುವಾಗಲೇ ತತ್ತ್ವ ವಿಚಾರದಲ್ಲಿ ಮನಸ್ಸು ಹಾಕಿರುವದು ಮುಂದಕ್ಕೆ ಆಗಲಿರುವ ಕಲ್ಯಾಣದ ಶುಭ ಚಿಹ್ನೆಯೇ ಸರಿ. ಧ್ರುವ, ಪ್ರಹ್ಲಾದ–ಮುಂತಾದ ಭರತಖಂಡದ ಬಾಲಕರು ಯಾವ ಸಾಧನೆಯಿಂದ ಉತ್ತಮ ಭಕ್ತರಾದರು? ಅದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ನೀನು ಬರೆದಿರುವ ಪತ್ರವನ್ನು ಓದಿ ನನಗೆ ಆನಂದವಾಗಿರುತ್ತದೆ.*

ಧ್ರುವನೂ ಪ್ರಹ್ಲಾದನೂ ಇದ್ದ ಕಾಲವೂ ಅವರ ಸನ್ನಿವೇಶಗಳೂ ಎಲ್ಲರಿಗೂ ದೊರೆಯುವದು ಕಷ್ಟ. ಎಲ್ಲರೂ ಹಾಗೆ ಚಕ್ರವರ್ತಿಗಳ ಮಕ್ಕಳಾಗಿ ಹುಟ್ಟುವದಿಲ್ಲ; ಎಲ್ಲರಿಗೂ ಅವರಿಗೆ ದೊರೆತ ಹಾಗೆ ಋಷಿಗಳ ಉಪದೇಶವು ದೊರಕುವದಿಲ್ಲ. ಅದಕ್ಕೆ ಬದಲು ನಮ್ಮ ಕಾಲಕ್ಕೆ ಸಿಕ್ಕುವ ವಿದ್ಯಾಭ್ಯಾಸದಲ್ಲಿ ಈಶ್ವರಭಕ್ತಿಗೆ ಪ್ರೋತ್ಸಾಹವು ಕಡಿಮೆ. ನಮ್ಮನ್ನು ತಪ್ಪು ದಾರಿಗೆ ಸೆಳೆಯುವ ಮನಮೋಹಕದೃಶ್ಯಗಳೂ ದುಷ್ಟ ಸಹವಾಸಗಳೂ ಹಲವು ಇರುತ್ತವೆ. ಆದ್ದರಿಂದ ವಿದ್ಯಾರ್ಥಿಯಾದವನು ಈ ಸನ್ನಿವೇಶದಲ್ಲಿ ಹೇಗೆ ನಡೆದುಕೊಳ್ಳಬೇಕು? ಪರೀಕ್ಷೆಗೆಂದು ಓದುವ ಪಾಠಗಳ ಹೊರೆಯು ಗುರು ಭಾರವಾಗಿರುವಲ್ಲಿ ಈ ನಡುವೆ, ಅಧ್ಯಾತ್ಮವಿಚಾರಕ್ಕಾಗಲಿ ಸಾಧನಕ್ಕಾಗಲಿ ಬಿಡುವು ಹೇಗೆ ದೊರೆಯಬೇಕು? ಇದೀಗ ನಿನ್ನ ಪ್ರಶ್ನೆಯ ಸಾರ.

ಕಾಲವು ಬದಲಾಯಿಸಿರಬಹುದು, ಸುತ್ತು ಮುತ್ತಲಿನ ಪರಿಸ್ಥಿತಿಯೂ ಅನುಕೂಲವಾಗಿಲ್ಲದಂತೆ ತೋರುತ್ತಿರಬಹುದು, ಆದರೆ ಭಕ್ತಿಗೆ ಬೇಕಾದದ್ದು ಹೃದಯವು. ಯಾವ ಕಾಲದಲ್ಲಿಯೇ ಆಗಲಿ, ಎಂಥ ಪರಿಸ್ಥಿತಿಯಲ್ಲಿಯೇ ಆಗಲಿ, ನಮ್ಮ ಹೃದಯದಲ್ಲಿ ಬೇಕಾದ ಭಾವನೆಯನ್ನು ಮೂಡಿಸಿಕೊಳ್ಳುವದು ನಮ್ಮ ಕೈಯಲ್ಲಿಯೇ ಇರುತ್ತದೆ. ಆದ್ದರಿಂದ ಈಗ ಧ್ರುವನು ಅಥವಾ ಪ್ರಹ್ಲಾದನ ಸ್ಥಿತಿಗೆ ಏರಬೇಕೆಂದು ಆಸೆ ಪಡುವ ಬಾಲಕರಿಗೆ ಅದಕ್ಕೆ ತಕ್ಕ ಭಾವನೆಯನ್ನು ಹೃದಯದಲ್ಲಿ ಎಬ್ಬಿಸಿಕೊಳ್ಳುವದಕ್ಕೆ ಅವಕಾಶವಿರುತ್ತದೆ. ನನ್ನ ಮಾತಿನಲ್ಲಿ ನಿನಗೆ ವಿಶ್ವಾಸವುಂಟಾದರೆ ಈ ಕೆಳಗಿನ ಸಾಧನಕ್ರಮವನ್ನು ಅಭ್ಯಾಸ ಮಾಡಿ ನೋಡಬಹುದು.

ಪ್ರತಿದಿನವೂ ಬೆಳಗಿನ ಜಾವಕ್ಕೆ ಎದ್ದು ಭಗವಂತನನ್ನು ಧ್ಯಾನಿಸುವ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಇದಕ್ಕಾಗಿ ಒಂದು ಬೇರೆಯ ಏಕಾಂತಸ್ಥಲವಾಗಲಿ, ಹೂ ಹಣ್ಣುಗಳಾಗಲಿ

ಧೂಪದೀಪಾದಿಸಾಮಗ್ರಿಗಳಾಗಲಿ ಇರಬೇಕಾದ ಅವಶ್ಯಕತೆಯೇನೂ ಇಲ್ಲ. ಸ್ನಾನ ಮಾಡಿ ಅಥವಾ ಮುಖಪ್ರಕ್ಷಾಲನವನ್ನು ಮಾಡಿಕೊಂಡು ಕೈಕಾಲು ತೊಳೆದುಕೊಂಡು ಒಂದು ಕಡೆಯಲ್ಲಿ ಸಮಾಧಾನ ಮನಸ್ಸಿನಿಂದ ಕುಳಿತು ಆ ಸ್ಥಳದಲ್ಲಿ ಪರಮೇಶ್ವರನು ನಿಜವಾಗಿಯೂ ಇರುತ್ತಾನೆಂದು ಮನಸ್ಸಿಗೆ ತಂದುಕೊಳ್ಳಬೇಕು. ಗಾಳಿ ಬೆಳಕುಗಳು ಹೇಗೆ ಈ ಕೋಣೆಯಲ್ಲಿರುವವೋ ಹಾಗೆಯೇ ನಿಶ್ಚಯವಾಗಿಯೂ ಪರಮೇಶ್ವರನು ಇರುತ್ತಾನೆ ಎಂದು ದೃಢವಾಗಿ ನಂಬಿ ಈ ರೀತಿಯಲ್ಲಿ ಒಮ್ಮೆ ಮನಸ್ಸಿನಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕು. "ದೇವ, ನಿನ್ನ ಸನ್ನಿಧಿಯನ್ನು ನಾನು ಈ ದಿನವೆಲ್ಲ ನೆನಪಿನಲ್ಲಿಟ್ಟಿರುವಂತೆ ಅನುಗ್ರಹಿಸು. ನನ್ನ ನಡೆನುಡಿಗಳೆಲ್ಲ ನಿನಗೆ ಮೆಚ್ಚಾಗಿರುವಂತೆಯೆ ಕೃಪೆ ಮಾಡು". ಈ ಮಾತುಗಳನ್ನು ಗಟ್ಟಿಯಾಗಿ ಆಡಬೇಕಾದದ್ದೇನೂ ಇಲ್ಲ, ಭಗವಂತನು ನಿನ್ನೆದುರಿಗೇ ಇದ್ದು ನೀನು ಅವನೊಡನೆ ಹೀಗೆಂದು ಹೇಳಿಕೊಂಡಂತೆ ಮನಸ್ಸಿನಲ್ಲಿ ಭಾವಿಸಿಕೊಂಡರೆ ಸಾಕಾಗಿದೆ.

ವಿದ್ಯಾರ್ಥಿಯಾಗಿರುವಾಗ ಅಧ್ಯಾತ್ಮಸಾಧನಕ್ಕೆ ಅವಕಾಶವಿಲ್ಲವೆಂಬ ತಿಳಿವಳಿಕೆಯು ಸರಿಯಲ್ಲ. ಏಕೆಂದರೆ ವಿದ್ಯಾರ್ಥಿಯು ಸರಿಯಾದ ವಿದ್ಯಾರ್ಥಿಯಾಗಿದ್ದರೆ, ಅದೇ ಒಂದು ಸಾಧನೆಯಾಗಿರುತ್ತದೆ. ಪಾಠಗಳು ಹೆಚ್ಚಾಗಿರುವದರಿಂದ ಪಾರಾಯಣಕ್ಕೆ ಹೊತ್ತಿಲ್ಲವೆಂದು ಭಾವಿಸಬಾರದು. ಪಾಠವನ್ನೇ ಪಾರಾಯಣಗ್ರಂಥವೆಂದು ಭಾವಿಸಬೇಕು. ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ನಿಮಗೆ ಇಟ್ಟಿರುವ ಪದ್ಯಗ್ರಂಥಗಳಲ್ಲಿ ಉತ್ತಮಪುರುಷರ ಜೀವನಚರಿತ್ರೆಗಳಿರುತ್ತವೆ. ಅವರು ಯಾವ ನಡೆನುಡಿಗಳಿಂದ ಮಿಕ್ಕವರಿಗಿಂತ ಮೇಲಿನ ಅಂತಸ್ತಿಗೆ ಏರಿದರು? ಎಂಬುದನ್ನು ಯಾವಾಗಲೂ ಚಿಂತಿಸುತ್ತಿರಬೇಕು. ಚರಿತ್ರೆಯ ಗ್ರಂಥದಲ್ಲಿ ಎಷ್ಟೋ ನೀತಿಗಳು ಮನಸ್ಸಿಗೆ ತಟ್ಟುತ್ತಿರುತ್ತವೆ. ಒಳ್ಳೆಯ ನಡೆತೆಯಿಂದ ಲೋಕಕ್ಕೂ ಮೆಚ್ಚಾಗಿ ಉನ್ನತಸ್ಥಿತಿಗೆ ಬಂದವರು; ಕೆಟ್ಟ ನಡತೆಯಿಂದ ತತ್ಕಾಲಕ್ಕೆ ಗೆಲವನ್ನು ಪಡೆದಂತೆ ಕಂಡರೂ ಕೊನೆಗೆ ಕೆಳಕ್ಕೆ ಬಿದ್ದವರು–ಇಂಥವರ ಉದಾಹರಣೆಗಳು ಹೇರಳವಾಗಿ ದೊರೆಯುತ್ತಿರುತ್ತವೆ. ಇದನ್ನೆಲ್ಲ ಮನನ ಮಾಡುತ್ತಿರಬೇಕು. ಓದುವದು, ಬರೆಯುವದು, ಲೆಕ್ಕ, ಭೌತಿಕವಿಜ್ಞಾನ–ಇವುಗಳಲ್ಲೆಲ್ಲ ನಿಮಗೆ ಆಗುವ ಆನಂದವು ಭಗವಂತನಿಂದ ಬರುವದೆಂದು ನೆನಪಿನಲ್ಲಿಟ್ಟಿರಬೇಕು.

ಮುಖ್ಯವಾಗಿ ದೇಹದಲ್ಲಿ ಶುಚಿಯಾಗಿರಬೇಕು, ನಿನ್ನ ಕೆಲಸವನ್ನು ನೀನೇ ಮಾಡಿಕೊಳ್ಳುತ್ತಿರಬೇಕು, ಸೋಮಾರಿತನಕ್ಕೆ ಸ್ವಲ್ಪವೂ ಅವಕಾಶವನ್ನು ಕೊಡಬಾರದು. ಶರೀರವು ಈಶ್ವರನಿಗೆ ಒಂದು ದೇವಾಲಯದಂತೆ. ಅದನ್ನು ಶುಚಿಯಾದ ಹಿತವಾದ ಮಿತವಾದ ಆಹಾರದಿಂದಲೂ ತಕ್ಕಷ್ಟು ವ್ಯಾಯಾಮದಿಂದಲೂ ಅವಶ್ಯವಾದಷ್ಟೇ ನಿದ್ರೆಯಿಂದಲೂ ಚೊಕ್ಕಟವಾಗಿ ಚಟುವಟಿಕೆಯಿಂದಿರುವಂತೆ ಇಟ್ಟುಕೊಳ್ಳುವದು

ಕರ್ತವ್ಯವು. ಮನಸ್ಸಿನಲ್ಲಿ ಉತ್ತಮವಾದ ಭಾವನೆಗಳು ಬರುವಂತೆ ಯಾವಾಗಲೂ ಓದಿದ ಗ್ರಂಥಗಳ ಮನನ, ದೊಡ್ಡವರ ಭಾಷಣಗಳನ್ನು ಕೇಳುವುದು, ಒಳ್ಳೆಯವರ ಸಹವಾಸ—ಇವುಗಳನ್ನಿಟ್ಟುಕೊಂಡಿರಬೇಕು.

ಇನ್ನೊಂದು ವಿಚಾರ. ಯಾವ ಪಾಠವನ್ನು ಓದುವದಕ್ಕೆ ಪ್ರಾರಂಭಿಸಿದರೂ ಮೊದಲು ಪರಮೇಶ್ವರನನ್ನು ಮನಸ್ಸಿಗೆ ತಂದುಕೊಳ್ಳಬೇಕು. ಪಾಠವು ಮುಗಿಯುತ್ತಲೂ ಒಮ್ಮೆ ಪರಮೇಶ್ವರನಿಗೆ ಮನಸ್ಸಿನಿಂದಲೇ ನಮಸ್ಕರಿಸಬೇಕು. ಲೋಕದಲ್ಲಿರುವ ಜ್ಞಾನರಾಶಿಯೆಲ್ಲ ಪರಮೇಶ್ವರನ ಸ್ವತ್ತು; ಆತನ ಅನುಗ್ರಹದಿಂದಲೇ ನಮಗೆ ಉತ್ತಮವಾದ ತಿಳಿವಳಿಕೆಯು ಬರಬೇಕೆಂಬುದನ್ನು ಮರೆಯಬಾರದು.

ಆದಷ್ಟು ಮಟ್ಟಿಗೂ ವ್ಯರ್ಥವಾದ ಮಾತನ್ನು ಆಡದೆ ಇರುವದಕ್ಕೆ ಪ್ರಯತ್ನ ಮಾಡಬೇಕು. ಪಾಠವನ್ನು ಓದುವದು, ಅದನ್ನು ಕುರಿತು ಸಹಪಾಠಿಗಳೊಡನೆ ಚರ್ಚಿಸುವದು, ನಮಗೆ ತಿಳಿದದ್ದನ್ನು ಯಾರಿಗಾದರೂ ಹೇಳುವದು—ಈ ಕೆಲಸಗಳಿಗಲ್ಲದೆ ಬರಿಯ ಪೊಳ್ಳು ಹರಟೆಯು ಎಂದಿಗೂ ನಮ್ಮ ಬಾಯಿಂದ ಹೊರಡಬಾರದು. ಇದೇ ವಿದ್ಯಾರ್ಥಿಗಳಿಗೆ ಮೌನವೆನಿಸುತ್ತದೆ. ಈ ಮೌನವನ್ನು ಸಾಧಿಸುವದಕ್ಕೆ ಒಂದು ಉತ್ತಮವಾದ ಮಾರ್ಗವುಂಟು. ಯಾರಾದರೂ ನಿನ್ನನ್ನು ಮಾತನಾಡಿಸಿದರೆ ಅದು ವಿದ್ಯಾರ್ಥಿಗಳಿಗೆ ಬೇಕಾದದ್ದೋ ಅಲ್ಲವೋ ಎಂಬುದನ್ನು ಯೋಚಿಸಿ ಉತ್ತರಕೊಡಬೇಕು. ಓದುವದಕ್ಕೆ ಅವಕಾಶವಿಲ್ಲದೆ ಇರುವಾಗ, ಅಥವಾ ಸುಮ್ಮನೆ ಮಾತನಾಡಬೇಕಾಗಿ ಬಂದಾಗ, ಪರಮೇಶ್ವರನ ನಾಮವನ್ನು ಜಪಿಸುವ ಪದ್ಧತಿಯನ್ನು ಇಟ್ಟುಕೊಳ್ಳುವುದು ಒಳ್ಳೆಯದು. ರಾಮ, ಕೃಷ್ಣ, ಹರಿ, ಶಿವ—ಮುಂತಾದ ಯಾವದಾದರೊಂದು ಹೆಸರನ್ನು ಏನೂ ಕೆಲಸವಿಲ್ಲದೆ ಬಿಡುವಾಗಿರುವಾಗಲೆಲ್ಲ ಹೇಳಿಕೊಳ್ಳುತ್ತಿರಬೇಕು. ಹತ್ತಿರ ಜನಗಳಿದ್ದು ಅವರು ಮಾತನಾಡುತ್ತಾ ಇರುವಾಗ ನಿನಗೆ ಮಾತನಾಡಬೇಕಾದ ಸಂದರ್ಭವಿಲ್ಲದೆ ಇದ್ದರೆ ಆಗಲೂ ಮನಸ್ಸಿನಲ್ಲಿ ಈ ನಾಮಜಪವನ್ನು ನಡೆಸುತ್ತಲೇ ಇರಬೇಕು. ಆಟದ ಸಮಯದಲ್ಲಿ ಕೂಡ ಈ ಜಪದ ಕೆಲಸವನ್ನು ಮಾಡುವದಕ್ಕೆ ಬರುತ್ತದೆ. ಇದನ್ನು ಅಭ್ಯಾಸಮಾಡಿ ನೋಡು. ಜಪದೊಡನೆ ಮಾಡಿದ ಕೆಲಸವು ಉತ್ತಮವಾಗಿಯೇ ಆಗುತ್ತದೆ.

ಪ್ರತಿದಿನವೂ ಸಾಯಂಕಾಲದಲ್ಲಿ ಪಾಠವನ್ನು ಚಿಂತನೆ ಮಾಡಿ ರಾತ್ರೆ ಮಲಗಿಕೊಳ್ಳುವಾಗ ಬೆಳಗಿನ ಜಾವದಲ್ಲಿ ಮಾಡಿದಂತೆಯೇ ಮತ್ತೊಮ್ಮೆ ಪರಮೇಶ್ವರನನ್ನು ಚಿಂತಿಸಬೇಕು. "ದೇವ, ಈ ದಿನ ನಾನು ನಿನ್ನ ಸಂಕಲ್ಪಕ್ಕೆ ವಿರುದ್ಧವಾಗಿ ಏನೇನು ಮಾಡಿದೆನೋ ಅದೆಲ್ಲವನ್ನೂ ಮನ್ನಿಸು. ನಾಳೆಯ ದಿನದಿಂದಲಾದರೂ ಈ ಅಪರಾಧವು ಆಗದಂತೆ ಅಥವಾ ಆದಷ್ಟು ಕಡಿಮೆಯಾಗುವಂತೆ ಅನುಗ್ರಹಿಸು" ಎಂದು ಬೇಡಿಕೊಳ್ಳ

ಬೇಕು. ಪರಮೇಶ್ವರನ ಚಿಂತೆಯಿಂದ ನಮ್ಮ ವ್ಯವಹಾರವನ್ನು ಸಮಾಪ್ತಿಗೊಳಿಸಿದರೆ ಸುಖನಿದ್ರೆಯು ಕಟ್ಟಿಟ್ಟ ಬುತ್ತಿಯಾಗುತ್ತದೆ.

ವಿದ್ಯಾರ್ಥಿಯಾಗಿರುವದರಿಂದ ಅಧ್ಯಾತ್ಮಚಿಂತನೆಗೆ ಅವಕಾಶವಿಲ್ಲವೆಂದು ಹೇಳುವವರು ನಾನು ಪ್ರತಿದಿನವೂ ಎಷ್ಟು ಕಾಲವನ್ನು ವ್ಯರ್ಥವಾಗಿ ಕಳೆಯುತ್ತಿದ್ದೇನೆ? ಈ ದಿನ ಎಷ್ಟು ಹೊತ್ತು ಮಾಡಬಾರದ ಕೆಲಸವನ್ನು ಮಾಡುತ್ತಾ ಇದ್ದೆನು? ಎಷ್ಟು ಹೊತ್ತು ಕಾಡುಹರಟೆಯಲ್ಲಿ ಮಗ್ನನಾಗಿದ್ದೆನು?–ಎಂದು ತಮ್ಮನ್ನು ತಾವೇ ಪರೀಕ್ಷಿಸಿ ನೋಡಿಕೊಳ್ಳುತ್ತಿರುವದು ಒಳ್ಳೆಯದು. ಆಗ ದೊಡ್ಡವರಂತೆ ಹುಡುಗರಿಗೂ ಅಧ್ಯಾತ್ಮ ಸಾಧನೆಗೆ ಬೇಕಾದಷ್ಟು ಕಾಲವು ಸಿಕ್ಕಬಹುದೆಂದು ಸ್ಪಷ್ಟವಾಗುತ್ತದೆ.

## ವಿದ್ಯಾರ್ಥಿ

### (ಫೆಬ್ರುವರಿ 1947)

*ವಿದ್ಯಾರ್ಥಿ ಎಂದರೆ ವಿದ್ಯೆಯನ್ನೇ ಬಯಸುತ್ತಿರುವವನು, ವಿದ್ಯೆಗಾಗಿಯೇ ಹಂಬಲಿಸುತ್ತಿರುವವನು. ವಿದ್ಯೆ ಎಂದರೆ ಸರಿಯಾದ ಅರಿವು. ತನ್ನ ಅಜ್ಞಾನವು ಹೋಗಬೇಕು, ತನಗೆ ಜ್ಞಾನದ ಬೆಳಕು ಬೇಕು, ತಾನು ಇನ್ನು ಮೇಲೆ ಎಂದಿಗೂ ಕತ್ತಲೆಯಲ್ಲಿರಲಾರೆನು–ಎಂದು ಯಾವನು ನಿಶ್ಚಯಿಸಿಕೊಂಡಿರುವನೋ ಅವನೇ ವಿದ್ಯಾರ್ಥಿಯು.*

ವಿದ್ಯೆಯು ಏತಕ್ಕೆ ಬೇಕು? ವಿದ್ಯೆಯು ಮತ್ತೊಂದಕ್ಕಾಗಿ ಬೇಕೆಂದರೆ, ಹಣಕ್ಕಾಗಿ, ಜೀವನಕ್ಕಾಗಿ, ಕೀರ್ತಿಗಾಗಿ, ತನ್ನನ್ನು ಜನರು ಗೌರವಿಸುವದಕ್ಕಾಗಿ ತನಗೆ ವಿದ್ಯೆಯು ಬೇಕೆಂದರೆ, ಅವನು ವಿದ್ಯಾರ್ಥಿಯಲ್ಲ. ಹಣವನ್ನು ಬಯಸುವವನು ಧನಾರ್ಥಿ, ಜೀವನವನ್ನು ಬಯಸುವವನು ಜೀವನಾರ್ಥಿ, ಕೀರ್ತಿಯನ್ನು ಬಯಸುವವನು ಕೀರ್ತ್ಯರ್ಥಿ, ಗೌರವವನ್ನು ಬಯಸುವವನು ಪೂಜಾರ್ಥಿ, ಆದರೆ ಯಾವನು ವಿದ್ಯೆಯನ್ನೇ, ವಿದ್ಯೆಯನ್ನು ವಿದ್ಯೆಗಾಗಿಯೇ, ಬಯಸುವನೋ ಅವನು ವಿದ್ಯಾರ್ಥಿ!

ವಿದ್ಯೆ ಎಂದರೆ ಅರಿವು ಎಂದು ಮೇಲೆಯೇ ಹೇಳಿರುತ್ತೇನೆ. ಯಾವ ಅರಿವು ಬಂದ ಕೂಡಲೆ ಹೃದಯದಲ್ಲಿ ಬೆಳಕು ಉಂಟಾಗುವದೋ, ಕತ್ತಲೆಯಲ್ಲಿ ಎಡವುತ್ತಾ ಮುಗ್ಗರಿಸುತ್ತಾ ನಡೆಯುವಂತೆ ಅಜ್ಞಾನದ ಮಬ್ಬಿನಲ್ಲಿ ಹೀಗಿರಬಹುದು. ಹಾಗಿರಬಹುದು–ಎಂದು ಕಲ್ಪನಾಪ್ರಪಂಚದಲ್ಲಿ ತಡವರಿಸುತ್ತಿರುವದು ಹೋಗಿಬಿಡುವದೋ, ಹಗಲಿನಲ್ಲಿ ಸರಿಯಾದ ಹಾದಿಯಲ್ಲಿ ನಡೆಯುವವರಿಗೆ ಇರುವಂತೆ ಯಾವ ವಿದ್ಯೆಯಿಂದ ಮನಸ್ಸಿನಲ್ಲಿ ಉತ್ಸಾಹವೂ ಉಲ್ಲಾಸವೂ ಧೈರ್ಯವೂ ಜನರಲ್ಲಿ ಮೈತ್ರಿಯೂ ಹೆಚ್ಚುವವೋ ಅದೇ ವಿದ್ಯೆ. ಅದನ್ನು ಬಯಸುವವನೇ ವಿದ್ಯಾರ್ಥಿ.

## 17. ಹೆಣ್ಣು ಮಕ್ಕಳಿಗೆ ಅಧ್ಯಾತ್ಮಸಾಧನ

### (ಮಾರ್ಚ್ 1947)

*ತಮ್ಮ ಪತ್ರವು ತಲುಪಿತು. ಗಂಡನ ಮನೆಯಲ್ಲಿರುವ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲದ್ದರಿಂದ ಅವರು ಅಧ್ಯಾತ್ಮಸಾಧನವನ್ನು ಹೇಗೆ ಮಾಡಬೇಕು? ಅವರಿಗೆ ಸದ್ಗುರು ಹೇಗೆ ದೊರಕಬೇಕು? ಪತಿಯ ಇಷ್ಟಕ್ಕೆ ವಿರುದ್ಧವಾಗಿ ಸಾಧನವನ್ನು ಮಾಡುವದಾದೀತೆ? ಇಂಥ ಇಕ್ಕಟ್ಟಿನಲ್ಲಿರುವ ಹೆಣ್ಣುಮಗಳು ಸಾಧುಸಂತರ ದರ್ಶನವನ್ನಾಗಲಿ ತೀರ್ಥಯಾತ್ರೆ, ದೇವಾಲಯಗಳಲ್ಲಿ ಸೇವೆ–ಮುಂತಾದವುಗಳನ್ನಾಗಲಿ ದೊರಕಿಸಿಕೊಳ್ಳುವದಕ್ಕೆ ಹೇಗೆ ಪ್ರಯತ್ನಿಸಬೇಕು?–ಎಂದು ಕೇಳಿರುತ್ತೀರಿ. ನಿಮ್ಮ ಪ್ರಶ್ನೆಗೆ ನನಗೆ ತಿಳಿದಮಟ್ಟಿಗೆ ಸಂಕ್ಷೇಪವಾಗಿ ಉತ್ತರವನ್ನು ಬರೆಯುವೆನು.*

ಗಂಡನ ಮನೆಯಲ್ಲಿರುವವರಿಗೆ ಅಧ್ಯಾತ್ಮಸಾಧನಕ್ಕೆ ಅವಕಾಶವಿಲ್ಲದಿರುವದು ಒಂದೋ ಮನೆಗೆಲಸದಲ್ಲಿ ಬಿಡುವು ಸಿಕ್ಕದೆ ಇರುವದರಿಂದ ಆಗಿರಬೇಕು; ಅಥವಾ ಎರಡನೆಯದಾಗಿ ಪತಿಯಾಗಲಿ ಅಥವಾ ಕುಟುಂಬದಲ್ಲಿರುವ ಹಿರಿಯವರಾಗಲಿ ಅಧ್ಯಾತ್ಮ ಸಾಧನಗಳಲ್ಲಿ ರುಚಿಯಿಲ್ಲದವರಾದ್ದರಿಂದ ಅಡ್ಡ ಬರುವದರಿಂದ ಆಗಿರಬೇಕು. ಇವುಗಳಲ್ಲಿ ಮೊದಲನೆಯ ಕಾರಣವನ್ನು ಬಹಳ ಮಟ್ಟಿಗೆ ಹೆಣ್ಣುಮಕ್ಕಳೇ ಬಗೆಹರಿಸಿಕೊಳ್ಳಬೇಕಾಗಿರುತ್ತದೆ. ಅಧ್ಯಾತ್ಮಸಾಧನದಲ್ಲಿ ಹೆಚ್ಚಿನ ಹಸಿವು ಮನಸ್ಸಿಗೆ ಇದ್ದರೆ ಹೇಗೋ ಮಾಡಿ ವಿರಾಮಕಾಲವನ್ನು ಸಂಪಾದಿಸಿಕೊಳ್ಳುವದಕ್ಕೆ ಆಗಿಯೇ ತೀರುತ್ತದೆ ಎಂದು ನನಗೆ ತೋರುತ್ತದೆ.

ಒಂದು ವೇಳೆ ಅನಿವಾರ್ಯವಾಗಿ ಪತಿಶುಶ್ರೂಷೆ, ವೃದ್ಧರ ಮತ್ತು ಮಕ್ಕಳ ಪೋಷಣೆ–ಮುಂತಾದವುಗಳು ಬಹಳವಾಗಿದ್ದರೂ ಅಧ್ಯಾತ್ಮಸಾಧನಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಬೆಳಗ್ಗೆ ಎದ್ದ ಕೂಡಲೆ ಮಿಂದು ಮಡಿಯುಟ್ಟುಕೊಳ್ಳುವದಕ್ಕೆ ಅಡ್ಡಿಯಾಗಬಹುದು. ಆದರೆ ಮುಂಚಿತವಾಗಿ ಎದ್ದು ದೇವರ ಧ್ಯಾನವನ್ನು ಮಾಡಿ ಮನೆಯನ್ನು ಚೊಕ್ಕಟವಾಗಿ ಗುಡಿಸಿ, ಸಾರಿಸಿ, ರಂಗವಲ್ಲಿಯನ್ನಿಡುವಾಗಲೂ ಭಗವಂತನ ನಾಮಸ್ಮರಣೆಯನ್ನು ಮಾಡುತ್ತಿರುವದಕ್ಕೆ ಯಾವ ಅಡಚಣೆ ಇದ್ದೀತು? ಮನೆಯವರಿಗೂ ಮಕ್ಕಳಿಗೂ ಮಾಡುವ ತಿಂಡಿತೀರ್ಥಗಳನ್ನು ಶುಚಿಯಾಗಿ ಮಾಡಿ ಮನಸ್ಸಿನಲ್ಲಿಯೇ ಪರಮೇಶ್ವರನಿಗೆ ನಿವೇದನ ಮಾಡಿ ಎಲ್ಲರಿಗೂ ಹಂಚುವದಕ್ಕೆ ಅಡ್ಡಿಯಾಗುವದೆ? ಮನೆಯಲ್ಲಿ ದೇವರ ಪೂಜೆಯನ್ನು ಮಾಡುವ ಪದ್ಧತಿಯಿದ್ದರೆ ಅದಕ್ಕೆ ಬೇಕಾದ ಸಲಕರಣೆಗಳನ್ನೆಲ್ಲ ಪ್ರೇಮದಿಂದ ಒದಗಿಸಿಕೊಡುವದು ಸಾಧನವಾಗುವದಿಲ್ಲವೆ? ಅಥವಾ ಮತ್ತೆ ಯಾರು ಪೂಜೆಯನ್ನು ಮಾಡುವ ಪದ್ಧತಿಯನ್ನಿಟ್ಟುಕೊಂಡಿರದಿದ್ದರೂ ನೀವೇ ಊಟಮಾಡುವದಕ್ಕೆ ಮುಂಚಿತವಾಗಿ ದೇವರಿಗೆ ಒಂದು ದೀಪವನ್ನು ಹತ್ತಿಸಿಟ್ಟು, ಮಾಡಿದ

ಅನ್ನವನ್ನೇ ಭಕ್ತಿಯಿಂದ ಸಮರ್ಪಣೆ ಮಾಡುವದಕ್ಕೆ ಯಾವ ಆತಂಕವಾದೀತು? ಸಾಯಂಕಾಲದಲ್ಲಿ ನೀವೂ ಮಕ್ಕಳೂ ಸೇರಿ ಸ್ವಲ್ಪ ಹೊತ್ತಾದರೂ ಗದ್ದಲವಿಲ್ಲದೆ ಭಜನೆಯನ್ನೇಕೆ ಮಾಡಬಾರದು? ರಾತ್ರೆಯಲ್ಲಿ ಮಲಗುವಾಗ ಆಯಾ ದಿನದ ಕೃತ್ಯಗಳನ್ನು ಭಗಂತನಿಗೆ ಒಪ್ಪಿಸಿ ಅಪರಾಧಗಳಿಗೆ ಕ್ಷಮೆಯನ್ನೂ ಮುಂದಿನ ಕೃತ್ಯಗಳಿಗೆ ಉತ್ತಮ ಸಹಾಯವನ್ನೂ ಬೇಡಿ ಮಲಗಿಕೊಳ್ಳಬಾರದೆ? ಪತಿಯನ್ನೇ ದೇವರೆಂದು ಭಾವಿಸಿ ಆತನಿಗಾಗಿ ಮಾಡುವ ಶುಶ್ರೂಷೆಯನ್ನೆಲ್ಲ ಭಗವಂತನ ಆರಾಧನೆಯೇ ಎಂದು ಭಾವಿಸಿದರೆ ಮನೆಯ ಕೆಲಸವೆಲ್ಲವೂ ಅಧ್ಯಾತ್ಮಸಾಧನವೇ ಆಗುವದೆಂದು ನನಗೆ ತೋರುತ್ತದೆ. ನೀವು ಭಾಗವತದಲ್ಲಿ ಗೋಪಸ್ತ್ರೀಯರ ಚರಿತ್ರೆಯನ್ನು ಕೇಳಿರಬೇಕು. ಅವರೇನೂ ಸಂಪತ್ತಿನಿಂದ ಮೆರೆಯುವವರಲ್ಲ. ಅವರಿಗೆ ಮಾಡುವ ಕೆಲಸಗಳೇನೂ ಕಡಿಮೆಯಿರಲಿಲ್ಲ. ಆದರೆ ಅವರು "ಹಾಲು ಕರೆಯುವಾಗ, ಕಾಳನ್ನು ಕುಟ್ಟುವಾಗ, ಮೊಸರನ್ನು ಕಡೆಯುವಾಗ, ನೆಲವನ್ನು ಸಾರಿಸುವಾಗ, ಹೋಗುವಾಗ, ಬರುವಾಗ, ಮಕ್ಕಳನ್ನು ಆಡಿಸುವಾಗ, ನೀರು ಚಿಮುಕಿಸುವಾಗ, ಪಾತ್ರೆಗಳನ್ನು ತೊಳೆಯುವಾಗ ಯಾವಾಗಲೂ ಗದ್ಗದ ಕಂಠದಿಂದ ಆನಂದಭಾಷ್ಪವನ್ನು ಸುರಿಸುತ್ತಾ ಭಕ್ತಿಯಿಂದ ಶ್ರೀ ಕೃಷ್ಣಪರಮಾತ್ಮನನ್ನೇ ಗಾನ ಮಾಡುತ್ತಿದ್ದರು" (ಭಾಗ 10–44–15) ಎಂದು ಶ್ರೀ ಶುಕರು ವರ್ಣಿಸಿರುವದನ್ನು ನೆನಪಿಟ್ಟರೆ ಈ ನನ್ನ ಮಾತಿನಲ್ಲಿ ನಿಮಗೆ ಹೆಚ್ಚು ವಿಶ್ವಾಸವುಂಟಾದೀತು.

ಯಾ ದೋಹನೇಽವಹನನೇ ಮಥನೋಪಲೇಪ–
ಪ್ರೇಙ್ಖೇನಾರ್ಭರುದಿತೋಕ್ಷಣಮಾರ್ಜನಾದೌ ॥
ಗಾಯನ್ತಿ ಚೈನಮನುರುಕ್ತಧಿಯೋಽಶ್ರುಕಣ್ಠ್ಯೋ
ಧನ್ಯಾ ವ್ರಜಸ್ತ್ರಿಯ ಉರುಕ್ರಮಚಿತ್ತಯಾನಾಃ ॥

ಆದರೆ ಇದೆಲ್ಲ ಮನೆಯವರಿಂದ ಯಾವ ಅಡ್ಡಿಯೂ ಇಲ್ಲದ ಮಹಿಳೆಯರ ಮಾತಾಯಿತು. ಆದರೆ ಯಾರ ಮನೆಯವರಿಗೆ ಅಧ್ಯಾತ್ಮಸಾಧನವೆಂಬುದರಲ್ಲಿ ರುಚಿಯೇ ಇಲ್ಲವೋ ಅಥವಾ ಯಾರು ಅಧ್ಯಾತ್ಮವಿಚಾರವೆಂಬುದು ಕಿವಿಗೆ ಬಿದ್ದರೆ ಕಿಡಿಕಿಡಿ ಯಾಗುವರೋ ಅಂಥವರ ಮನೆಯಲ್ಲಿರುವ ಹೆಣ್ಣು ಮಕ್ಕಳ ಪಾಡೇನು? ಈ ಪ್ರಶ್ನೆಗೆ ಬಹು ಸ್ವಲ್ಪದರಲ್ಲಿ ಉತ್ತರವನ್ನು ಹೇಳುವೆನು. ಅಧ್ಯಾತ್ಮಸಾಧನವಲ್ಲಿ ನಿಜವಾದ ಅಭಿಲಾಷೆಯಿದ್ದರೆ ಅಂಥ ಸಂದರ್ಭದಲ್ಲಿಯೂ ದಾರಿಯಿಲ್ಲವೆ ಇಲ್ಲ. ಮನೆಯವರ ಇಷ್ಟಕ್ಕೆ ವಿರುದ್ಧವಾಗಿ ಬಾಹ್ಯ ಪೂಜೆಯನ್ನಾಗಲಿ, ಭಜನೆಯನ್ನಾಗಲಿ, ದಾನಧರ್ಮಗಳನ್ನಾಗಲಿ, ಮಾಡುವದಕ್ಕೆ ಹೊರಡುವದು ಎಲ್ಲರ ಮನಸ್ಸಿಗೂ ವ್ಯಥೆಯನ್ನುಂಟುಮಾಡುವದರಲ್ಲಿ ಸಂಶಯವಿಲ್ಲ. 'ಅಧ್ಯಾತ್ಮಸಾಧನ'ವೆಂದರೆ ಮುಖ್ಯವಾಗಿ

ಮನಸ್ಸಿಗೆ ಸೇರಿದೆಂಬುದನ್ನು ನೆನಪಿಡುವದು ಇಂಥ ಸಂದರ್ಭಕ್ಕೆ ಬಹಳ ಪ್ರಯೋಜನವಾಗುತ್ತದೆ. ಮನಸ್ಸಿನಲ್ಲಿಯೇ ಭಗವಂತನನ್ನು ಪ್ರೇಮದಿಂದ ಪ್ರಾರ್ಥನೆ ಮಾಡುತ್ತಿದ್ದರೆ, ಸಂಚಿತವಾದ ಪಾಪದ ಫಲವಾಗಿ ಉಂಟಾಗಿರುವ ಆಪತ್ತಿಗಳೆಲ್ಲವೂ ಮಾಯವಾಗುವವು. ಸ್ವಜನರಿಂದ ಸಾಧನಕ್ಕೆ ಅಡ್ಡಿಯಾಗುವದರ ಜವಳಿಗೆ ಅವರ ಮನಸ್ಸು ಮಾರ್ಪಟ್ಟು ಎಲ್ಲವೂ ಸುಪಥವಾಗಿ ಬಿಡುವದು.

ಸಾಧುಸಂತರ ದರ್ಶನ, ತೀರ್ಥಯಾತ್ರೆಗಳನ್ನು ಮಾಡುವದು, ದೇವಾಲಯದಲ್ಲಿ ಆರಾಧನೆಯನ್ನು ಏರ್ಪಡಿಸುವದು—ಇವುಗಳಿಗೆ ಅವಕಾಶವಿಲ್ಲವಲ್ಲ!—ಎಂದು ನೀವು ಎಂದಿಗೂ ಕೊರಗಬೇಡಿರಿ. ಪಾಪವಾಸನೆಯಿಂದ ಕೂಡಿದವರು ಯಾವ ಸಾಧುಗಳಿಂದಲಾಗಲಿ, ಯಾವ ತೀರ್ಥಯಾತ್ರೆಯಿಂದಲಾಗಲಿ, ಯಾವ ದೇವಾಲಯ ಪ್ರವೇಶದಿಂದಲಾಗಲಿ, ಆಗಬೇಕಾದ ಪರಮಪ್ರಯೋಜನವನ್ನು ಹೊಂದಲಾರರು. ಹೃದಯದಲ್ಲಿ ಭಕ್ತಿಯು ಉಕ್ಕುತ್ತಿದ್ದರೆ ಮಹಾತ್ಮರು ನೀವಿದ್ದಲ್ಲಿಗೇ ಬಂದು ದರ್ಶನವನ್ನು ಕೊಡುವರು; ನೀವು ನಿತ್ಯವೂ ಮಿಂದು ಬರುವ ಕೆರೆಕುಂಟೆಗಳು ಕೂಡ ನಿಮ್ಮ ಪಾಲಿಗೆ ಪವಿತ್ರವಾದ ತೀರ್ಥವಾಗುವವು; ನೀವಿರುವ ಮನೆಯೇ ದೇವಾಲಯವಾಗಿ ಏರ್ಪಡುತ್ತದೆ.

ಮುಖ್ಯವಾಗಿ ನೀವು ಎಲ್ಲಿ ಏನನ್ನು ಅಡ್ಡಿಯಿಲ್ಲದೆ ಮಾಡಬಹುದಾಗಿರುವದೋ ಅದನ್ನು ಪರಮೇಶ್ವರನ ಆರಾಧನೆಯನ್ನಾಗಿ ಮಾಡಿಕೊಳ್ಳಿರಿ. ನೀವು ನುಡಿಯುವ ಪ್ರಿಯವೂ ಹಿತವೂ ಅನುದ್ವೇಗಕರವೂ ಆದ ಮಾತುಗಳೆಲ್ಲವೂ ಭಗವಂತನ ನಾಮ ಜಪವಾಗಲಿ, ಆತನ ಸ್ತೋತ್ರವಾಗಲಿ; ನಿಮ್ಮ ಮನಸ್ಸಿನಲ್ಲಿ ತಲೆಯೆತ್ತುವ ಭಾವನೆಗಳೆಲ್ಲ ಶುಭಭಾವನೆಗಳಾಗಿ ಭಗವಂತನ ಸ್ಮರಣೆಯೂ ಧ್ಯಾನವೂ ಆಗಲಿ! ಓಡಾಡುವದೆಲ್ಲ ಭಗವಂತನ ಪ್ರದಕ್ಷಿಣೆಯಾಗಲಿ! ಮಾಡುವ ಕೆಲಸವೆಲ್ಲ ಆತನ ಸೇವೆಯೆಂದು ಭಾವಿಸುತ್ತಿರಿ. ಈ ಗುರಿಯು ಯಾವ ಮಹಾತ್ಮರ ಮುಂದೆ ಇರುವದೋ ಅವರು ಎಲ್ಲಿದ್ದರೂ ಭಗವದ್ಭಕ್ತರಾಗುವರು, ಜ್ಞಾನಿಗಳಾಗುವರು, ಎಲ್ಲರಿಗೂ ಪೂಜ್ಯರಾಗುವರು.

## 18. ವ್ಯಾಪಾರದಲ್ಲಿ ಪ್ರಾಮಾಣಿಕತೆ

**(ಏಪ್ರಿಲ್ 1947)**

ತಮ್ಮ ಪತ್ರವು ತಲುಪಿರುತ್ತದೆ. ಈಗಿನ ಕಾಲದಲ್ಲಿ ಪ್ರಾಮಾಣಿಕತೆಯಿಂದ ಉದ್ಯೋಗವನ್ನು ಮಾಡುವದು ಕಷ್ಟವೆಂದು ಬರೆದಿದ್ದೀರಿ. ನಿಮ್ಮ ಊರಿನಲ್ಲಿ ವ್ಯಾಪಾರಿಗಳು ಕಪ್ಪುಮಾಲನ್ನು

ಒಳ್ಳೆಯದೆಂತ ಹೇಳುವದು, ಧಾರಣೆಯನ್ನು ಅನಾವಶ್ಯವಾಗಿ ಏರಿಸುವದು –ಮುಂತಾದ ರೀತಿಯಿಂದ ಅಧರ್ಮಮಾರ್ಗವನ್ನೇ ಅನುಸರಿಸುತ್ತಿದಾರೆಂತಲೂ ಸತ್ಯವನ್ನೂ ಧರ್ಮವನ್ನೂ ಕಾಪಾಡಿಕೊಂಡು ವ್ಯಾಪಾರವನ್ನು ಮಾಡುವವರಿಗೆ ತೊಂದರೆಯನ್ನುಂಟುಮಾಡುತ್ತಾ ಕಾಡುತ್ತಿರುವರೆಂತಲೂ ಬರೆದಿದ್ದೀರಿ.

ಕಾಲಮಹಿಮೆಯಿಂದ ಜನರಿಗೆ ಕಾಮಕ್ರೋಧಲೋಭಗಳು ಹೆಚ್ಚುತ್ತಿರುವದು ನಿಜವೇ ಆದರೂ ಕಾಮಾದಿಗಳನ್ನು ಗೆಲ್ಲಬೇಕೆಂದು ಸಂಕಲ್ಪ ಮಾಡುವವರಿಗೆ ಈಗಲೂ ಅವಕಾಶವಿಲ್ಲದೆ ಇಲ್ಲ. ಪರೀಕ್ಷಿತನು ಕಲಿವ್ಯಾಪಾರಸಂಧಿಯಲ್ಲಿ ರಾಜ್ಯವಾಳಿದರೂ ಕಲಿಗೆ ತನ್ನ ರಾಜ್ಯದಲ್ಲಿ ಅವಕಾಶವನ್ನೇ ಕೊಡದೆ ಇದ್ದನು ಎಂದು ಪುರಾಣಗಳಲ್ಲಿ ವರ್ಣಿತವಾಗಿರುವದನ್ನು ಮನಸ್ಸಿಗೆ ತಂದುಕೊಂಡರೆ ನಿಮಗೆ ಇದು ಸ್ಪಷ್ಟವಾಗುತ್ತದೆ.

ನೀವು ನಿಜವಾಗಿಯೂ ಪ್ರಾಮಾಣಿಕತನದಿಂದ ವ್ಯಾಪಾರವನ್ನು ಮಾಡಬೇಕೆಂಬ ಸಂಕಲ್ಪವಿದ್ದರೆ ಉತ್ತಮವಾದ ವಸ್ತುಗಳನ್ನೇ ತಂದು ಮಾರುವದಕ್ಕೆ ಪ್ರಾರಂಭಿಸಿರಿ. ಉತ್ತಮವಾದ ಪದಾರ್ಥಗಳು ಎಲ್ಲಿಯೂ ಸಿಕ್ಕದಿದ್ದರೆ, ವಸ್ತುಗಳ ಸ್ವರೂಪವನ್ನು ಮರೆಮಾಚದೆ ಅವುಗಳ ಯೋಗ್ಯತೆಯನ್ನು ಇದ್ದದ್ದು ಇದ್ದಂತೆ ತಿಳಿಸಿ ನ್ಯಾಯವಾದ ಲಾಭವನ್ನೇ ಇಟ್ಟು ಮಾರುತ್ತಾ ಬನ್ನಿರಿ. ಈ ಮಾರ್ಗದಲ್ಲಿ ನಿಮಗೆ ಮಿಕ್ಕ ವರ್ತಕರಿಗೆ ಸಿಕ್ಕುವಷ್ಟು ಹಣದ ಸಂಗ್ರಹವಾಗದೆ ಇರಬಹುದು; ಲೋಕದ ದೃಷ್ಟಿಯಲ್ಲಿ ನೀವು ದೊಡ್ಡ ಸಾಹುಕಾರರೆನಿಸಿಕೊಳ್ಳದೆ ಇರಬಹುದು; ಆದರೆ ನಿಮ್ಮ ನಿತ್ಯ ಜೀವನದಲ್ಲಿ ಯಾವ ಅಡಚಣೆಗಳೂ ಬರುವ ಸಂಭವವು ಖಂಡಿತವಾಗಿಯೂ ಇರುವದಿಲ್ಲ.

ಇನ್ನೊಂದು ವಿಷಯ. "ವ್ಯಾಪಾರವು ನಮ್ಮ ಕುಲದ ಕಸುಬು; ಅದನ್ನು ಬಿಡುವದಕ್ಕೆ ನನ್ನ ಮನಸ್ಸು ಒಪ್ಪುವದಿಲ್ಲ"–ಎಂದು ನೀವು ಬರೆದಿರುವದನ್ನು ಓದಿದಾಗ ನನಗೆ ಭಗವದ್ಗೀತೆಯ ಉಪದೇಶವು ನೆನಪಿಗೆ ಬಂದಿತು. "ಸ್ವಧರ್ಮದಲ್ಲಿ ಸತ್ತರೂ ಒಳ್ಳೆಯದೇ, ಪರಧರ್ಮವು ಭಯಂಕರವಾದದ್ದು." ಗೀತೆಯಲ್ಲಿ ಭಗವಂತನು ಹೇಳಿರುವ ಮತ್ತೊಂದು ಉಪದೇಶವನ್ನೂ ನೀವು ಮನಸ್ಸಿಗೆ ತಂದುಕೊಂಡರೆ ವ್ಯಾಪಾರವು ಮನಸ್ಸಿಗೆ ಕಿರಿಕಿರಿಯನ್ನುಂಟುಮಾಡುವ ಬದಲು ಆನಂದಕ್ಕೇ ಕಾರಣವಾಗುತ್ತದೆ. "ನಮ್ಮ ಪ್ರವೃತ್ತಿಗಳೆಲ್ಲ ಪರಮೇಶ್ವರನಿಂದಲೇ ಆಗುತ್ತಿರುವವು; ಆತನು ಇಡಿಯ ಜಗತ್ತನ್ನೇ ವ್ಯಾಪಿಸಿರುತ್ತಾನೆ. ಆತನನ್ನು ಸ್ವಕರ್ಮದಿಂದ ಅರ್ಚಿಸಿದರೆ ಮಾನವನು ಸಿದ್ಧಿಯನ್ನು ಹೊಂದುವನು." ಜನರಿಗೆ ಬೇಕಾದ ಸಾಮಾನುಗಳನ್ನು ಒದಗಿಸುವದು ನನ್ನ ಕರ್ತವ್ಯವು. ನನ್ನ ಜೀವನ ಯಾತ್ರೆಗೆ ಬೇಕಾಗಿರುವ ಸಾಮಗ್ರಿಯನ್ನು ಒದಗಿಸುವ ಭಾರವು ಭಗವಂತನದು. ಈ ಸೇವೆಯನ್ನು ಆ ಸಾಮಗ್ರಿಗೆ ಬದಲಾಗಿ ಮಾರುವೆನೆಂಬ ಸಂಕಲ್ಪವನ್ನು

ಬಿಟ್ಟುಬಿಟ್ಟಿರುವೆನು–ಎಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳಿರಿ. ನಿಮ್ಮ ಉದ್ಯೋಗವು ಇನ್ನು ಮುಂದೆ ಶಾಂತಿತವಾಗಿಯೂ ಸುಪಥವಾಗಿ ಬಿಡುತ್ತದೆ.

ವ್ಯಾಪಾರದಲ್ಲಿ ಆಗುವ ಹಿರಿಯ ಲಾಭದ ಕಡೆಗೆ ದೃಷ್ಟಿಯನ್ನು ಇಟ್ಟುಕೊಳ್ಳುವದಕ್ಕಿಂತ ಭಗವಂತನ ಸೇವೆಯನ್ನು ಮುಖ್ಯವಾಗಿಟ್ಟುಕೊಳ್ಳಿರಿ. ಪರಮಾತ್ಮನ ಲಾಭಕ್ಕಿಂತ ಹೆಚ್ಚು ಲಾಭವಿಲ್ಲ; ಪರಮಾತ್ಮನನ್ನು ಪಡೆದುಕೊಳ್ಳುವದೇ ಲೋಕದಲ್ಲಿ ಎಲ್ಲಕ್ಕೂ ಹೆಚ್ಚಿನ ಲಾಭವು–ಎಂದು ಶ್ರುತಿಸ್ಮೃತಿಗಳು ಸಾರುತ್ತಿರುವವು. ಲಾಭದಿಂದಲಾಗಲಿ ನಷ್ಟದಿಂದಲಾಗಲಿ, ನಿಮ್ಮ ಮನಸ್ಸಿನ ಸಮಸ್ಥಿತಿಯನ್ನು ಕಳೆದುಕೊಳ್ಳಬಾರದು. ನ್ಯಾಯವಾಗಿ ತೂಗುವಾಗ ತೂಕದ ಬಟ್ಟಿನ ಕಡೆಗಾಗಲಿ ಮಾರಾಟದ ಪದಾರ್ಥದ ಕಡೆಗಾಗಲಿ ತಕ್ಕಡಿಯ ದಂಡಿಗೆಯು ಒಲಿಯುವದಿಲ್ಲ, ಅಲ್ಲವೆ? ಆ ತಕ್ಕಡಿಯಂತೆ ನಿಮ್ಮ ಮನಸ್ಸಿನ ಸ್ಥಿತಿಯು ಯಾವ ಘಟನೆಯಿಂದಲೂ ಹಿಂದುಮುಂದಾಗದೆ ಸಾಮ್ಯವನ್ನೇ ಅವಲಂಬಿಸಿರಲಿ. ಭಾರತದಲ್ಲಿ ಸುಪ್ರಸಿದ್ಧನಾಗಿರುವ ತುಲಾಧಾರನೆಂಬ ವೈಶ್ಯನನ್ನು ನಿಮ್ಮ ಧ್ಯೇಯವಾಗಿ ಮಾಡಿಕೊಳ್ಳಿರಿ.

ಯಾರು ಭಗವಂತನನ್ನು ಅನನ್ಯಭಕ್ತಿಯಿಂದ ಚಿಂತಿಸುತ್ತಿರುವರೋ ಅವರ ಜೀವನವೆಲ್ಲ ಭಗವಂತನ ಆರಾಧನೆಯಾಗಿರುತ್ತದೆ. ಅವರು ಮಾಡುವ ಉದ್ಯೋಗವು ಕೂಡ ಆತನ ಅರ್ಚನೆಯೇ. ಈಶ್ವರನ ಪೂಜೆಯನ್ನು ಮಾಡಿ ಆತನ ಪ್ರಸಾದವನ್ನು ಸೇವಿಸುವ ಹಾಗೆ ಭಗವಂತನು ಕೊಟ್ಟಷ್ಟು ಲಾಭದಿಂದ ತೃಪ್ತನಾಗುವೆನೆಂಬ ಸಂಕಲ್ಪವನ್ನು ನೀವು ಮಾಡಿದರೆ "ಈತನ ಯೋಗಕ್ಷೇಮವು ನನ್ನದು" ಎಂದು ಭಗವಂತನು ನಿಶ್ಚಯವಾಗಿಯೂ ಸಂಕಲ್ಪಿಸುವನು. ಅಲ್ಲಿಂದ ಮುಂದಕ್ಕೆ ನಿಮ್ಮ ಉದ್ಯೋಗಕ್ಕೆ ಯಾರ ಅಡ್ಡಿಯೂ ಬರಲಾರದು. ಇಷ್ಟೇ ಅಲ್ಲ, ನಿಮ್ಮ ಉದಾಹರಣೆಯಿಂದ ನೆರೆಯವರು ಸುಧಾರಿಸಿಕೊಳ್ಳುವ ಸಂಭವವೂ ಹೆಚ್ಚಾಗಿರುತ್ತದೆ.

## 19. ಶಾಸ್ತ್ರವ್ಯಾಖ್ಯಾನದ ಸದುಪಯೋಗ

(ಮೇ 1947)

ನಿಮ್ಮ ಪತ್ರದ ಅಭಿಪ್ರಾಯವು ತಿಳಿಯಿತು. ನಿಮ್ಮ ಸ್ನೇಹಿತರ ಕೆಲವರ ಪ್ರಾರ್ಥನೆಯಂತೆ ಉಪನಿಷತ್ತು, ಗೀತೆ–ಮುಂತಾದ ಗ್ರಂಥಗಳನ್ನು ವಿವರಿಸಿ ಹೇಳುವ ಸತ್ಕಾಲಕ್ಷೇಪವು ದೊರೆತಿದೆ ಎಂದು ಬರೆದಿದ್ದೀರಿ. ಇದು ಬಹಳ ಸಂತೋಷಕರವಾದ ವಿಷಯವು. ಅಧ್ಯಾತ್ಮಗ್ರಂಥಗಳ ಪಠನಪಾಠನಗಳಿಂದ ಉತ್ತಮ ಪ್ರಯೋಜನವಾಗುವದೆಂಬುವದರಲ್ಲಿ ಯಾವ ಸಂಶಯವೂ ಇರುವದಿಲ್ಲ.

ಆದರೆ ಒಂದು ಎಚ್ಚರಿಕೆಯು ಅವಶ್ಯವಾಗಿರುತ್ತದೆ. ಗ್ರಂಥವನ್ನು ಪಠಿಸುವಾಗ ನಿಮಗೆ ಆಗುವ ಆನಂದವು ಯಾವ ಬಗೆಯದು? ಎಲ್ಲರೂ ನಿಮ್ಮ ವ್ಯಾಖ್ಯಾನವನ್ನು ಕೇಳಿ ಮೆಚ್ಚುತ್ತಾರೆ; ನಿಮ್ಮ ವಾಗ್ಮಿತೆಯನ್ನು ನೋಡಿ ಆಶ್ಚರ್ಯಚಕಿತರಾಗುತ್ತಾರೆ; ನಿಮ್ಮ ಭಾಷಾಶೈಲಿಯನ್ನೂ ಅಲಂಕಾರಿಕವಾಣಿಯನ್ನೂ ಕೇಳಿ ತಲೆದೂಗುತ್ತಾರೆ–ಎಂಬ ಕಾರಣದಿಂದ ನಿಮಗೆ ಸುಖವಾಗುತ್ತಿದ್ದರೆ ಅದು ಪಾಂಡಿತ್ಯಾಭಿಮಾನದ ಸುಖವು. ಭಗವದ್ಗೀತೆಯ ಅಥವಾ ಉಪನಿಷತ್ತಿನ ಜ್ಞಾನದಿಂದ ಆದದ್ದಲ್ಲ! ಅದು ಸತ್ಕಾಲಕ್ಷೇಪದ ಸುಖವಲ್ಲ.

ನೀವು ಭಕ್ತರು, ಅಥವಾ ಜ್ಞಾನಿಗಳು; ನಿಮ್ಮ ಉಪದೇಶವನ್ನು ಪಡೆದು ಧನ್ಯರಾಗಬೇಕೆಂದು ಅನೇಕರು ಬರುತ್ತಿದ್ದಾರೆ–ಎಂಬ ತಿಳಿವಳಿಕೆಯಿಂದ ನಿಮಗೆ ಸುಖವಾಗುತ್ತಿದ್ದರೆ ಅದೂ ಸಾತ್ತ್ವಿಕಸುಖವಲ್ಲ. ಅದೂ ಉಪನಿಷತ್ತುಗಳ ಅಥವಾ ಗೀತೆಯ ಪಠನದ ಸತ್ಕಾಲಕ್ಷೇಪದ ಸುಖವಲ್ಲ. ಅದು ಕೀರ್ತಿಯ ಆಸೆಯ ಹೆಗ್ಗುರುತು, ಅಷ್ಟೆ.

ಉಪನಿಷತ್ತಿನ ಭಾಷ್ಯದಲ್ಲಿ ಅಥವಾ ಗೀತಾಭಾಷ್ಯದಲ್ಲಿ ಬಹಳ ಪೂರ್ವ ಪಕ್ಷಗಳು ಬರುತ್ತಾ ಇರುತ್ತವೆ. ಭಾಷ್ಯಕಾರರು ಅವುಗಳು ನಿಸ್ಸಾರವಾಗಿರುವವೆಂದು ತೋರಿಸಿಕೊಟ್ಟು ತಮ್ಮ ಸಿದ್ಧಾಂತವನ್ನು ತಿಳಿಸುತ್ತಾ ಹೋಗುತ್ತಿರುತ್ತಾರೆ. ಅಂಥ ಗ್ರಂಥಗಳನ್ನು ಓದುವಾಗ ನಿಮ್ಮ ಮನಸ್ಸಿನಲ್ಲಿ ಯಾವ ಬಗೆಯ ಭಾವನೆಯುಂಟಾಗುತ್ತದೆ? ಪೂರ್ವಪಕ್ಷಿಯು ಏನೂ ತಿಳಿಯದವನು; ಆಚಾರ್ಯರು ಅವನನ್ನು ಚೆನ್ನಾಗಿ ಖಂಡಿಸಿರುತ್ತಾರೆ–ಎಂದು ಖಂಡನಾಯುಕ್ತಿಗಳನ್ನು ತಿಳಿದುಕೊಂಡು ಹಿಗ್ಗುತ್ತಿರುವಿರಾದರೆ, ನಿಮಗೆ ಸತ್ಕಾಲಕ್ಷೇಪದ ಸುಖವು ದಕ್ಕಿಲ್ಲವೆಂದು ಅರಿತುಕೊಳ್ಳಬೇಕು. ಈಗಿನ ಕಾಲದಲ್ಲಿ ಭಾಷ್ಯಕಾರರ ಅಥವಾ ಗೀತೋಪನಿಷತ್ತುಗಳ ಸಿದ್ಧಾಂತದ ವಿಷಯಕ್ಕೆ ವಿದ್ವಾಂಸರಲ್ಲಿ ಮತಭೇದಗಳಿರುತ್ತವೆ. ಅಂಥ ವಾದಗಳಲ್ಲಿ ಯಾವದಾದರೊಂದು ಪಕ್ಷವನ್ನು ಅವಲಂಬಿಸಿ ಮಿಕ್ಕ ಪಕ್ಷಗಳನ್ನು ಹಿಡಿದಿರುವವರಿಗೆ ತಿಳಿವಳಿಕೆ ಸಾಲದು ಎಂಬ ಭಾವನೆಯಿಂದ ನೀವು ಪಠನೆ ಮಾಡುತ್ತಿದ್ದರೆ ಅದೂ ಸತ್ಕಾಲಕ್ಷೇಪವಲ್ಲ. ಅದು ವಾದದಲ್ಲಿ ನಿಮಗೆ ಅಭಿರುಚಿಯಿದೆ ಎಂಬುದಕ್ಕೆ ಮಾತ್ರ ಗುರುತಾಗಿರುತ್ತದೆ.

ಗೀತಾದಿಗ್ರಂಥಗಳನ್ನು ವಿವರಿಸುತ್ತಿರುವಾಗ "ನಾನು ಕೃತಾರ್ಥನು. ಇವರು ನನ್ನ ಶಿಷ್ಯರು, ಇವರಿಗೆ ತತ್ತ್ವವನ್ನು ತಿಳಿಸಿಕೊಟ್ಟು ಉದ್ಧಾರಮಾಡುವದು ನನ್ನ ಕರ್ತವ್ಯ" –ಎಂಬ ಅಭಿಮಾನವು ಮೂಡಿದರಂತೂ ಅದು ವ್ಯಾಖ್ಯಾನಕರ್ತನ ಪತನಕ್ಕೇ ಕಾರಣವಾಗಿರುತ್ತದೆ. ಅದು ಸತ್ಕಾಲಕ್ಷೇಪವಾಗುವದರ ಬದಲು ಕಾಲದ ದುರ್ವಿನಿಯೋಗವೇ ಆಗುತ್ತದೆ.

ಗೀತೆಯಂಥ ಗ್ರಂಥಗಳನ್ನು ತಮಗಾಗಿ ಓದಿಕೊಳ್ಳುವವರು "ಇದು ಭಗವಂತನ ಉಪದೇಶವು: ಇಲ್ಲಿ ಹೇಳಿರುವಂತೆ ಮಾಡಿ ನಾನು ಕೃತಾರ್ಥನಾಗಬೇಕು" ಎಂಬ ಬುದ್ಧಿಯಿಂದ ಓದಿದರೆ ಅವರಿಗೆ ಮೆಲ್ಲಮೆಲ್ಲನೆ ತತ್ತ್ವಾರ್ಥವು ಪರಮೇಶ್ವರನ ಅನುಗ್ರಹದಿಂದ ತಿಳಿಯುವದಕ್ಕೆ ಮೊದಲಾಗುತ್ತದೆ. ಯಾರಿಗೆ ಅದು ಆಗಲೆ ಸ್ವಲ್ಪ ಮಟ್ಟಿಗೆ ತಿಳಿದುಬಿಟ್ಟಿರುವದೋ, ಅಂಥವರೂ "ತಚ್ಚಿಂತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಮ್" ಎಂಬ ಉಕ್ತಿಯಂತೆ ಅದನ್ನೇ ಚಿಂತಿಸುತ್ತಾ, ಅದರ ಮಾತನ್ನೇ ಆಡುತ್ತಾ, ಒಬ್ಬರಿಗೊಬ್ಬರು ಅದನ್ನು ತಿಳಿಸುತ್ತಾ ಬ್ರಹ್ಮಾಭ್ಯಾಸವನ್ನು ಮಾಡುವ ಸಾಧನವಿದೆಂದು ಭಾವಿಸಿಕೊಂಡು ಓದುವದೂ ಹೇಳುವದೂ ಕೇಳುವದೂ ಉತ್ತಮ ಕಾಲಕ್ಷೇಪವಾಗುತ್ತದೆ. ಭಗವಂತನು ಗೀತೆಯ ಕೊನೆಯಲ್ಲಿ ಹೇಳಿರುವ ಮಾತನ್ನು ನಾವು ನೆನಪಿನಲ್ಲಿಡಬೇಕು. "ಈ ಪರಮಗುಹ್ಯವಾದ ಸಂವಾದವನ್ನು ಯಾವನು ನನ್ನಲ್ಲಿ ಪರಭಕ್ತಿಯನ್ನು ಮಾಡುತ್ತಾ ನನ್ನ ಭಕ್ತರಿಗೆ ತಿಳಿಸಿಕೊಡುತ್ತಾನೋ ಅವನು ನಿಶ್ಚಯವಾಗಿ ನನ್ನನ್ನೇ ಹೊಂದುವನು. ನನ್ನ ಇಷ್ಟದಂತೆ ನಡೆಯುವವನು, ಮತ್ತೆಯಾವನೂ ಅವನಿಗಿಂತ ಹೆಚ್ಚಿನವನು ಭೂಲೋಕದಲ್ಲಿರುವದಿಲ್ಲ, ಮುಂದೆ ಹುಟ್ಟುವದೂ ಇಲ್ಲ"–ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಇಂಥ ಅಧ್ಯಾತ್ಮಗ್ರಂಥಗಳನ್ನು ಕೇಳುವವರೂ ಭಗವದ್ಭಕ್ತಿಯಿಂದ ಕೂಡಿದವರಾಗಿರಬೇಕು; ವಿವರಿಸಿಹೇಳುವವರೂ "ಎಲ್ಲರಿಗೂ ಆದಿಗುರುವಾಗಿರುವ ಪರಮೇಶ್ವರನ ಸೇವೆಯನ್ನೇ ನಾನು ಮಾಡುತ್ತಿರುವೆನು" ಎಂಬ ಉತ್ತಮ ಭಾವನೆಯಿಂದ ಕೂಡಿಕೊಂಡಿರಬೇಕು. ಹಾಗಾದರೆ ಮಾತ್ರ ಅದು ನಿಜವಾದ ಸತ್ಕಾಲಕ್ಷೇಪವಾಗುತ್ತದೆ.

ಸತ್ತೆಂಬುದು ಪರಮಾತ್ಮನ ನಾಮವು. ಸತ್ತೆಂದರೆ, ಯಾವಾಗಲೂ ಅಚ್ಚಳಿಯದೆ, ಇರುವ ಪರಮಾರ್ಥವಸ್ತುವೆಂದು ಅರ್ಥ; ಎಲ್ಲರಿಗೂ ಒಳ್ಳೆಯದನ್ನೇ ಮಾಡುವ ಸಾಧುವಿನ ಸ್ವರೂಪವನ್ನು ಸತ್ತೆಂಬ ಮಾತು ತಿಳಿಸುತ್ತದೆ. ಈಗ ನಮ್ಮಲ್ಲಿ ಕಾಣದೆ ಇರುವ ಪರಮಾರ್ಥವಾದ ಆತ್ಮಭಾವವು ಮೂಡಿಕೊಳ್ಳುವದೂ, ಅಹಂಕಾರವೇ ಮುಂತಾದ ಅಸದ್ಭಾವವು ತೊಲಗಿ ಸಾಧುಗಳ ಸ್ವಭಾವವು ನಡೆಯಲ್ಲಿ ತೋರುವದೂ ಸತ್ಕಾಲಕ್ಷೇಪಕ್ಕೆ ಗುರುತು. ಇಂಥ ಸತ್ಪರಿಣಾಮವು ನಿಮ್ಮ ಗ್ರಂಥಕಾಲಕ್ಷೇಪದಿಂದ ನಿಮಗೆಲ್ಲರಿಗೂ ದೊರಕಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

## 20. ಸತತವಾಗಿ ಸಾಧನಮಾಡುವದು ಸಾಧ್ಯವೆ?

(ಜೂನ್ 1947)

*ಸಾಧನದ ವಿಷಯದಲ್ಲಿ ತಾವು ಬರೆದಿರುವ ಪತ್ರವು ನನಗೆ ತುಂಬ ಸಂತೋಷವನ್ನುಂಟುಮಾಡಿರುತ್ತದೆ. "ವಿರಾಮವಿಲ್ಲದ ಕೆಲಸಮಾಡಬೇಕಾದ ವ್ಯಾವಹಾರಿಕರು ಯಾವ ಸಾಧನವನ್ನು ಕೈಕೊಳ್ಳಬಹುದು?" ಎಂಬ ಪ್ರಶ್ನೆಯನ್ನು ಹಾಕಿದ ಪತ್ರಗಳು ಹಲವು ನನಗೆ ಬಂದಿರುತ್ತವೆ. ಆದರೆ ಸತತವಾಗಿ ಮಾಡಬಹುದಾದ ಸಾಧನವು ಯಾವದು ಎಂದು ಇದುವರೆಗೆ ಯಾರೂ ಕೇಳಿರುವದಿಲ್ಲ. ವ್ಯವಹಾರವನ್ನು ಮಾಡುತ್ತಿದ್ದರೂ ಜೊತೆಗೆ ಅಧ್ಯಾತ್ಮಸಾಧನವನ್ನು ಸಾಗಿಸುತ್ತಲೇ ಇರುವದು ಸಾಧ್ಯವೆ?–ಎಂಬುದೇ ನಿಮ್ಮ ಪ್ರಶ್ನೆ.*

ಅಧ್ಯಾತ್ಮಸಾಧನವು ಮುಖ್ಯವಾಗಿ ಮನಸ್ಸಿಗೆ ಸೇರಿದ್ದು; ಅದು ಹೊರಗೆ ಮತ್ತೊಬ್ಬರಿಗೆ ಕಾಣುವಂತೆ ಮಾಡತಕ್ಕ ವ್ಯಾಪಾರವಲ್ಲ. ಅಧ್ಯಯನ, ಜಪ, ಅರ್ಚನೆ –ಮುಂತಾದವುಗಳನ್ನು ಮಾಡುವಾಗ ಮತ್ತೊಬ್ಬರಿಗೆ ನಮ್ಮ ಸಾಧನದ ಸ್ವರೂಪವು ತಿಳಿಯಲೇಬೇಕಾದರೂ ಆ ಕಾಲಕ್ಕೆ ನಮ್ಮ ಹೃದಯದಲ್ಲಿ ಏನು ನಡೆಯುತ್ತದೆ ಎಂಬುದು ನಮಗೂ ಅಂತರಾತ್ಮನಾದ ಪರಮೇಶ್ವರನಿಗೂ ಮಾತ್ರ ತಿಳಿಯತಕ್ಕದ್ದಾಗಿರುತ್ತದೆ.

ವ್ಯವಹಾರವನ್ನು ಮಾಡುವಾಗ ಇನ್ನು ಯಾವ ಸಾಧನವು ಆಗದಿದ್ದರೂ ಭಗವಂತನ ನಾಮಸ್ಮರಣೆಯನ್ನಾದರೂ ಮಾಡೋಣವೆನಿಸುತ್ತದೆ. ಆದರೆ ಜನರು ನಡುನಡುವೆ ಮಾತಾಡಿಸಿ ಅದಕ್ಕೂ ಅಡ್ಡಿ ಮಾಡುತ್ತಾರೆ. ಕೆಲವು ವೇಳೆಗಳಲ್ಲಿ 'ತುಟಿ ಅಲುಗಾಡಿಸುತ್ತಿರುವದೇಕೆ?' ಎಂದು ಹಾಸ್ಯವನ್ನೂ ಮಾಡುತ್ತಿರುತ್ತಾರೆ ಎಂದು ನೀವು ಬರೆದಿರುವದನ್ನು ಓದಿದಾಗ ನಾಮಸ್ಮರಣೆಗೂ ನಾಮಜಪಕ್ಕೂ ತಾರತಮ್ಯವು ನಿಮಗೆ ಹೊಳೆದಿಲ್ಲವೆಂದು ನನಗೆ ಅನ್ನಿಸಿತು. ನಾಮಜಪವನ್ನು ಕ್ಲಿಪ್ತವಾದ ಕಾಲದಲ್ಲಿ ಮಾತ್ರ ಮಾಡಿ ಅಖಂಡವಾಗಿ ಸ್ಮರಣೆಯನ್ನು ಮಾಡುವದಕ್ಕೆ ಯತ್ನಿಸಿರಿ. ಸ್ಮರಣೆಯು ಮನಸ್ಸಿನೊಳಗೇ ನಡೆಯಬೇಕಾಗಿರುವದರಿಂದ ಅದು ಹೊರಗಿನವರಿಗೆ ತಿಳಿಯುವದೂ ಇಲ್ಲ; ಆದ್ದರಿಂದ ನಿಮ್ಮ ಸಾಧನೆಗೆ ಅಡ್ಡಿಯನ್ನು ಮಾಡುವದಕ್ಕೆ ಯಾರಿಂದಲೂ ಆಗುವದೂ ಇಲ್ಲ. ಆದರೆ ನಾಮಸ್ಮರಣೆಯನ್ನು ಮಾಡುವವರಿಗೆ ಮತ್ತೆ ಮತ್ತೆ ಮಾತನಾಡುವದು ಆಗಲಾರದು. ಅವರು ಯಥಾಶಕ್ತಿಯಾಗಿ ಮೌನವ್ರತವನ್ನು ಕೈಕೊಳ್ಳಬೇಕಾಗುತ್ತದೆ. ವ್ಯವಹಾರದಲ್ಲಿ ಮಾತನ್ನು ಎಷ್ಟು ಕಡಿಮೆ ಮಾಡಿದರೂ ಸಂಪೂರ್ಣವಾಗಿ ಬಿಟ್ಟೇಬಿಡುವದು ಆಗಲಾರದು. ಆದರೆ ಕೇಳಿ ಬರುವ ಮಾತುಗಳೆಲ್ಲ ಭಗವಂತನ ನಾಮವೇ ಎಂದು ಭಾವನೆ ಮಾಡುವ ಅಭ್ಯಾಸವನ್ನು ಮಾಡುವವರಿಗೆ ಮಾತುಗಳು

ಸಾಧನಕ್ಕೆ ಅಡ್ಡಿಯಾಗುವದಕ್ಕೆ ಬದಲು ಸಾಧನವಾಗಿಯೇ ಪರಿಣಮಿಸುತ್ತವೆ. ನಾವೇ ಬೇಕೆಂತ ಮಾತನಾಡುತ್ತಾ ಮಾತುಗಳು ಭಗವನ್ನಾಮವೆಂದು ಎಣಿಸಿಕೊಳ್ಳಬೇಕೆಂದೇನೂ ನನ್ನ ಅಭಿಪ್ರಾಯವಲ್ಲ. ಆದಷ್ಟು ಮಟ್ಟಿಗೆ ಮೌನವನ್ನವಲಂಬಿಸಿ ಭಗವಂತನ ನಾಮದ ಸ್ಮರಣೆಯನ್ನು ತಂದುಕೊಳ್ಳುತ್ತಿರಬೇಕು. ಆದರೆ ಯತ್ನವಿಲ್ಲದೆ ಯಾರೊಡನೆಯಾದರೂ ಮಾತನಾಡಲೇ ಬೇಕಾದರೆ ಅವರು ಆಡುವ ಮಾತುಗಳೆಲ್ಲವೂ ಭಗವಂತನ ನಾಮಗಳೆಂದೇ ಭಾವಿಸಬೇಕು. ಹೀಗೆ ಮಾಡುತ್ತಾ ಬಂದರೆ ನಿಮ್ಮೊಡನೆ ಸಂಭಾಷಣೆ ಮಾಡುತ್ತಿರುವವರ ಮಾತುಗಳಿಗೆ ಅಪಾರ್ಥವನ್ನು ಕಲ್ಪಿಸುವದೂ ಅದರಿಂದ ಉದ್ವೇಗಗೊಳ್ಳುವದೂ ಹೋಗಿಬಿಡುತ್ತದೆ. ಇಷ್ಟೇ ಅಲ್ಲ, ನಿಮ್ಮ ಮನಸ್ಸಿನ ಸಮಾಧಾನವು ಅವರ ಮೇಲೂ ಪರಿಣಾಮವನ್ನುಂಟುಮಾಡಿ ಯಾವಾಗಲೂ ಅಮಾಯೆಯಿಂದಲೇ ಮಾತನಾಡುವಂತೆ ಮಾಡಿಬಿಡುತ್ತದೆ. ಭಗವಂತನ ನಾಮದಿಂದ ಐಕ್ಯವನ್ನು ಹೊಂದಿರುವವರಲ್ಲಿ ಅಭಿಪ್ರಾಯಭೇದವು ಎಂದಿಗೂ ಬರಲಾರದು.

ಈ ವಿಷಯದಲ್ಲಿ ಒಂದು ಎಚ್ಚರಿಕೆಯ ಮಾತನ್ನು ಬರೆಯಬಹುದೆ? "ನಾನು ಅಧ್ಯಾತ್ಮಸಾಧನವನ್ನು ಸತತವಾಗಿ ಮಾಡುತ್ತಿರುವೆನು" ಎಂಬ ಭಾವನೆಯು ಯಾವಾಗ ನಮ್ಮಲ್ಲಿ ಎದ್ದುಕೊಳ್ಳುವುದೋ ಆಗಲೆ ಸಾಧನಕ್ಕೆ ವಿಕ್ಷಿಪ್ತಿಯಾಗಿಬಿಡುತ್ತದೆ. ನಾಮಸ್ಮರಣೆಯನ್ನು ಮಾಡುತ್ತಿರುವೆನೆಂದು ತೋರಿಸಿಕೊಳ್ಳುವದಕ್ಕಾಗಿ ಕೈಯಲ್ಲಿ ಜಪಸರವನ್ನು ಹಿಡಿದು ಮತ್ತೊಬ್ಬರ ಮುಂದೆ ತುಟಿಯನ್ನು ಅಲುಗಾಡಿಸುವದು ಹೆಮ್ಮೆಯ ಬಾವುಟವೇ ಹೊರತು ಜಪವಲ್ಲ. ಧ್ಯಾನ ಮಾಡುತ್ತಿದಾರೆಂದು ತಿಳಿಯುವಂತೆ ಎಲ್ಲರೂ ಕಾಣುವ ಸ್ಥಲದಲ್ಲಿ ಪದ್ಮಾಸನವನ್ನು ಹಾಕಿಕೊಂಡು ಕಣ್ಣು ಮುಚ್ಚಿಕೊಂಡು ಕುಳಿತಿರುವದು ದಂಭದ ದಾಸನೆಂದು ಪ್ರಕಟಿಸುವ ಬೋರ್ಡು ಮಾತ್ರವೇ ಹೊರತು ಧ್ಯಾನವಲ್ಲ. ವ್ಯವಹಾರದಲ್ಲಿ ನಿರತರವಾಗಿರುವವರನ್ನು ನಿಷ್ಕಾರಣವಾಗಿ ವೇದಾಂತದ ಚರ್ಚೆಗೆ ಎಳೆಯುವದು ಪಾಂಡಿತ್ಯ ಪ್ರದರ್ಶನವೇ ಹೊರತು ಅಧ್ಯಾತ್ಮ ವಿಚಾರವಲ್ಲ. ಸತತವಾದ ಸಾಧನೆಗೆ ಗುರುತೇನೆಂದರೆ ನಾವು ಯಾವ ವ್ಯವಹಾರವನ್ನು ಮಾಡುತ್ತಿದ್ದರೂ ಪ್ರಾಪಂಚಿಕ ವಾಸನೆಗಳೂ ಅಹಂಭಾವವೂ ತಲೆದೋರಬಾರದು; ಪರಮಾತ್ಮಭಾವನೆಯಲ್ಲಿ ಪ್ರಪಂಚವು ಮುಳುಗಿಹೋಗಿರಬೇಕು. "ನಾನು ಈಗ ವ್ಯವಹಾರವನ್ನು ಮೀರಿದ ಸಾಧನೆಯಲ್ಲಿದ್ದೇನೆ" ಎಂಬ ಭಾವನೆಯೂ ಪ್ರಪಂಚಕ್ಕೇ ಸೇರಿದ್ದಾದ್ದರಿಂದ ಅದೂ ಮೈಗರೆಯಬೇಕು. ಪರಮಾತ್ಮನೊಬ್ಬನನ್ನು ಬಿಟ್ಟರೆ ಹೊರಗಿನ ಪ್ರಪಂಚವಾಗಲಿ, ನಾನು, ನೀನು, ಅವರು, ಸಾಧನ, ಸಾಧ್ಯ, ವ್ಯವಹಾರ ಮುಂತಾದ ಯಾವದೊಂದು ಭಾವನೆಯಾಗಲಿ ನಿಮ್ಮ ಮನಸ್ಸಿನಲ್ಲಿ ತೋರಬಾರದು. ಇದೇ ಸತತ ಸಾಧನೆ.

# 21. ಉಪನಯನ

## (ಜುಲೈ 1947)

ನಿಮ್ಮ ಪತ್ರವು ಬಂದಿತು. ಈಗಿನ ಕಾಲದಲ್ಲಿ ಶಾಸ್ತ್ರೋಕ್ತವಾದ ಕರ್ಮಗಳನ್ನು ಶಾಸ್ತ್ರದಲ್ಲಿ ಹೇಳಿರುವಂತೆಯೇ ವಿಸ್ತಾರವಾಗಿ ಮಾಡುವದಕ್ಕೆ ಬಹಳ ವಿಘ್ನಗಳಿವೆ. ಒಂದೊಂದು ಕರ್ಮವನ್ನು ಮಾಡುವದಕ್ಕೇ ಬಹಳ ಕಾಲವಾಗುತ್ತದೆ, ಬಹಳ ದ್ರವ್ಯವೂ ವ್ಯಯವಾಗುತ್ತದೆ. ಅವುಗಳನ್ನು ಸಂಕ್ಷೇಪವಾಗಿ ಮಾಡಿದರೆ ಆಗದೆ? ಉಪನಯನವನ್ನು ವಿವಾಹದ ಸ್ವಲ್ಪ ದಿನಗಳ ಹಿಂದೆಯೇ ಮಾಡುವದಕ್ಕೆ ಏನಾದರೂ ಆಕ್ಷೇಪವುಂಟೆ?'' ಎಂತ ಪ್ರಶ್ನೆಯನ್ನು ಹಾಕಿರುತ್ತೀರಿ.

ಶಾಸ್ತ್ರಗಳ ಪರಿಚಯವಾಗಲಿ, ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳ ಮತ್ತು ಉಪಾಸನೆಗಳ ಅನುಷ್ಠಾನದಲ್ಲಿ ಶ್ರದ್ಧೆಯಾಗಲಿ, ಇಲ್ಲದವರೇ ಈಗ ಬಲು ಮಂದಿ ಇರುತ್ತಾರೆ. ಇದರಿಂದ ಇಂಥ ವಿಚಿತ್ರವಾದ ಆಕ್ಷೇಪಗಳು ಎದ್ದುಕೊಳ್ಳುತ್ತವೆ. ನಿಮಗೆ ಇರುವಷ್ಟು ಸಂಸ್ಕೃತದ ಪರಿಚಯದಿಂದಲೇ ಮನ್ವಾದಿಸ್ಮೃತಿಗ್ರಂಥಗಳನ್ನು ಓದಿ ಅರ್ಥವನ್ನು ಮಾಡಿಕೊಳ್ಳಬಹುದು. ಆದರೂ ನೀವು ಏತಕ್ಕೆ ನನಗೆ ಈ ಪ್ರಶ್ನೆಯನ್ನು ಹಾಕಿರುವಿರೆಂಬುದು ನನಗೆ ತಿಳಿಯದು. ನನಗೆ ತಿಳಿದ ಮಟ್ಟಿಗೆ ಉತ್ತರವನ್ನು ಬರೆದಿರುತ್ತೇನೆ. ಬ್ರಾಹ್ಮಣನಿಗೆ ಗರ್ಭವರ್ಷದಿಂದ ಎಂಟನೆಯ ವರ್ಷದಲ್ಲಿ ಉಪನಯನ ಮಾಡಬೇಕು, ಕ್ಷತ್ರಿಯನಿಗೆ ಹನ್ನೊಂದನೆಯ ವರ್ಷದಲ್ಲಿಯೂ ವೈಶ್ಯನಿಗೆ ಹನ್ನೆರಡನೆಯ ವರ್ಷದಲ್ಲಿಯೂ ಉಪನಯನವನ್ನು ಮಾಡಬೇಕು– ಎಂದು ಶಾಸ್ತ್ರಕಾರರು ಹೇಳುತ್ತಾರೆ. ಇದು ಪ್ರಶಸ್ತವಾದ ಕಾಲವು. ಬ್ರಾಹ್ಮಣನಿಗೆ ಹದಿನಾರು ವರ್ಷಗಳು ಮೀರಿ ಉಪನಯನವನ್ನು ಮಾಡಬಾರದು, ಕ್ಷತ್ರಿಯನಿಗೆ ಇಪ್ಪತ್ತೆರಡು ವರ್ಷಗಳನ್ನೂ ವೈಶ್ಯರಿಗೆ ಇಪ್ಪತ್ತುನಾಲ್ಕು ವರ್ಷವನ್ನೂ ಮೀರಬಾರದು. ಇಷ್ಟು ಕಾಲದ ಮೇಲೂ ಉಪನಯನವನ್ನು ಮಾಡದಿದ್ದರೆ ಅವರು ಸಾವಿತ್ರೀಪತಿತರು, ವ್ರಾತ್ಯರು– ಎನ್ನಿಸಿಕೊಳ್ಳುವರು.

ಉಪನಯನವನ್ನು ಮಾಡಿಸುವದು ವೇದಾಧ್ಯಯನಕ್ಕೆ, ಶಾಸ್ತ್ರಪರಿಚಯಕ್ಕೆ– ಎಂಬುದನ್ನು ನಾವೆಲ್ಲರೂ ಲಕ್ಷ್ಯದಲ್ಲಿಡಬೇಕು. ಇದು ನಮ್ಮ ಮನಸ್ಸಿಗೆ ಬಂದರೆ ಆದಷ್ಟು ಬೇಗನೆ ಹುಡುಗರಿಗೆ ಉಪನಯನವಾಗಬೇಕು; ಏಕೆಂದರೆ ಗ್ರಂಥಧಾರಣಶಕ್ತಿಯು ಮೊದಲಿನಿಂದಲೂ ಬೆಳೆಯಬೇಕಾಗುತ್ತದೆ– ಎಂಬುದು ತಾನೇ ಸಿದ್ಧವಾಗುತ್ತದೆ.

ಉಪನಯನಕ್ಕೆ ಬಹಳ ಹಣವನ್ನು ವ್ಯಯಮಾಡಬೇಕಾಗುತ್ತದೆ ಎಂಬುದು ನಿಜವಲ್ಲ. ಲಗ್ನಪತ್ರಿಕೆಯನ್ನು ಅಚ್ಚು ಮಾಡಿಸುವದಕ್ಕೆ, ಪರಿಚಿತರಾದವರೆಲ್ಲರನ್ನೂ ಕರೆಯಿಸಿ ಅವರಿಗೆ ಗಂಧಪುಷ್ಪಾದಿಗಳನ್ನು ಕೊಡುವದಕ್ಕೆ, ನಾಗಸ್ವರ (ವಾಲಗ)

ಮುಂತಾದ ವಾದ್ಯಗಳನ್ನು ತರಿಸಿ ಜನರ ಮನೋರಂಜನೆ ಮಾಡುವದಕ್ಕೆ, ಬಂಡೆ, ಚಪ್ಪಾಳಿ, ನೆಂಟರಿಷ್ಟರಿಗೆ ಊಟ–ಮುಂತಾದವುಗಳನ್ನು ಏರ್ಪಡಿಸುವದಕ್ಕೆ, ವಟುವಿಗೆ ಆಶೀರ್ವಾದವನ್ನು ಮಾಡುವ ನೆಪದಿಂದ ಬೆಲೆಯುಳ್ಳ ಚಿನ್ನ ಬೆಳ್ಳಿಯ ಪಾತ್ರೆಗಳನ್ನೂ ಪಂಚೆಗಳನ್ನೂ ಓದಿಸುವವರಿಗೆ ಪ್ರತಿಯಾಗಿ ಮರ್ಯಾದೆಯನ್ನು ಮಾಡುವದಕ್ಕೆ ಇಂಥ ದುಂದು ವೆಚ್ಚಗಳಿಗೆ ಹಣವನ್ನು ವ್ಯಯಿಸಬೇಕಾಗುವದು ನಿಶ್ಚಯ. ಆದರೆ ಕರ್ಮಕ್ಕೆ ಇವು ಆವಶ್ಯವಾಗಿರಬೇಕೆಂದೇನೂ ಶಾಸ್ತ್ರದಲ್ಲಿ ಹೇಳಿರುವದಿಲ್ಲ. ಹಣವುಳ್ಳವರು ಆಡಂಬರದಿಂದ ಮೆರೆಯುವದಕ್ಕೆ ಇಂಥ ವೆಚ್ಚಗಳು ಬೇಕಾಗಬಹುದು. ಉಪನಯನಕ್ಕೆ ಇವು ಅಂಗವಲ್ಲ.

ಉಪನಯನವೆಂದರೆ ಆಚಾರ್ಯನು ಶಿಷ್ಯನನ್ನು ಕರೆದು ವೇದಾಧ್ಯಯನಕ್ಕೆ ಯೋಗ್ಯನಾಗುವಂತೆ ಗಾಯತ್ರಿಯನ್ನುಪದೇಶಿಸಿ ಸಂಸ್ಕಾರವನ್ನು ಮಾಡುವದು. ಆದ್ದರಿಂದ ಆಚಾರ್ಯನಾದವನು ತಾನು ಮೊದಲು ಗಾಯತ್ರಿಯ ಉಪದೇಶಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡಿರಬೇಕು. ಆದ್ದರಿಂದ ಉಪನಯನ ದಿನಕ್ಕೆ ಮೊದಲೇ ಕೆಲವು ದಿನಗಳಿಂದ ಹನ್ನೆರಡು ಸಾವಿರ ಗಾಯತ್ರೀಜಪವನ್ನು ಮಾಡಿ ಉಪದೇಶ ಯೋಗ್ಯತೆಯನ್ನು ಸಂಪಾದಿಸಿಕೊಂಡಿರಬೇಕೆಂದು ನಿಯಮವಿದೆ. ಕೆಲವರು ಬ್ರಾಹ್ಮಣರ ಮೂಲಕವಾಗಿ ಈ ಜಪವನ್ನು ತಮಗಾಗಿ ಮಾಡಿಸಿಕೊಳ್ಳುವರು; ಅದು ಗೌಣವು. ಅಂತೂ ಮಗನಿಗೆ ಉಪನಯನ ಮಾಡುವ ತಂದೆಯು ಮೊದಲೇ ಗಾಯತ್ರಿಯ ಜಪವನ್ನು ಮಾಡಿರಬೇಕು. ಇದು ಬಹಳ ಮುಖ್ಯವು.

ಯಜ್ಞೋಪವೀತವನ್ನು ವಟುವು ಧಾರಣೆ ಮಾಡುವ ಮುಂಚೆ ಯಥಾಶಕ್ತಿಯಾಗಿ ದಕ್ಷಿಣೆಯನ್ನೂ ಯಜ್ಞೋಪವೀತವನ್ನೂ ಗೋಪಿಚಂದನವನ್ನೂ ಬ್ರಾಹ್ಮಣರಿಗೆ ಕೊಡಿಸುವ ವಾಡಿಕೆಯಿದೆಯಲ್ಲವೆ? ಈ ಕರ್ಮಕ್ಕಾಗಿ ಯಜ್ಞೋಪವೀತವನ್ನು ಶುದ್ಧವಾದ ರೀತಿಯಿಂದ ಮಾಡಿಸಿಟ್ಟುಕೊಂಡಿರಬೇಕು. ಸರಿಯಾದ ಯಜ್ಞೋಪವೀತವು ದೊರೆಯುವದಿಲ್ಲವೆಂದು ಗೊಣಗುಟ್ಟುವ ಪದ್ಧತಿಯನ್ನು ದ್ವಿಜರು ಸಂಪೂರ್ಣವಾಗಿ ನಿಲ್ಲಿಸಬೇಕೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಈಗಿನ ಕಾಲದಲ್ಲಿ ಶುದ್ಧವಾಗಿ ಸಂಧ್ಯಾವಂದನೆಯ ಮಂತ್ರವನ್ನು ಹೇಳಿಕೊಡುವವರು ತೀರ ವಿರಳರಾಗಿರುತ್ತಾರೆ. ಆದ್ದರಿಂದ ಬ್ರಹ್ಮಚಾರಿಗಳಿಗೆ ಬೇಕಾದ ಸಂಧ್ಯಾವಂದನೆ, ಅಗ್ನಿಕಾರ್ಯ ಮುಂತಾದವುಗಳ ಮಂತ್ರವನ್ನು ಶುದ್ಧವಾಗಿ ಸಂಗ್ರಹವಾದ ಅರ್ಥಸಹಿತವಾಗಿ ಅಚ್ಚುಮಾಡಿಸಿ ಬ್ರಹ್ಮಚಾರಿಗಳ ಧರ್ಮವನ್ನು ಸುಲಭವಾದ ನಡೆಗನ್ನಡದಲ್ಲಿ ಬರೆಯಿಸಿ ಮುದ್ರಿಸಿದ ಪುಟ್ಟಪುಸ್ತಕಗಳನ್ನು ಧರ್ಮಾರ್ಥವಾಗಿ ಬ್ರಾಹ್ಮಣರಿಗೆ ದಾನ ಮಾಡುವ ಪದ್ಧತಿಯನ್ನೂ ಇಟ್ಟುಕೊಂಡರೆ ಇನ್ನೂ ಉತ್ತಮ. ಉಪನಯನವೆಂಬುದು ವೇದಾಭ್ಯಾಸಕ್ಕೆ ದ್ವಾರವಾಗಿರುವದರಿಂದ ಈ ಕಾಲಕ್ಕೆ ತಮ್ಮ

ತಮ್ಮ ಶಾಖೆಯ ವೇದವನ್ನು ಅಧ್ಯಯನ ಮಾಡಿರುವ ಬ್ರಾಹ್ಮಣರು ಕೆಲವರನ್ನು ಆಹ್ವಾನ ಮಾಡಿ ಅವರಿಂದ ವೇದಘೋಷವನ್ನು ಮಾಡಿಸುತ್ತಾ ಘಂಟಾನಾದಪೂರ್ವಕವಾಗಿ ಕರ್ಮವನ್ನು ಸಾಗಿಸಿದರೆ ವಾಲಗ, ಬ್ಯಾಂಡ್–ಮುಂತಾದವಕ್ಕೆ ಹಾಕುವ ಹಣದ ವೆಚ್ಚಗಳು ಕಡಿಮೆಯಾಗುವದರ ಜೊತೆಗೆ ಬ್ರಹ್ಮಚಾರಿಗೆ ವೇದದ ವಿಷಯದಲ್ಲಿ ಗೌರವವೂ ಹೆಚ್ಚುವದು.

ಈ ಸಂದರ್ಭದಲ್ಲಿ ಇನ್ನೊಂದು ಸೂಚನೆಯನ್ನು ಕೊಡಬಹುದೆ? ನಿಮ್ಮ ಊರಿನಲ್ಲಿ ಈಚೆಗೆ ಬ್ರಾಹ್ಮಣಸಭೆಯ ಶಾಖೆಯೊಂದು ಏರ್ಪಟ್ಟಿದೆ ಎಂದು ಕೇಳುತ್ತೇನೆ. ಅವರಲ್ಲಿ ವೇದದ ಮಹತ್ತ್ವವನ್ನೂ ವೇದಗಳ ಸ್ವರೂಪವನ್ನೂ ವಿವರಿಸಿ ಒಂದೊಂದು ವೇದದ ಮುಖ್ಯವಾದ ಕೆಲವು ಮಂತ್ರಗಳನ್ನು ಅರ್ಥಸಮೇತವಾಗಿ ಅಚ್ಚು ಮಾಡಿಸಿ ಬ್ರಾಹ್ಮಣಬಾಲಕರಿಗೆ ಹಂಚಿಸುವ ಏರ್ಪಾಡನ್ನು ಮಾಡಬಾರದೇಕೆ? ಸಾಧ್ಯವಾದರೆ ಈ ಮಂತ್ರಗಳನ್ನೂ ಅವುಗಳ ಭಾವಾರ್ಥವನ್ನೂ ಸಂಸ್ಕೃತದಲ್ಲಿ ಸ್ತೋತ್ರಾದಿಗಳನ್ನೂ ಹೇಳಿಕೊಡುವದಕ್ಕೆ ಬಾಲಕರಿಗೆ ಸ್ಕೂಲಿನ ರಜಾ ದಿನಗಳಲ್ಲಾದರೂ ಕೆಲವು ತರಗತಿಗಳನ್ನು ಯೋಗ್ಯರಾದ ಬ್ರಾಹ್ಮಣೋಪಾಧ್ಯಾಯರಿಂದ ಪ್ರಾರಂಭಿಸಬಾರದೆ?

''ಮನಸ್ಸಿದ್ದಲ್ಲಿ ಮಾರ್ಗ'' ಎಂಬುದೊಂದು ಬಲ್ಲವರ ವಚನವಿದೆ. ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳು ಅಷ್ಟು ಕಷ್ಟಸಾಧ್ಯವಲ್ಲ; ಅವುಗಳಿಗೆ ಬೇಕಾದ ಮಂತ್ರಗಳು ನಮ್ಮ ದೇಶದ ಸಂಸ್ಕೃತಿಯ ನೆನಪನ್ನು ಕೊಡುತ್ತವೆ. ಅವುಗಳ ಅರ್ಥವನ್ನು ಭಾವನೆಮಾಡಿದರಂತೂ ನಿತ್ಯ ಜೀವನಕ್ಕೆ ಉಲ್ಲಾಸದ ಮೆರುಗನ್ನು ಕೊಡುವ ಚಿತ್ತಶುದ್ಧಿಯೂ ಜ್ಞಾನವಿಕಾಸವೂ ಆಗುತ್ತದೆ. ಇಂಥ ಅನುಷ್ಠಾನಗಳಿಂದ ನಮ್ಮ ವ್ಯವಹಾರಕ್ಕೆ ಅಡಚಣೆಯಾಗುವ ಬದಲು ಅದನ್ನು ಸುಗಮವಾಗಿ ಮಾಡುವ ಸಾಧನವೊಂದು ದೊರಕುತ್ತದೆ. ಅನ್ಯ ದೇಶಗಳ ವಿದ್ಯೆಯಿಂದ ನಮ್ಮ ದೇಶದ ಸಂಸ್ಕೃತಿಯನ್ನು ಮರೆತು ನಮ್ಮ ವೇಷಭಾಷೆಗಳನ್ನು ಕೈಬಿಟ್ಟು, ಹೊಟ್ಟೆಯಪಾಡಿಗಾಗಿ ಯಾವ ವಿದ್ಯೆಯನ್ನಾದರೂ ಕಲಿಯಬಹುದೆಂದು ಹೇಳಿಕೊಳ್ಳುತ್ತಾ ಅಜ್ಞಾನ, ಬಡತನ, ಆಲಸ್ಯ–ಮುಂತಾದ ಅನರ್ಥಗಳಿಗೆ ತುತ್ತಾಗಿರುವ ನಾವುಗಳು ಇನ್ನಾದರೂ ಎಚ್ಚತ್ತು ಈ ವಿಷಯದಲ್ಲಿ ನಿಜವೇನೆಂಬುದನ್ನು ವಿಚಾರಿಸಬೇಕೆಂದು ನನಗೆ ತೋರುತ್ತದೆ. ನಿಮ್ಮೂರಿನ ಸಂಸ್ಕೃತ ಪಾಠ ಶಾಲೆಯಲ್ಲಿ ನೀವುಗಳೆಲ್ಲರೂ ಈ ವಿಷಯವನ್ನು ಚರ್ಚಿಸಿ ನೀವು ಮಾಡಿಕೊಂಡ ತೀರ್ಮಾನವನ್ನು ನನಗೆ ತಿಳಿಸಿದರೆ ಬಹಳ ಕೃತಜ್ಞನಾಗಿರುವೆನು.

## 22. ಭಗವನ್ನಾಮದ ಮಹಿಮೆ

### (ಆಗಸ್ಟ್ 1947)

ನಿಮ್ಮ ಕಾಗದವು ತಲುಪಿದೆ. ನಿಮಗೆ ಬಹಳ ಪಶ್ಚಾತ್ತಾಪವಾಗಿರುವದು ಸ್ಪಷ್ಟವಾಯಿತು. ನಿಮ್ಮ ಪತ್ರದ ಮೇಲೆ ಕಣ್ಣೀರ ಬೊಟ್ಟುಗಳು ಬಿದ್ದು ಮಾಸಿದ ಗುರುತುಗಳಾಗಿದ್ದದ್ದನ್ನು ನೋಡಿ ನನ್ನ ಹೃದಯವು ಕರಗಿಹೋಯಿತು. "ಕರ್ಮವನ್ನು ಮಾಡುವದಕ್ಕೆ ಬರುವದಿಲ್ಲ; ಮಂತ್ರಗಳು ಸ್ವಾಧೀನದಲ್ಲಿಲ್ಲ; ಮಡಿಮೈಲಿಗೆಗಳ ಮರ್ಮವು ತಿಳಿಯದು. ಸರಿಯಾಗಿ ಸಂಸ್ಕೃತವನ್ನು ಓದುವದಕ್ಕೆ ಬರುವದಿಲ್ಲ. ಇನ್ನು ಪಾರಾಯಣವನ್ನು ಹೇಗೆ ಮಾಡಲಿ? ಕೆಲವು ಸಂದರ್ಭಗಳಲ್ಲಿ ಸ್ನಾನ ಮಾಡುವದಕ್ಕೆ ಕೂಡ ಅವಕಾಶವಿರುವದಿಲ್ಲ. ನಾನು ಮಾಡುವ ಕೆಲಸದಲ್ಲಿ ವಿರಾಮಕಾಲವು ಸಿಕ್ಕುವುದು ಕಷ್ಟ; ಕೆಲವು ವೇಳೆ ಸುಳ್ಳನ್ನೂ ಹೇಳಬೇಕಾಗುತ್ತದೆ. ನನ್ನಂಥ ಪಾಪಿಗಳಿಗೂ ಉದ್ಧಾರವಾಗುವವಕ್ಕೆ ಅವಕಾಶವುಂಟೆ?" ಎಂದು ಕೇಳುತ್ತೀರಿ.

ನಿಜವಾದ ಪಶ್ಚಾತ್ತಾಪವುಂಟಾಗುವದು ಪಾಪಕ್ಕೆ ಮೊದಲನೆಯ ಪ್ರಾಯಶ್ಚಿತ್ತವೆಂದು ಬಲ್ಲವರು ಹೇಳುತ್ತಾರೆ. ಆ ದೃಷ್ಟಿಯಿಂದ ನೋಡಿದರೆ ನಿಮ್ಮ ಕರ್ತವ್ಯ ಲೋಪಗಳಿಗೆ ಪ್ರಾಯಶ್ಚಿತ್ತವು ಪ್ರಾರಂಭವಾಗುತ್ತದೆ ಎಂದು ಹೇಳಬಹುದು. ನಿಮಗೆ ತಿಳಿದ ರೀತಿಯಲ್ಲಿಯೇ ಬಾಯಿಗೆ ಬರುವಷ್ಟು ಮಂತ್ರದಿಂದಲೇ ಸಂಧ್ಯಾದಿಕರ್ಮಗಳನ್ನು ಮಾಡುತ್ತಿರಬೇಕು. ಭಗವಂತನು ನಿಮಗೆ ಸರಿಯಾದ ಮಂತ್ರಗಳನ್ನು ಹೇಳಿಕೊಡುವವರನ್ನು ಕಾಲಕ್ರಮದಲ್ಲಿ ಒದಗಿಸುತ್ತಾನೆ. ಭಗವದ್ಗೀತೆ, ಅಥವಾ ವಿಷ್ಣುಸಹಸ್ರನಾಮವನ್ನು ನಿಮಗೆ ತಿಳಿದ ರೀತಿಯಿಂದಲೇ ಓದಿರಿ. ವಾಕ್ಯಗಳಿಗೆ ಅರ್ಥವಾಗದಿದ್ದರೂ ಚಿಂತೆಯಿಲ್ಲ. ಎಂದಾದರೂ ಬಿಡುವು ಸಿಕ್ಕಿದರೆ ಯಾರಾದರೂ ಪುರಾಣವನ್ನು ಹೇಳುವದನ್ನು ಅಥವಾ ರಾಮಾಯಣವೇ ಮುಂತಾದ ಗ್ರಂಥಗಳನ್ನು ಪಾರಾಯಣ ಮಾಡುತ್ತಿರುವದನ್ನು ಕೇಳುತ್ತಿರಿ. ಅಷ್ಟರಿಂದಲೂ ನಿಮಗೆ ಉತ್ತಮ ಫಲವಾಗುತ್ತದೆ.

ಆದರೆ ಓದುವಾಗ ಅಥವಾ ಶ್ರವಣಮಾಡುವಾಗ ಇದು ಭಗವಂತನ ವಾಕ್ಯವು ಎಂಬ ನಂಬಿಕೆಯನ್ನು ಮಾತ್ರ ಬಲಪಡಿಸಿಕೊಂಡಿರಿ. ಆದರಿಂದ ಹೆಚ್ಚಿನ ಫಲವಾಗುತ್ತದೆ. ಒಮ್ಮೆ ಶ್ರೀ ಕೃಷ್ಣಚೈತನ್ಯರು ಎಲ್ಲಿಗೋ ಹೋಗುತ್ತಿರುವಲ್ಲಿ ಒಬ್ಬ ಪಂಡಿತನು ಗೀತಾಪಾರಾಯಣವನ್ನು ಮಾಡುತ್ತಿದ್ದನಂತೆ. ಪಂಡಿತನು ಶ್ರೀಕೃಷ್ಣ ಮೂರ್ತಿಯನ್ನು ಎದುರಿಗೆ ಇಟ್ಟುಕೊಂಡು ಪೂಜೆ ಮಾಡಿ ಗೀತೆಯನ್ನು ಓದುತ್ತಿದ್ದನು; ಆತನ ಕಣ್ಣುಗಳಿಂದ ಒಂದೇ ಸಮನೆ ಕಣ್ಣೀರು ತೊಟ್ಟಿಕ್ಕುತ್ತಿತ್ತು. ಇದನ್ನು ಕಂಡು ಚೈತನ್ಯ ಮಹಾಪ್ರಭು ಆತನ ಹತ್ತಿರವೇ ಕುಳಿತುಕೊಂಡುಬಿಟ್ಟರು. ಪಾರಾಯಣವು ಮುಗಿದ ಮೇಲೆ ಆತನನ್ನು ಕುರಿತು "ಸ್ವಾಮಿ, ಈ ದಿನದ ಗ್ರಂಥಭಾಗದಲ್ಲಿ ಯಾವ ಸ್ವಾರಸ್ಯವನ್ನು ಕಂಡು ತಾವು

ಆನಂದಬಾಷ್ಪವನ್ನು ಸುರಿಸುತ್ತಿದ್ದೀರಿ?'' ಎಂದು ಕೇಳಿದರು. ಪಂಡಿತರು ''ಪೂಜ್ಯರೆ, ನನಗೆ ಏನೂ ತಿಳಿಯದು; ಆದರೆ ಭಗವಂತನು ತಾನೇ ಗೀತೆಯನ್ನು ಹೇಳುತ್ತಿದ್ದಾನೆ, ಪಾರ್ಥನು ಕೇಳುತ್ತಿದ್ದಾನೆ-ಎಂಬುದಷ್ಟು ಮಾತ್ರ ನೆನಪಿನಲ್ಲಿರುತ್ತಿತ್ತು'' ಎಂದನು. ಆಗ ಶ್ರೀ ಕೃಷ್ಣ ಚೈತನ್ಯರು ''ಸ್ವಾಮಿ, ತಾವೇ ಗೀತೆಯನ್ನು ಸರಿಯಾಗಿ ತಿಳಿದುಕೊಂಡಿರುವಿರಿ. ಸಾಹಿತ್ಯ ವ್ಯಾಕರಣಾದಿಗಳಲ್ಲಿ ಪಂಡಿತರಾದ ವಿದ್ವಾಂಸರುಗಳಿಗೂ ಈ ಸಾರವು ತಿಳಿಯದು'' ಎಂದರಂತೆ!

ಸ್ನಾನವನ್ನು ಬಿಡಬಾರದು. ರೋಗಾದಿಕಾಲಗಳಲ್ಲಿ ತೀರ ಯತ್ನವಿಲ್ಲದೆ ಇರುವಾಗ ಕೈಕಾಲು ತೊಳೆದುಕೊಂಡು ಭಸ್ಮಾದಿಗಳನ್ನು ಧರಿಸಿ ಭಗವನ್ನಾಮವನ್ನು ಉಚ್ಚಾರ ಮಾಡಬೇಕು. ಸುಳ್ಳನ್ನು ಖಂಡಿತ ಆಡಬಾರದು. ಸ್ನಾನವನ್ನು ಬಿಡಲೇ ಬೇಕಾಗಿರುವ, ಸುಳ್ಳನ್ನು ಅವಶ್ಯವಾಗಿ ಆಡಲೇಬೇಕಾಗಿಬರುವಂಥ ಉದ್ಯೋಗವು ನಿಜವಾದ ಉದ್ಯೋಗವೇ ಅಲ್ಲ. ''ಧರ್ಮವನ್ನು ಕಾಯ್ದುಕೊಂಡೇ ನಾನು ಜೀವನಕ್ಕೆ ಬೇಕಾದ ಉದ್ಯೋಗವನ್ನು ಕೈಕೊಳ್ಳುವೆನು'' ಎಂಬ ದೃಢಸಂಕಲ್ಪವುಳ್ಳವರಿಗೆ ಭಗವಂತನು ಅಧರ್ಮದಿಂದ ಪಾರಾಗುವ ಸಂದರ್ಭಗಳನ್ನು ಅವಶ್ಯವಾಗಿ ಕಲ್ಪಿಸಿಕೊಡುತ್ತಾನೆ. ಇದನ್ನು ನೀವು ಧಾರಾಳವಾಗಿ ನಂಬಬಹುದು.

ಎಲ್ಲಕ್ಕೂ ಮಿಗಿಲಾಗಿ ಭಗವನ್ನಾಮವು ಸಕಲ ಆಪತ್ತುಗಳಿಗೂ ಪರಿಹಾರಕವಾದ ಸಂಜೀವಿನಿ ಎಂಬುದನ್ನು ಮರೆಯದಿರಬೇಕು. ಕರ್ಮಗಳಲ್ಲಿ ಆಗಬಹುದಾದ ಹೆಚ್ಚು ಕುಂದುಗಳು, ಮಂತ್ರದ ಉಚ್ಚಾರಣೆಯಲ್ಲಿ ಆಗಬಹುದಾದ ಸ್ವರವರ್ಣಾದಿ ಲೋಪಗಳು, ನಾವು ತಿಳಿಯದೆ ಅಥವಾ ಕೆಲವು ವೇಳೆ ತಿಳಿದು ಮನೋದೌರ್ಬಲ್ಯದಿಂದ ಮಾಡಿದ ಅಧರ್ಮ-ಇವೆಲ್ಲಕ್ಕೂ ಭಗವಂತನ ನಾಮದ ಉಚ್ಚಾರಣೆಯು ಉತ್ತಮ ಪ್ರಾಯಶ್ಚಿತ್ತವಾಗಿರುತ್ತದೆ. ಅಚ್ಯುತ, ಅನಂತ, ಗೋವಿಂದ-ಎಂಬ ನಾಮಗಳನ್ನು ಕರ್ಮದ ಕೊನೆಯಲ್ಲಿ ಜಪಿಸುವದಕ್ಕೆ ಇದೇ ಫಲ. ರಾಮ, ಕೃಷ್ಣ-ಮುಂತಾದ ಭಗವನ್ನಾಮಗಳು ಎಲ್ಲಾ ಪಾಪಗಳನ್ನೂ ಕಳೆದು ಸನ್ಮಾರ್ಗದಲ್ಲಿ ಕಾಲಿಡುವದಕ್ಕೆ ದಾರಿಯನ್ನು ತೋರಿಸುವವು. ಶ್ರೀರಾಮನು ಪತಿತಪಾವನನು; ಆತನ ನಾಮೋಚ್ಚಾರಣೆಯಿಂದ ಪರಿಹರಿಸಲಾಗದ ಪಾಪವೇ ಇಲ್ಲವೆನ್ನಬಹುದು. ಇದುವರೆಗೆ ಮಾಡಿದ್ದಕ್ಕೆ ಪಶ್ಚಾತ್ತಾಪವನ್ನು ಹೊಂದಿ ''ದೇವನೆ, ನಿನ್ನನ್ನು ಶರಣುಹೊಕ್ಕಿದ್ದೇನೆ; ಇನ್ನು ಮುಂದೆ ಇಂಥ ತಪ್ಪುಗಳು ಆಗದಂತೆ ಅನುಗ್ರಹಿಸು'' ಎಂದು ದೈನ್ಯತೆಯಿಂದ ಬೇಡಿಕೊಳ್ಳುವವರಿಗೆ ಪಾಪನಾಶ, ಸದ್ಬುದ್ಧಿ, ಇಹಪರಸೌಖ್ಯ, ಅಥವಾ ವೈರಾಗ್ಯ, ಭಕ್ತಿ, ಜ್ಞಾನ-ಇವೆಲ್ಲವೂ ಕ್ರಮಕ್ರಮವಾಗಿ ಕೈಸೇರುವವು. ಆದ್ದರಿಂದ ನಿಮಗೆ ಇನ್ನು ಯಾವ ಸಾಧನವು ಇಲ್ಲದಿದ್ದರೂ ಭಗವನ್ನಾಮವನ್ನು ಬಿಡದೆ ಜಪಿಸುತ್ತಾ ಬನ್ನಿ. ಅದರಿಂದಲೇ ಸಕಲ ಇಷ್ಟಾರ್ಥಗಳೂ ಫಲಿಸುವವು.

# 23. ಸತ್ಯವನ್ನೇ ನುಡಿಯಬೇಕು

## (ಸೆಪ್ಟೆಂಬರ್ 1947)

*ತಮ್ಮ ಕಾಗದ ತಲುಪಿರುತ್ತದೆ. "ಸುಳ್ಳನ್ನು ಖಂಡಿತ ಆಡಬಾರದು; ಸುಳ್ಳನ್ನು ಅವಶ್ಯವಾಗಿ ಆಡಲೇಬೇಕಾಗಿಬರುವಂಥ ಉದ್ಯೋಗವು ನಿಜವಾದ ಉದ್ಯೋಗವೇ ಅಲ್ಲ" ಎಂದು ನಾನು ಬರೆದದ್ದು ನಿಮಗೆ ಆಶ್ಚರ್ಯಕರವಾಗಿ ತೋರುತ್ತದೆ. "ವ್ಯಾಪಾರದ ಉದ್ಯೋಗದಲ್ಲಿ ಎಷ್ಟೋ ಸುಳ್ಳು ಹೇಳುವ ಪ್ರಸಂಗ ಬರುತ್ತದೆ. ಸುಳ್ಳು ಹೇಳದಿದ್ದರೆ ನಡೆಯುವ ಹಾಗೇ ಇರುವದಿಲ್ಲ. ಎಷ್ಟೋ ವೇಳೆ ಸುಳ್ಳು ಹೇಳದಿದ್ದರೆ ಮಾನಹಾನಿ, ಧನಹಾನಿ ಆಗುವ ಪ್ರಸಂಗವು ಬರುತ್ತದೆ. ಆದ್ದರಿಂದ ಸುಳ್ಳನ್ನು ಹೇಳದೆ ಮಾಡುವಂಥ ಉದ್ಯೋಗವು ಯಾವದೆಂಬುದನ್ನು ದಯವಿಟ್ಟು ತಿಳಿಸಬೇಕು" ಎಂತ ಬರೆದಿರುತ್ತೀರಿ.*

ಮನುಷ್ಯನ ಜೀವನದ ಉದ್ದೇಶವು ಏನೆಂಬುದನ್ನು ನಾವು ಮೊದಲು ನಿರ್ಣಯಿಸಿಕೊಳ್ಳಬೇಕು. ಇಲ್ಲದಿದ್ದರೆ ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕಂಡುಕೊಳ್ಳುವುದು ಆಗಲಾರದು. ಮನುಷ್ಯನೆಂದರೆ ಬರಿಯ ಹಣವನ್ನು ಕೂಡಿಹಾಕುವ ಪ್ರಾಣಿಯೆಂದು ತಿಳಿಯುವದು ತಪ್ಪು. ಮನುಷ್ಯನಿಗೆ ಇಹಪರಸುಖವು ಬೇಕು; ಆದರೆ ಹೇಗಾದರೂ ಮಾಡಿ ಕೆಲವು ನಾಣ್ಯಗಳನ್ನು ಸಂಪಾದಿಸಿ ಪೆಟ್ಟಿಗೆಯಲ್ಲಿ ಹಾಕಿಕೊಂಡ ಮಾತ್ರದಿಂದ ಅವನಿಗೆ ಸುಖವು ವಶವಾಗುವದೆಂದು ಹೇಳುವದಕ್ಕೆ ಬರುವದಿಲ್ಲ. ಈ ವಿಷಯದಲ್ಲಿ ನಾನು ವಿಸ್ತಾರವಾಗಿ ಮತ್ತೊಂದು ಪತ್ರದಲ್ಲಿ ಬರೆಯಬೇಕೆಂದಿರುವದರಿಂದ ಅದನ್ನು ಸದ್ಯಕ್ಕೆ ನಿಲ್ಲಿಸಿ "ವ್ಯಾಪಾರದಲ್ಲಿ ಸುಳ್ಳು ಹೇಳುವ ಪ್ರಸಂಗವು ಬರುತ್ತದೆ" ಎಂಬ ನಿಮ್ಮ ಅಭಿಪ್ರಾಯವನ್ನು ಸ್ವಲ್ಪ ಇಲ್ಲಿ ವಿಮರ್ಶಿಸುವೆನು.

ನನ್ನ ಮಿತ್ರರೊಬ್ಬರು ಅಮರಕೋಶದಲ್ಲಿರುವ 'ವ್ಯಾಪಾದೋ ದ್ರೋಹಚಿಂತನಮ್' ಎಂಬ ಭಾಗವನ್ನು ಮಾರ್ಪಡಿಸಿ 'ವ್ಯಾಪಾರೋ ದ್ರೋಹಚಿಂತನಮ್' ಎಂದು ಹೇಳಿಕೊಂಡು 'ವ್ಯಾಪಾರದಲ್ಲಿ ಮೋಸವನ್ನು ಮಾಡದೆ ಆಗುವದಿಲ್ಲ.' ಎಂದು ವಾದಿಸಿದ್ದರು. ಅವರ ಅಭಿಪ್ರಾಯವೂ ನಿಮ್ಮ ಅಭಿಪ್ರಾಯವೂ ಒಂದೇ ಜಾತಿಯವು; ಎರಡೂ ಅಯುಕ್ತವಾಗಿವೆ. ಏಕೆಂದರೆ ಸುಳ್ಳು ಹೇಳುವ, ಅಥವಾ ಮೋಸವನ್ನು ಮಾಡುವ ಪ್ರಸಂಗವು ವ್ಯಾಪಾರಿಗಳಿಗೆ ಮೀಸಲಾಗಿಲ್ಲ. ಯಾರು ಯಾರು ಸ್ವಾರ್ಥಬುದ್ಧಿಯಿಂದ ನಿಜವನ್ನು ಮರೆಮಾಚುವ ಬುದ್ಧಿಗೆ ಒಳಗಾಗುವರೋ ಅವರೆಲ್ಲ, ಯಾವ ಉದ್ಯೋಗದಲ್ಲಿಯೇ ಇರಲಿ, ಸುಳ್ಳು ಹೇಳಬೇಕಾಗುತ್ತದೆ, ಮೋಸವನ್ನು ಮಾಡುವದಕ್ಕೂ ಯತ್ನಿಸಬೇಕಾಗುತ್ತದೆ.

ಸುಳ್ಳು ಹೇಳದಿದ್ದರೆ ಮಾನಹಾನಿ, ಧನಹಾನಿ ಆಗುವ ಪ್ರಸಂಗ ಬರುತ್ತದೆ ಎಂದು ತಾವು ಬರೆದಿರುವುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಸುಳ್ಳು ಹೇಳಿ ಒಂದು ಸಲ ಜಯಿಸಿಕೊಂಡರೂ 'ಸುಳ್ಳು ಹೇಳುವವನೀತನು' ಎಂದು ಒಂದು ಸಲ ಜನರಿಗೆ ಗೊತ್ತಾದರೆ ಆಯಿತು; ಅಂಥವನಿಗೆ ಮಾನಹಾನಿಯೂ ಆಗುತ್ತದೆ. ಅವನನ್ನು ಇನ್ನು ಮುಂದೆ ಯಾರೂ ನಂಬದೆ ಇರುವದರಿಂದ ವ್ಯವಹಾರದಲ್ಲಿ ಬಗೆಬಗೆಯ ಹಾನಿಗಳೂ ಆಗುತ್ತವೆ. ಇದು ಲೋಕದಲ್ಲಿ ಎಲ್ಲರಿಗೂ ಸುಪ್ರಸಿದ್ಧವಾದ ವಿಷಯವು. ಆದ್ದರಿಂದಲೇ ಶ್ರುತಿಯಲ್ಲಿ 'ಸತ್ಯಮೇವ ಜಯತೇ ನಾನೃತಮ್' (ಸತ್ಯವು ಗೆಲ್ಲುವದು, ಸಟೆ ಸೋತುಹೋಗುವದು) ಎಂದು ಸಾರಿರುತ್ತದೆ. ಹೀಗಿರುವಲ್ಲಿ ಸತ್ಯವನ್ನು ಹೇಳಿದರೆ ಅಥವಾ ಸುಳ್ಳನ್ನು ಹೇಳದಿದ್ದರೆ ಅನರ್ಥವಾದೀತೆಂಬ ಅಭಿಪ್ರಾಯವು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ನೀವೇ ಯೋಚಿಸಿರಿ.

"ಸುಳ್ಳನ್ನು ಹೇಳದೆ ಮಾಡಬಹುದಾದ ಉದ್ಯೋಗವು ಯಾವುದು?" ಎಂಬ ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳುವ ಮುಂಚೆ ಒಂದು ವಿಷಯವನ್ನು ನಾನು ನಿಮಗೆ ತಿಳಿಸಬೇಕಾಗಿದೆ. ಯಾವ ಉದ್ಯೋಗದಲ್ಲಿಯೇ ಇರಲಿ, ಸ್ವಾರ್ಥಪರನಾದವನು ತನಗೆ ಸದ್ಯಕ್ಕೆ ಆಗುವ ಲಾಭನಷ್ಟಗಳನ್ನು ಮನದಂದರೆ ಕೆಲವು ವೇಳೆ ಸುಳ್ಳನ್ನು ಹೇಳಬಹುದೆಂದು ನಿಶ್ಚಯಿಸುವನು. ಆದರೆ ಯಾವನು ದೂರದೃಷ್ಟಿಯುಳ್ಳವನೋ, ಯಾವನು ಧರ್ಮದೃಷ್ಟಿಯುಳ್ಳವನೋ, ಯಾವನು ಧರ್ಮದಿಂದಲೇ ಸುಖವನ್ನು ಸಂಪಾದಿಸಬೇಕೆಂಬ ಸಂಕಲ್ಪವನ್ನು ಮಾಡಿಕೊಂಡಿರುವನೋ, ಅವನು ಯಾವ ಉದ್ಯೋಗದಲ್ಲಿದ್ದರೂ ಸದ್ಯದ ನಷ್ಟಕ್ಕೆ ಅಂಜದೆ ನಿಜವನ್ನೇ ನುಡಿದುಬಿಡುವನು. ಇದು ಎಲ್ಲಾ ಉದ್ಯೋಗಗಳಿಗೂ ಸಮಾನವಾಗಿರುತ್ತದೆಯಾದರೂ ಪ್ರಕೃತವಾಗಿರುವ ವ್ಯಾಪಾರದ ಉದ್ಯೋಗಕ್ಕೇ ಇದನ್ನು ಅನ್ವಯಿಸಿ ನೋಡೋಣ. ಸುಳ್ಳನ್ನು ಹೇಳದೆ ವ್ಯಾಪಾರವನ್ನು ಮಾಡುವದಕ್ಕೆ ಬರುವದಿಲ್ಲವೆ? ನಿಜವನ್ನು ಆಡಿದರೆ ವ್ಯಾಪಾರವು ಕೆಡುವದೆ? ಇದನ್ನು ಕುರಿತು ನನ್ನ ಅನುಭವದಲ್ಲಿ ಕಂಡುಬಂದಿರುವ ಎರಡು ದೃಷ್ಟಾಂತಗಳನ್ನು ನಿಮಗೆ ಇಲ್ಲಿ ತಿಳಿಸುವೆನು.

ಬೆಂಗಳೂರಿನಲ್ಲಿ ಬೇರೆ ಬೇರೆಯ ಕಡೆಗಳಲ್ಲಿ ಇಬ್ಬರು ಅಂಗಡಿಗಳನ್ನಿಟ್ಟು ಕೊಂಡಿದ್ದರು. ಇವರಲ್ಲಿ ಒಬ್ಬನು ಮಾರುವ ಪದಾರ್ಥಗಳನ್ನು ಹೊಗಳಿಹೊಗಳಿ ಕೊಡುತ್ತಿದ್ದನು. ಇನ್ನೊಬ್ಬನು ಪದಾರ್ಥದ ಸ್ವಭಾವವನ್ನು ತನಗೆ ತಿಳಿದ ಮಟ್ಟಿಗೆ ಹೇಳಿ ತನ್ನಲ್ಲಿರುವ ಪದಾರ್ಥಗಳು ಬೇರೆ ಬೇರೆ ಇದ್ದರೆ ಅವನ್ನೂ ಅವುಗಳ ಬೆಲೆಯನ್ನೂ ಸ್ಪಷ್ಟವಾಗಿ ತಿಳಿಸಿಬಿಟ್ಟು, ವ್ಯಾಪಾರವನ್ನು ಮಾಡುತ್ತಿದ್ದನು. ಈ ಇಬ್ಬರೂ ಹೊಸದಾಗಿ ಅಂಗಡಿಯನ್ನಿಟ್ಟವರು. ಆದ್ದರಿಂದ ಸುತ್ತುಮುತ್ತಲಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಎರಡು

ಕಡೆಗೂ ಬರುತ್ತಿದ್ದರು. ಆದರೆ ಪದಾರ್ಥಗಳನ್ನು ಹೊಗಳುತ್ತಿದ್ದವನ ಅಂಗಡಿಯಲ್ಲಿ ಕೆಲವು ತಿಂಗಳುಗಳವರೆಗೆ ಕೊಳ್ಳುವ ಗಿರಾಕಿಗಳು ಸ್ವಲ್ಪ ಹೆಚ್ಚು ಮಂದಿಯೇ ಬರುತ್ತಿದ್ದರು. ಪದಾರ್ಥಗಳ ಗುಣದೋಷಗಳನ್ನು ಇದ್ದಂತೆ ತಿಳಿಸುತ್ತಿದ್ದವನ ಅಂಗಡಿಗೆ ಅಷ್ಟು ಹೆಚ್ಚು ಜನರು ಬರುತ್ತಿರಲಿಲ್ಲ; ಬಂದವರೂ ಮಿತಭಾಷಿಯಾಗಿದ್ದ ಅವನಲ್ಲಿ ಆಕರ್ಷಣೆ ಕಡಿಮೆಯಾಗಿದ್ದದ್ದರಿಂದಲೋ ಏನೋ, ಬರುಬರುತ್ತಾ ಕಡಿಮೆಯಾದರು. ಆದರೆ ಕಾಲಕ್ರಮದಲ್ಲಿ ಇವರಿಬ್ಬರ ಗಿರಾಕಿಗಳ ಸಂಖ್ಯೆಯು ವ್ಯತ್ಯಸ್ತವಾಯಿತು. ಸುಮ್ಮನೆ ಹೊಗಳುತ್ತಿದ್ದವನಿಂದ ತಮಗೆ ಆದ ನಷ್ಟವನ್ನು ಗಿರಾಕಿಗಳು ಒಬ್ಬರಿಗೊಬ್ಬರು ಹೇಳಿ ಕೊಳ್ಳುತ್ತಾ ಹೋದದ್ದಲ್ಲದೆ 'ನಿಮಗೆ ಮೋಸವಿಲ್ಲದೆ ಸ್ವಲ್ಪ ಕಾಲದಲ್ಲಿ ವ್ಯಾಪಾರವಾಗಬೇಕಾದರೆ ಆ ಇನ್ನೊಂದು ಅಂಗಡಿಗೆ ಹೋಗಿರಿ' ಎಂದು ಮಿಕ್ಕವರನ್ನೂ ಪ್ರೋತ್ಸಾಹಿಸುತ್ತಾ ಬಂದರು! ನಾನು ಕಂಡ ಎರಡನೆಯ ದೃಷ್ಟಾಂತವು ಯಾವದೆಂದರೆ, ಅದೇ ಊರಲ್ಲಿದ್ದ ಎರಡು ಮುದ್ರಣಾಲಯಗಳು. ಇವು ಒಂದರ ಪಕ್ಕದಲ್ಲಿ ಒಂದು ಇದ್ದವು. ಒಂದು ಮುದ್ರಣದ ಸೌಕರ್ಯಗಳ ಸಂಪತ್ತಿನಿಂದ ಕೂಡಿತ್ತು; ಇನ್ನೊಂದು ಒಂದು ಸಣ್ಣ ಯಂತ್ರವನ್ನು ಇಟ್ಟುಕೊಂಡಿತ್ತು. ಮೊದಲನೆಯ ಮುದ್ರಣಾಲಯಕ್ಕೆ ಸರಕಾರದ ಸಹಾಯವೂ ಇದ್ದಿತಾದರೂ ಅದು ಗಿರಾಕಿಗಳಿಗೆ ತೃಪ್ತಿಯನ್ನುಂಟುಮಾಡಲಾರದೆ ಸ್ಥಲಾಂತರಕ್ಕೆ ಹೊರಡಬೇಕಾಗಿ ಬಂತು. ಇದಕ್ಕೆ ಕಾರಣವೇನೆಂದರೆ, ಆ ಕಡೆಯಲ್ಲಿದ್ದ ಗಿರಾಕಿಗಳಾದ ವರ್ತಕರು ಸ್ವಲ್ಪವೂ ಕಾಲ ವಿರಾಮವಿಲ್ಲದವರಾದ್ದರಿಂದ ಅಚ್ಚಿನ ಮನೆಗೆ ಬಂದು ಬಂದು "ಇಂದು, ನಾಳೆ" ಎಂಬ ಮಂತ್ರದ ಜಪವನ್ನು ಕೇಳುವದಕ್ಕೆ ಒಪ್ಪಲಿಲ್ಲ. ಸಣ್ಣ ಮುದ್ರಣಾಲಯದ ಯಜಮಾನನು ಸ್ವಲ್ಪ ಹೆಚ್ಚಿಗೆ ಹಣವನ್ನು ಮುದ್ರಣಕ್ಕೆ ಕೇಳುತ್ತಿದ್ದರೂ ತಾನು ಒಪ್ಪಿ ಹೇಳಿದ್ದ ದಿನಕ್ಕೆ ಸರಿಯಾಗಿ ಕೆಲಸವನ್ನು ಮಾಡಿಕೊಡುತ್ತಿದ್ದುದರಿಂದ ಅವನನ್ನೇ ಅವರು ಆರಿಸಿಕೊಳ್ಳುತ್ತಿದ್ದರು!

ಸತ್ಯಕ್ಕೆ ಲೌಕಿಕದೃಷ್ಟಿಯಿಂದಲೇ ಇಂಥ ಬೆಲೆಯಿರುತ್ತದೆ. ಇನ್ನು ಶಾಸ್ತ್ರ ದೃಷ್ಟಿಯಿಂದ ನೋಡಿದರೆ ಅದೊಂದು ಅನರ್ಘವಾದ ಸಾಧನವಾಗಿರುತ್ತದೆ. ಸತ್ಯವನ್ನು ಹೇಳುವದು ಸಾವಿರ ಅಶ್ವಮೇಧಕ್ಕಿಂತಲೂ ಹೆಚ್ಚಿನದೆಂದು ಮಹಾಭಾರತದಲ್ಲಿ ಮತ್ತೆ ಮತ್ತೆ ಹೇಳಿರುತ್ತದೆ. ಸತ್ಯಧರ್ಮಗಳನ್ನು ಉದ್ಧಾರಮಾಡುವದಕ್ಕೆ ಶ್ರೀ ರಾಮಾವತಾರ ವಾಯಿತೆಂಬ ರಾಮಾಯಣವಾಕ್ಯವನ್ನು ನೀವು ಕೇಳಿರಬಹುದು. ಇದನ್ನೆಲ್ಲ ಮನನ ಮಾಡಿದ ಮೇಲೆ ಸತ್ಯಾನೃತಗಳ ವಿಷಯಕ್ಕೆ ನಿಮಗೆ ಯಾವ ಅಭಿಪ್ರಾಯವುಂಟಾಗುವ ದೆಂಬ ಬಗ್ಗೆ ಮತ್ತೊಮ್ಮೆ ಬರೆಯಬೇಕೆಂದು ಪ್ರಾರ್ಥಿಸುತ್ತೇನೆ.

# 24. ಸತ್ಸಂಗದ ರಹಸ್ಯ

## (ನವೆಂಬರ್ 1947)

*ಮಹಾಶಯ, "ಸತ್ಸಂಗದ ರಹಸ್ಯವೇನು? ಅದರ ಪ್ರಯೋಜನವೇನು? 'ಸಂತರು', 'ಸಾಧುಗಳು' ಎಂದು ಹೇಳಿಕೊಳ್ಳುತ್ತಾ ಎಷ್ಟೋ ಧೂರ್ತರು ಅಲ್ಲಲ್ಲಿ ತಿರುಗಾಡುತ್ತಿರುವ ಈ ಕಾಲದಲ್ಲಿ ನಿಜವಾದ ಸತ್ಪುರುಷರು ಯಾರೆಂದು ಹೇಗೆ ತಿಳಿಯಬೇಕು?"–ಎಂಬೀ ಪ್ರಶ್ನೆಗಳನ್ನು ನಿಮ್ಮ ಹಿಂದಿನ ಪತ್ರದಲ್ಲಿ ಕೇಳಿದ್ದಿರಿ. ಅದಕ್ಕೆ ಈಗ ತಿಳಿದಮಟ್ಟಿಗೆ ಉತ್ತರವನ್ನು ಬರೆಯುವೆನು. ಈಗ ತಾವು ಬರೆದಿರುವ ಪತ್ರಕ್ಕೂ ಕೆಲವಂಶಗಳಲ್ಲಿ ಈ ನನ್ನ ಪತ್ರದಲ್ಲಿ ಉತ್ತರವು ದೊರಕುವದೆಂದು ನಂಬಿರುತ್ತೇನೆ.*

ಹೆಸರು, ಲಾಭ, ಪೂಜೆ–ಇವುಗಳಲ್ಲಿ ಯಾರು ಆಶೆಯನ್ನು ತೋರಿಸುವರೋ ಅವರು ಸತ್ಪುರುಷರಲ್ಲವೆಂದು ನಿಶ್ಚಯಿಸಬೇಕು. ಸಾಧುಗಳಿಗೆ ಕಫನಿ, ಗಡ್ಡ, ನಾಮಧಾರಣ, ಶಿಷ್ಯರ ಗುಂಪಿನ ನಮಸ್ಕಾರ, ಹಲವು ಜನರ ಔತಣ–ಇವು ಎಂದಿಗೂ ಗುರುತುಗಳಲ್ಲ. ಯಾರು ತಮ್ಮ ಮಹಿಮೆಯನ್ನು ತಾವೇ ಹೇಳಿಕೊಳ್ಳುತ್ತಿರುವರೋ, ಅಥವಾ ತಮ್ಮ ಸಮ್ಮುಖದಲ್ಲಿ ಮತ್ತೊಬ್ಬರಿಂದ ಹೇಳಿಸಿಕೊಳ್ಳುತ್ತಿರುವರೋ, ಅವರು ಅಹಂಕಾರಿಗಳು. ಅವರು ಎಂದಿಗೂ ಸಂತರಲ್ಲ. ಸತ್ಪುರುಷರನ್ನು ಗುರುತಿಸುವದಕ್ಕೆ ಈ ವ್ಯತಿರೇಕಲಕ್ಷಣವನ್ನು ನೆನಪಿನಲ್ಲಿಡುವದು ಒಳ್ಳೆಯದು. ನಟನೆಯ ಸಾಧುಗಳನ್ನು ಕಂಡು ಹಿಡಿಯುವದಕ್ಕೆ ಅಹಂಕಾರವೆಂಬ ಹೆಗ್ಗುರುತನ್ನು ಮೊದಲು ನೋಡಬೇಕು.

ಸಂತರು, ಸತ್ಪುರುಷರು–ಎಂದರೆ ಸದ್ರೂಪನಾದ ಪರಮಾತ್ಮನ ನಿಷ್ಠೆಯಲ್ಲಿ ಯಾವಾಗಲೂ ಸಹಜವಾಗಿರುವವರು. ಅವರಲ್ಲಿ ಅಹಂಕಾರವೇ ಮುಂತಾದ ದುಷ್ಟ ಭಾವನೆಗಳು ಇರುವದಕ್ಕೆ ಒಂದಿಷ್ಟೂ ಎಡೆಯಿರುವದಿಲ್ಲ. ಅವರ ಸಂಗದಲ್ಲಿದ್ದವರಿಗೆ ದುರ್ಭಾವನೆಗಳ ನಾಶ, ಶುಭಭಾವನೆಗಳ ಉತ್ಪತ್ತಿ, ವಿಷಯಗಳಲ್ಲಿ ವಿರಕ್ತಿ, ಭಗವಂತನಲ್ಲಿ ಭಕ್ತಿ ಇವೆಲ್ಲವೂ ಅವಶ್ಯವಾಗಿ ದೊರಕುವವು. ಬೆಂಕಿಯ ಹತ್ತಿರವಿರುವವರಿಗೆ ಚಳಿಯು ಹೋಗುವದು ಹೇಗೋ ಹಾಗೆ ಸಂತರ ಹತ್ತಿರವಿರುವವರಿಗೆ ಸಾಂಸಾರಿಕ ತಾಪಗಳು ಹೇಳಹೆಸರಿಲ್ಲದಂತೆ ಹೋಗಿಬಿಡುವವು.

ಸತ್ಸಂಗದಿಂದ ಸಾಂಸಾರಿಕ ಕಾಮಗಳು ಪರಿಪೂರ್ಣವಾಗಬೇಕೆಂಬ ಬಯಕೆಯನ್ನು ಎಂದಿಗೂ ಇಟ್ಟುಕೊಳ್ಳಬಾರದು. ನನ್ನ ರೋಗವು ವಾಸಿಯಾಗಬೇಕು, ನನಗೆ ಹಣವು ದೊರಕಬೇಕು, ಗಂಡು ಮಗುವಾಗಬೇಕು. ಪರೀಕ್ಷೆಯಲ್ಲಿ ತೇರ್ಗಡೆ ಯಾಗಬೇಕು, ಅಧಿಕಾರವು ಅಥವಾ ಕೀರ್ತಿಯು ವೃದ್ಧಿಯಾಗಬೇಕು, ಒಳ್ಳೆಯ ನೆಂಟರು ಜೊತೆಯಾಗಬೇಕು–ಇಂಥ ಕಾಮನೆಗಳನ್ನು ಎಂದಿಗೂ ಇಟ್ಟುಕೊಳ್ಳಬಾರದು. ಇಂಥ

ಯಾವದಾದರೊಂದು ಕಾಮವು ಸಫಲವಾದರೆ 'ಈ ಮಹಾತ್ಮರ ಅನುಗ್ರಹದಿಂದ ನನಗೆ ಇದು ದೊರಕಿತು' ಎಂದು ಭಾವಿಸಲೂ ಬಾರದು. ಸಂತರ ಅನುಗ್ರಹದಿಂದ ಇಂಥ ಲೌಕಿಕ ಕಾಮಗಳು ಪ್ರಾಪ್ತವಾಗಲಾರವೆಂದು ನನ್ನ ಅಭಿಪ್ರಾಯವಲ್ಲ. ಆದರೆ ಮಹಾತ್ಮರ ಕೃಪೆಯನ್ನು ಇಂಥ ಕ್ಷುಲ್ಲಕ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವದು ಚಿಂತಾಮಣಿಯನ್ನು ಮನೆಯ ನಾಯಿಯ ಕೊರಳಿಗೆ ಕಟ್ಟುವವಕ್ಕೆ ಉಪಯೋಗಿಸಿದಂತಾಗುವದು.

ನಿಜವಾದ ಸತ್ಸಂಗದಿಂದ ನಿಮ್ಮ ಆಚಾರವು ಪವಿತ್ರವಾಗಬೇಕು; ನಿಮ್ಮ ಚಿತ್ತವು ಸಹಜವಾಗಿ ವೈರಾಗ್ಯವನ್ನು ಪಡೆದುಕೊಳ್ಳಬೇಕು; ನಿಮಗೆ ಸ್ವಾಭಾವಿಕವಾಗಿಯೇ ಭಗವದ್ಭಕ್ತಿಯು ಉಂಟಾಗಬೇಕು. ಹೀಗೆ ಆಗದಿದ್ದರೆ ಒಂದೋ ಅವರು ನಿಜವಾದ ಸಾಧುಗಳಲ್ಲ, ಇಲ್ಲವೆ ನೀವು ನಿಜವಾದ ಸತ್ಸಂಗವನ್ನು ಮಾಡಲಿಲ್ಲ—ಎಂದು ನಿಶ್ಚಯಿಸಿಕೊಳ್ಳಬೇಕು.

ಸತ್ಸಂಗವೆಂದರೆ ಮಹಾತ್ಮರ ಶರೀರದ ಸೇವೆ, ಅವರಿಗೆ ನಮಸ್ಕಾರ ಮಾಡುವದು, ಅವರು ಆಡುವ ಮಾತುಗಳ ಅನುಕರಣೆ, ಮತ್ತು ಅವರನ್ನು ತಮ್ಮ 'ಗುರುಗಳು' ಎಂದು ಅಲ್ಲಲ್ಲಿ ಪ್ರಚಾರಮಾಡುವದು—ಇವೇ ಎಂದು ಕೆಲವರ ಭಾವನೆಯಿರುತ್ತದೆ. ಆದರೆ ನಿಜವಾದ ಸತ್ಸಂಗವೆಂದರೆ ಭಗವದ್ಭಕ್ತರ ಆಚರಣೆಯನ್ನು ಇಟ್ಟುಕೊಳ್ಳುವದು, ಅವರ ಉಪದೇಶದಂತೆ ನಡೆಯುವದಕ್ಕೆ ಪ್ರಯತ್ನಿಸುವದು. "ಇಂಥ ಸಂಗವನ್ನು ನಾನು ಮನಃಪೂರ್ವಕವಾಗಿ ಮಾಡಿರುವೆನೆ?" ಎಂದು ನಮ್ಮನ್ನು ನಾವು ಆಗಿಂದಾಗ್ಗೆ ಕೇಳಿಕೊಳ್ಳುತ್ತಿರಬೇಕು. ನಿಜವಾಗಿ ಸಂಗವನ್ನು ಮಾಡಿದರೂ ಫಲವಾಗದಿದ್ದರೆ ಅಂಥ ಸಾಧುಗಳ ಸಾಧುತ್ವದಲ್ಲಿ ಏನೋ ಕೊರತೆಯಿದೆ ಎಂದು ಭಾವಿಸಬಹುದು.

ಸ್ಥಿತಪ್ರಜ್ಞ, ಭಗವದ್ಭಕ್ತ, ಜ್ಞಾನಿ—ಎಂದು ಮುಂತಾದ ಹೆಸರುಗಳಿಂದ ಸತ್ಪುರುಷರನ್ನು ಅಧ್ಯಾತ್ಮಶಾಸ್ತ್ರದಲ್ಲಿ ಬಗೆಬಗೆಯಾಗಿ ವರ್ಣಿಸಿರುತ್ತದೆ. ಆ ಲಕ್ಷಣಗಳನ್ನು ನಾವು ಓದಿ ಅರ್ಥಗಳನ್ನು ಮನದಟ್ಟು ಮಾಡಿಕೊಳ್ಳುತ್ತಿರಬೇಕು. ಕೈಯಲ್ಲಾದ ಮಟ್ಟಿಗೂ ಆ ಲಕ್ಷಣಗಳನ್ನು ದೊರಕಿಸಿಕೊಳ್ಳುವ ಸಾಧನಗಳನ್ನು ಮಾಡುತ್ತಿರಬೇಕು. ಹಾಗಾದರೆ ನಮಗೆ ನಿಜವಾದ ಸಂತರ ದರ್ಶನವಾಗುವದು. ಸಂತರ ಲಕ್ಷಣಗಳು ವಶವಾಗುವವು. ಸಂತರ ಪ್ರಾಣವಾಗಿರುವ ಭಗವಂತನ ಅನುಗ್ರಹವೂ ಆಗುವದು.

ಯಾವನೊಬ್ಬನೂ ತಾನು ಸಂತನು, ಸಾಧು—ಎಂದು ಜನರಿಂದ ಅನ್ನಿಸಿಕೊಳ್ಳಬೇಕೆಂದು ಹವಣಿಸಬಾರದು. ಸಾಧಕನಿಗೆ ಇದು ಸರ್ವಥಾ ಅಯುಕ್ತವಾದದ್ದು. ಜನಗಳು ತನ್ನನ್ನು ಸಾಧುವೆನ್ನಲಿ, ಅಸಾಧುವೆನ್ನಲಿ, ಯಾವವನ್ನೂ ಕಿವಿಗೆ ಹಾಕಿಕೊಳ್ಳದೆ ಸತ್ಪುರುಷರ ಹೆಜ್ಜೆಯಲ್ಲಿ ನಡೆಯುವದಕ್ಕೆ ಪ್ರಯತ್ನಿಸುತ್ತಿರಬೇಕು. ಸಾಧಕನಾದವನು ತನ್ನಲ್ಲಿರುವ

ಯಾವದಾದರೊಂದು ತಪ್ಪು ಹೊರಬಿದ್ದರೆ ಅದಕ್ಕಾಗಿ ಚಿಂತಿಸಬಾರದು; ತಪ್ಪು ನಿಜವೇ ಆದರೆ ಅದನ್ನು ತಿದ್ದಿಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡಬೇಕು. ತನ್ನಲ್ಲಿ ಯಾವದಾದರೂ ಸದ್ಗುಣಗಳಿದ್ದರೆ ಅವುಗಳನ್ನು ಜನರು ಕೊಂಡಾಡಿ ತನ್ನನ್ನು ಸಾಧಕನ ಹಾದಿಯಿಂದ ಬೇರೆಯ ಕಡೆಗೆ ಒಯ್ಯದಂತೆ ತನ್ನ ಗುಣಭಾಗವನ್ನು ಆದಷ್ಟು ಮುಚ್ಚಿಡುವದಕ್ಕೆ ಪ್ರಯತ್ನಿಸಬೇಕು. ನಾನು ಸಾಧು ಎಂಬ ಅಭಿಮಾನವನ್ನು ದೂರಮಾಡಿ ನಾನು ಸಾಧುಗಳ ಕಿಂಕರನು ಎಂಬ ಭಾವವನ್ನು ಹೃದಯದಲ್ಲಿ ನೆಲಸುವಂತೆ ಮಾಡಿಕೊಳ್ಳಬೇಕು.

ಯಾರೊಬ್ಬರನ್ನೂ ಅನಾಚಾರಯುತರೆಂದು, ಅಜ್ಞಾನಿಗಳೆಂದು, ಅಥವಾ ಅಸದ್ವರ್ತನೆಯವರೆಂದು ಹಳಿಯಬಾರದು. ಸಜ್ಜನರ ಸೇವೆಯಿಂದ, ಅವರ ಸಾಧೂಕ್ತಿಗಳ ಶ್ರವಣದಿಂದ, ಮತ್ತು ಅವರ ಚರಣಧೂಳಿಯ ಸ್ಪರ್ಶದಿಂದ ಹೇಗೆ ಚಿತ್ತವು ನಿರ್ಮಲವಾಗುತ್ತಾ ಹೋಗುವದೋ ಹಾಗೆಯೇ ದುರ್ಜನರ ಸಹವಾಸದಿಂದ, ಅವರ ದುರುಕ್ತಿಗಳ ಶ್ರವಣದಿಂದ, ಅಥವಾ ಇಂತವರು ದುರ್ಜನರೆಂದು ಆರೋಪಿಸಿ ಬಿರುನುಡಿಗಳನ್ನು ಆಡುವದರಿಂದ ಮನಸ್ಸು ಅಷ್ಟು ಮಲಿನವಾಗುತ್ತಾ ಹೋಗುತ್ತದೆ. ಆದ್ದರಿಂದ ಆದಷ್ಟು ಮಟ್ಟಿಗೂ ಸತ್ಪುರುಷರ ಚರಿತ್ರೆಯನ್ನು ಓದುವದು, ಸಂತರನ್ನು ಹುಡುಕುತ್ತಿರುವದು, ಸಂತರ ಉಕ್ತಿಗಳನ್ನು ಶ್ರವಣಮಾಡುವದು, ಮತ್ತೊಬ್ಬರಿಗೆ ಅವನ್ನು ಹೇಳುವದು, ಸತ್ಪುರುಷರಲ್ಲಿ ಭಗವದ್ಭಾವವನ್ನು ಬೆಳೆಯಿಸಿಕೊಳ್ಳುತ್ತಿರುವದು–ಈ ವಿಧವಾದ ಆಚರಣೆಯಲ್ಲಿಯೇ ಕಾಲವನ್ನು ಕಳೆಯುವ ಪ್ರಯತ್ನವನ್ನು ಮಾಡುತ್ತಿರಬೇಕು. ಇಂಥ ಸಾಧಕರಿಗೆ ಮಾತ್ರ ಸತ್ಸಂಗದ ರಹಸ್ಯವು ತಿಳಿಯುವದು.

ಶಾಸ್ತ್ರವಿಚಾರ, ಸಾಧುಸೇವೆ. ಇವೆರಡೂ ಪರಮಾರ್ಥಸಾಧನೆಗೆ ಉತ್ತಮವಾದ ಉಪಾಯಗಳೇ ಸರಿ. ಆದರೆ ಯಾವದು ಶಾಸ್ತ್ರ, ಯಾರು ಸಾಧುಗಳು–ಎಂಬುದನ್ನು ಮೊದಲು ನಿಶ್ಚಯಿಸುವದು ಅವಶ್ಯವು. ಯೋಗವಾಸಿಷ್ಠದಲ್ಲಿ ಹೇಳಿರುವಂತೆ ಅನಂತವಾದ ಸಮತೆಯ ಆನಂದವು ಯಾರಿಂದ ದೊರೆಯುವದೋ ಅವರೇ ಸಾಧುಗಳು, ಅವೇ ಸಚ್ಛಾಸ್ತ್ರಗಳು.

## 25. ಲೋಕದ ದುಃಖನಿವಾರಣೆಗೆ ಈಗೇನು ಮಾಡಬೇಕು?

**(ಡಿಸೆಂಬರ್ 1947)**

**ಮಹಾಶಯ,**

*"ಈಗ ಎಲ್ಲೆಲ್ಲಿಯೂ ಜನರ ಮನಸ್ಸು ಗಲಿಬಿಲಿಯಾಗಿರುತ್ತದೆ. ಅವರಿಗೆ ಉಣ್ಣುವವಕ್ಕೆ ಅನ್ನವಿಲ್ಲ, ಉಡುವವಕ್ಕೆ ಬಟ್ಟೆಯಿಲ್ಲ; ಆಸ್ತಿಗಳಿಗೂ ದೇಹಕ್ಕೂ ರಕ್ಷಣೆಯಿಲ್ಲ, ಮಕ್ಕಳಿಗ*

*ವಿದ್ಯಾಭ್ಯಾಸವಿಲ್ಲ, ಪ್ರಯಾಣಕ್ಕೆ ಸುರಕ್ಷಿತವಾದ ಸೌಕರ್ಯವಿಲ್ಲ. ಜನರು ಸಾಮಾಜಿಕ, ರಾಜಕೀಯ–ಮುಂತಾದ ಕಾರಣಗಳಿಂದ ತಂಡ ತಂಡವಾಗಿ ಒಡೆದುಕೊಂಡಿರುತ್ತಾರೆ. ಸುತ್ತಮುತ್ತಲಿನ ದೇಶಗಳಿಂದ ಮನಸ್ಸಿನ ನೆಮ್ಮದಿಗೆ ಭಂಗವನ್ನು ತರುವ ಸುದ್ದಿಗಳು ಮೂಟೆ ಮೂಟೆಯಾಗಿ ಪ್ರತಿ ದಿನವೂ ಬರುತ್ತಿವೆ– ಎಲ್ಲಿ ನೋಡಿದರೂ ಕೊಲೆ, ಲೂಟಿ, ಕಳವು, ಹೆಣ್ಣು ಮಕ್ಕಳ ಮಾನ ಭಂಗ, ಕ್ಷಾಮ, ಡಾಮರ–ಇಂಥ ಮೃತ್ಯುವಿನ ಘೋರದಾಡೆಗಳೇ ಕಾಣುತ್ತಿರುವವು. ಈ ಸಂದರ್ಭದಲ್ಲಿ ನಮ್ಮಂಥವರು ಜನರ ದುಃಖವನ್ನು ನಿವಾರಣೆ ಮಾಡುವದಕ್ಕೆ ಯಾವ ಸೇವೆಯನ್ನು ಮಾಡಬಹುದು?" ಎಂದು ಪ್ರಶ್ನೆ ಹಾಕಿ ತಾವು ಬರೆದಿರುವ ಪತ್ರವು ತಲುಪಿರುತ್ತದೆ. ಇಂಥ ದೊಡ್ಡ ದೊಡ್ಡ ವಿಷಯಗಳನ್ನು ಚರ್ಚಿಸುವದಕ್ಕೆ ನನ್ನಲ್ಲಿ ಯೋಗ್ಯತೆ ಇದೆಯೆಂದು ನಾನು ಭಾವಿಸಲಾರೆ. ಆದರೂ ತಮ್ಮ ಪತ್ರಕ್ಕೆ ಉತ್ತರವನ್ನು ಬರೆಯುವ ಕರ್ತವ್ಯವನ್ನು ನೆರವೇರಿಸುವದಕ್ಕಾಗಿ ನನಗೆ ತಿಳಿದದ್ದನ್ನು ನಿಮಗೂ ತಿಳಿಯಪಡಿಸುವೆನು.*

ನೀವು ಹೇಳುವ ಈ ದುಃಖವು ಈಗ್ಗೆ ಇಡಿಯ ಭೂಮಂಡಲವನ್ನೇ ವ್ಯಾಪಿಸಿರುತ್ತದೆ. ನಮ್ಮಂಥ ಅಲ್ಪಪ್ರಜ್ಞರೂ ಅಲ್ಪಶಕ್ತಿಯವರೂ ಈ ಸಮಷ್ಟಿದುಃಖವನ್ನು ನಿವಾರಿಸುವದಕ್ಕೆ ಏನು ತಾನೆ ಮಾಡಲಾಪೆವು? ಈಗ ಬಂದಿರುವ ದುಃಖವು ಅಖಿಲಭೂಮಂಡಲದ ದುಃಖವು. ಈ ದುಃಖಕ್ಕೆ ಕಾರಣರು ನಾವುಗಳೇ; ಈ ದುಃಖವನ್ನು ನಾವುಗಳೇ ಪರಿಹರಿಸಿಕೊಳ್ಳಬಹುದು. ದುಃಖವೆಂಬ ರೋಗಕ್ಕೆ ನಿದಾನ (ಮೂಲಕಾರಣ) ತಿಳಿದಿದೆ, ಚಿಕಿತ್ಸೆಯೂ ತಿಳಿದಿದೆ. ಆದರೂ ನಾವು ಅದನ್ನು ಮಾಡುತ್ತಲಿಲ್ಲ; ಇನ್ನು ರೋಗವು ಹೇಗೆ ನಿವಾರಣೆಯಾಗಬೇಕು? ಒಬ್ಬ ರಾಜನು ಬಹು ಕಾಲದಿಂದ ರೋಗದಿಂದ ನರಳುತ್ತಿದ್ದನು; ಆದರೆ ಅವನಿಗೆ ಸರಿಯಾದ ಔಷಧಿಯನ್ನು ಕೊಡುವ ವೈದ್ಯರು ಸಿಕ್ಕಲಿಲ್ಲ. ಅರಮನೆಯ ವೈದ್ಯನು ಒಂದು ಚಿಕಿತ್ಸೆಯನ್ನು ಹೇಳಿದನು. "ತಾವು ಇನ್ನು ಮೇಲೆ ಜಿಲೇಬಿ, ಮೆಣಸಿನ ಕಾಯಿಯ ಪದಾರ್ಥಗಳು, ಈರುಳ್ಳಿ–ಇವುಗಳನ್ನು ತಿನ್ನಬಾರದು. ನಾನು ಹೇಳುವ ಔಷಧಿಯನ್ನು ಸೇವಿಸಿ ಪಥ್ಯವನ್ನು ಮಾಡುತ್ತಿದ್ದರೆ ಮೂರು ತಿಂಗಳಲ್ಲಿ ಈ ರೋಗವು ವಾಸಿಯಾಗುವದು" ಎಂದನು. ರಾಜನಿಗೆ ಮೈಯೆಲ್ಲ ಉರಿಯುವ ಕೋಪವು ಬಂದಿತು. ಅವನಿಗೆ ಜಿಲೇಬಿ, ಮೆಣಸಿನಕಾಯಿ, ಈರುಳ್ಳಿ–ಇವುಗಳಲ್ಲಿ ಬಹಳ ಪ್ರೀತಿಯಿತ್ತು; ಒಂದು ಕ್ಷಣವೂ ಅವನ್ನು ಬಿಡಲಾರದೆ ಇದ್ದನು. ಆದ್ದರಿಂದ ವೈದ್ಯನು ಮುಠ್ಠಾಳನೆಂದು ಬಯ್ದು ಸೆರೆಮನೆಯಲ್ಲಿರಿಸಿದನು! ಆ ರಾಜನಂತೆಯೇ ಈಗಿನ ಜನರೂ ಮಾಡುತ್ತಿರುವರು. **"ನರಕಕ್ಕೆ ಈ ಮೂರೂ ಬಾಗಿಲು; ಕಾಮ, ಕ್ರೋಧ, ಲೋಭ–ಇವುಗಳು ಜೀವನವನ್ನು ಹಾಳು ಮಾಡುತ್ತವೆ. ಆದ್ದರಿಂದ ಈ ಮೂರನ್ನೂ ಬಿಟ್ಟುಬಿಡಬೇಕು!"** ಎಂದು ಶ್ರೀಕೃಷ್ಣಭಗವಂತನು ಹೇಳಿರುತ್ತಾನೆ. ಪರಮೇಶ್ವರನನ್ನು ಶರಣುಹೋಗುವದೇ ಸರ್ವಸುಖಕ್ಕೂ ಶಾಂತಿಗೂ ಕಾರಣವೆಂದು ಸಕಲ ಧರ್ಮಗ್ರಂಥಗಳೂ ಸಾರುತ್ತಿವೆ. ಆದರೆ

ನಾವು ಆ ಮೂರ್ಖ ರಾಜನಂತೆ–ಈ ಮೂರನ್ನೂ ಬಿಡದೆ ಇರುವೆವು, ಭಗವದ್ಭಕ್ತಿಯನ್ನು ಉಪದೇಶಿಸುವ ಮಹಾತ್ಮರನ್ನು ತಿರಸ್ಕಾರದಿಂದ ಕಾಣುತ್ತಿರುವೆವು!

ನಮ್ಮಂಥ ವ್ಯಕ್ತಿಗಳು ಸದ್ಯಕ್ಕೆ ಏನು ಮಾಡಬೇಕು? ನಾವು ಜನರ ದುಃಖ ನಿವಾರಣೆಗೆ ಯಾವ ಉಪಾಯವನ್ನು ಕೈಕೊಳ್ಳಬೇಕು?–ಎಂಬ ಪ್ರಶ್ನೆಗೆ ನನ್ನ ಉತ್ತರವೇನೆಂದರೆ ಪ್ರಪಂಚವನ್ನು ನೇರ್ಪಡಿಸುವ ಭಾರವು ನಮ್ಮದೆಂಬ ಭಾವನೆಯನ್ನು ಮೊದಲು ಬಿಟ್ಟುಬಿಡಬೇಕು. ನಮ್ಮ ಪುರುಷಾರ್ಥವನ್ನೇ ನಾವು ನೋಡಿಕೊಳ್ಳಲಾರದೆ ಇರುವೆವು. ಹೀಗಿರುವಲ್ಲಿ ಇನ್ನೊಬ್ಬರ ದುಃಖವನ್ನು ಹೇಗೆ ಪರಿಹರಿಸಿಯೇವು? ಭಗವಂತನೇ ಎಲ್ಲರನ್ನೂ ಕಾಪಾಡುವವನು. ಆರ್ತರನ್ನು ಆರ್ತಿಹರಣದಿಂದ, ಅರ್ಥಾರ್ಥಿಗಳನ್ನು ಅವರ ಇಷ್ಟಾರ್ಥಗಳನ್ನು ಈಡೇರಿಸಿಕೊಡುವದರಿಂದ, ಜಿಜ್ಞಾಸುಗಳನ್ನು ಜ್ಞಾನದಿಂದ–ಆತನೇ ಕಾಪಾಡಬಲ್ಲವನು. ಆತನನ್ನು ಶರಣುಹೋಗದೆ ತಾವು ಸ್ವತಂತ್ರರೆಂದು ಕೊಚ್ಚಿಕೊಳ್ಳುವವರನ್ನೂ ಅವರವರ ಕರ್ಮಕ್ಕೆ ಅನುಗುಣವಾಗಿ ಫಲವನ್ನು ಕೊಟ್ಟು ದರ್ಪಭಂಗವನ್ನು ಮಾಡಿ ದಾರಿಗೆ ತರುವವನು ಆತನೇ. ಭೂಮಂಡಲವನ್ನೇ ತಮ್ಮ ಆಳ್ವಿಕೆಗೆ ಒಳಪಡಿಸಿಕೊಳ್ಳಬೇಕೆಂದು ಅತ್ಯಾಶೆಯಿಂದ ಹೊರಟು ನಾವು ಉತ್ತಮ ಕುಲದವರು, ನಿರುಪಮನಿಪುಣರು ಎಂದು ಹೊಗಳಿಕೊಳ್ಳುತ್ತಿದ್ದ ಹಿಟ್ಲರನೂ ಅವನ ಸೇನಾಪತಿಗಳೂ ಈಗ ಹೇಳ ಹೆಸರಿಲ್ಲದೆ ಅಳಿಸಿಹೋದರು: ಅವರು ಸಾವಿರಾರು ಜನರನ್ನು ಗುಂಡಿನಿಂದ ಹೊಡೆದದ್ದು, ಚಿತ್ರ ಹಿಂಸೆಗೈದದ್ದು, ಶಿಶುಹತ್ಯೆಗಳನ್ನು ಮಾಡಿದ್ದು, ನಿರಪರಾಧಿಗಳನ್ನು ಓಡಿಸಿದ್ದು–ಇಂಥ ಪಾಪಗಳು ಅವರ ನಾಶಕ್ಕೆ ಕಾರಣವಾದವು. ಅವರಿಗೆ ಸಹಾಯಕರಾಗಿ ನಿಂತ ಮುಸುಲೋನಿಯ ಹೆಸರು ಮುಸುಳಿಸಿಹೋಯಿತು, ಜಪಾನಿನವರು ಜವರಾಯನ ದವಡೆಗೆ ಸಿಕ್ಕಿ ನರಳಿದರು. ಫ್ರೆಂಚರು, ಇಂಗ್ಲಿಷಿನವರು–ಹೆಸರಿಗೆ ಮಾತ್ರ ಉಳಿದುಕೊಂಡಿದಾರೆ. ಅವರ ಚಕ್ರಾಧಿಪತ್ಯಗಳು ಶಿಥಿಲವಾಗುತ್ತಿವೆ. ರಾಜ್ಯವು ರಣಭೂಮಿಯಾಗಿ ರಕ್ತದ ಕೋಡಿಯನ್ನಿಟ್ಟುಹೋಗಿದೆ, ನಗರಗಳಲ್ಲಿದ್ದ ಸುಂದರವಾದ ಕಟ್ಟಡಗಳು ನಾಶವಾಗಿವೆ, ಜನರು ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ಜೀವಶವಗಳಾಗಿದಾರೆ! "ಈ ಲೋಕವು ಅನಿತ್ಯವು, ಅಸುಖವಾದದ್ದು' ಬೇಗನೆ ನನ್ನನ್ನು ಭಜಿಸಿರಿ!" ಎಂಬ ಗೀತಾಚಾರ್ಯನ ಉಕ್ತಿಯು ಸಾಭಿಪ್ರಾಯವೆಂದು ಈಗಲಾದರೂ ನಾವು ನಂಬಬಾರದೆ? ಆಟಂಬಾಂಬುಗಳನ್ನು ನಂಬಿ ಜಗತ್ತೆಲ್ಲವೂ ನಮ್ಮ ವಶವಾಗುವದೆಂದು ಭಾವಿಸಿರುವ ಅಮೆರಿಕ, ರಷ್ಯ–ಮುಂತಾದ ರಾಷ್ಟ್ರಗಳು ಹೊರಟಿರುವುದು ನರಕದ ಮಾರ್ಗವೆಂದು ಈಗಲಾದರೂ ತಿಳಿಯಬಾರದೆ?

ಭರತಖಂಡದಲ್ಲಿ ಬ್ರಿಟಿಷರು ರಾಜ್ಯವನ್ನು ಬಿಟ್ಟು ಹೋಗುವಾಗ ಹಿಂದೂ ಮುಸಲಮಾನರ ದ್ವೇಷಾಗ್ನಿಯನ್ನು ಉರಿಯಿಸುವ ಗಾಳಿಯನ್ನು ಹಾಕಿಬಿಟ್ಟು,

ಹೋಗಿರುತ್ತಾರೆ. ಇದರ ಫಲವಾಗಿ ಆ ಜನರು ಒಬ್ಬರನ್ನೊಬ್ಬರು ವಿಶ್ವಾಸವಿಡದೆ ರಾಜಕಾರಣದಲ್ಲಿ ನುಗ್ಗಿರುವ ಸ್ವಾರ್ಥಪರರ ಪ್ರೋತ್ಸಾಹಕ್ಕೆ ಸಿಕ್ಕಿ ಒಬ್ಬರನ್ನೊಬ್ಬರು ಸುಲಿಗೆ ಮಾಡುವದು, ಕೊಲ್ಲುವದು, ಮನೆಗೆ ಬೆಂಕಿ ಹತ್ತಿಸುವದು, ಪೈರುಪಚ್ಚೆಗಳನ್ನು ಹಾಳು ಮಾಡುವದು, ಹೆಂಗಸರನ್ನು ಪೈಶಾಚಪ್ರವೃತ್ತಿಯಿಂದ ಅಪಮಾನಗೊಳಿಸುವದು. ಬಲಾತ್ಕಾರದಿಂದ ಜಾತಿಕೆಡಿಸುವದು–ಇಂಥ ರಾಕ್ಷಸಕೃತ್ಯಗಳನ್ನು ಕೈಕೊಂಡಿರುತ್ತಾರೆ! ಸಂಸ್ಥಾನಾಧೀಶರ ದುರ್ಮಂತ್ರಿಗಳು ಅರಸರಿಗೂ ಪ್ರಜೆಗಳಿಗೂ ಅವಿಶ್ವಾಸವನ್ನು ಹಬ್ಬಿಸುತ್ತಿದ್ದಾರೆ! ಅಧಿಕಾರದ ನೀರಡಿಕೆಯು ಹೆಚ್ಚಾಗಿರುವ ಕುಟಿಲತಂತ್ರಜ್ಞರು ದೇಶದ ಜನರನ್ನು ಅರಸರ ಮೇಲೂ ಒಬ್ಬರೊಬ್ಬರಮೇಲೂ ಛೂಬಿಡುತ್ತಿದ್ದಾರೆ! ಇದೆಲ್ಲ ಕಾಮಕ್ರೋಧಲೋಭಗಳ ಭೀಕರನೃತ್ಯವಲ್ಲದೆ ಮತ್ತೇನು?

ನಾನು ನಿಮಗೆ ಏನು ಮಾಡಬೇಕೆಂಬುದನ್ನು ಬರೆಯದೆ ಭೂಲೋಕದಲ್ಲಿ ಈಗ ಹಬ್ಬುತ್ತಿರುವ ದುಃಖವನ್ನೇ ವರ್ಣಿಸುತ್ತಿರುವೆನೆಂದು ನೀವು ಭಾವಿಸಬಾರದು. ಕಾಮಕ್ರೋಧಲೋಭಗಳನ್ನು ಯಾರು ಪೋಷಿಸಿದರೂ ನರಕಕ್ಕೆ ದಾರಿಯಾಗುವದು; ಅವುಗಳನ್ನು ಬಿಡುವದಕ್ಕೆ ಪ್ರಯತ್ನ ಮಾಡುತ್ತಾ ಯಾರು ಭಗವಂತನನ್ನು ನಂಬಿದರೂ ಅವರು ಇದ್ದಲ್ಲಿಯೇ ಸ್ವರ್ಗವಾಗುವದು. ಒಂದು ದೇಶದ ಜನಾಂಗವು ಅಲ್ಲಿರುವ ವ್ಯಕ್ತಿಗಳ ಗುಂಪು. ಜನಾಂಗದ ವಿವೇಕಿಗಳಾದ ವ್ಯಕ್ತಿಗಳು ಈ ಮೂರು ದೋಷಗಳನ್ನೂ ಬಿಟ್ಟು, ಪರಮೇಶ್ವರನನ್ನು ಶರಣುಹೋಗುವ ಅಭ್ಯಾಸವನ್ನು ತಾವು ಮಾಡುತ್ತಾ ತಮ್ಮ ಸುತ್ತುಮುತ್ತಿನವರನ್ನೂ ಈ ದಾರಿಗೆ ಹತ್ತಿಸಬೇಕು. ಇದಕ್ಕಿಂತ ಹೆಚ್ಚಿನ ಸೇವೆಯಿಲ್ಲವೆಂದೇ ನನ್ನ ಅಭಿಪ್ರಾಯ.

## 26. ಧನದ ಉಪಯೋಗ

### (ಜನವರಿ 1948)

*ನಿಮ್ಮ ಪತ್ರವು ತಲುಪಿದೆ. ಸ್ವಲ್ಪ ಹಣವು ಕೂಡಿತೆಂದರೆ ಅದನ್ನು ಕಿತ್ತುಕೊಳ್ಳುವದಕ್ಕೆ ಹಿಂಡು ಹಿಂಡು ಜನರು ಸೇರುತ್ತಾರೆ. ಅವರಿಗೆಲ್ಲ ಕೊಟ್ಟರೆ ಕೊಟ್ಟವನೇ ಕೋಡಂಗಿಯಾಗುತ್ತಾನೆ. ಕೊಡದೆ ತಿರಸ್ಕರಿಸಿದರೆ ಲೋಭಬುದ್ಧಿಯು ಪ್ರಬಲವಾಗುತ್ತದೆ. ಇಂಥ ಸಮಯದಲ್ಲಿ ನಮ್ಮಂಥ ಸಾಮಾನ್ಯ ಅಂತಸ್ತಿನವರು ಏನು ಮಾಡಬೇಕು?–ಎಂದು ಕೇಳಿರುತ್ತೀರಿ.*

ಇಂಥ ಪ್ರಶ್ನೆಗಳಿಗೆ ತಾವು ತಾವೇ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಯಾರು ಪರಮೇಶ್ವರನ ಪ್ರೀತಿಯೇ ತಮಗೆ ಗುರಿ ಎಂದು ಇಟ್ಟುಕೊಂಡಿದ್ದಾರೋ ಅಂಥ ಸಾಧಕರು ತಾವು ತೀರ ಬಡತನಕ್ಕೆ ಇಳಿದರೂ ಚಿಂತೆಯಿಲ್ಲ; ತಮ್ಮಲ್ಲಿ ಇದ್ದ ಹಣ, ಅನ್ನ,

ಬಟ್ಟೆ—ಮುಂತಾದವುಗಳನ್ನು ಅರ್ಹರಾದವರಿಗೆ ಹಂಚುವ ಕಾರ್ಯವನ್ನು ಬಿಡುವದಿಲ್ಲ. ಅಷ್ಟು ವಿರಕ್ತಿಯಿಲ್ಲದೆ ಇದ್ದರೂ ತಕ್ಕಮಟ್ಟಿಗೆ ದಾನಧರ್ಮಗಳಿಂದ ಈಶ್ವರತೃಪ್ತಿಯನ್ನುಂಟು ಮಾಡುತ್ತಾ ತಾವೂ ಸದ್ವ್ಯವಹಾರದಲ್ಲಿರಬೇಕೆನ್ನುವವರು ತಮ್ಮ ಆದಾಯಕ್ಕೆ ತಕ್ಕಂತೆ ಧರ್ಮಕ್ಕೆ ತಮ್ಮ ಧನವನ್ನು ಹಂಚಬೇಕೆಂದು ಬಯಸುವದು ಯೋಗ್ಯವಾಗಿದೆ. ಆದ್ದರಿಂದ ಈ ಸಮಯಕ್ಕೆ ದಾನಧರ್ಮಗಳನ್ನು ಹೇಗೆ ಮಾಡಬೇಕೆಂಬುದನ್ನು ಕುರಿತು ಒಂದೆರಡು ವಾಕ್ಯಗಳನ್ನು ಬರೆಯುವೆನು. ನಿಮಗೆ ಆದಷ್ಟು ಉಪಯೋಗವನ್ನು ಈ ಬರೆವಣಿಗೆಯಿಂದ ಮಾಡಿಕೊಳ್ಳಬೇಕು; ಉಪಯೋಗವಿಲ್ಲದ್ದನ್ನು ಕೈಬಿಡಬೇಕು.

ಮೊಟ್ಟಮೊದಲು ಹಣವಂತರು ವಿಲಾಸಗಳಿಗೂ ವಿನೋದಗಳಿಗೂ ಉಪಯೋಗಿಸುವ ದುಂದುವೆಚ್ಚಗಳನ್ನು ಬಿಡಬೇಕು. ಆ ಹಣವನ್ನೇ ದೀನರಿಗೂ ಯೋಗ್ಯರಾದವರಿಗೂ ದಾನಕ್ಕೆ ಉಪಯೋಗಿಸಿದರೆ ಬೇಕಾದಷ್ಟು ಧರ್ಮವನ್ನು ಸಂಪಾದಿಸಿಕೊಳ್ಳಬಹುದು. ಸಿರಿವಂತರು ತಮ್ಮ ಮನೆಯಲ್ಲಿ ಈಗಲೂ ಆಗಾಗ್ಗೆ ವಿಧವಿಧಭಕ್ಷ್ಯಗಳನ್ನು ಮಾಡಿ ತಮ್ಮ ಮನೆಗೆ ಬರುವವರಿಗೆ ಅವಶ್ಯವಿಲ್ಲದಿದ್ದರೂ ಬಡಿಸಿ ಚೆಲ್ಲಿಸುತ್ತಾರೆ. ದಿನಕ್ಕೆ ಎರಡು ಮೂರು ಸಲ ಕಾಫಿ, ಟೀ, ಉಪ್ಪಿಟ್ಟು, ಬೋಂಡ—ಮುಂತಾದ ಬಗೆಬಗೆಯ ಸವಿಪದಾರ್ಥಗಳನ್ನು ಮಾಡಿಸಿ ಬೇಕಿಲ್ಲದವರಿಗೆ ಕೊಟ್ಟು ವ್ಯರ್ಥಮಾಡುತ್ತಾರೆ. ಮಾತುಮಾತಿಗೂ ಮೋಟಾರುಕಾರು, ಟೆಲಿಗ್ರಾಂ, ನಾಟಕ, ಸಿನೆಮಾ—ಮುಂತಾದವುಗಳಿಗೆ ಖರ್ಚುಮಾಡುತ್ತಾರೆ. ಈ ವೆಚ್ಚವೆಲ್ಲವನ್ನೂ, ಕೊನೆಗೆ ಅದರ ಸ್ವಲ್ಪ ಭಾಗವನ್ನಾದರೂ ಏತಕ್ಕೆ ಉಳಿಸಬಾರದು, ಏತಕ್ಕೆ ಬಡವರಿಗೆ ದಾನಮಾಡಬಾರದು? ಅಷ್ಟು ಐಶ್ವರ್ಯವಂತರಲ್ಲದವರು ಕೂಡ ಈಗ ರೇಷನ್ ಕಾಲವಾದರೂ, ತಮಗೆ ಬೇಕಾಗಿರುವದಕ್ಕಿಂತ ಹೆಚ್ಚಾಗಿ ಸಣ್ಣಕ್ಕಿ, ಸಕ್ಕರೆ, ಗೋಧಿ, ತರಕಾರಿ, ಹಣ್ಣುಹಂಪಲು—ಮುಂತಾಗಿ ಶೇಖರಿಸಿಡುತ್ತಾರೆ. ಒಬ್ಬೊಬ್ಬರು ಇನ್ನು ಮೂರು ನಾಲ್ಕು ವರ್ಷಗಳಿಗೆ ಆಗುವಷ್ಟು ಬಟ್ಟೆಯನ್ನು ಕೂಡಿಹಾಕಿಕೊಂಡಿರುತ್ತಾರೆ. ಈಗ್ಗೆ ದೇಶದಲ್ಲಿ ಕ್ಷಾಮವು ಬಂದಿರುತ್ತದೆ; ಇರುವಷ್ಟು ಜನರಿಗೇ ಆಹಾರಾದಿಸಾಮಗ್ರಿಗಳು ದೇಶದಲ್ಲಿಲ್ಲ. ಇದರ ಜೊತೆಗೆ ಹಿಂದೂಸ್ಥಾನ ಪಾಕಿಸ್ಥಾನಗಳ ಜಗಳದ ಫಲವಾಗಿ ಸಾವಿರಗಟ್ಟಲೆಯ ನಿರಾಶ್ರಿತರು ಉಣ್ಣುವದಕ್ಕೆ ಅನ್ನವಿಲ್ಲದೆ ಉಡುವದಕ್ಕೆ ಒಂದು ಗೇಣು ಬಟ್ಟೆಯಿಲ್ಲದೆ, ತಂಗುವದಕ್ಕೆ ಅಂಗೈಯಗಲ ಸ್ಥಲವೂ ಇಲ್ಲದೆ ಅಲೆದಾಡುತ್ತಿದಾರೆ. ನೀವು ಸುಖವಾಗಿ ಊಟ ಮಾಡುವಾಗ, ಬಿಸಿನೀರಿನ ಸ್ನಾನ ಮಾಡುವಾಗ, ಒಳ್ಳೊಳ್ಳೆಯ ಬಟ್ಟೆಗಳನ್ನು ಮೈತುಂಬ ಉಟ್ಟು ಹೊದೆಯುವಾಗ, ಮೆತ್ತನೆಯ ಹಾಸಿಗೆಯ ಮೇಲೆ ಮಲಗುವಾಗ, ನಿಮಗೆ ಬೇಕಾದ ಕಡೆಗೆ ಗಾಡಿಯ ಮೇಲೆ ಅಥವಾ ರೈಲು ಮೇಲೆ ಪ್ರಯಾಣ

ಮಾಡುವಾಗ, ಆ ಬಡಪ್ರಾಣಿಗಳ ಚಿತ್ರವು ನಿಮ್ಮ ಕಣ್ಣ ಮುಂದೆ ಆಡುತ್ತಿರುವದೇನು? ಹಾಗೆ ಆ ಚಿತ್ರವು ನಿಮ್ಮ ಮುಂದೆ ಇದ್ದರೆ, ನೀವು ಹೇಗೆ ಸಮಾಧಾನದಿಂದ ಇರುವದಕ್ಕಾದೀತು?

ನೀವು ಹಣವಂತರಲ್ಲದೆ ಇರಬಹುದು. ನಿಮಗೆ ಎಷ್ಟೋ ವಸ್ತುಗಳ ಕೊರತೆ ಇರಬಹುದು. ಆದರೂ ನನಗೆ ನಿಮ್ಮಲ್ಲಿರುವ ಸಲುಗೆಯಿಂದ ಒಂದು ಬುದ್ಧಿವಾದವನ್ನು ನಿಮಗೆ ಇಲ್ಲಿ ಬರೆಯುವೆನು. ಈ ಕಷ್ಟಕಾಲಕ್ಕೆ ನೀವು ಯಾವದೋ ಕಾಲಕ್ಕೆಂದು ಹಣವನ್ನು ಕೂಡಿ ಹಾಕುವ ಯೋಚನೆಯನ್ನು ಬಿಟ್ಟು ಬಿಡಿರಿ. ದುಂದುವೆಚ್ಚವನ್ನಂತೂ ಖಂಡಿತ ಮಾಡಬೇಡಿರಿ. ದೇವಪೂಜೆ, ವಿದ್ಯಾಕಾಲಕ್ಷೇಪ, ತಂದೆ ತಾಯಿಗಳ ಸೇವೆ, ನಿಮಗೆ ತಕ್ಕವರೆಂದು ಕಾಣುವ ಕಡುಬಡವರಿಗೆ ಮತ್ತು ಯೋಗ್ಯರಾದ ಸಾಧುಸಂತರಿಗೆ ಉಪಕಾರ, ಮೂಕಪ್ರಾಣಿಗಳ ಸೇವೆ—ಇವಿಷ್ಟಕ್ಕೆ ನಿಮ್ಮಲ್ಲಿರುವಷ್ಟರಲ್ಲಿ ಒಂದಂಶವನ್ನು ವಿನಿಯೋಗ ಮಾಡದೆ ಎಂದಿಗೂ ವಿಷಯಗಳನ್ನು ಭೋಗಿಸುವದಿಲ್ಲವೆಂದು ಪ್ರತಿಜ್ಞೆ ಮಾಡಿರಿ. ನಿಮ್ಮ ಅನ್ನವು ಪಾಪಾನ್ನವಾಗುವದು ತಪ್ಪುವದು, ನಿಮಗೆ ಈಶ್ವರನು ಜೀವನದಲ್ಲಿ ಎಂದಿಗೂ ಕಷ್ಟವನ್ನು ಕೊಡುವದಿಲ್ಲ.

## 27. ನಗರವಾಸ

(ಫೆಬ್ರವರಿ 1948)

*ನಿಮ್ಮ ಪ್ರೇಮಪೂರ್ವಕವಾದ ಪತ್ರವು ತಲುಪಿರುತ್ತದೆ. ಈಗ ಸರಕಾರಿಯ ನೌಕರಿ ದೊರಕಿರುವದೂ ತಿಂಗಳಿನ ಆದಾಯವು ಸ್ವಲ್ಪ ಹೆಚ್ಚಾಗಿರುವದೂ ಬಹಳ ಸಂತೋಷದ ಸುದ್ದಿಗಳೇ ಸರಿ. ಆದರೆ ಈಗ ನೀವು ನಗರದಲ್ಲಿರುತ್ತೀರಿ; ಆಧ್ಯಾತ್ಮಿಕ ಉನ್ನತಿಗೆ ಯಾವ ಸಾಧನವನ್ನು ಕೈಕೊಳ್ಳಬೇಕು?—ಎಂದು ಪ್ರಶ್ನೆ ಹಾಕಿರುತ್ತೀರಿ. ಸ್ನೇಹದ ಸಲುಗೆಯಿಂದ ಇಲ್ಲಿ ನಾನು ಬರೆದಿರುವ ಮಾತುಗಳಲ್ಲಿ ಉಪಯೋಗವಿದ್ದದ್ದನ್ನು ತೆಗೆದುಕೊಳ್ಳಬೇಕು. ಮಿಕ್ಕ ವಿಷಯಗಳಲ್ಲಿ ನೀವೂ ತಿಳಿದವರೇ ಇರುತ್ತೀರಷ್ಟೆ.*

ಉದ್ಯೋಗಸ್ಥಾನದಲ್ಲಿ ನಿಮಗೆ ಈಗ ವಿರಾಮವು ಸ್ವಲ್ಪ ಮಟ್ಟಿಗೆ ಸಿಕ್ಕುತ್ತದೆ. ಆದರೆ ಅದನ್ನು ವ್ಯರ್ಥಾಲಾಪಕ್ಕೆ ಉಪಯೋಗಿಸಬಾರದು. ದೊಡ್ಡ ದೊಡ್ಡ ಪದವೀಧರರ ವಿಚಾರ, ಅರಮನೆಯ ಸುದ್ದಿ, ನಿಮ್ಮ ಸ್ನೇಹಿತರ ನಡತೆಯ ವಿಷಯ—ಇವೇ ಮುಂತಾದವುಗಳನ್ನು ಕುರಿತು ಮಾತಾಡುವದನ್ನು ಕೂಡಲೆ ನಿಲ್ಲಿಸಿಬಿಡಬೇಕು. ಆ ಕಾಲದಲ್ಲಿ ನಿಮ್ಮ ಯಾವದಾದರೊಂದು ಕೈ ಕೆಲಸವನ್ನು ಸಾಧ್ಯವಾದರೆ ಮಾಡಿಕೊಳ್ಳಬಹುದು; ಆದಾಗದಿದ್ದರೆ ಭಗವಂತನ ನಾಮವನ್ನು ಜಪಮಾಡುತ್ತಾ ಕಾಲಹರಣ ಮಾಡಬಹುದು.

ಸಾಯಂಕಾಲ ಪೇಟೆಯಲ್ಲಿ ಪದಾರ್ಥಗಳನ್ನು ಕೊಳ್ಳುವ ನೆಪದಿಂದ ತಿರುಗಾಡುವ ಪದ್ಧತಿಯನ್ನು ನಿಲ್ಲಿಸಿಬಿಡಬೇಕು. ಅನವಶ್ಯಕವಾದ ವಸ್ತುಗಳನ್ನು ಕೊಳ್ಳುವ ಚಟ, ಹಲವು ಜನರೊಡನೆ ಹರಟೆ., ಸಿನಿಮ, ನಾಟಕ ಮುಂತಾದವುಗಳ ನೆನಪು—ಇವೆಲ್ಲ ನಿಮ್ಮ ಚಿತ್ತಕ್ಕೆ ವಿಕ್ಷೇಪವನ್ನು ಉಂಟು ಮಾಡುತ್ತವೆ. ದಾರಿಯಲ್ಲಿ "ಇಂದಿನ ಹೊಸ ಸುದ್ದಿ" ಯನ್ನು ಓದಿ ರಾಜಕೀಯವಿಚಾರಗಳನ್ನು ತಲೆಯಲ್ಲಿ ತುಂಬಿಕೊಳ್ಳಬೇಕೆಂಬ ಕುನ್ನಿಬುದ್ಧಿಯೂ ಬರುತ್ತದೆ. ನಿಮ್ಮ ದಿನದ ಕೆಲಸವಾಗುತ್ತಲೂ ನೆಟ್ಟಗೆ ಮನೆಗೆ ಬಂದುಬಿಡಬೇಕು.

ನಗರದಲ್ಲಿ ಬಗೆಬಗೆಯ ಉದ್ಯೋಗಗಳನ್ನು ಮಾಡಿ ಬೇಗನೆ 'ಸಾಹುಕಾರ' ರಾದವರ ಉದಾಹರಣೆಗಳನ್ನು ಜನರು ಆಗಾಗ್ಗೆ ಕೊಡುತ್ತಿರುತ್ತಾರೆ. ಹಣವನ್ನು ಹೇಗಾದರೂ ಮಾಡಿ ಗಳಿಸಬೇಕೆಂಬ ಹಂಬಲ ಅಲ್ಲಿ ಬೇಗನೆ ಹತ್ತಿಕೊಳ್ಳುತ್ತದೆ. ಜೀವನದ ಯಾತ್ರೆಗೆ ಹಣವು ಬೇಕೆಂಬುದು ನಿಜ; ಆದರೆ ಹಣವನ್ನು ಕೂಡಿಹಾಕುವದರಲ್ಲಿಯೇ ಜೀವನದ ವಿನಿಯೋಗವಾಗದಂತೆ ನೋಡಿಕೊಳ್ಳಬೇಕು.

ನೀವು ಇರುವಂಥ ನಗರಗಳಲ್ಲಿ ಅಲ್ಲಲ್ಲಿ ಉಪನ್ಯಾಸಗಳು, ಹರಿಕಥೆಗಳು, ಎಂಟರ್‌ಟೇನ್‌ಮೆಂಟುಗಳು, ಆಟಗಳು ಮುಂತಾಗಿ ಆಗುತ್ತಲೇ ಇರುತ್ತವೆ. ಊರು ದೊಡ್ಡದಾಗಿರುವದರಿಂದ ಪತ್ರಿಕೆಯಲ್ಲಿ ಇವುಗಳ ಜಾಹಿರಾತನ್ನು ಹಾಕಿರುತ್ತಾರೆ. ನಿಮಗೆ ನಂಬಿಕೆಯಾಗಿ ತಿಳಿಯದ, ಅಪರಿಚಿತರ ಉಪನ್ಯಾಸಗಳಿಗೆ, ಅದರಲ್ಲಿಯೂ ರಾಜಕಾರಣದ ಉಪನ್ಯಾಸಗಳಿಗೆ, ಮತ್ತೆ ಮತ್ತೆ ಹೋಗುವ ಅಭ್ಯಾಸವನ್ನು ಬಿಟ್ಟು ಬಿಡಬೇಕು. ಪರಮಾರ್ಥಕ್ಕೆ ಸಾಧನವಾಗಿರುವ ವಿಚಾರಗಳಾದರೂ ನಿಮಗೆ ನಿತ್ಯದ ಸಾಧನೆಯಲ್ಲಿ ಉಪಯೋಗಕ್ಕೆ ಬೀಳುವ ಉತ್ಕೃಷ್ಟವಿಚಾರಗಳನ್ನು ಹೇಳುವ ಮಹಾತ್ಮರ ಉಪದೇಶಗಳು ಸಿಕ್ಕಿದರೆ ಅವಶ್ಯವಾಗಿ ಹೋಗಬೇಕು. ಇಲ್ಲದಿದ್ದರೆ ನಿಮಗೆ ಸಿಕ್ಕಿದಷ್ಟು ಕಾಲ ಪರಿಚಿತರಾದ ಸದ್ಗೃಹಸ್ಥರ ಜೊತೆಯಲ್ಲಿ ಸದ್ವಿಚಾರವನ್ನು ಮಾಡುವದು ಒಳ್ಳೆಯದು. ಅದೂ ದೊರೆಯದೆ ಇದ್ದರೆ ಯಾವದಾದರೊಂದು ಉತ್ತಮವಾದ ಅಧ್ಯಾತ್ಮಗ್ರಂಥವನ್ನು ಮನನ ಮಾಡುತ್ತಿರಬೇಕು.

ಸಾಧುಗಳು, ಸಂನ್ಯಾಸಿಗಳು, ಬೈರಾಗಿಗಳು—ಎಂಬ ವಿವಿಧ ವೇಷಗಳಿಂದ ಧೂರ್ತರು ನಗರಗಳಲ್ಲಿ ಅಲ್ಲಲ್ಲಿ ಓಡಾಡುತ್ತಿರುವರು. ಅವರ ನಟನೆಗಂತೂ ಎಂದಿಗೂ ಮರುಳಾಗಬಾರದು. ಕೆಲವು ತಿಂಗಳುಗಳ ಹಿಂದೆ ಒಬ್ಬ ಗೃಹಸ್ಥರ ಮನೆಯ ಜಗುಲಿಯ ಮೇಲೆ ಒಬ್ಬ ಬೈರಾಗಿಯು ಬಂದು ಕುಳಿತುಕೊಂಡನು. ಹಣೆಗೆ ಗೋಪೀಚಂದನ, ಕೊರಳಲ್ಲಿ ತುಳಸೀಮಣಿ, ಕೈಯಲ್ಲಿ ಯೋಗದಂಡ—ಇವನ್ನು ಧರಿಸಿದ್ದ ಆತನು ನೋಡುವದಕ್ಕೆ ಒಬ್ಬ ಮಹಾತ್ಮನಂತೆಯೇ ಕಾಣಿಸುತ್ತಿದ್ದನು. ಅವನು ಸ್ವಲ್ಪ ಹೊತ್ತು

ಜಗುಲಿಯ ಮೇಲೆ ಕುಳಿತಿದ್ದು ಒಂದು ಚಿಲುಮೆಯಲ್ಲಿ ಭಂಗಿಯನ್ನು ಸೇದಿ ಬೂದಿಯನ್ನು ಅಲ್ಲಿಯೇ ಕೊಡವಿ ಹೊರಟುಹೋದನು. ಚಿಲುಮೆಯಲ್ಲಿ ಮನೆಯ ಯಜಮಾನಿಗೆ ಕಾಣಿಸುವಂತೆ ಒಂದು ಮೂರು ಕಾಸಿನ ಬಿಲ್ಲೆಯನ್ನು ಇಟ್ಟುಕೊಂಡಿದ್ದದ್ದರಿಂದ ಆಕೆಯು ಬೂದಿಯನ್ನು ಕುತೂಹಲದಿಂದ ಕೆದಕಿ ನೋಡಲು, ಅದು ಚಿನ್ನದ ವರ್ಣವನ್ನು ಹೊಂದಿ ಥಳಥಳಿಸುತ್ತಿತ್ತು! ಧನದಾಸರಾದ ಮನೆಯ ದಂಪತಿಗಳು ಆ ಧೂರ್ತನು ಮತ್ತೆ ಬರುವದನ್ನೇ ಕಾದುಕೊಂಡಿದ್ದು ಅವನ ಕಾಲ ಮೇಲೆ ಬಿದ್ದು ತಮ್ಮ ಮನೆಯಲ್ಲಿದ್ದ ಒಂದೆರಡು ಬೆಳ್ಳಿಯ ಪ್ಯಾಲಾಗಳನ್ನು ಚಿನ್ನವಾಗಿ ಮಾಡಿಕೊಡಬೇಕೆಂದು ಬೇಡಿಕೊಂಡರು. ಆತನು ಕನಿಕರದಿಂದ ಕೂಡಿದವನಂತೆ ನಟಿಸಿ ಮನೆಯಲ್ಲಿದ್ದ ಬೆಳ್ಳಿಯ ನಗನಾಣ್ಯಗಳನ್ನೆಲ್ಲ ತರಿಸಿ ಕರಗಿಸುವುದಕ್ಕೆ ಹಾಕಿದಂತೆ ಮಾಡಿ ಸಾಯಂಕಾಲಕ್ಕೆ ಬರುತ್ತೇನೆಂದು ಅವರನ್ನು ನಂಬಿಸಿ ಎಲ್ಲವನ್ನೂ ಹೊಡೆದುಕೊಂಡೇ ಹೋಗಿಬಿಟ್ಟನು! ಆದ್ದರಿಂದ ಅದ್ಭುತ ಲೀಲೆಗಳನ್ನು ತೋರಿಸುವ ಇಂಥ ಧೂರ್ತಸಾಧುಗಳಿಗೆ ಎಂದಿಗೂ ವಶರಾಗಬಾರದು.

ಮುಖ್ಯವಾಗಿ ಎಂದಿನ ಜೀವನ ಯಾತ್ರೆಯ ಕೆಲಸವನ್ನು ಕಷ್ಟಪಟ್ಟು ಮಾಡುತ್ತಾ ಪರಮೇಶ್ವರನ ಧ್ಯಾನದಲ್ಲಿ ಕಾಲವನ್ನು ಕಳೆಯುವ ಪದ್ಧತಿಯನ್ನು ಇಟ್ಟುಕೊಳ್ಳಿರಿ. ನಿಮಗೆ ಕಲ್ಯಾಣವಾಗುವದು.

## 28. ವೇದಾಂತವಿಚಾರ

### (ಮಾರ್ಚ್ 1948)

*ನಿಮ್ಮ ಪತ್ರಕ್ಕೆ ಯಾವ ಉತ್ತರವನ್ನು ಕೊಡಬೇಕೆಂಬುದು ನನಗೊಂದು ಒಗಟಾಗಿ ಉತ್ತರವನ್ನು ಬರೆಯುವದು ತಡವಾಯಿತು. ವೇದಾಂತವೆಂದರೆ ಉಪನಿಷತ್ತುಗಳಲ್ಲಿ ಹೇಳಿರುವ ತತ್ತ್ವಜ್ಞಾನವು. ಅದನ್ನು ಸಂಪಾದಿಸುವದಕ್ಕೆ ಮಾಡುವ ವಿಚಾರವೇ ವೇದಾಂತವಿಚಾರವು. ಇಷ್ಟರಮಟ್ಟಿಗೆ ಬಹುಜನರ ಸಮ್ಮತಿಯಿದ್ದರೂ ಈಗ ನಿಜವಾದ ವೇದಾಂತಿಗಳು ಯಾರು? ಯಾರ ಮತವನ್ನು ಅನುಸರಿಸಿ ವಿಚಾರ ಮಾಡಬೇಕು?–ಎಂದು ನೀವು ಪ್ರಶ್ನೆ ಹಾಕಿರುತ್ತೀರಿ.*

ಬ್ರಹ್ಮನು ಮೊದಲಾಗಿ ಸ್ಥಾವರದವರೆಗಿನ ಪ್ರಾಣಿಗಳಿಗೆಲ್ಲ ಒಬ್ಬ ಭಗವಂತನೇ ಆತ್ಮನಾಗಿರುವನು ಎಂಬುದು ವೇದಾಂತಸಿದ್ಧಾಂತವು. ಇದನ್ನು ಕಂಡುಕೊಳ್ಳುವದೇ ಮುಮುಕ್ಷುಗಳ ಗುರಿಯಾಗಿರಬೇಕು. ಈ ಪ್ರಯತ್ನಕ್ಕೆ ಸಾಧಕವಾಗಿರುವ ವಿಚಾರವು ವೇದಾಂತವಿಚಾರವು; ಇದಕ್ಕೆ ಅತಿರಿಕ್ತವಾಗಿರುವದು ವೇದಾಂತವಿಚಾರವಲ್ಲ. ಇಷ್ಟನ್ನು ಲಕ್ಷ್ಯದಲ್ಲಿಟ್ಟರೆ ನಿಮ್ಮ ತೊಡಕು ಬಹಳಮಟ್ಟಿಗೆ ಬಿಚ್ಚಿಕೊಳ್ಳುವದು.

ಈಗ್ಗೆ ಹಲವು ರಾಜಕೀಯ ಪಂಗಡಗಳು ನಮ್ಮ ದೇಶದಲ್ಲಿರುತ್ತವೆಯಷ್ಟೆ. ಇವುಗಳಲ್ಲಿನಾವು ಯಾವದನ್ನು ಹಿಂಬಾಲಿಸಬೇಕು?–ಎಂಬ ಪ್ರಶ್ನೆಯು ಬಲು ಗಡುಸಾಗಿ ಕಾಣುತ್ತದೆ. ಆದರೆ ಯಾರಿಗೆ ಜನರ ತನು, ಮನ, ಧನ–ಇವುಗಳ ಯೋಗಕ್ಷೇಮದ ಹಂಗಿಲ್ಲವೋ ಅವರ ಪಕ್ಷವು ನಮಗೆ ಯಾರಿಗೂ ಬೇಕಾಗುವದಿಲ್ಲ. ಅಲ್ಲವೆ? ಇದರಂತೆ ಯಾರಿಗೆ ಸರ್ವಾತ್ಮನಾದ ಪರಮೇಶ್ವರನಲ್ಲಿ ಭಕ್ತಿಯಿಲ್ಲವೋ, ಯಾರಿಗೆ ಸರ್ವಭೂತ ಪ್ರೇಮವು ಗುರಿಯಾಗಿಲ್ಲವೋ, ಅಂಥವರ ವಿಚಾರವು ವೇದಾಂತವಿಚಾರವಲ್ಲ ಎಂದು ನಿಶ್ಚಯವಾಗಿ ಹೇಳಬಹುದು.

ಇದಿರಲಿ, ವೇದಾಂತವಿಚಾರದ ಸ್ವರೂಪವೇನು? ಎಂಬುದನ್ನು ಮೊದಲು ತಿಳಿದುಕೊಳ್ಳುವದು ಅವಶ್ಯ. ನಮ್ಮ ದೇಶದಲ್ಲಿ ಹುಟ್ಟಿಹೋಗಿರುವ ಆಚಾರ್ಯರುಗಳ ಗ್ರಂಥಗಳ ಹೆಸರುಗಳು, ಅವರ ಉಪದೇಶದ ಸಾರ, ಅವರ ಸಿದ್ಧಾಂತಗಳಿಗೆ ಒಂದಕ್ಕೊಂದಕ್ಕೆ ಇರುವ ತಾರತಮ್ಯ–ಇವುಗಳನ್ನು ತಿಳಿದುಕೊಳ್ಳುವ ಯತ್ನವು ವೇದಾಂತ ವಿಚಾರವಲ್ಲ, ಅದು ವೇದಾಂತವಿಚಾರದ ಇತಿಹಾಸದ ವಿಚಾರವು.

ಇದರಂತೆ ಯಾವದಾದರೊಂದು ಸಿದ್ಧಾಂತದಲ್ಲಿ ಕೆಲವು ಗ್ರಂಥಗಳನ್ನು ಓದುವದು, ಆ ಗ್ರಂಥದ ವಿಷಯವಾಗಿ ಚರ್ಚೆ ಮಾಡುವದು, ಅಥವಾ ಲೇಖನಗಳನ್ನು ಬರೆಯುವದು–ಇದೆಲ್ಲವೇದಾಂತ ವಿಚಾರವಲ್ಲ, ಅದು ಆಯಾ ಗ್ರಂಥಗಳನ್ನು ಪರಿಚಯ ಮಾಡಿಕೊಳ್ಳುವ ಯತ್ನವು; ಸ್ಕೂಲುಗಳ ಹುಡುಗರು ತಮ್ಮತಮ್ಮ ಪಠ್ಯಪುಸ್ತಕಗಳನ್ನು ಪರೀಕ್ಷೆಗೆ ಓದುವದಕ್ಕೂ ಅದಕ್ಕೂ ಹೆಚ್ಚು ಕಡಿಮೆಯಿರುವದಿಲ್ಲ.

ದೇಶ ಭಾಷೆಗಳಲ್ಲಿರುವ ಪಂಚದಶಿ, ವಿಚಾರಸಾಗರ, ವೃತ್ತಿಪ್ರಭಾಕರ–ಮುಂತಾದ ಕೆಲವು ಗ್ರಂಥಗಳನ್ನು ಓದುವದು, ಅವುಗಳ ಶ್ಲೋಕಗಳನ್ನೂ ಪದ ಪದ್ಯಗಳನ್ನೂ ಗಟ್ಟಿಮಾಡಿಕೊಂಡು ಮಾತುಕಥೆಗಳಲ್ಲಿ ಉದಾಹರಿಸುವದು, ಅವುಗಳ ಆಧಾರದಿಂದ ಭಾಷಣಗಳನ್ನು ಮಾಡುವದು, ಅಥವಾ ಅವುಗಳನ್ನು ಪಾಠ ಮಾಡಿಸುವದು–ಇದೆಲ್ಲ ವೇದಾಂತವಿಚಾರವಲ್ಲ, ಇದು ವೇದಾಂತದ ಬಡಾಯಿ ಕೊಚ್ಚಿಕೊಳ್ಳುವ ಒಂದು ರೀತಿ.

ಭಂಗಿ, ಅಫೀಮು–ಮುಂತಾದವುಗಳನ್ನು ಸೇವಿಸಿ ಸಮಾಧಿಯಾದವರಂತೆ ನಟಿಸುವದು; ಗಡ್ಡವನ್ನು ಬಿಡಿಸಿಕೊಳ್ಳುವದು; ನಿಲುವಂಗಿ, ಕಾಷಾಯವಸ್ತ್ರ, ಪಾದುಕೆ, ಜಟೆ–ಮುಂತಾದವುಗಳನ್ನು ಧರಿಸುವದು; 'ಜಯಶಂಕರ್, ಸೀತಾ ರಾಮ್'–ಎಂದು ಮುಂತಾಗಿ ಕೂಗಿಕೊಳ್ಳುತ್ತಾ ಓಡಾಡುವದು; ಸಮೀಪಕ್ಕೆ ಬಂದವರನ್ನು ಮೀನು ಹಿಡಿಯುವ ಬಕಗಳಂತೆ ಮಂತ್ರತಂತ್ರಾದಿಗಳಿಂದಲೂ ವೇದಾಂತಪಾರಿಭಾಷಿಕ ಶಬ್ದಗಳ

ಚೂರುಗಳಿಂದಲೂ ಮಂಕುಗೊಳಿಸುವದು—ಇದೆಲ್ಲ ವೇದಾಂತವಿಚಾರವಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಅದು ಗುರುಪೀಠವನ್ನೇರುವ ಹಂಬಲಿಕೆಯ ಚೇಷ್ಟೆ.

ಪರಮಾತ್ಮನನ್ನು ಕಂಡುಕೊಂಡು ಕೃತಕೃತ್ಯನಾಗಬೇಕು, ಎಲ್ಲರಲ್ಲಿಯೂ ಆತನನ್ನೇ ಕಾಣಬೇಕು—ಎಂಬ ತವಕವಿಂದ, ಶ್ರೋತ್ರಿಯರೂ ಕಾಮದ ಹೊಡೆತಕ್ಕೆ ಸಿಕ್ಕದವರೂ ಪಾಪಾಚರಣೆಯಿಲ್ಲದವರೂ ಆದ ಬ್ರಹ್ಮನಿಷ್ಠರನ್ನು ಸೇರಿ ಕೃತಕೃತ್ಯನಾಗಬೇಕು ಎಂಬ ನಿಜವಾದ ಹಂಬಲಿನಿಂದ, ಯಾರು ತಮ್ಮ ವ್ಯವಹಾರವನ್ನೆಲ್ಲ ಈಶ್ವರನ ಆರಾಧನೆಯಾಗಿ ಮಾಡಿಕೊಂಡಿರುವರೋ, ಅಂಥ ಮಹನೀಯರೊಡನೆ ತತ್ತ್ವವಿಚಾರವನ್ನು ಮಾಡುವದೇ ನಿಜವಾದ ವೇದಾಂತ ವಿಚಾರವು. ಇಂಥ ವಿಚಾರವು ಪರಮೇಶ್ವರನ ಅನುಗ್ರಹದಿಂದಲೇ ದೊರೆಯುವದು.

## 29. ಉಪಾಧ್ಯಾಯರ ಕರ್ತವ್ಯ.

### (ಏಪ್ರಿಲ್ 1948)

*ನಿಮ್ಮ ಪತ್ರವು ತಲುಪಿತು. ದೇಶಸ್ವಾತಂತ್ರ್ಯಕ್ಕಾಗಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ದೇಹಶ್ರಮವನ್ನೂ ಧನವ್ಯಯವನ್ನೂ ಲೆಕ್ಕಿಸದೆ ದುಡಿದದ್ದಕ್ಕೆ ನನಗೆ ಯಾವ ಪ್ರತಿಫಲವೂ ಸಿಕ್ಕಲಿಲ್ಲ. ಗಲಾಟೆಯ ಕಾಲದಲ್ಲಿ ಎರಡು ತಿಂಗಳು ಬಂದಿಖಾನೆಯಲ್ಲಿ ಕೊಳೆತದ್ದು, ಇಲಾಖೆಯವರ ಕೋಪಕ್ಕೆ ಪಾತ್ರನಾಗಿ ಒಂದು ತಿಂಗಳು ಸಸ್ಪೆಂಡಾದದ್ದು— ಇವೇ ನನಗೆ ದೊರೆತ ಸಂಭಾವನೆ. ಇನ್ನು ಮೇಲೆ ವಿಶಾಲ ಭಾವನೆಗಳನ್ನು ಬಿಟ್ಟು ಬಿಡಬೇಕೆ? ಈಗಿನ ಕಾಲದಲ್ಲಿ ಒಳ್ಳೆಯ ಮಾರ್ಗದಲ್ಲಿ ನಡೆಯುವದೇ ಕಷ್ಟವಾಗಿದೆಯಲ್ಲ! ಎಂದು ಬರೆದಿರುತ್ತೀರಿ.*

ನನ್ನ ಮನಸ್ಸಿನಲ್ಲಿರುವದನ್ನು ನಿಮಗೆ ಬಿಚ್ಚಿ ತಿಳಿಸಿದ ಹೊರತು ಬೇರೆಯ ಉಪಾಯವಿಲ್ಲ. ಆದ್ದರಿಂದ ನನ್ನ ಮಾತಿನಿಂದ ನಿಮಗೆ ವ್ಯಥೆಯಾದರೆ ಕ್ಷಮಿಸಿ. ಹಿತವೂ ಮನೋರಂಜಕವೂ ಆಗಿರುವ ಮಾತು ದುರ್ಲಭವಷ್ಟೆ? ನೀವು ಉಪಾಧ್ಯಾಯರ ಕರ್ತವ್ಯವನ್ನು ಮಾಡಿದಿರೆಂದು ನನಗೆ ಅನ್ನಿಸಿಲ್ಲ. ದೇಶ ಸ್ವಾತಂತ್ರ್ಯಕ್ಕಾಗಿ ದುಡಿಯುವದಕ್ಕೆ ಹೊರಟವರಿಗೆ ಸರ್ಕಾರಿಯ ಕೆಲಸದ ಗೋಜು ಏತಕ್ಕೆ? ಬಂದಿಖಾನೆಯಲ್ಲಿ ಪಟ್ಟ ಸಂಕಟಕ್ಕೆ ಪಶ್ಚಾತ್ತಾಪವೇಕೆ? ಇದನ್ನು ನೀವು ಯೋಚಿಸಿಲ್ಲ. ಹುಡುಗರಿಗೆ ಪಾಠವನ್ನು ಕಲಿಸುವೆನೆಂಬ ಕರಾರಿನ ಮೇಲೆ ಕೆಲಸಕ್ಕೆ ಸೇರಿ ಅವರನ್ನು ರಾಜಕಾರಣದಲ್ಲಿ ಧುಮುಕಿಸಿದ್ದು ದ್ರೋಹವಲ್ಲವೆ? ಈ ಸಂದರ್ಭದಲ್ಲಿ ನಿಮಗೆ ವಿಶಾಲಭಾವನೆಯಿತ್ತೆಂಬುದಕ್ಕಿಂತ ಯಾವದೋ ಒಂದು ರಾಜಕೀಯ ತಂಡದವರಲ್ಲಿ ಸಂಕುಚಿತವಾದ ಅಭಿಮಾನವಿತ್ತೆಂದೇ

ಹೇಳಬೇಕು. ಹೀಗಿರುವದರಿಂದ ನೀವು ಸನ್ಮಾರ್ಗದಲ್ಲಿ ನಡೆಯಬೇಕೆಂದೇ ಸಂಕಲ್ಪ ಮಾಡಿದ್ದರೆ ತಪ್ಪನ್ನು ಒಪ್ಪಿಕೊಳ್ಳಬೇಕು; ಆದದ್ದು ದುಷ್ಕರ್ಮಕ್ಕೆ ಪ್ರಾಯಶ್ಚಿತ್ತವೆಂದೇ ಬಗೆಯಬೇಕು.

ಉಪಾಧ್ಯಾಯರ ಮೇಲೆ ಒಂದು ದೊಡ್ಡ ಹೊಣೆಗಾರಿಕೆ ಬೀಳುತ್ತದೆ. ತಮ್ಮ ಶಿಕ್ಷಣದಲ್ಲಿರುವ ವಿದ್ಯಾರ್ಥಿಗಳ ಮನಸ್ಸಿನ ವಿಕಾಸವನ್ನು ಮಾಡಿ ಅವರಿಗೆ ಪ್ರಪಂಚದ ಯಥಾರ್ಥಜ್ಞಾನವನ್ನು ಮಾಡಿಕೊಡುವದು ಉಪಾಧ್ಯಾಯರ ಮೊದಲನೆಯ ಕರ್ತವ್ಯ. ಪಠ್ಯಪುಸ್ತಕಗಳಲ್ಲಿ ಬೇರೆ ಬೇರೆಯ ಅಭಿಪ್ರಾಯಗಳು ಅಲ್ಲಲ್ಲಿ ಕಂಡು ಬರುತ್ತವೆ; ಇತಿಹಾಸ ಪುಸ್ತಕಗಳಲ್ಲಿ ಬಗೆಬಗೆಯ ವ್ಯಕ್ತಿಗಳ ವರ್ಣನೆಯಿರುತ್ತದೆ; ವೃತ್ತಾಂತ ಪತ್ರಿಕೆಗಳಲ್ಲಿ ವಿವಿಧವಾದ ಭಿನ್ನಾಭಿಪ್ರಾಯಗಳನ್ನು ಸ್ವಪಕ್ಷಪಾತಿಗಳಾದವರು ಬರೆಯುತ್ತಿರುತ್ತಾರೆ. ವಿದ್ಯಾರ್ಥಿಗಳು ಇವೆಲ್ಲವನ್ನೂ ಓದುವಾಗ, ಅಥವಾ ಬೇರೆ ಬೇರೆಯ ಉಪನ್ಯಾಸಗಳನ್ನು ಕೇಳುವಾಗ ಅವರ ಕೋಮಲವಾದ ಮನಸ್ಸಿನ ಮೇಲೆ ಬೇರೆಬೇರೆಯ ಪರಿಣಾಮ ವಾಗುತ್ತಿರುತ್ತದೆ. ಇದನ್ನರಿತ ಸ್ವಕರ್ತವ್ಯನಿಷ್ಠನಾದ ಉಪಾಧ್ಯಾಯನು ಅವರ ಮನಸ್ಸಿನ ವಿಕಾಸಕ್ಕೆ ಅಡ್ಡಿಯಾಗುವ, ಅವರ ಶಾಂತಿಯನ್ನು ಕೆಡಿಸುವ, ಅವರ ವಿದ್ಯಾಭ್ಯಾಸಕ್ಕೆ ಕುಂದನ್ನು ತರುವ, ಅಭಿಪ್ರಾಯಗಳು ಬಂದಾಗ ನಿಷ್ಪಕ್ಷಪಾತವಾಗಿ ಅವುಗಳನ್ನು ವಿಮರ್ಶೆಮಾಡುವ ಪರಿಯನ್ನು ಅವರಿಗೆ ತಪ್ಪದೆ ಹೇಳಿಕೊಡುತ್ತಾನೆ.

ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಮನೆಯವರಲ್ಲಿ ಗೌರವ, ತನ್ನ ಜೊತೆಯ ಹುಡುಗರಲ್ಲಿ ಪ್ರೇಮ, ತನ್ನ ಪಾಠಶಾಲೆಯಲ್ಲಿ ಅಭಿಮಾನ, ತನ್ನ ದೇಶದ ಸಂಸ್ಕೃತಿಯಲ್ಲಿ ಆದರ, ಎಲ್ಲಾ ಜನಾಂಗಗಳಲ್ಲಿಯೂ ಸಹಾನುಭೂತಿ—ಇವುಗಳನ್ನು ಪಡೆಯುವಂತೆ ಮಾಡುವದೇ ವಿದ್ಯಾಭ್ಯಾಸದ ಗುರಿಯು. ನೀತಿಯ ಆಸ್ತಿವಾರವೂ ಧರ್ಮಬುದ್ಧಿಯ ಅಂಕುರವೂ ಪಾಠಶಾಲೆಯಲ್ಲಿಯೇ ಆಗಬೇಕು. ಮಕ್ಕಳ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಯಾವ ಕೊರತೆಯಾಗಲಿ ಯಾವ ಬಗೆಯ ಕೊಳಕಾಗಲಿ ಸೇರಿಕೊಳ್ಳದಂತೆ ನೋಡಿಕೊಳ್ಳುವದೇ ಉಪಾಧ್ಯಾಯನ ಗುರಿಯಾಗಿರಬೇಕು.

ಉಪಾಧ್ಯಾಯನು ತಾನೂ ಒಬ್ಬ ವಿದ್ಯಾರ್ಥಿಯೆಂಬ ಭಾವನೆಯಿಂದ ಕೂಡಿರಬೇಕು. ಅಭ್ಯುದಯಕ್ಕೂ ನಿಶ್ರೇಯಸಕ್ಕೂ ಕಾರಣವಾದ ಸದ್ಗ್ರಂಥಗಳನ್ನು ಅವಲೋಕಿಸುತ್ತಲೇ ಇರುವದು, ತನ್ನ ಪಾಠ ಪ್ರವಚನಕ್ಕೆ ಸಂಬಂಧಪಟ್ಟ ಹೊಸ ಗ್ರಂಥಗಳನ್ನು ಮನನ ಮಾಡುತ್ತಿರುವದೂ—ಇವೆರಡೂ ಅವನ ತಪಸ್ಸು. ತಪಸ್ವಿಯಾದವನು ತನ್ನ ಧ್ಯೇಯವೊಂದನ್ನು ಬಿಟ್ಟು ಮಿಕ್ಕದ್ದೆಲ್ಲವನ್ನೂ ಮರೆತುಬಿಡುವಂತೆ, ಉಪಾಧ್ಯಾಯನು ವಿದ್ಯಾಭ್ಯಾಸಕ್ಕೆ ಅನುಗುಣವಾಗದ, ಅದರಿಂದ ಬೇರೆ ಕಡೆಗೆ ಚಿತ್ತವನ್ನು ಸೆಳೆಯುವ,

ವಿಚಾರಗಳನ್ನೂ ಚಟುವಟಿಕೆಗಳನ್ನೂ ಅತ್ಯಂತವಾಗಿ ದೂರದಲ್ಲಿರಿಸಬೇಕು. ಇದೇ ಅವನ ಬ್ರಹ್ಮಚರ್ಯವು. ಪರಮೇಶ್ವರನೇ ಸರ್ವವಿದ್ಯೆಗಳಿಗೂ ಮೂಲವು; ಆತನ ಅನುಗ್ರಹದಿಂದಲೇ ತಾನು ವಿದ್ಯೆಯನ್ನು ಗಳಿಸಿ ಆತನ ಪ್ರೇಮಕ್ಕೆ ಪಾತ್ರರಾದ ವಿದ್ಯಾರ್ಥಿಗಳಿಗೆ ಹಂಚುತ್ತಿರುವೆನೆಂದು ಭಾವಿಸುತ್ತಿರಬೇಕು. ಇದೇ ಅವನ ಭಗವತ್ಸೇವೆ, ಮತ್ತು ಭಾಗವತ ಸೇವೆ.

ಆದ್ದರಿಂದ ನೀವು ಇನ್ನು ಮುಂದೆ ನಿಜವಾಗಿಯೂ ಉಪಾಧ್ಯಾಯನಾಗಿರುವೆನೆಂದು ಪ್ರತಿಜ್ಞೆಯನ್ನು ಮಾಡಿಕೊಳ್ಳಿರಿ. ಜ್ಞಾನಾರ್ಜನೆಯನ್ನು ಮಾಡುವದೂ ಮಕ್ಕಳ ಬುದ್ಧಿಯನ್ನು ವಿಕಾಸಗೊಳಿಸುವದಕ್ಕೆ ಯತ್ನಿಸುವದೂ ನಿಮ್ಮ ವ್ರತವಾಗಿರಲಿ. ಯಾವದೊಂದು ದುರಭಿಮಾನದವರ ಬಲೆಗೆ ಬೀಳದಿರುವಂತೆ ಎಚ್ಚರಿಕೆಯಿಂದಿರಿ. ಆದರಿಂದ ದೇಶ ಸೇವೆಯೂ ಈಶ ಸೇವೆಯೂ ತಪ್ಪದೆ ಆಗುವವು.

## 30. ಸಂಸ್ಕೃತ ಕಲಿಯುವದರಿಂದ ಪರಮಲಾಭ

**(ಮೇ 1948)**

*ನಿಮ್ಮ ಪತ್ರವು ಬಂದು ತಲುಪಿದೆ. ಈಗಿನ ಕಾಲವಲ್ಲಿ ನಮಗೆ ಸಂಸ್ಕೃತವನ್ನು ಕಲಿಯುವದಕ್ಕೆ ವಿರಾಮವಾಗಲಿ ಸಹಾಯಮಾಡುವ ಜನರಾಗಲಿ ಪುಸ್ತಕಗಳಾಗಲಿ ಸಿಕ್ಕುವದು ಕಷ್ಟವಾಗಿರುತ್ತದೆ. ಭಗವಂತನು ಸಂಸ್ಕೃತವನ್ನರಿಯದವರಿಗೆ ಸದ್ಗತಿಯನ್ನು ಕೊಡುವದಿಲ್ಲವೆ? ಅದೇ ನಿಜವಾಗಿದ್ದರೆ ಸಂಸ್ಕೃತದ ಗಂಧವೇ ಇಲ್ಲದ ಕೋಟ್ಯಂತರ ಜನಗಳ ಪಾಡೇನು? ಸಂಸ್ಕೃತವನ್ನು ಕಲಿಯುವದಕ್ಕೆ ಪ್ರಯತ್ನಪಟ್ಟರೂ ನಮಗೆ ಅದು ಎಟುಕುವ ಹಾಗಿಲ್ಲ! ಏನು ಮಾಡುವದು?–ಎಂದು ಬರೆದಿದ್ದೀರಿ.*

ಭಗವಂತನಿಗೆ ಯಾವದೊಂದು ಭಾಷೆಯ ಅಭಿಮಾನವೂ ಇಲ್ಲ. ಆದರೆ ಭಕ್ತರ ಮೇಲೆ ಹೆಚ್ಚಿನ ಅಭಿಮಾನವಿರುತ್ತದೆ. ಯಾರು ನನ್ನನ್ನು ಭಕ್ತಿಯಿಂದ ಭಜಿಸುವರೋ ಅವರು ನನ್ನಲ್ಲಿರುವರು, ನಾನೂ ಅವರಲ್ಲಿರುವೆನು–ಎಂದು ಆತನು ಹೇಳಿರುತ್ತಾನೆ. ಆದ್ದರಿಂದ ಸಂಸ್ಕೃತವನ್ನು ಅರಿಯೆವೆಂದು ಯಾರೂ ನಿರಾಶೆಯನ್ನು ಹೊಂದಬೇಕಾಗಿಲ್ಲ; ಭಗವಂತನಲ್ಲಿ, ಸರ್ವಭೂತಗಳ ಆತ್ಮನಾಗಿರುವ ಆ ಪರಮೇಶ್ವರನಲ್ಲಿ, ನಿಶ್ಚಲವಾದ ಪ್ರೇಮವನ್ನು ಸಾಧಿಸಿಕೊಂಡರೆ ಸಾಕಾಗಿರುತ್ತದೆ. ಅಂಥವರೆಲ್ಲರಿಗೂ ಸದ್ಗತಿಯಾಗುವದು.

ಆದರೆ ಸಂಸ್ಕೃತವನ್ನು ಕಲಿಯುವದಕ್ಕೆ ಬಿಡುವಿಲ್ಲ ಎಂಬ ನೆಪವನ್ನು ಮಾತ್ರ ನಾನು ಒಪ್ಪಲಾರೆ. ನಾವು ಪರಕೀಯರ ಭಾಷೆಯಾದ ಇಂಗ್ಲೀಷು, ಫ್ರೆಂಚು–ಮುಂತಾದ ಭಾಷೆಗಳನ್ನು ಕಲಿಯುವದರಲ್ಲಿ ಹಾಕುವ ಹೊತ್ತನ್ನು ಎತಕ್ಕೆ ಸಂಸ್ಕೃತಕ್ಕೆ ಉಪಯೋಗಿಸ

ಬಾರದು? ಹಿಂದೆ ಪ್ರಭುತ್ವವನ್ನು ಮಾಡಿದವರ ಭಾಷೆಯು ಇಂಗ್ಲೀಷು, ಈಗಿನ ರಾಷ್ಟ್ರಭಾಷೆಯು ಹಿಂದಿ–ಎಂಬ ಕಾರಣದಿಂದ ನಮ್ಮ ಮಕ್ಕಳು ಆ ಭಾಷೆಗಳನ್ನು ಕಲಿಯುವವಾದರೆ ಎಂದೆಂದಿಗೂ ಪ್ರಭುತ್ವವನ್ನು ಮಾಡುತ್ತಿರುವ, ಎಲ್ಲಾ ರಾಷ್ಟ್ರಗಳ ಕ್ಷೇಮಕ್ಕೂ ಅವಶ್ಯಕವಾಗಿರುವ ಹಿತವನ್ನು ತಿಳಿಸುತ್ತಿರುವ, ಭಗವಂತನ ಪರಿಚಯವನ್ನು ಮಾಡಿಕೊಡುವ ಭಾಷೆಯೆಂಬ ಕಾರಣದಿಂದ ಸಂಸ್ಕೃತವನ್ನೇಕೆ ಕಲಿಯಬಾರದು? ಅದಿರಲಿ. ನಾವುಗಳು ವ್ಯರ್ಥವಾಗಿ ಹಾಳುಹರಟೆಯಲ್ಲಿ ಎಷ್ಟು ಕಾಲವನ್ನು ಕಳೆಯುತ್ತಿದ್ದೇವೆ. ಅನರ್ಥಕರವಾದ ವ್ಯವಹಾರಗಳಲ್ಲಿ ಎಷ್ಟು ಕಾಲವನ್ನು ಕಳೆಯುತ್ತಿದ್ದೇವೆ–ಎಂಬುದನ್ನು ಸ್ವಲ್ಪ ಯೋಚಿಸುವದು ಒಳ್ಳೆಯದು. ದಿನಕ್ಕೆ ಅರ್ಧಘಂಟೆಯ ಕಾಲವೂ ನಿಮಗೆ ಸಿಕ್ಕುವದಿಲ್ಲವೆ?

ಸಂಸ್ಕೃತವು ವ್ಯಾಕರಣಾದಿಸಂಸ್ಕಾರಗಳಿಂದ ಕೂಡಿದ ಭಾಷೆ. ಪ್ರಪಂಚದ ಭಾಷೆಗಳನ್ನು ಪರಿಶೀಲಿಸುವ ಭಾಷಾಶಾಸ್ತ್ರವು ಸಂಸ್ಕೃತವ್ಯಾಕರಣದಿಂದಲೇ ವಿದ್ವಾಂಸರಿಗೆ ಹೊಳೆಯಿತು. ಸಂಸ್ಕೃತವು ಭರತಖಂಡದ ಸಂಸ್ಕೃತಿಯ ಭಾಷೆ. ಅದರಲ್ಲಿ ಶ್ರುತಿ, ಸ್ಮೃತಿ, ಪುರಾಣ, ಕಾವ್ಯ, ನಾಟಕ, ಛಂದಸ್ಸು, ಜ್ಯೋತಿಷ, ಗಣಿತ, ವೈದ್ಯ, ಸಂಗೀತ–ಮುಂತಾದ ಧರ್ಮಾರ್ಥಕಾಮಮೋಕ್ಷಗಳ ವಿಚಾರವೆಲ್ಲ ತುಂಬಿ ತುಳುಕಾಡುವ ಗ್ರಂಥಗಳು ಸಾವಿರಗಟ್ಟಲೆಯಾಗಿರುತ್ತವೆ. ಸಂಸ್ಕೃತವು ನಮ್ಮ ಪೂರ್ವಜರ ಅಭಿಪ್ರಾಯಗಳನ್ನೂ ಆಶೋತ್ತರಗಳನ್ನೂ ತಿಳಿಸಿಕೊಡುವ ಭಾಷೆ. ಸಂಸ್ಕೃತವು ದೇಶಭಾಷೆಗಳ ಕೋಶವನ್ನು ಒದಗಿಸುತ್ತಿರುವ ಭಾಷೆ. ಸಂಸ್ಕೃತವು ಜಗತ್ತಿಗೆಲ್ಲ ಶಾಂತಿಸುಖಗಳ ಸಂದೇಶವನ್ನು ತಂದಿರುವ ಭಾಷೆ. ಈ ಭಾಷೆಯನ್ನು ಕಲಿಯುವದಕ್ಕೆ ನಮಗೆ ವಿರಾಮವಿಲ್ಲವೆನ್ನುವದು ಎಂಥ ಮೂರ್ಖತನ!

ಸಂಸ್ಕೃತವನ್ನು ಕಲಿಯುವೆನೆಂದೂ ಮನೆಯವರಿಗೆಲ್ಲ ಸಂಸ್ಕೃತವನ್ನು ಕಲಿಸುವೆನೆಂದೂ ಕೂಡಲೆ ಪ್ರತಿಜ್ಞೆಯನ್ನು ಮಾಡಿರಿ. ದಿನಕ್ಕೆ ಅರ್ಧಘಂಟೆಯಾದರೂ ಸಂಸ್ಕೃತಾಭ್ಯಾಸಕ್ಕೆ ಹಾಕದೆ ಅನ್ನವನ್ನು ತಿನ್ನುವದಿಲ್ಲವೆಂದು ಶಪಥವನ್ನು ಮಾಡಿಕೊಳ್ಳಿರಿ. ಕನ್ನಡದಲ್ಲಿರುವ ಭಾಷಾಂತರಗಳ ಮೂಲಕವಾಗಿ ಕಾವ್ಯಗಳನ್ನು ನೋಡುವದಕ್ಕೆ ಪ್ರಾರಂಭಿಸಿರಿ. ಅದಾಗದಿದ್ದರೆ ಪ್ರತಿದಿನವೂ ಭಾರತರಾಮಾಯಣಗಳನ್ನು ಸ್ವಲ್ಪ ಓದುವ, ಓದಿ ಹೇಳುವ, ಅಭ್ಯಾಸವನ್ನು ಕೂಡಲೆ ಇಟ್ಟುಕೊಳ್ಳಿರಿ. ಸಂಸ್ಕೃತವು ನಿಮಗೆ ಬೇಗನೆ ಬಂದುಬಿಡುವದು. ಈಗ ರಾಮಾಯಣಕ್ಕೆ ಪ್ರತಿಪದಾರ್ಥವನ್ನು ಕೂಡ ಕನ್ನಡದಲ್ಲಿ ಬರೆದಿರುವ ಪುಸ್ತಕಗಳು ಸಿಕ್ಕುತ್ತವೆ. ಅದನ್ನು ಓದಿದರೆ ಭಾಷಾಜ್ಞಾನವೂ ಪುಣ್ಯವೂ ಪುರುಷಾರ್ಥವೂ ತಪ್ಪದೆ ನಿಮಗೆ ವಶವಾಗುವವು.

ಹಿಂದಿಯು ರಾಷ್ಟ್ರಭಾಷೆಯೆಂದು ಹೆಂಗಸರು, ಮಕ್ಕಳು–ಎಲ್ಲರೂ ಅದನ್ನು ಓದುತ್ತಿರುವರು. ಆ ಭಾಷೆಗೆ ಬೆಂಬಲವಾಗಿಯಾದರೂ ಸಂಸ್ಕೃತವು ಬೇಕೆಂಬುದು ನಿಮ್ಮ ಮನಸ್ಸಿಗೆ ಯಾವಾಗಲಾದರೂ ಹೊಳೆದಿದೆಯೇ? ರಾಷ್ಟ್ರಭಾಷೆಯನ್ನು ಓದಿದವರೆಲ್ಲರೂ ರಾಜಕೀಯ ವಿಚಾರಗಳಲ್ಲಿ ತಲೆಹಾಕಬೇಕೆಂದು ಕೆಲವರು ತಪ್ಪು ತಿಳಿದುಕೊಂಡಿರುತ್ತಾರೆ. ಹಾಗೆಯೇ ಸಂಸ್ಕೃತವನ್ನು ಓದುವದಕ್ಕೆ ಬ್ರಾಹ್ಮಣರು, ಅದರಲ್ಲಿಯೂ ಗಂಡಸರು ಮಾತ್ರ ಅಧಿಕಾರಿಗಳೆಂದು ಕೆಲವರು ಮೂರ್ಖರು ತಿಳಿದುಕೊಂಡಿರುತ್ತಾರೆ. ನಮಗೆ ಇಚ್ಛೆ ಹೊಂದಿದ್ದರೆ, ಹಿಂದುಗಳೆಲ್ಲರೂ–ಗಂಡಸರು ಹೆಂಗಸರು, ದೊಡ್ಡವರು ಚಿಕ್ಕವರು ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಭೇದವಿಲ್ಲದೆ–ಆ ಭಾಷೆಯನ್ನು ಬಲು ಬೇಗನೆ ಕಲಿತುಕೊಂಡುಬಿಡಬಹುದು. ಅದರಿಂದಾಗುವ ಪರಮಲಾಭವನ್ನು ಪಡೆಯಬಹುದು. ಈ ವಿಷಯಕ್ಕೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

## 31. ದಾಂಭಿಕತನದಿಂದ ಹಾನಿ

**(ಜೂನ್ 1948)**

*ನಿಮ್ಮ ಪತ್ರವನ್ನು ಓದಿ ಬಹಳ ಸಂತೋಷವಾಯಿತು. ನದಿಯ ದಡದಲ್ಲಿ ಕುಳಿತು ಧ್ಯಾನವನ್ನು ಮಾಡುವದರಿಂದ ಮನಸ್ಸಿಗೆ ಬಹಳ ಹರ್ಷವಾಗುತ್ತಿದೆ. ಸ್ನೇಹಿತರುಗಳು ದಿನದಿನಕ್ಕೆ ಹೆಚ್ಚುತ್ತಿದ್ದಾರೆ; ಅವರೆಲ್ಲರೂ ಸ್ನಾನಕ್ಕೂ ಸಾಯಂಕಾಲದ ಸಂಧ್ಯಾವಂದನೆಗೂ ನದಿಗೆ ಬರುತ್ತಿದ್ದಾರೆ–ಎಂದು ಬರೆದಿರುತ್ತೀರಿ.*

ನದಿಯ ಸ್ನಾನವೂ ಅಲ್ಲಿ ಮಾಡುವ ಆಹ್ನಿಕವೂ ಅಧ್ಯಾತ್ಮದೃಷ್ಟಿಯಿಂದ ಲಾಭದಾಯಕವೇ ಸರಿ. ಆದರೆ ನಾವು ಯಾವ ಭಾವದಿಂದ ಅಲ್ಲಿ ಸಾಧನಗಳನ್ನು ಮಾಡುವೆವೋ ಅದನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕು. ನಾವು ಸ್ನಾನಮಾಡುವ ಸ್ಥಳ, ಧ್ಯಾನಮಾಡುವ ಸ್ಥಲ–ಇವು ಬಹು ಜನರ ದೃಷ್ಟಿಗೆ ಬೀಳುವ ಹಾಗಿದ್ದರೆ, ನಾವು ಈ ಪವಿತ್ರಕಾರ್ಯಗಳನ್ನು ಮಾಡುತ್ತಿದ್ದೇನೆ ಎಂಬ ಹೆಮ್ಮೆಯೂ ನಮಗೂ ತಿಳಿಯದಂತೆಯೇ ನಮ್ಮ ಅಂತಃಕರಣದಲ್ಲಿ ಮೂಡಿಕೊಳ್ಳುವದು ನಿಶ್ಚಯ. ಆಗ ಈ ಸಾಧನಗಳು ಸಾಧನಗಳೇ ಅಲ್ಲದೆ ಹೋಗುವವು.

ನಾನು ಧಾರ್ಮಿಕನು, ಆಚಾರವಂತನು–ಎಂಬುದು ಮತ್ತೊಬ್ಬರಿಗೆ ಕಾಣುವಂತೆ ಮಾಡುವ ಭಾವವು ದಂಭ ಎನಿಸುವದು. ದಂಭಕ್ಕೆ ಅಹಂಕಾರವೇ ತಳಗಟ್ಟು. ಯಾವ ಸಾಧನವೇ ಆಗಲಿ ಅಹಂಕಾರವನ್ನು ಮಟ್ಟು ಮಾಡುವಂತಿರಬೇಕು. ಅಹಂಕಾರವು ತಲೆ

ಎತ್ತಿಕೊಂಡರೆ ಅದು ಸಾಧನವಾಗುವದಕ್ಕೆ ಬದಲು ಬಾಧಕವಾಗಿ ಪರಿಣಮಿಸುವದು. ಮನಸ್ಸು ಒಳಮುಖವಾಗುವದಕ್ಕೆ ಬದಲು ಹೊರಮುಖವಾದರೆ ಚಿತ್ತದಲ್ಲಿ ವಿಕ್ಷೇಪ ವಾಗುವದು, ಸಾತ್ತ್ವಿಕವೃತ್ತಿಯಲ್ಲಿ ಪ್ರತಿಬಿಂಬಿಸಬೇಕಾಗಿರುವ ಪರಮಾತ್ಮನ ದರ್ಶನವು ದೂರವಾಗುವದು.

ತಾನು ಇಂಥವನೆಂದು ತೋರಿಸಿಕೊಳ್ಳುವ ದಾಂಭಿಕತನದಿಂದ ವ್ಯವಹಾರ ದಲ್ಲಿಯೇ ಹಾನಿಯಾಗುತ್ತಿರುವದು. ತನ್ನ ವಿಷಯಕ್ಕೆ ಜನರು ಒಳ್ಳೆಯ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳಬಾರದು ಎಂಬ ಹಂಬಲಿನಿಂದ ನಾವು ಇಲ್ಲದ ಆಯಾಸವನ್ನು ಮೈ ಮೇಲೆ ಹಾಕಿಕೊಳ್ಳಬೇಕಾಗುವದು. ಹೀಗಿರುವಲ್ಲಿ ಅಂತರ್ಮುಖರಾಗಿ, ಹೊರಗಿನ ಯಾವ ಸೋಂಕೂ ಇಲ್ಲದ ವೃತ್ತಿಯ ಪ್ರವಾಹವನ್ನು ತಂದುಕೊಳ್ಳುವ ಅಧ್ಯಾತ್ಮಸಾಧನಕ್ಕೆ ಇದು ಎಷ್ಟು ಹಾನಿಕರವಾಯಿತು!

ಸದಿಗೆ ಹೋದರೆ ತಪ್ಪಲ್ಲ. ಅಲ್ಲಿಯ ವಾತಾವರಣವು ಶುದ್ಧವಾಗಿದ್ದರೆ ಅಧ್ಯಾತ್ಮಸಾಧನವು ವೀರ್ಯವತ್ತರವಾಗುತ್ತದೆ. ಆದರೆ ಹೊರಗಿನ ವಾತಾವರಣಕ್ಕಿಂತಲೂ ಮನಸ್ಸಿನ ವಾತಾವರಣವು ನಿರ್ಮಲವಾಗಿರುವದು ಅತ್ಯವಶ್ಯ. ಇದಕ್ಕಾಗಿ ಸಾಧಕನು ಯಾವಾಗಲೂ ಆದಷ್ಟು ಏಕಾಂತದಲ್ಲಿರುವದನ್ನು ಅಭ್ಯಾಸ ಮಾಡಬೇಕು. ನಿಮ್ಮಗಳ ದೃಷ್ಟಿಯಲ್ಲಿರಲೆಂದು ಈ ವಿಚಾರವನ್ನು ಇಲ್ಲಿ ಎತ್ತಿ ಬರೆದಿರುತ್ತೇನೆ. ನಿಮಗೆ ಸಾಧನದ ಪೂರ್ಣ ಫಲವು ದೊರಕಲೆಂಬುದೇ ನನ್ನ ನಿಜವಾದ ಹಾರೈಕೆ.

## 32. ಬಡತನವೂ ಸಿರಿತನವೂ

### (ಜುಲೈ1948)

*ನಿಮ್ಮ ಪತ್ರವು ತಲುಪಿರುತ್ತದೆ. ನೀವು ಈಗ ಬಹಳ ಕಷ್ಟಕ್ಕೆ ಸಿಕ್ಕಿದ್ದೇನೆಂದು ಬರೆದಿರುವದು ನನಗೆ ಬಹಳ ದುಃಖವನ್ನುಂಟುಮಾಡಿದೆ. ಬಡತನವೆಂಬುದು ಕೆಲವು ವೇಳೆ ಸಹಿಸಲಾರದಷ್ಟು ಅಸಹ್ಯವಾಗಿರುತ್ತದೆ ಎಂಬುದು ನಿಜ. "ಇಂಥ ಕಷ್ಟಕಾಲದಲ್ಲಿ ನನ್ನಿಂದ ಹಿಂದೆ ಉಪಕಾರವನ್ನು ಹೊಂದಿದ್ದವರು ಯಾರೊಬ್ಬರೂ ನನಗೆ ಸಹಾಯಮಾಡುವದಕ್ಕೆ ಬಯಸದಿಲ್ಲ. ಧರ್ಮಬುದ್ಧಿ ವಿಷಯಕ್ಕೆ ನನಗೆ ಈಗ ಸಂಶಯವೇ ಉಂಟಾಗಿದೆ" ಎಂದು ಬರೆದಿರುತ್ತೀರಿ.*

ಕಷ್ಟದಲ್ಲಿರುವವರನ್ನು ಯಾರೂ ಕೈಬಿಟ್ಟರೂ ಈಶ್ವರನು ಬಿಡುವ ಹಾಗಿಲ್ಲವೆಂಬುದನ್ನು ನೀವು ಮರೆಯಬಾರದು. ಈಶ್ವರನಿಗೆ ಯಾವದರ ಕೊರತೆಯೂ ಇಲ್ಲ; ತನ್ನನ್ನು ನಂಬಿದವರನ್ನು ಕಾಪಾಡುವ ಬಗ್ಗೆ ಆತನು ಸ್ವಲ್ಪವೂ ಹಿಂತೆಗೆಯುವದಿಲ್ಲ.

ಆತನಂಥ ದೀನಬಂಧುವು ಮತ್ತೊಬ್ಬರು ಯಾರೂ ಇರುವದಿಲ್ಲ. ಆದ್ದರಿಂದ ಆತನನ್ನೇ ನಂಬಿ ನೀವು ಅಧ್ಯಾತ್ಮ ಸಾಧನನಿರತರಾಗಿರಿ.

ನೀವು ಈಗ ಮಾಡಬೇಕಾಗಿರುವ ಮೊದಲನೆಯ ಸಾಧನವೆಂದರೆ, ಯಾವ ವಿಷಯದಲ್ಲಿಯೂ ತುಚ್ಛವಾದ ಅಭಿಪ್ರಾಯವಿಲ್ಲದೆ ಇರುವದು. "ಇವರೆಲ್ಲ ಧನಿಕರಾಗಿದ್ದಾರೆ, ಬೇಕಾದ ಸಾಮಗ್ರಿಗಳೆಲ್ಲ ಇವರಿಗೆ ಇವೆ. ನನಗೇಕೆ ಇವರು ಸಹಾಯವನ್ನು ಮಾಡಬಾರದು?" ಎಂಬ ಬುದ್ಧಿಯನ್ನು ಮೊದಲು ತೊಲಗಿಸಿಕೊಳ್ಳಿರಿ. "ಮತ್ತೊಬ್ಬರಲ್ಲಿರುವ ವಸ್ತುಗಳನ್ನು ಅವರು ನನಗೆ ಕೊಡಬೇಕು; ಅವರಲ್ಲಿ ನನಗೆ ಹಕ್ಕಿದೆ" ಎಂಬ ಬುದ್ಧಿಯು ಬಹಳ ಕೀಳುಮಟ್ಟದ್ದು. ಒಬ್ಬರ ಅಪ್ಪಣೆಯಿಲ್ಲದೆ ಅವರ ಪದಾರ್ಥಗಳನ್ನು ನಾವು ತೆಗೆದುಕೊಳ್ಳುವದು ಕಳವು; ಅವರ ಪದಾರ್ಥಗಳಲ್ಲಿ ಕೆಲವು ನಮಗೆ ಇದ್ದರೆ ಆಗಿತ್ತು ಎಂದು ಮನದಲ್ಲಿಯೇ ಕುದಿದುಕೊಳ್ಳುವದೂ ಒಂದು ಬಗೆಯ ಸ್ತೇಯವೇ.

ಅಸ್ತೇಯವೆಂಬುದು ಒಂದು ಉತ್ತಮ ಸಾಧನವು. ಮತ್ತೊಬ್ಬರ ಪದಾರ್ಥವನ್ನು ಕೈಯಿಂದ, ಮಾತಿನಿಂದ ಅಥವಾ ಮನದಿಂದ ತನ್ನ ಉಪಯೋಗಕ್ಕೆ ಬಯಸದೆ ಇರುವದು ಅಸ್ತೇಯವು. ಯಾರಲ್ಲಿ ಅಸ್ತೇಯವು ಸಂಪೂರ್ಣವಾಗಿರುವದೋ ಅವರಿಗೆ ಪೃಥ್ವಿಯಲ್ಲಿರುವ ಎಲ್ಲಾ ರತ್ನಗಳೂ ಕಾಣಿಸಿಕೊಳ್ಳುವವು ಎಂದು ಪತಂಜಲಿ ಋಷಿಗಳು ತಮ್ಮ ಯೋಗಸೂತ್ರದಲ್ಲಿ ತಿಳಿಸಿರುತ್ತಾರೆ. ಒಂದಾನೊಂದು ಕಾಲದಲ್ಲಿ ಒಂದು ದೇಶದಲ್ಲಿ ಹನ್ನೆರಡು ವರ್ಷದ ಕ್ಷಾಮವು ಬಂದಿತಂತೆ, ಆಗ ಋಷಿಗಳು ತಿನ್ನುವದಕ್ಕೆ ಗೆಡ್ಡೆಗೆಣಸುಗಳು ಕೂಡ ಸಿಕ್ಕದೆ ಅಲ್ಲಲ್ಲಿ ಸಂಚರಿಸುತ್ತಿದ್ದರಂತೆ. ಆ ದೇಶದ ರಾಜನು ಅವರ ದಾರಿಯಲ್ಲಿ ಅವರಿಗೆ ಸಿಕ್ಕುವ ಹಾಗೆ ಅನೇಕ ಭೋಗ್ಯವಸ್ತುಗಳನ್ನು ಹಾಕಿಸಿದ್ದನಂತೆ. ಆದರೆ ಆ ಋಷಿಗಳು "ಛೀ! ಇವು ಪರಸ್ವತ್ತುಗಳಲ್ಲವೆ? ಇವುಗಳ ಗೊಡವೆಗೆ ಹೋಗಬಾರದು" ಎಂದು ಅತ್ತ ಸರಿಯುತ್ತಿದ್ದರಂತೆ! ಹೀಗಿರಬೇಕು, ಅಸ್ತೇಯವೆಂದರೆ!

ಅಸ್ತೇಯವೆಂದರೆ ಮತ್ತೊಬ್ಬರ ಸ್ವತ್ತನ್ನು ತೆಗೆದುಕೊಳ್ಳದೆ ಇರುವದೆಂದು ಮಾತ್ರವೇ ಅರ್ಥವಲ್ಲ. ಪ್ರಪಂಚದಲ್ಲಿರುವದೆಲ್ಲವೂ ಪರಮೇಶ್ವರನಿಗೆ ಸೇರಿದ್ದು. ಆತನ ದಯೆಗೆ ಪಾತ್ರರಾದವರಿಗೆ ಏತಕ್ಕೂ ಕಡಿಮೆಯಿಲ್ಲ ಎಂಬುದನ್ನು ಪರಮವಿದುವವರೆಗೂ ನಮ್ಮ ನಂಬಿಕೆಯು ಹೋಗಬೇಕು. ಆಗ ಯಾವದೊಂದು ವಸ್ತುವೂ ನಮ್ಮಲ್ಲಿ ನಮ್ಮ ಸಂಪಾದನೆಯಿಂದ ಬಂದಿರುವದೆಂದು ನಾವು ನಂಬಿಕೊಂಡಿರುವ ವಸ್ತುಗಳು ಕೂಡ—ಪರಮೇಶ್ವರನಿಂದ ಬಂದಿರುವವೇ ಹೊರತು ಯಾರೊಬ್ಬರಿಗೂ ಸೇರಿದ್ದಲ್ಲ. ಪರಮೇಶ್ವರನ ಭಂಡಾರದಲ್ಲಿ ಇಲ್ಲದ ವಸ್ತುವಿಲ್ಲ—ಎಂಬುದು ನಮಗೆ ಮನವಟ್ಟಾಗುವದು.

ಪ್ರಪಂಚದಲ್ಲಿರುವ ಸಂಪತ್ತೆಲ್ಲ ಈಶ್ವರರಿಗೆಲ್ಲ ಈಶ್ವರನಾದ ಭಗವಂತನದು, ಮತ್ತೆ ಯಾರಿಗೂ ಆತನ ಅನುಗ್ರಹದಿಂದಲ್ಲದೆ ಅದರಲ್ಲಿ ಪಾಲಿರುವದಿಲ್ಲ. ಯಾರು ಯಾವ ಕಾಲದಲ್ಲಿ ಯಾವ ಭೋಗಸಾಮಗ್ರಿಗಳನ್ನು ಪಡೆದುಕೊಂಡು ಸುಖವನ್ನಾಗಲಿ ದುಃಖವನ್ನಾಗಲಿ ಅನುಭವಿಸಬೇಕು? ಅದನ್ನು ಅವರವರ ಕರ್ಮಾನುಗುಣವಾಗಿ ಆತನೇ ನಿರ್ಣಯಿಸುವನು. ಮನುಷ್ಯನಿಗೆ ಈ ಲೋಕದಲ್ಲಿ ಬರುವ ಕಷ್ಟವೆಂಬುದು ಅವನಲ್ಲಿರುವ ಭೋಗರಾಶಿಯ ಅಭಾವದಿಂದಲ್ಲ; ಅವನ ಮನಸ್ಸಿನ ಸ್ಥಿತಿಯಿಂದ. "ಮನಸ್ಸು ಪರಿತುಷ್ಟವಾಗಿದ್ದರೆ ಸಿರಿವಂತನಾರು, ಬಡವನಾರು?" ಎಂಬ ಸುಭಾಷಿತವು ಅಕ್ಷರಶಃ ನಿಜ. ಸಂತುಷ್ಟಿಗಿಂತ ಹೆಚ್ಚಿನ ಸಂಪತ್ತಿಲ್ಲ; ಪರಮೇಶ್ವರನು ನಮಗೆ ಬೇಕಾದದ್ದೆಲ್ಲವನ್ನೂ ಅನುಗ್ರಹಿಸುತ್ತಿರುವನು ಎಂಬ ನಂಬಿಕೆಯಿಂದಲ್ಲದೆ ಮತ್ತೇತರಿಂದಲೂ ಪೂರ್ಣ ಸಂತುಷ್ಟಿಯಾಗುವ ಹಾಗಿಲ್ಲ. ಇಂಥ ಸಂತುಷ್ಟಿಯು ಬಂದ ಕೂಡಲೆ ನಿಮ್ಮ ಹೊರಗಿನ ಲೌಕಿಕ ಸಂಪತ್ತೂ ಬದಲಾಯಿಸುತ್ತದೆ ನಿಮ್ಮ ಅಂತಃಕರಣವು ಈಗಲೇ ಪರಮೇಶ್ವರನ ಕಡೆಗೆ ಪೂರ್ಣವಾಗಿ ಹೊರಳಲಿ. ಆತನ ಅನುಗ್ರಹದಿಂದ ಸುಖ ಸಂಪತ್ತು ನಿಮಗೆ ಸೂರೆಯಾಗಲಿ ಎಂಬುದೇ ನನ್ನ ಪ್ರಾರ್ಥನೆ.

## 33. ಸಾಕ್ಷಾತ್ಕಾರ

**(ಡಿಸೆಂಬರ್ 1948)**

*ತಮ್ಮ ಪತ್ರವು ಬಂದು ಬಹಳ ದಿನಗಳಾದವು. "ಭಗವಂತನ ಧ್ಯಾನವನ್ನು ಎಡೆಬಿಡದೆ ಮಾಡುವದರಿಂದ ನಿಮ್ಮ ಆತ್ಮನು ತನ್ನ ನಿಜಸ್ವರೂಪದಿಂದ ಬೆಳಗುವನು" ಎಂದು ಸ್ವಾಮಿಗಳು ಬರೆದಿರುತ್ತಾರೆ. ಇಲ್ಲಿ ಧ್ಯಾನವನ್ನು ಮಾಡುವದೆಂದರೇನು? ಧ್ಯಾನದಿಂದ ಭಗವಂತನನ್ನು ಪ್ರತ್ಯಕ್ಷವಾಗಿ ನೋಡಲು ಸಾಧ್ಯವೆ? ಎಂದು ಕೇಳಿರುತ್ತೀರಿ.*

ಈ ಪ್ರಶ್ನೆಗೆ ಎರಡು ಬೇರೆ ಬೇರೆಯ ಉತ್ತರಗಳನ್ನು ಕೊಡಬೇಕಾಗಿದೆ. ಧ್ಯಾನವೆಂದರೇನೆಂಬುದು ಸ್ವಾಮಿಗಳು ಬರೆಯುತ್ತಾ ಬಂದಿರುವ ಪ್ರತಿ ತಿಂಗಳ ಸಂದೇಶಗಳಿಂದ ಸ್ಪಷ್ಟವಾಗಬಹುದು. ಅವರು ಬರೆದಿರುವದು ಪರಮಾತ್ಮನು ಇದ್ದಂತೆ, ನಮ್ಮೆಲ್ಲರ ಆತ್ಮನೂ ಆಗಿ ಇರುವನೆಂದು ಶಾಸ್ತ್ರೋಪದೇಶವಂತೆ. ಆತನನ್ನು ಅರಿತುಕೊಳ್ಳುವದಕ್ಕೆ ಮಾಡಬೇಕಾದ ಪ್ರಯತ್ನವು. ಅದನ್ನು ಧ್ಯಾನವೆಂದು ಗೀತೆಯ ಆರನೆಯ ಅಧ್ಯಾಯದಲ್ಲಿ ಕರೆದಿರುತ್ತದೆ; ಮನೋನಿಗ್ರಹವೆಂದು ಶ್ರೀ ಗೌಡಪಾದರವರ ಕಾರಿಕೆಯ ಮೂರನೆಯ ಪ್ರಕರಣದಲ್ಲಿ ಕರೆದಿರುತ್ತದೆ.

"ಇಷ್ಟದೇವತೆಯ ವಿಗ್ರಹವನ್ನು ಮನಸ್ಸಿನಲ್ಲಿ ಭಾವಿಸುವದು ಧ್ಯಾನವೆ?" ಎಂದು ಕೇಳಿದೀರಿ. ಅದೂ ಧ್ಯಾನವೇ ಸರಿ. ಆದರೆ ಮೇಲೆ ಹೇಳಿರುವ ಧ್ಯಾನದಂತೆ ವಸ್ತುರೂಪವನ್ನು ಅರಿಯುವದಕ್ಕೆ ಮಾಡುವ ಧ್ಯಾನವಲ್ಲ; ಭಾವನಾರೂಪಕವಾದ ಧ್ಯಾನವು. ಇದನ್ನು ಉಪಾಸನೆಯೆಂದೂ ಕರೆಯುತ್ತಾರೆ.

ಸಗುಣನಾದ ಭಗವಂತನ ಧ್ಯಾನದಿಂದ, ಧ್ಯಾನವು ಪಕ್ವವಾದಾಗ, ಪರಮೇಶ್ವರನ ಸಾಕ್ಷಾತ್ಕಾರವು ಆಗುತ್ತವೆ ಎಂದು ಅನೇಕ ಭಕ್ತರು ಹೇಳಿರುತ್ತಾರೆ. ಅವರ ದಿವ್ಯಚರಿತ್ರೆಯಿಂದಲೂ ಇದು ಸಾಧ್ಯವೆಂದು ತಿಳಿದುಬರುತ್ತದೆ. ಆದರೆ ಯಾವದಾದರೊಂದು ಆಕಾರದಿಂದ ಭಗವಂತನನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಹಂಬಲಿನಿಂದ ಮಾಡುದ ಧ್ಯಾನವು ಉತ್ತಮವಾದ ಧ್ಯಾನವಾಗಲಾರದು. ಅದು ಉತ್ತಮಧ್ಯಾನದೃಷ್ಟಿಯಿಂದ ನೋಡಿದರೆ ಸಿನೆಮಚಿತ್ರವನ್ನು ನೋಡುವದಕ್ಕೆ ಟಿಕೆಟ್ ಕೊಂಡುಕೊಳ್ಳುವದಕ್ಕೆ ಸಮಾನವಾಗಿರುತ್ತದೆ. ಪರಮೇಶ್ವರನ ಅನುಗ್ರಹವು ನಮಗೆ ಆಗಬೇಕು–ಎಂದು ಹಾತೊರೆಯುತ್ತಾ ಆತನಿಗೆ ನಮ್ಮ ಅಹಂತೆಯನ್ನೆಲ್ಲ ಅರ್ಪಿಸಿಬಿಡುವದೇ ಉತ್ತಮವಾದ ಧ್ಯಾನದ ಗುರುತು. ಒಬ್ಬ ತಿಳಿಗೇಡಿಯು ಈಶ್ವರನ ಸಾಕ್ಷಾತ್ಕಾರವು ತನಗೆ ಆಗದಿದ್ದರೆ ಪ್ರಾಣವನ್ನು ಕಳೆದುಕೊಳ್ಳವೆನು ಎಂದು ಕುತ್ತಿಗೆಯನ್ನು ಕುಡುಗೋಲಿನಿಂದ ಕೊಯ್ದುಕೊಂಡನೆಂದು ವೃತ್ತಪತ್ರಗಳಲ್ಲಿ ಪ್ರಕಟವಾಗಿದೆ! ಈ ಹಠಮಾರಿತನಕ್ಕೂ ನಿರಭಿಮಾನದಿಂದ ಮಾಡುವ ಪರಮೇಶ್ವರನ ಧ್ಯಾನಕ್ಕೂ ಅಜಗಜಾಂತರವಿರುವದೆಂಬುದನ್ನು ಹೇಳಬೇಕೆ?

## 34. ಸತ್ಸಂಗ

**(ಫೆಬ್ರವರಿ 1949)**

ನಿಮ್ಮ ಪತ್ರವು ಮುಟ್ಟಿದೆ. *"ಸತ್ಸಂಗವು ಸಾಧನಗಳಲ್ಲಿ ದೊಡ್ಡದೆಂದು ಅನೇಕರು ಹೇಳುತ್ತಾರೆ. ಆದರೆ ನನಗೆ ಸತ್ಸಂಗದ ಭಾಗ್ಯವಿಲ್ಲ. ಕೆಲವು ವೇಳೆ ಸತ್ಪುರುಷರ ಸಹವಾಸವು ದೊರೆತರೂ ತಪ್ಪಿಹೋಗಿರುತ್ತದೆ. ಇದಕ್ಕೆ ನನಗೆ ಅವರ ವಿಷಯದಲ್ಲಿ ಕೆಲವು ಸಂಶಯಗಳು ಉಂಟಾದದ್ದೇ ಕಾರಣವು. ಹೀಗೆ ಆದದ್ದನ್ನು ಪಾಪದ ಫಲವೆನ್ನಬೇಕೆ? ಉತ್ತಮವಾದ ಸತ್ಸಂಗವು ಸಿಕ್ಕುವದಕ್ಕೆ ನಾನು ಏನು ಮಾಡಲಿ? ದಯಮಾಡಿ ಬರೆಯಬೇಕು" ಎಂಬುದು ನಿಮ್ಮ ಕೋರಿಕೆ.*

ಆದರೆ ನಾನು ಸತ್ಪುರುಷನೆಂದು ನಿಮಗೆ–ಗೊತ್ತಾದದ್ದು ಹೇಗೆ? ಅಥವಾ ಸತ್ಪುರುಷರನ್ನು ಒರೆಹಚ್ಚಿ ನೋಡುವ ಸಾಧನವು ನನ್ನಲ್ಲಿದೆ ಎಂದು ತಿಳಿದುಕೊಂಡಿದೀರೋ

ಏನು? ನಿಮ್ಮ ಅಭಿಪ್ರಾಯವು ಹೇಗೇ ಇರಲಿ, ನೀವು ಕೇಳಿದ ಪ್ರಶ್ನೆಗೆ ನನಗೆ ತಿಳಿದದ್ದನ್ನು ಮುಚ್ಚುಮರೆಯಿಲ್ಲದೆ ತಿಳಿಸುವದು ನನ್ನ ಧರ್ಮವು. ಆದ್ದರಿಂದ ಇಲ್ಲಿ ಈ ವಿಷಯದಲ್ಲಿ ಕೆಲವು ವಾಕ್ಯಗಳನ್ನು ಬರೆಯುತ್ತೇನೆ. ಇವರಲ್ಲಿ ಗುಣವನ್ನು ಆರಿಸಿಕೊಳ್ಳಿರಿ, ದೋಷವನ್ನು ಬಿಟ್ಟು ಬಿಡಿರಿ.

ಸತ್ಸಂಗವೆಂಬುದು ಭಗವಂತನ ಅನುಗ್ರಹವು. ಆದ್ದರಿಂದ ಭಗವಂತನನ್ನೇ "ದೇವ, ನನಗೆ ಸತ್ಸಂಗವನ್ನು ಕೊಡು" ಎಂದು ಆರ್ತನಾಗಿ ಬೇಡಿಕೊಳ್ಳಬೇಕು. ಭಗವಂತನನ್ನು ನಾವು ನೇರಾಗಿ ನೋಡಿರಬೇಕಾದದ್ದೇನೂ ಇಲ್ಲ. ಭಗವಂತನು ಇಲ್ಲಿಯೇ ಇದ್ದಾನೆಂದು ನಂಬಿ ಬೇಡಿಕೊಳ್ಳಬೇಕು. ಸತ್ಸಂಗವು ಸಿಕ್ಕುವವರೆಗೂ ಗೀತಾ, ವಿಷ್ಣುಸಹಸ್ರನಾಮ–ಮುಂತಾದ ಸಚ್ಛಾಸ್ತ್ರಗಳನ್ನು ಯಥಾಮತಿಯಾಗಿ ಓದುತ್ತಿರಬೇಕು. ಗೀತೆಯಲ್ಲಿ ಸ್ಥಿತಪ್ರಜ್ಞ, ಭಕ್ತ, ತ್ರಿಗುಣಾತೀತ–ಮುಂತಾದ ಹೆಸರಿನಿಂದ ಹೇಳಿರುವದು ಸತ್ಪುರುಷರ ಲಕ್ಷಣವು. ಅದನ್ನು ಪಾರಾಯಣ ಮಾಡುತ್ತಾ ತಿಳಿದ ಮಟ್ಟಿಗೆ ಅರ್ಥಾನುಸಂಧಾನವನ್ನು ಮಾಡುತ್ತಿದ್ದರೆ ಅವಶ್ಯವಾಗಿ ಸತ್ಪುರುಷರ ದರ್ಶನವಾಗುವದು.

ಪುಣ್ಯವಶದಿಂದ ಸತ್ಸಂಗವು ದೊರೆತರೆ ಕೂಡಲೆ ಅದರ ಲಾಭವನ್ನು ಸಂಪಾದಿಸಿಕೊಳ್ಳುವದಕ್ಕೆ ಹೋಗುವದು ಸಾತ್ತ್ವಿಕತನದ ಗುರುತು. ಆದರೆ ಪಾಪವಾಸನೆಯಿಂದ ಮಹಾತ್ಮರನ್ನು ಕೂಡ ಪರೀಕ್ಷೆ ಮಾಡಬೇಕೆಂಬ ಬುದ್ಧಿಯು ನಮ್ಮಲ್ಲಿ ಉಂಟಾಗುತ್ತದೆ. ಆದರೆ ಪರೀಕ್ಷೆಗಾಗಿ ಸತ್ಸಂಗವನ್ನು ಮಾಡುವದೂ ವ್ಯರ್ಥವಲ್ಲ. ಏಕೆಂದರೆ ನಿಜವಾಗಿ ಭಗವದ್ಭಕ್ತರಾದವರು ತಮ್ಮನ್ನು ಯಾರು ಪರೀಕ್ಷೆ ಮಾಡುವರೆಂಬುದನ್ನೇನೂ ಮನಸ್ಸಿಗೆ ತಂದುಕೊಳ್ಳುವದಿಲ್ಲ. ಮೂಲೆಯಲ್ಲಿ ಕಟ್ಟಿ ಒಗೆದ ಕಸ್ತೂರಿಯು ಘಮಘಮಿಸುವಂತೆ ತಮ್ಮ ಸಂಗದ ಫಲವನ್ನು ಮತ್ತೊಬ್ಬರಿಗೆ ತಾನು ಸತ್ಪುರುಷರ ಸೇವೆಯನ್ನು ಮಾಡುತ್ತಿದ್ದೇನೆಂದು ತೋರಿಸಿಕೊಳ್ಳುವದಕ್ಕಾಗಿ ಸತ್ಸಂಗವನ್ನು ಮಾಡುವದೂ ಸಪ್ರಯೋಜನವಾಗಿರುತ್ತದೆ ಎಂದು ತಿಳಿಯಬೇಕು. ಏಕೆಂದರೆ ಮೊದಮೊದಲು ತೋರುಗಾಣಿಕೆಗಾಗಿ ಮಾಡುವ ಸೇವೆಯು ಬರುತ್ತಾ ಬರುತ್ತಾ ನಿಜವಾದ ಸೇವೆಯಾಗಿ ಪರಿಣಮಿಸುತ್ತದೆ.

ಯಾರು ಭಗವಂತನ ಗುಣಾನುವಾದವನ್ನು ಮಾಡುತ್ತಾ ತಾವು ಮಾತ್ರ ಕಾಮಕ್ರೋಧಲೋಭಗಳಿಗೆ ವಶರಾಗಿರುವಂತೆ ಕಾಣುತ್ತಿರುವರೋ ಅಂಥವರು ನಿಜವಾಗಿ ಮಹಾತ್ಮರಾಗಿದ್ದು ನಮ್ಮ ಪಾಪವಶದಿಂದ ಸದೋಷರಾಗಿ ಕಾಣುತ್ತಿರಬಹುದು. ಅಥವಾ ವೇಷಗಾರರಾಗಿದ್ದರೂ ಇರಬಹುದು. ಸಾಧಕರಾದವರು ಅಂಥವರ ಸೇವೆಯಲ್ಲಿರುವದಕ್ಕಿಂತ ತಮಗೆ ನಿಜವಾದ ಸಾಧುಗಳೆಂದು ಯಾರು ಕಾಣುವರೋ ಅವರನ್ನೇ ಸೇವಿಸುವದು

ಉತ್ತಮ. ಮೊದಲನೆಯ ವರ್ಗದವರಲ್ಲಿ ದೋಷವನ್ನು ಕಂಡು ಅವರಲ್ಲಿ ಅನಾದರವಾದರೂ ಉಂಟಾಗಬಹುದು; ಇಲ್ಲದಿದ್ದರೆ ತಾವೂ ದೋಷವನ್ನೇ ಅನುಕರಿಸುವದಕ್ಕೆ ಮೊದಲು ಮಾಡಲೂಬಹುದು. ಮುಖ್ಯವಾಗಿ ಯಾವ ಮಹಾತ್ಮನ ಹೆಸರನ್ನು ಕೇಳಿದರೆ, ಯಾವಾತನ ದರ್ಶನವಾದರೆ, ಯಾವಾತನ ವಚನಾಮೃತವನ್ನು ಕೇಳಿದರೆ, ಭಗವಂತನ ಸ್ಮೃತಿಯಾಗುವದೋ, ಒಂದು ಬಗೆಯ ಹೊಸ ರೀತಿಯ ಆನಂದವು ಉಕ್ಕುವದೋ, ಅಂಥ ಮಹಾತ್ಮನೇ ಸಾಧು ಪುರುಷನು. ಆತನ ಸಂಗದಿಂದ ನಮಗೆ ಅವಶ್ಯವಾಗಿ ಲಾಭವುಂಟಾಗುತ್ತದೆ. ಯಾವಾತನು ಪರಮಾರ್ಥಕ್ಕಾಗಿ ಸರ್ವತ್ಯಾಗವನ್ನೂ ಮಾಡಿರುವನೋ, ಅಥವಾ ಸಮಯ ಬಂದಾಗ ತ್ಯಾಗಮಾಡಲು ಸಿದ್ಧನಾಗಿರುವನೋ, ಯಾವ ಮಹಾತ್ಮನ ನಡೆನುಡಿಗಳಲ್ಲಿ ದೈವೀಸಂಪತ್ತಿನ ಲಕ್ಷಣಗಳು ಸೂಸುತ್ತಿರುವವೋ, ಅಂಥವನನ್ನು ಅವಶ್ಯವಾಗಿ ನಮ್ಮ ಸಾಧನೆಗೆ ಮಾರ್ಗದರ್ಶಿಯಾಗಿ ಆರಿಸಿಕೊಳ್ಳಬೇಕು. ನಮ್ಮ ಪಾಪವಾಸನೆಯಿಂದ ಆತನಲ್ಲಿಲ್ಲದ ಕೆಲವು ದೋಷಗಳು ನಮ್ಮ ಮನಸ್ಸಿಗೆ ತೋರಬಹುದು. ಆದರೆ ಇಲ್ಲಿ ಸೂಚಿಸಿರುವ ಮುಖ್ಯ ಲಕ್ಷಣಗಳು ಕಂಡರೆ ಅವನ್ನು ಲಕ್ಷಿಸಬೇಕಾದದ್ದಿಲ್ಲ. ಮುಖ್ಯವಾಗಿ ಭಗವಂತನ ಕಡೆಗೆ ನಮ್ಮ ಚಿತ್ತವನ್ನು ಎಳೆಯುವವನೇ ಸಾಧು, ವಿಷಯದಕಡೆಗೆ ನಮ್ಮನ್ನು ಸೆಳೆಯುವವನೇ ಅಸಾಧುಪುರುಷನು. ಶಿಷ್ಯಗುಣಗಳಿಂದ ಕೂಡಿದ್ದವನಿಗೆ ಅವಶ್ಯವಾಗಿ ಸತ್ಸಂಗವು ದೊರೆಯುವದು.

## 35. ವಿತಂತುಗಳ ಆಚಾರ

### (ಮಾರ್ಚ್ 1949)

*ನಿಮ್ಮ ಪತ್ರವು ಬಂದು ತಲುಪಿತು. ನಿಮಗೆ ಏನಂತ ಉತ್ತರವನ್ನು ಬರೆಯಬೇಕೋ ತಿಳಿಯಲಿಲ್ಲ. ನಾನು ಸಮಾಜಸುಧಾರಕನಲ್ಲ. ಸುಧಾರಣೆಗೆ ವಿರೋಧಿಯೂ ಅಲ್ಲ. ಆದ್ದರಿಂದ ವಿಧವೆಯರಿಗೆ ವಿವಾಹವನ್ನು ಮಾಡುವದು ಶಾಸ್ತ್ರೀಯ ದೃಷ್ಟಿಯಿಂದ, ಅಥವಾ ಸಮಾಜವೃಷ್ಟಿಯಿಂದ ಸರಿಯೆಂದಾಗಲಿ ತಪ್ಪೆಂದಾಗಲಿ ಋಜುವಾತು ಮಾಡಿ ತೋರಿಸಲು ನಾನು ಸಿದ್ಧನಾಗಿಲ್ಲ. ಇದರಂತೆ ವಿಧವೆಯರು ಸಕೇಶಿಯರಾಗಿರಬೇಕೋ, ವಿಕೇಶಿಯರಾಗಿರಬೇಕೋ ಅದನ್ನೂ ಚರ್ಚಿಸಲಾರೆ. ಈಗ ಇಂಥ ವಿಷಯಗಳಲ್ಲಿ ವಾದವಿವಾದಗಳು ನಡೆಯುತ್ತಲೇ ಇರುತ್ತವೆ. ಅವರ ಅವರವರಿಗೆ ಮೆಚ್ಚಿದ ಮಾರ್ಗವನ್ನು ಅವರವರು ಅನುಸರಿಸುತ್ತಾರೆ. ಶಾಸ್ತ್ರಶ್ರದ್ಧೆಯೂ ಸಮಾಜದ ಕಟ್ಟೂ ಕಡಿಮೆಯಾಗಿರುವ ಈ ಕಾಲದಲ್ಲಿ ಯಾರು ಹೇಗೆ ಬೇಕಾದರೂ ಮಾಡುವದಕ್ಕೆ ಸ್ವಾತಂತ್ರ್ಯವಿರುತ್ತದೆ.*

ಆದರೆ ಪರಾಧೀನರಾದ ವಿಧವೆಯರು ಜೀವನದ ಮಾರ್ಗವನ್ನು ಆಧ್ಯಾತ್ಮಪಥಕ್ಕೆ ಅಡ್ಡಿಯಿಲ್ಲದಂತೆ ಹೇಗೆ ಸಾಗಿಸಬೇಕು? ಅನಾಥರಾದ ವಿತಂತುಗಳು ಹೇಗೆ ನಡೆದು

ಕೊಳ್ಳಬೇಕು?–ಎಂದು ನೀವು ಕೇಳಿರುವ ಪ್ರಶ್ನೆಗಳಿಗೆ ಉತ್ತರವಾಗಿ ಎರಡು ವಾಕ್ಯಗಳನ್ನು ಬರೆಯುತ್ತೇನೆ. ಈ ವಿಷಯದಲ್ಲಿ ನಾನು ಅಷ್ಟು ಪೂರ್ಣವಿಚಾರ ನಡೆಸಿಲ್ಲವಾದ್ದರಿಂದ ನನ್ನ ಈ ಸಂಕ್ಷಿಪ್ತ ಉತ್ತರವು ಎಷ್ಟರಮಟ್ಟಿಗೆ ನಿಮಗೆ ಒಪ್ಪಾದೀತೋ ಹೇಳಲಾರೆ.

ಹಿಂದಿನ ಆಚಾರಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಕೊಡುವ ಉಚ್ಚಜಾತಿಯ ಹೆಂಗಸರು ವಿಧವೆಯರಾದ ಸ್ವಲ್ಪ ಕಾಲದಲ್ಲಿಯೇ 'ಮಡಿಹಿಡಿಯುವ' ಪದ್ಧತಿಯಿದೆ ಎಂಬುದು ನಿಮಗೆ ಗೊತ್ತು. ಇಂಥವರಿಗೆ ಸಹಾನುಭೂತಿ ತೋರಿಸುವದು, ಜೀವನಾಂಶ ಕೊಡಿಸುವದಕ್ಕೆ ಕೋರ್ಟುಗಳನ್ನು ಹತ್ತಿಸುವದು ಮುಂತಾದ ರೀತಿಯಿಂದ ಸಹಾಯವನ್ನು ಮಾಡುವದಕ್ಕೆ ಪ್ರಯತ್ನಿಸುವದು–ಇವು ಈಗ ಸಾಮಾನ್ಯವಾಗಿ ಕಂಡು ಬರುತ್ತವೆ. ಆದರೆ ಹಿಂದಿನ ಕಾಲದ ಬಂಧುಗಳು ಅವರಿಗೆ ತಕ್ಕ ಸ್ಥಾನಮಾನಗಳನ್ನು ಕೊಟ್ಟು ಮನೆಯಲ್ಲಿ ಆದರ್ಶ ಜೀವನವನ್ನು ನಡೆಯಿಸುವದಕ್ಕೆ ಅನುಕೂಲವಾತಾವರಣವನ್ನು ಕಲ್ಪಿಸುತ್ತಿದ್ದದ್ದರಿಂದ ಇಂಥವರು ತ್ಯಾಗ ಧರ್ಮವನ್ನೂ ನಿಷ್ಕಾಮಕರ್ಮವನ್ನೂ ಇಂದ್ರಿಯಜಯವನ್ನು ಮಾಡುವ ರೀತಿಯನ್ನೂ ನಡೆಯಿಂದಲೇ ಮನೆಯವರಿಗೆಲ್ಲ ಕಲಿಸುತ್ತಿದ್ದರೆಂಬುದನ್ನು ಮಾತ್ರ ಈಗಿನವರು ಮರೆತಿರುತ್ತಾರೆ. ಇಂಥ ವಿಧವೆಯರು ಸ್ವಧರ್ಮವನ್ನು ಕಾಪಾಡಿಕೊಂಡು ಬರುವದಕ್ಕೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ, ಈಗಿನಂತೆ ಅವರನ್ನು ತುಚ್ಛದೃಷ್ಟಿಯಿಂದ ನೋಡುವದನ್ನು ಬಿಟ್ಟರೆ ವ್ಯಾಖ್ಯಾನವಿಲ್ಲದ ಪಾಠಶಾಲೆಯಿಲ್ಲದೆ ನಮ್ಮ ಮಹಿಳೆಯರಿಗೆ ಉತ್ತಮಶಿಕ್ಷಣವು ದೊರಕುವದಕ್ಕೆ ಅವಕಾಶವನ್ನು ಕಲ್ಪಿಸಿದಂತೆ ಆದೀತು.

ಉಚ್ಚಶ್ರೇಣಿಯ 'ಮಡಿಹೆಂಗಸರನ್ನು' ಕಂಡವರಿಗೆ ಕಾಮವಾಸನೆಯು ಶಾಂತವಾಗಬೇಕು, ಭೋಗೇಚ್ಛೆಯು ಹಿಡಿತಕ್ಕೆ ಬರಬೇಕು, ಮತ್ತೊಬ್ಬರಲ್ಲಿ ಸಹಾನುಭೂತಿಯು ಅರಳಬೇಕು. ಅಹಂಕಾರವು ಸಡಿಲವಾಗಬೇಕು, ಹೆಮ್ಮೆಯು ಹಿಮ್ಮೆಟ್ಟಬೇಕು. ಪೂರ್ವಾಚಾರವನ್ನು ಅನುಸರಿಸಿರುವ ವಿಧವೆಯರ ಮೇಲುವಿಚಾರಣೆಯಲ್ಲಿರುವ ಅನೇಕ ಗೃಹಗಳು ಪವಿತ್ರವಾಗಿ ಸುಖದ ನೆಲೆವೀಡಾಗಿರುವದನ್ನೂ ಇನ್ನೂ ಈಗಲೂ ನಾವು ಅಲ್ಲಲ್ಲಿ ಕಾಣಬಹುದಾಗಿದೆ. ಈ ದೃಶ್ಯವು ಮೆಲ್ಲಮೆಲ್ಲಗೆ ಕಣ್ಮರೆಯಾಗುತ್ತಿರುವದು ನಮ್ಮ ದೇಶದ ದೌರ್ಭಾಗ್ಯವು.

ಚಿಕ್ಕವಯಸ್ಸಿನಲ್ಲಿಯೇ ವಿತಂತುಗಳಾಗಿ ಸರಿಯಾದ ಸಹಾನುಭೂತಿಯ ಬಂಧುಗಳಿಲ್ಲದ ವಿತಂತುಗಳಿಗೆ ಅಕ್ಷರವಿದ್ಯಾಭ್ಯಾಸವನ್ನು ಮಾಡಿಸುವದು, ಹೊಲಿಗೆ ಮುಂತಾದ ಕೈಕೆಲಸಗಳನ್ನು ಹೇಳಿಕೊಡಿಸುವದು, ಉಪಾಧ್ಯಾಯಿನಿಯರಾಗಿ ಕಾಲಕ್ಷೇಪವನ್ನು ಮಾಡುವಂತೆ ಏರ್ಪಡಿಸುವದು–ಇಂಥ ಪ್ರಯತ್ನಗಳು ಈಗ ನಡೆಯುತ್ತಿವೆ. ಈ ಪಂಗಡದಲ್ಲಿ ಕೆಲವು ಜನ ಉಚ್ಚಶಿಕ್ಷಣವನ್ನು ಪಡೆದು ಪುರುಷರು

ಮಾಡುವ ಎಲ್ಲಾ ಉದ್ಯೋಗಗಳನ್ನೂ ಅನುಸರಿಸುತ್ತಿರುವದೂ ಕಣ್ಣಿಗೆ ಬೀಳುತ್ತಿದೆ. ಡಾಕ್ಟರೀ ಕೆಲಸ, ವಕೀಲಿ, ಅಂಗಡಿಯ ವ್ಯಾಪಾರ—ಇಂಥವುಗಳಲ್ಲದೆ ದೊಡ್ಡದೊಡ್ಡ ರಾಜಕೀಯ ವ್ಯಾಪಾರಗಳಲ್ಲಿಯೂ ತೊಡಗಿದವರು ಅತ್ಯಲ್ಪಸಂಖ್ಯೆಯಲ್ಲಿ ಕಾಣುವರು. ಇವೆಲ್ಲ ಸರಿಯಾದ ಮಾರ್ಗಗಳೆಂದಾಗಲಿ ಅಲ್ಲವೆಂದಾಗಲಿ ಅಷ್ಟರಿಂದಲೇ ಹೇಳುವದಕ್ಕೆ ಬರುವದಿಲ್ಲ. ಆದರೆ ಆಧ್ಯಾತ್ಮಿಕ ಜೀವನದ ಗುಟ್ಟನ್ನು ಅರಿತುಕೊಳ್ಳುವದಕ್ಕೆ ಸ್ವಲ್ಪವೂ ಪ್ರಯತ್ನಪಡುತ್ತದೆ, ಇಂದ್ರಿಯಗಳನ್ನು ಲಾಲಿಸುವ ಸಂಗೀತ, ನರ್ತನ, ಸಿನಿಮಾ—ಮುಂತಾದವುಗಳ ದರ್ಶನ, ಅನುಕರಣವನ್ನು ಮಾಡುತ್ತಾ ಆಹಾರವಿಹಾರಗಳ ನಿಯಮವನ್ನು ಮೀರಿ ಕಾಮಭೋಗಗಳನ್ನು ಉದ್ದೀಪನ ಮಾಡುವ ವರ್ತನೆಗಳನ್ನು ಅನುಸರಿಸುತ್ತಾ ಪುರುಷರೊಡನೆ ಬಾರಿ ಬಾರಿಗೂ ಸೇರಬೇಕಾಗಿ ಬರುವ ಉದ್ಯೋಗಗಳನ್ನು ಕೈಗೊಳ್ಳುವದು ಸ್ತ್ರೀಸಮಾಜಕ್ಕಾಗಲಿ, ಜನಸಾಮಾನ್ಯಕ್ಕಾಗಲಿ ಶ್ರೇಯಸ್ಕರವಲ್ಲವೆಂದು ನನಗಂತೂ ತೋರುತ್ತದೆ. ನೀವು ಇದನ್ನು ಚೆನ್ನಾಗಿ ಆಲೋಚನೆ ಮಾಡಬೇಕು.

ನಮ್ಮ ದೇಶದಲ್ಲಿ ವಿಧವೆಯರ ವಿಷಯದಲ್ಲಿ ನಾವು ಸಹಾನುಭೂತಿಯನ್ನು ತೋರಿಸುವದೂ ಅವರನ್ನು ಹೇಗಾದರೂ ಮಾಡಿ ಉನ್ನತಸ್ಥಿತಿಗೆ ತರಬೇಕೆಂದು ಆಗಿಂದಾಗ್ಗೆ ಸಭೆಗಳಲ್ಲಿ ಮಾತನಾಡುವದೂ ಉಂಟು. ಅವರಿಗೆ ಅನಾಥಾಲಯಗಳು ಓದುಬರಹದ ಅಥವಾ ಕೈ ಕೆಲಸಗಳ ಪಾಠಶಾಲೆಗಳು ಇವುಗಳನ್ನು ಏರ್ಪಡಿಸಬೇಕೆಂದೂ, ಆಸ್ಪತ್ರೆಗಳಲ್ಲಿ ಅಥವಾ ಇನ್ನು ಕೆಲವು ಸರಕಾರಿ ಸ್ಥಾನಗಳಲ್ಲಿ ನೌಕರಿಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯಬೇಕೆಂದೂ ಚಳುವಳಿಯನ್ನು ಎಬ್ಬಿಸುವದೂ ಉಂಟು. ಆದರೆ ಅವರಿಗೆ ಸತ್ಯ, ಶೀಲ, ಸದಾಚಾರ, ಆದರ್ಶ ತ್ಯಾಗಜೀವನ—ಇವುಗಳಿಗೆ ಈ ಏರ್ಪಾಡುಗಳಿಂದ ಏನಾದರೂ ಧಕ್ಕೆ ತಗಲೀತೆ? ಎಂಬುದನ್ನು ನಾವು ಎಳ್ಳಷ್ಟೂ ಯೋಚಿಸುತ್ತಿಲ್ಲ.

ಭಗವದ್ಗೀತೆಯ ವಿಷಯದಲ್ಲಿ ಉಪನ್ಯಾಸಗಳು ನಮ್ಮಲ್ಲಿ ಈಗ ಹೆಚ್ಚಾಗುತ್ತಿವೆ. ತ್ಯಾಗ, ನಿಷ್ಕಾಮಕರ್ಮ, ಕರ್ಮಯೋಗ—ಮುಂತಾದ ವಿಷಯಗಳನ್ನು ಕುರಿತು ಉದ್ದುದ್ದವಾದ ಉಪನ್ಯಾಸಗಳನ್ನು ಕೊಡುವದೂ ಉಂಟು. ಆದರೆ ಅಂಥ ತ್ಯಾಗಪೂರ್ಣವಾದ ನಿಷ್ಕಾಮಕರ್ಮದಲ್ಲಿಯೇ ಕಾಲವನ್ನು ಹಾಕುತ್ತಿರುವ ವಿಧವೆಯರಿಗೆ ನಾವು ಸರಿಯಾದ ಗೌರವವನ್ನು ಕೊಡದೆ, ಅವರಿಗೆ ಕಷ್ಟವನ್ನು ಕೊಡುತ್ತಲೇ ಇರುವೆವು. ಅವರಲ್ಲಿ ಯಾರಾದರೂ ವಿಲಾಸಪ್ರಿಯರಾದರೆ, ಭೋಗೇಚ್ಛಾಪ್ರವಣರಾದರೆ ಅದನ್ನು ಗುಣವೆಂದೂ ಒಪ್ಪುವೆವು. ವಿಧವೆಯರು ಬಹುಮಟ್ಟಿಗೆ ದಾಸಿಯರ ಸ್ಥಾನದಲ್ಲಿರುತ್ತಾರೆಂಬುದನ್ನು ನಾವು ಕಂಡರೂ ಕಾಣದಂತೆ ಇರುವೆವು. ಪಾಶ್ಚಾತ್ಯರಲ್ಲಿರುವ ಗುಣಗಳನ್ನು

ನಾವು ಎಷ್ಟರಮಟ್ಟಿಗೆ ಅನುಕರಿಸುವೆವೋ ತಿಳಿಯದು. ಆದರೆ ವಿಧವೆಯರ ವಿಷಯದಲ್ಲಿ ಅವರು ಹೇಗೆ ಹೇಗೆ ವರ್ತಿಸುವರೋ ಆ ವರ್ತನೆಗಳು ಸದೋಷವಾಗಿದ್ದರೂ ಹಾಗೆ ಹಾಗೆಯೇ ನಾವೂ ಕಣ್ಣು ಮುಚ್ಚಿಕೊಂಡು ನಡೆಯುತ್ತಾ, ನಾವೂ ಗುಂಡಿಗೆ ಬಿದ್ದು ಇತರರನ್ನೂ ಕೆಡಹುತ್ತಿರುವೆವು! ಇನ್ನು ಏನನ್ನು ಮಾಡಲಿ ಬಿಡಲಿ, ಪುರುಷರಾದ ನಾವೂ ಅಧ್ಯಾತ್ಮಸಾಧನೆಗಳನ್ನು ಮಾಡುತ್ತಾ ಇಂಥ ವಿತಂತುಗಳನ್ನೂ ಸನ್ಮಾರ್ಗಕ್ಕೆ ಎಳೆದು ಅವರು ನಮ್ಮ ದೇಶಕ್ಕೇ ಆದರ್ಶಪ್ರಾಯರಾಗಿರುವಂತೆ ಆನುಕೂಲ್ಯವನ್ನು ಕಲ್ಪಿಸತಕ್ಕದ್ದು ಈ ಕೂಡಲೆ ನಾವು ಮಾಡತಕ್ಕ ಕರ್ತವ್ಯವೆಂದು ನನ್ನ ಭಾವನೆ.

## 36. ಪರೀಕ್ಷೆ

### (ಏಪ್ರಿಲ್ 1949)

*“ಬರುವ ಪರೀಕ್ಷೆಯು ನನಗೆ ಕಠಿನವಾಗದಂತೆಯೂ ಈ ಸಲ ನಾನು ಸುಲಭವಾಗಿ ತೇರ್ಗಡೆಯಾಗುವಂತೆಯೂ ಅನುಗ್ರಹಿಸಬೇಕು. ಪರೀಕ್ಷೆಗೆ ಸಿದ್ಧನಾಗಿರುವಂತೆ ಬುದ್ಧಿವಾದದ ಪತ್ರವೊಂದನ್ನು ಬರೆಯಬೇಕು” ಎಂದು ನೀವು ಬರೆದಿದ್ದ ಕಾಗದವು ತಲುಪಿತು. ಆದರೆ ಓದದೆ ಇರುವವರನ್ನು ‘ಪ್ಯಾಸು’ ಮಾಡಿಸುವ ಮಂತ್ರವು ಯಾವುದೂ ನನ್ನಲ್ಲಿರುವದಿಲ್ಲ. ನಿಮಗೆ ತೇರ್ಗಡೆಯಾಗಲೆಂದೇ ನನ್ನ ಹಾರೈಕೆ; ಆದರೆ ‘ಸುಲಭವಾಗಿ ತೇರ್ಗಡೆಯಾಗಲಿ’ ಎಂದು ನಾನು ಬಯಸಲಾರೆ. ಪರೀಕ್ಷೆಯು ಎಷ್ಟೇ ಕಷ್ಟವಾಗಲಿ, ನೀವು ಸರಿಯಾಗಿ ಅಭ್ಯಾಸ ಮಾಡಿಕೊಂಡಿದ್ದು ಮನಸ್ಸಿನ ಶಾಂತಿಯನ್ನು ಕೆಡಿಸಿಕೊಳ್ಳದೆ ಉತ್ತರವನ್ನು ಬರೆದು, ಜಯಶೀಲರಾಗಿರಿ ಎಂಬುದೇ ನನ್ನ ಹೃದಯದಲ್ಲಿರುವ ನಿಜವಾದ ಇಚ್ಛೆ.*

ಇತ್ತೀಚೆಗೆ ಪರೀಕ್ಷೆಗಳಿಗೆ ಕೂತುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯು ವರ್ಷ ವರ್ಷಕ್ಕೂ ಹೆಚ್ಚುತ್ತಿದೆ. ಪರೀಕ್ಷ್ಯರೂ ಸೇರಿ ಒಂದು ದೊಡ್ಡ ಸೈನ್ಯವಾಗುವಷ್ಟು ಸಂಖ್ಯೆಯಲ್ಲಿರುತ್ತಾರೆ. ವಿದ್ಯಾರ್ಥಿಗಳು ಸುಲಭವಾಗಿ ‘ಪ್ಯಾಸ್’ ಆಗುವದಕ್ಕೆ ಕೈಯಲ್ಲಾದ ಪ್ರಯತ್ನಗಳನ್ನೆಲ್ಲ ಮಾಡುತ್ತಿದಾರೆ. ಪರೀಕ್ಷಕರು ಯಾರೆಂಬುದನ್ನು ಕಂಡುಹಿಡಿಯುವದು, ಅವರ ಮನಸ್ಸು ತಮ್ಮ ಕಡೆಗೆ ಒಲಿಯುವದಕ್ಕೆ ಪ್ರಯತ್ನಿಸುವದು. ಹೇಗಾದರೂ ಮಾಡಿ ‘ನಂಬರು’ ಹಾಕಿಸಿಕೊಂಡು ‘ಪ್ಯಾಸು’ ಆಗುವದು—ಇಷ್ಟಕ್ಕೆ ಇಳಿದಿರುತ್ತದೆ, ಅನೇಕರ ಪ್ರಯತ್ನ. ಇನ್ನೂ ಕೆಲವರು ಪರೀಕ್ಷಾ ಪತ್ರಿಕೆಗಳನ್ನು ಮೊದಲೇ ಕಳುವದಕ್ಕೂ ಹಿಂಜರಿಯುವದಿಲ್ಲ! ಪರೀಕ್ಷಕರಿಗೆ ಒಬ್ಬೊಬ್ಬರಿಗೆ ಬರುವ ಉತ್ತರ ಪತ್ರಿಕೆಗಳು ಕಟ್ಟುಗಟ್ಟಲೆ ಇರುವದರಿಂದ ವಿದ್ಯಾರ್ಥಿಗಳ ಯೋಗ್ಯತೆಯನ್ನು ಸರಿಯಾಗಿ ನಿರ್ಣಯಿಸುವದಾಗಲಿ, ಎಲ್ಲಾ ಉತ್ತರಗಳ ಬೆಲೆಯನ್ನೂ ನಿಷ್ಪಕ್ಷಪಾತವಾಗಿ ನ್ಯಾಯವಾಗಿ ಗೊತ್ತುಪಡಿಸುವದಾಗಲಿ ಸ್ವಲ್ಪ ಹೆಚ್ಚು ಕಡಿಮೆ ಅಸಾಧ್ಯವೇ ಆಗಿಬಿಟ್ಟಿರುತ್ತದೆ!

ಆದರೆ ಹೀಗೆ ಸುಲಭವಾಗಿ ಪರೀಕ್ಷೆಗಳಲ್ಲಿ ತೇರ್ಗಡೆಯಾದರೆ ದೊರೆಯುವದಾದರೂ ಏನು! ಒಂದು 'ಸರ್ಟಿಫಿಕೇಟು' ಎಂಬ ಕಾಗದದ ಚೂರು, ಆ ಚೂರಿನ ಬಲದಿಂದ ಇನ್ನು ನೌಕರಿಗೆ ಬೇಡಿಕೆ ಪತ್ರಗಳನ್ನು ಬರೆದು ಬರೆದು ಸರಕಾರಕ್ಕೂ ಕಂಪೆನಿಗಳಿಗೂ ಕಳುಹಿಸುತ್ತಿರುವದು, ಮನೆಯಲ್ಲಿ ಕೆಲಸವಿಲ್ಲದೆ ಮಂಕಾಗಿ ಕುಳಿತುಕೊಳ್ಳುವದು!

ಜೀವನದಲ್ಲಿ ನಮಗೆ ಎಷ್ಟೋ ಪರೀಕ್ಷೆಗಳು ಆಗುತ್ತಿರುವವು. ಆದರೆ ಅವು ಯಾವವೂ 'ಸುಲಭ'ವಾಗಿರುವವೇ ಇಲ್ಲ. ಈ ಸಣ್ಣ ಪುಟ್ಟ ಪರೀಕ್ಷೆಗಳಲ್ಲಿ ಪ್ಯಾಸ್ ಆದ ಬಳಿಕವೇ ನಮಗೆ ಭಗವಂತನ ಕಾರ್ಯಾಲಯದಲ್ಲಿ ನೌಕರಿಯು ದೊರೆಯುವದು. ಈ ಪರೀಕ್ಷೆಗಳಲ್ಲಿ ಪರೀಕ್ಷಕರ ಅನುಗ್ರಹದಿಂದ ಯಾವ ಫಲವನ್ನೂ ಪಡೆಯುವದಕ್ಕೆ ಆಗುವದಿಲ್ಲ. ಅವುಗಳಲ್ಲಿ ಒಂದೊಂದರಲ್ಲಿಯೂ 'ಪ್ಯಾಸು' ಆದ ಮೇಲೆಯೇ ಮೇಲಿನ ಪರೀಕ್ಷೆಗೆ ಯೋಗ್ಯತೆ ಬರುವದು. ಕೆಲವು ಆಶೆಯ ಬಲೆಗಳಿಗೆ ಬೀಳದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ನಮ್ಮ ಶಕ್ತಿಯನ್ನು ಕುಗ್ಗಿಸುವ ಘಟನೆಗಳು ಆಗಿ ಹೋಗುತ್ತವೆ. ದಿನದಿನಕ್ಕೆ ಆಗುವ ಬದಲಾವಣೆಗಳು ಲೆಕ್ಕವಿಲ್ಲದಿರುವದರಿಂದ, ನಾವು ಯಾವ ಮಾರ್ಗವನ್ನು ಅನುಸರಿಸಬೇಕೆಂಬುದೇ ತೋರದೆ ನಮಗೆ ದಿಗ್ಭ್ರಮೆಯುಂಟಾಗುತ್ತಿರುತ್ತದೆ!

ಇಂಥ ಪರೀಕ್ಷೆಗಳು ಎಷ್ಟೇ ಸಣ್ಣವಾಗಿರಲಿ, ಅವಕ್ಕೆ ಎದೆಗೊಟ್ಟು ನಾವು ಪಾರಾದರೆ, ನಿಜವಾಗಿಯೂ ಗೆದ್ದೆವು; ನಿಜವಾಗಿಯೂ ದೊಡ್ಡ ಪರೀಕ್ಷೆಗೆ, ಕೊನೆಯ ಪರೀಕ್ಷೆಗೆ, ಸಿದ್ಧರಾದೆವು ಎಂದುಕೊಳ್ಳಬಹುದು. ಆದರೆ 'ಸುಲಭವಾಗಿ' ತೇರ್ಗಡೆಯಾಗುವ ಸಂಭವವು ಯಾವಾಗಲೂ ಇರುವದಿಲ್ಲ.

ಈ ಪರೀಕ್ಷೆಗಳಲ್ಲಿ ಉತ್ತೀರ್ಣನಾಗುವದಕ್ಕೆ ಭಗವಂತನೇ ಒಂದು ಉಪಾಯವನ್ನು ಹೇಳಿಕೊಟ್ಟಿರುತ್ತಾನೆ. "ಅನಿತ್ಯವೂ ಅಸುಖವೂ ಆದ ಈ ಲೋಕವನ್ನು ಸೇರಿರುವದರಿಂದ ನನ್ನನ್ನೇ ಭಜಿಸುತ್ತಿರು", "ನನ್ನಲ್ಲಿಯೇ ಚಿತ್ತವನ್ನು ಇಟ್ಟುಕೊಂಡಿದ್ದರೆ ದುರ್ಗಮವಾದ ಪರೀಕ್ಷೆಗಳನ್ನೆಲ್ಲ ದಾಟುವೆ."

"ಪರೀಕ್ಷೆಯಲ್ಲಿ ತಪ್ಪದೆ ತೇರ್ಗಡೆಯಾಗುವೆನು" ಎಂದು ದೃಢಸಂಕಲ್ಪವನ್ನು ಮಾಡಿಕೊಳ್ಳಿರಿ. ಅವಶ್ಯವಾಗಿ ನಿಮಗೆ ಪ್ಯಾಸ್ ಆಗುತ್ತದೆ. ಯಾವ ಅಡ್ಡ ಹಾದಿಯನ್ನೂ ತುಳಿಯಬೇಕಾಗಿ ಬರುವದಿಲ್ಲ. ಅಭ್ಯಾಸವನ್ನು ಚೆನ್ನಾಗಿ ಮಾಡಿರಿ. ಪರೀಕ್ಷೆಯ ಕಾಲದಲ್ಲಿ ಮನಸ್ಸಿನ ಶಾಂತಿಯನ್ನು ಕೆಡಿಸಿಕೊಳ್ಳದಂತೆ ಯಾವಾಗಲೂ ಭಗವಂತನ ಸ್ಮರಣೆಯನ್ನು ಮಾಡುತ್ತಿರಿ. ಆಗ ಯಾವ ಪರೀಕ್ಷೆಯೂ ನಿಮಗೆ ಕಠಿನವಾಗುವದಿಲ್ಲ.

# 37. ಜೀವನವೆಲ್ಲವೂ ಈಶ್ವರಪೂಜೆಯಾಗಲಿ

(ಮೇ 1949)

*ನೀವು ಬರೆದ ಪತ್ರವು ತಲುಪಿ ಎರಡು ಮೂರು ತಿಂಗಳಾದವು. ನಿಮಗೆ ಕೂಡಲೆ ಉತ್ತರ ಬರೆಯದೆ ಇದ್ದದ್ದಕ್ಕೆ ಕ್ಷಮೆ ಬೇಡುತ್ತೇನೆ. “ಬೆಳಗ್ಗೆ ಒಂದು ಘಂಟೆ ದೇವರ ಪೂಜೆಗೆ, ಸಾಯಂಕಾಲ ಕಾಲು ಘಂಟೆ ಮಂಗಲಾರತಿಗೆ–ಇಷ್ಟು ಹೊರತು ಉಳಿದ ಕಾಲವೆಲ್ಲ ವ್ಯವಹಾರದಲ್ಲಿಯೇ ವ್ಯರ್ಥವಾಗುತ್ತಿದೆ. ಈ ಸ್ಥಿತಿಯಲ್ಲಿ ನನಗೆ ಯಾವ ಸಾಧನವು ದಕ್ಕೀತು?” ಎಂದು ಪ್ರಶ್ನೆಯನ್ನು ಹಾಕಿದ್ದೀರಿ. ಇದೇ ಬಗೆಯ ಪ್ರಶ್ನೆಯನ್ನು ಹಾಕಿದ ಬೇರೆ ಕೆಲವು ಕಾಗದಗಳೂ ನನಗೆ ತಲುಪಿವೆ. ಸಧ್ಯದಲ್ಲಿ ವ್ಯವಹಾರವೇ ಜನರ ಕಾಲದ ಬಹುಭಾಗವನ್ನು ನುಂಗುತ್ತಿದೆ ಎಂಬುದಕ್ಕೆ ಈ ಕಾಗದಗಳು ನಿದರ್ಶನವೆಂದು ನನ್ನ ಭಾವನೆ.*

ವ್ಯವಹಾರದಲ್ಲಿ ನಾವು ದುಡಿಯುವ ಘಂಟೆಗಳ ಪ್ರಮಾಣಕ್ಕೆ ತಕ್ಕಂತೆ ಸಂಪಾದನೆಯಾಗುತ್ತದೆ ಎಂಬುದೊಂದು ತಪ್ಪು ತಿಳಿವಳಿಕೆ. ಏಕೆಂದರೆ ನಮಗೆ ದೊರೆಯುವ ಪ್ರತಿಫಲವು ನಮ್ಮ ಶ್ರಮಕ್ಕೆ ಅನುಗುಣವಾಗಿರುವದಿಲ್ಲ. ಈಶ್ವರನ ಅನುಗ್ರಹಕ್ಕೆ ತಕ್ಕಂತೆ ಇರುತ್ತದೆ. ಕೆಲಸವನ್ನು ಮಾಡುವದು ನಮ್ಮ ಭಾರ. ಪ್ರತಿಫಲವನ್ನು ಕೊಟ್ಟು ಯೋಗಕ್ಷೇಮವನ್ನು ನೋಡಿಕೊಳ್ಳುವದು ಈಶ್ವರನ ಕಡೆಯದು.

ನಿಮಗೆ ದೇವರಪೂಜೆಗೆ ಮಾತ್ರವೇ ಕಾಲವಿದೆ, ಹೆಚ್ಚಿಗೆ ಪರಮಾರ್ಥ ಸಾಧನೆಗೆ ಅವಕಾಶವಿಲ್ಲ ಎಂದೇ ಇಟ್ಟುಕೊಂಡು ಈ ಉತ್ತರವನ್ನು ಬರೆಯುತ್ತೇನೆ. ದೇವರ ಪೂಜೆಗೆ ಬೇಕಾದ ಹೂ ತುಳಸಿಗಳು, ಗಂಧ, ಧೂಪ, ದೀಪ–ಮುಂತಾದ ಸಾಮಗ್ರಿಗಳಲ್ಲಿಯೂ ದೇವರ ಸಂಬಂಧವನ್ನು ಮಾಡಿಕೊಳ್ಳುವ ಅಭ್ಯಾಸವನ್ನು ಮಾಡಿರಿ. ನಿಮ್ಮ ಮನೆಯ ಅಂಗಳದಲ್ಲಿ ಸ್ವಲ್ಪ ಭಾಗದಲ್ಲಿ ಸುಂದರವಾದ ಪೂಜಾರ್ಹವಾದ ಹೂಗಳ ಗಿಡಗಳನ್ನು ಹಾಕಿ, ನೀವೇ ಅದಕ್ಕೆ ನೀರೆರೆಯುವದು, ಮನೆಯವರಿಗೂ ಈ ಕೆಲಸದಲ್ಲಿ ಆದರವನ್ನುಂಟುಮಾಡುವದು–ಹೀಗೆ ಪರಮೇಶ್ವರನ ಸ್ಮರಣೆಗೆ ಅವಕಾಶವನ್ನು ಕಲ್ಪಿಸಿಕೊಳ್ಳಿರಿ. ಹೂಗಳನ್ನು ನೋಡಿದರೆ ಮನುಷ್ಯನ ಬಾಳು ಹೇಗಿರಬೇಕೆಂಬುದಕ್ಕೆ ಒಂದು ಸುಂದರವಾದ ಸಂದೇಶವು ದೊರೆಯುವದು.

ಹೂಗಳು ಬಾಳುವ ಕಾಲವು ಬಹಳ ಸ್ವಲ್ಪ. ಆದರೆ ಅವು ಇರುವಷ್ಟು ಕಾಲವು ಮುಖವನ್ನು ಉಲ್ಲಾಸದಿಂದ ಅರಳಿಸಿಕೊಂಡು ತಮ್ಮ ಸಂತೋಷದ ಪರಿಮಳವನ್ನು ಸುತ್ತಲೂ ಬೀರುತ್ತಿರುವವು. “ನಿರ್ದುಷ್ಟವಾದ, ಆರೋಗ್ಯಯುತವಾದ, ಸೌಂದರ್ಯಪೂರ್ಣವಾದ, ಪರಿಮಳದಿಂದ ಘಮಘಮಿಸುತ್ತಿರುವ ಜೀವನವೇ ಈಶ್ವರನ

ಅನುಗ್ರಹವು'' ಎಂದು ಎಲ್ಲರಿಗೂ ಯಾವಾಗಲೂ ಸಾರುತ್ತಿರುವವು. ಹೂಗಳಂತೆ ನಮ್ಮ ಶರೀರವೂ ಮನಸ್ಸೂ ಸಹಜವಾದ ರೀತಿಯಲ್ಲಿ ನಮ್ಮ ಮೂಲಸ್ಥಾನವಾಗಿರುವ ಈಶ್ವರನ ಸಂಕಲ್ಪಕ್ಕೆ ಹೊಂದಿಕೆಯಾಗಿರುವಂತೆ ನಿರ್ಮಲವಾಗಿ, ಪರಿಶುದ್ಧವಾಗಿರುವಂತೆ ಮಾಡಿಕೊಳ್ಳಬೇಕು. ಪರಿಶುದ್ಧವಾದ ಭಾವನೆಯಿಂದ ನಾವು ತಂದಿರುವ ಸುಗಂಧಯುಕ್ತವಾದ ಹೂಗಳನ್ನು ಪೂಜಾ ಕಾಲದಲ್ಲಿ ಪರಮೇಶ್ವರನಿಗೆ ಅರ್ಪಿಸುವಾಗ ''ದೇವ, ಈ ಹೃದಯವನ್ನು ನಿನಗೆ ಅರ್ಪಿಸುವೆನು. ನನ್ನ ಸ್ವಾತಂತ್ರ್ಯವು ಯಾವದೂ ಇಲ್ಲ; ನಿನ್ನ ಸಂಕಲ್ಪದಂತೆ ನಮ್ಮ ಜೀವನವು ನಡೆಯುವಂತೆ ಮಾಡು. ನಾವು ಯಾವಾಗಲೂ ನಿನ್ನೊಳಗೇ ಇದ್ದು ನಿನ್ನ ಅನುಗ್ರಹದಿಂದ ಸುಖಶಾಂತಿಗಳನ್ನು ಪಡೆವು. ಸುತ್ತುಮುತ್ತಲಿನ ಜನಗಳಿಗೂ ಸುಖಶಾಂತಿಗಳ ದಾರಿಯನ್ನು ಸೂಚಿಸುವಂತೆ ಅನುಗ್ರಹಿಸು'' ಎಂದು ಮನದಲ್ಲಿ ಬೇಡಿಕೊಳ್ಳುತ್ತಿರಬೇಕು.

ಪರಮೇಶ್ವರನಿಗೆ ಅರ್ಪಿಸುವ ಧೂಪವೂ ಹೀಗೆಯೇ ನಮ್ಮ ಜೀವನಕ್ಕೆ ಸಂಕೇತವಾಗಿರಬೇಕು. ಜಿಪುಣತನದಿಂದ ಒಂದು ಸಣ್ಣ ಊದಿನ ಕಡ್ಡಿಯ ಚೂರನ್ನು ಹಚ್ಚಿ ಎಲ್ಲಿಯೋ ಗೋಡೆಯ ಮೂಲೆಯಲ್ಲಿ ಚುಚ್ಚಿಡುವ ಅಭ್ಯಾಸವನ್ನು ಬಿಡಬೇಕು. ದಶಾಂಗದ ಹುಡಿಯನ್ನು ಕೆಂಡದ ಮೇಲಿಟ್ಟು ಪರಿಮಳ ಧೂಪವನ್ನು ಅರ್ಪಿಸುವ ಪದ್ಧತಿಯು ಹೃದಯದ ಔದಾರ್ಯಬುದ್ಧಿಯನ್ನು ಹೆಚ್ಚಿಸುತ್ತದೆ; ನಮಗೂ ಸುತ್ತಲಿನ ಪ್ರಾಣಿಗಳಿಗೂ ಪರಮೇಶ್ವರನ ದಯಾಮಯವಾದ ಧೂಪದಲ್ಲಿ ಆಗುವ ಸಂಬಂಧವನ್ನೂ ನೆನಪು ಕೊಡುತ್ತದೆ. ದೇವರ ಮುಂದೆ ಹೊತ್ತಿಸುವ ತುಪ್ಪದ ದೀಪವು ಸ್ವಯಂ ಪ್ರಕಾಶನಾದ ಪರಮೇಶ್ವರನಿಂದ ಚೇತನರಾದ ನಾವೆಲ್ಲರೂ ಬಂದಿರುವೆವೆಂಬುದನ್ನೂ ನಮ್ಮ ಜೀವನಜ್ಯೋತಿಯು ಸುಖಶಾಂತಿಗಳಿಂದ ಕೂಡಿ ಸಾಗುತ್ತಿರುವದಕ್ಕೆ ಆತನ ಭಕ್ತಿಯೆಂಬ ತುಪ್ಪವೇ ಮೂಲವಾಗಿರುವದೆಂಬುದನ್ನೂ ನೆನಪು ಕೊಡಬೇಕು.

ನಾವು ಸಿದ್ಧಪಡಿಸುವ ಭೋಜನಾನ್ನವು ನಮ್ಮ ಅಂತಸ್ತಿಗೆ ತಕ್ಕಂತೆ ಇರುವದೆಂಬುದು ಸ್ವಾಭಾವಿಕವಾಗಿರುತ್ತದೆ. ಆದರೆ ಆ ಅನ್ನವನ್ನು ಪರಮೇಶ್ವರನಿಗೆ ಅರ್ಪಿಸಿ ಆತನ ಪ್ರಸಾದವಾಗಿ ಸ್ವೀಕರಿಸಿದರೆ, ಅದರ ಸವಿಯು ಇಮ್ಮಡಿಸುವದು; ಅದರಿಂದ ಹಸಿವು ಅಡಗುವದಲ್ಲದೆ ತುಷ್ಟಿಯೂ, ಪುಷ್ಟಿಯೂ, ಆರೋಗ್ಯವೂ, ಚಿತ್ತಶುದ್ಧಿಯೂ ಜೀವನದಲ್ಲಿ ನಾವು ಮಾಡುವ ವ್ಯವಹಾರವೆಲ್ಲ ಭಗವಂತನ ಸೇವೆ ಎಂಬ ಭಾವನೆಯೂ ನಮಗೆ ದಕ್ಕುವವು.

ಭಾಗವತದಲ್ಲಿ ಒಂದು ವಚನವಿದೆ: ''ಭಗವಂತನೆ, ನಿನಗೆ ಅರ್ಪಿಸಿದ ಹೂ, ಗಂಧ–ಮುಂತಾದವುಗಳನ್ನು ಸೇವಿಸುವದರಿಂದ ನಿನ್ನ ಮಾಯೆಯನ್ನು ನಾವು

ಜಯಿಸುವಂತಾಗಲಿ!'' ಈ ವಾಕ್ಯದ ಅಭಿಪ್ರಾಯವನ್ನು ನಾವು ಚೆನ್ನಾಗಿ ನೆನಪಿಟ್ಟಿರಬೇಕು. ಈ ಲೋಕದಲ್ಲಿ ಹುಟ್ಟಿರುವ ವಸ್ತುಗಳ ಶ್ರಾವ್ಯವಾದ ಶಬ್ದ, ಸುಖಪ್ರದವಾದ ಸ್ಪರ್ಶ, ಸುಂದರವಾದ ರೂಪ, ನಾಲಗೆಯನ್ನು ಸೆಳೆಯುವ ಸವಿ, ಮೂಗನ್ನು ಸೆರೆ ಹಿಡಿಯುವ ಪರಿಮಳಗಂಧ– ಇವೆಲ್ಲ ಮಾನವನಿಗಾಗಿ ಎಂಬ ಭಾವನೆಯು ಈಗೀಗ ಜನರಲ್ಲಿ ಬಲವಾಗಿ ಹಬ್ಬುತ್ತಿದೆ. ಪಂಚಭೂತಗಳ ಪ್ರಕೃತಿಯನ್ನು ಮನುಷ್ಯನು ತನ್ನ ಅಡಿಯಾಳಾಗಿ ಮಾಡಿಕೊಂಡೇ ಸುಖವನ್ನು ಸೂರೆಮಾಡಿಕೊಳ್ಳಬೇಕು ಎಂದು ಅನೇಕ ಜನರು ನಂಬಿರುತ್ತಾರೆ. ಆದರೆ ಇಲ್ಲಿ ನಾವು ಮೋಸ ಹೋಗುವ ಸಂಭವವೇ ಬಹಳವಾಗಿರುತ್ತದೆ. ಏಕೆಂದರೆ ನಿಜವಾಗಿ ಪ್ರಕೃತಿಯು ಪರಮೇಶ್ವರನ ವಶದಲ್ಲಿರುತ್ತದೆ; ಆತನ ಅನುಗ್ರಹದಿಂದ ಮಾತ್ರವೇ ನಾವು ಇಹಪರಸುಖಕ್ಕೆ ಬೇಕಾದ ಸಾಮಗ್ರಿಯನ್ನೂ ಪ್ರಕೃತಿಯಿಂದ ಪಡೆದುಕೊಳ್ಳಬಹುದು. ಆದರೆ ಯಾವಾಗ ಪರಮೇಶ್ವರನನ್ನು ಮರೆತು ಅಹಂಕಾರದ ಪೂಜೆಗೆ ಪ್ರಾರಂಭಿಸುವೆವೋ, ಆಗ ಈ ಪ್ರಕೃತಿಯೇ ಮಾಯೆಯಾಗಿ ನಮ್ಮನ್ನು ಅಡ್ಡಹಾದಿಗೆ ಎಳೆಯುತ್ತದೆ. ಇಲ್ಲಿ ನಮಗೆ ಇಹ ಸೌಖ್ಯಕ್ಕೆ ಬೇಕಾದ ಸಾಮಗ್ರಿಯೂ ದೊರೆಯುವದಿಲ್ಲ; ದೊರೆತರೂ ಅದರಿಂದ ನಮಗೆ ಸಿಕ್ಕಬೇಕಾದ ಭೋಗವು ಮಾಯವಾಗುವದು!

ಬೆಳಗಿನ ಹೊತ್ತು ನೀವು ಮಾಡುತ್ತಿರುವ ಪೂಜೆಯನ್ನು ನಿಮ್ಮ ನಿತ್ಯ ವ್ಯವಹಾರಕ್ಕೆ ಸಂಕೇತವಾಗಿ ಮಾಡಿಕೊಳ್ಳಿರಿ. ನೀವು ಯಾವದೇ ವ್ಯವಹಾರದಲ್ಲಿ ತೊಡಗಿರಿ, ಅಲ್ಲಿ ನಿಮಗೆ ದೊರಕುವ ಸಾಮಗ್ರಿಗಳೂ ಸೌಕರ್ಯಗಳೂ ಪರಮೇಶ್ವರನ ಆರಾಧನೆಗೆ ಉಪಕರಣವೆಂದೂ ನಿಮ್ಮ ಇಡಿಯ ಜೀವನವೇ ಈಶ್ವರನ ಆರಾಧನೆಯೆಂದೂ ಸಂತತವಾದ ಭಾವನೆಯನ್ನು ಕೈಕೊಳ್ಳಿರಿ. ನಿಮಗೆ ಅವಶ್ಯವಾಗಿರುವ ಸುಖಶಾಂತಿಗಳ ಭೋಗವೆಂಬುದು ಈಶ್ವರನಿಗೆ ಅರ್ಪಣೆ ಮಾಡಿ ಆತನ ಪ್ರಸಾದವಾಗಿ ದೊರೆತ ಭೋಗವಾಗಿರುವಂತೆ, ಭಾವನಾಸಂತಾನವನ್ನು ನಡೆಯಿಸುತ್ತಿರಿ. ಮತ್ತೆ ಯಾವ ಸಾಧನವೂ ಅವಶ್ಯವಾಗುವದೇ ಇಲ್ಲ.

## 38. ಮದುವೆಯ ಉದ್ದೇಶ

**(ಜೂನ್1949)**

*ನಿಮ್ಮ ಮದುವೆಯ ವಿಷಯವಲ್ಲಿ ಬರೆದಿರುವ ಪತ್ರವು ತಲುಪಿದೆ. ನಿಮ್ಮಂತೆ ಇನ್ನೂ ಎರಡು ಮೂರು ಜನ ಯುವಕರು ಇದೇ ವಿಷಯದಲ್ಲಿ ಪ್ರಶ್ನೆಯನ್ನು ಹಾಕಿ ಬರೆದಿರುತ್ತಾರೆ. ಎಲ್ಲರ ಪ್ರಶ್ನೆಗಳನ್ನೂ ಕಲೆಪಿರಕೆ ಮಾಡಿ ಒಟ್ಟಿನಲ್ಲಿ ಉತ್ತರವನ್ನು ಬರೆದಿರುತ್ತೇನೆ. ಇದನ್ನು ಓದಿ*

*ಗ್ರಾಹ್ಯವಾದಷ್ಟನ್ನು ಸ್ವೀಕರಿಸಿರಿ. ಈ ವಿಷಯದಲ್ಲಿ ಮತ್ತೇನಾದರೂ ತಿಳಿಯತಕ್ಕದ್ದಿದ್ದರೆ ಬರೆಯಿರಿ; ಯಥಾಶಕ್ತಿಯಾಗಿ ಉತ್ತರವನ್ನು ಬರೆಯುವೆನು.*

ಮದುವೆಯನ್ನು ವ್ಯವಹಾರ, ಪರಮಾರ್ಥ—ಎಂಬ ಎರಡು ಕಣ್ಣಿಂದಲೂ ನೋಡಬೇಕು. ಪರಮಾರ್ಥದಲ್ಲಿ ವ್ಯವಹಾರವು ಅಡಕವೇ ಆಗಿರುತ್ತದೆಯಾದ್ದರಿಂದ ಎರಡಕ್ಕೂ ವಿರೋಧವಿಲ್ಲವೆಂದು ನನ್ನ ಮತವು. ಮೊಟ್ಟಮೊದಲು ಮದುವೆ ಮಾಗುವದರ ಉದ್ದೇಶವೇನು? ಎಂಬ ಪ್ರಶ್ನೆಯನ್ನು ಕುರಿತು ವಿಚಾರ ಮಾಡಬೇಕಾದದ್ದು ಅತ್ಯವಶ್ಯ. ನಮ್ಮ ತಂದೆ ಮುದುಕರು; ತಮ್ಮ ಕಣ್ಣ ಮುಂದೆಯೇ ನನ್ನ ಮದುವೆಯಾದದ್ದನ್ನು ನೋಡಬೇಕೆನ್ನುತ್ತಾರೆ—ಎಂದು ಒಬ್ಬರು ಬರೆದಿರುತ್ತಾರೆ. ಇದು ಮದುವೆಗೆ ಸರಿಯಾದ ಕಾರಣವಾಗಲಾರದು. ಏಕೆಂದರೆ ಮದುವೆಯಾಗುವವರು ಯಾರು? ತಂದೆಯೊ, ಮಗನೊ? ನನಗೆ ಮದುವೆಯ ಆವಶ್ಯಕತೆಯಿದೆಯೆ, ಮದುವೆಯಾದಮೇಲೆ ಈ ಮದುವೆಯಿಂದ ಸುಖವು ಇಹಜೀವನದಲ್ಲಾದರೂ ಆದೀತೆ?— ಎಂಬ ಯೋಚನೆ ಮಾಡದೆ ತಂದೆಯ ಒತ್ತಾಯಪಡಿಸುತ್ತಾರೆಂಬ ಕಾರಣದಿಂದ, ಅಥವಾ ಹೆಣ್ಣಿನವರು ಸಮೀಪ ಬಂಧುಗಳಾದ್ದರಿಂದ ಒಲ್ಲೆನೆನ್ನುವ ಹಾಗಿಲ್ಲವೆಂಬ ಕಾರಣದಿಂದ, ಮದುವೆಗೆ ಒಪ್ಪಿದರೆ ಏನು ಗತಿ? ಮದುವೆಯಾಗುವುದು ಇಹಲೋಕದಲ್ಲಿ ಸುಖವಾಗುವದಕ್ಕೆ ಮತ್ತು ಪರದಲ್ಲಿ ಸದ್ಗತಿಯಾಗುವಂತೆ ಧರ್ಮವನ್ನು ಮಾಡುವದಕ್ಕೆ ಸಹಾಯಕಳಾಗುವ ಪತ್ನಿಯನ್ನು ಸಂಪಾದಿಸಿಕೊಳ್ಳುವದಕ್ಕೆ. ಈ ಎರಡೂ ಪ್ರಯೋಜನಗಳಿಲ್ಲದೆ ಆಗುವದನ್ನು ಮದುವೆಯೆನ್ನುವದಕ್ಕಿಂತ, ಅದನ್ನು ಸರ್ಕಸ್ಸಿನವರು ಅಗ್ಗವಾಗಿ ಮಾರುವ ಹುಲಿಯನ್ನು ಕೊಂಡುಕೊಳ್ಳುವ ವ್ಯಾಪಾರವೆಂದೇ ಕರೆಯಬಹುದು ಎಂದು ನನ್ನ ಅಭಿಪ್ರಾಯವು.

ಹಿಂದಿನವರು ದಂಪತಿಗಳಿಗೆ ಆದಷ್ಟು ಮಟ್ಟಿಗೂ ಅನುಗುಣ್ಯವಿರಬೇಕೆಂಬುದನ್ನು ಲಕ್ಷ್ಯದಲ್ಲಿಟ್ಟು ವಿವಾಹವನ್ನು ಏರ್ಪಡಿಸಿಕೊಳ್ಳುತ್ತಿದ್ದರು. ಕುಲ, ಶೀಲ, ಚಾರಿತ್ರ್ಯ, ಆರೋಗ್ಯ, ವಿದ್ಯೆ, ರೂಪು, ಧನಸಂಪತ್ತಿ—ಇವುಗಳನ್ನು ಒಂದೊಂದಾಗಿ ಪರೀಕ್ಷಿಸಿಯೇ ಮದುವೆಯಾಗುವದಕ್ಕೆ ಅವರು ಪ್ರಯತ್ನಿಸುತ್ತಿದ್ದರು. ಆದರಲ್ಲಿಯೂ ವರನು ಮದುವೆಗೆ ತಕ್ಕ ವಯಸ್ಸನ್ನು ಹೊಂದಿನ ಬಳಿಕ ಕನ್ಯಾರ್ಥಿಯಾಗಿ ತನಗೆ ಬೇಕಾದವರ ಮೂಲಕ ಅಲ್ಲಲ್ಲಿ ಹುಡುಕಿಸಿ ಯೋಗ್ಯಳಾದ ಕನ್ಯೆಯನ್ನು ಆರಿಸಿಕೊಳ್ಳುತ್ತಿದ್ದನು. ಕೆಲವು ಸಂದರ್ಭಗಳಲ್ಲಿ ಕನ್ಯೆಗಂದು ವರನು ಕೊಡುವ ಹಣವನ್ನು ತಂದೆತಾಯಿಗಳು ಗ್ರಹಿಸುವ ಪದ್ಧತಿಯೇನೋ ಇತ್ತು; ಆದರೆ ಆ ಪದ್ಧತಿಯಿಂದ ಮಗಳನ್ನು ಮಾರಿದ ಪಾಪವು ಬರುತ್ತದೆ ಎಂದು ಧರ್ಮಶಾಸ್ತ್ರಕಾರರು ಸ್ಪಷ್ಟವಾಗಿ ನಿಂದಿಸಿದ್ದರು. ಇಷ್ಟೇ ಅಲ್ಲ, ವಸ್ತ್ರಗಳನ್ನೂ ಒಡವೆಗಳನ್ನೂ ಕೊಟ್ಟು ಮಗಳಿಗೆಂದು ವರನು ಕೊಟ್ಟ ಧನಾದಿಗಳನ್ನೂ ಅವಳಿಗೇ

ಕೊಟ್ಟು ಯೋಗ್ಯನಾದ ವರನಿಗೆ ದಾನಮಾಡುವದು ಉತ್ತಮವಿವಾಹವೆಂದು ಶಾಸ್ತ್ರಕಾರರು ವಿಧಾನಮಾಡಿದ್ದರು.

ಆದರೆ ಈಗೀಗ ಮಾಡುವ ವಿವಾಹದ ಏರ್ಪಾಡು ವಿಚಿತ್ರವಾಗಿರುತ್ತದೆ. ಅದು ಇಹಕ್ಕೂ ಪರಕ್ಕೂ ಸಾಧನವಾದ ವಿಚಾರಗಳನ್ನು ಸಂಪೂರ್ಣವಾಗಿ ಕೈಬಿಟ್ಟು ಮಾಡುವ ಒಂದಾನೊಂದು ವಿಲಕ್ಷಣವಾದ ವ್ಯಾಪಾರವಾಗಿರುತ್ತದೆ. ಕನ್ಯಾದಾತೃಗಳು ಹುಡುಗನು ಓದಿ ಪ್ಯಾಸಾಗಿರುವನೆ, ಇಲ್ಲವೆ? ಅವನ ತಂದೆ ತಾಯಿಗಳು ಭಾರಿಯ ಧನವಂತರಾಗಿ ಅಥವಾ ಹೆಚ್ಚಿನ ಸರ್ಕಾರಿಯ ಉದ್ಯೋಗದಲ್ಲಿದ್ದಾರೆಯೆ, ಇಲ್ಲವೆ?–ಎಂಬೀ ಎರಡು ಪ್ರಶ್ನೆಗಳಿಗೆ ಮುಖ್ಯವಾಗಿ ಉತ್ತರವನ್ನು ಹುಡುಕುತ್ತಾರೆ. ಗಂಡಿನ ಕಡೆಯವರು–ಇದರಲ್ಲಿ ವರನೂ ಸೇರಿರುತ್ತಾನೆ–ಕನ್ಯೆಯ ಮಾತಾಪಿತೃಗಳು ವರನಿಗೆ 'ವರದಕ್ಷಿಣೆ' ಎಂಬ ಹೆಸರಿನಿಂದ ಕೋಟು, ಪೇಟಾ, ಜರತಾರಿವಸ್ತ್ರ, ಮಗುಟ, ಬೆಳ್ಳಿಯ ಪಾತ್ರೆಗಳು, ಸೈಕಲ್ಲು, ಕೈಗಡಿಯಾರ ಮೊದಲಾದ ವಿಲಾಸದ ವಸ್ತುಗಳನ್ನು ಕೊಡಬಲ್ಲರೆ? ಯಾವದಾದರೊಂದು ಸರಕಾರಿಯ ಉದ್ಯೋಗಸ್ಥಾನದಲ್ಲಿ ವರನಿಗೊಂದು 'ನೌಕರಿ'ಯನ್ನು ಕೊಡಿಸಿ ಕೊಡಬಲ್ಲರೆ?–ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಬಯಸುತ್ತಾರೆ. ಈ ಪ್ರಶ್ನೆಗಳಿಗೆ ಉತ್ತರ ಬಂದರೆ ಸಾಕು, ಮದುವೆಗೆ ಏರ್ಪಾಡಾಗಿ ಬಿಡುತ್ತದೆ. ಜಾತಕವನ್ನು ನೋಡಿಸುವದು, ಹುಡುಗಿಯನ್ನು ಬಂಧುಗಳು ನೋಡುವದು, ಹುಡುಗಿಯಿಂದ ಸ್ವಲ್ಪ ಸಂಗೀತವನ್ನು ಹಾಡಿಸಿ ನೋಡುವದು–ಈ ಶಾಸ್ತ್ರವೂ ಕೆಲವು ಕಡೆಗಳಲ್ಲಿ ನಡೆಯುವದುಂಟು. ಆದರೆ ಹುಡಗನು ಆರೋಗ್ಯ ವಿದ್ಯಾದಿಗಳಿಂದ ಸಂಪನ್ನ ಕನ್ಯೆಯು ವ್ಯವಹಾರಜ್ಞಾನಕುಲಶೀಲಾದಿಯುಕ್ತಳೆ?, ಧರ್ಮದಿಂದ ಇಹಜೀವನವನ್ನು ಸಾಗಿಸುವದಕ್ಕೆ ದಂಪತಿಗಳಿಗೆ ಬೇಕಾದ ಅನುಗುಣ್ಯವು ಇಬ್ಬರಲ್ಲಿಯೂ ಇದೆಯೆ? ಈ ಪ್ರಶ್ನೆಗಳಿಗೆ ಯಾರೂ ಉತ್ತರವನ್ನು ಕೇಳುವದೇ ಇಲ್ಲ! ಇನ್ನು ವಿವಾಹದಿಂದ ಸುಖಶಾಂತಿಗಳು ಹೇಗೆ ದೊರಕಬೇಕು?

ಮೇಲಿನ ನನ್ನ ಅಭಿಪ್ರಾಯಗಳಿಂದ ನಿಮ್ಮ ಪ್ರಶ್ನೆಗಳಿಗೆ ಸಾಮಾನ್ಯ ರೀತಿಯಿಂದ ಉತ್ತರವು ಬಂದಿರುವದೆಂದು ಭಾವಿಸುತ್ತೇನೆ. ಆದರೆ ಒಂದು ಪ್ರಶ್ನೆಗೆ ಉತ್ತರವನ್ನು ಸ್ಪಷ್ಟರೀತಿಯಿಂದ ತಿಳಿಸುವದು ಅವಶ್ಯವೆಂದು ನಾನು ಎಣಿಸಿರುತ್ತೇನೆ. 'ವರದಕ್ಷಿಣೆ' ಎಂಬ ಲಂಚಕ್ಕೆ ಮರುಳಾಗಿ ಖಂಡಿತವಾಗಿಯೂ ಕನ್ಯಾಸ್ವೀಕಾರವನ್ನು ಮಾಡಬೇಡಿರಿ. ನಿಮ್ಮ ತಂದೆ ತಾಯಿಗಳು ನಿಮ್ಮನ್ನು ಅಷ್ಟು ಹಣಕ್ಕೆ ಮಾವನ ಮನೆಗೆ ಮಾರಿದವರಾಗುತ್ತಾರೆ. ನೀವು ಕನ್ಯೆಯನ್ನು ಮದುವೆಯಾಗುವವರ ಬದಲು ಅಷ್ಟು ಹಣವನ್ನು ಮದುವೆಮಾಡಿ ಕೊಂಡಂತೆ ಆಗುತ್ತದೆ. ಹೆಣ್ಣಿನ ಕಡೆಯವರು ಯತ್ನವಿಲ್ಲದೆ ಸಾಲಸೋಲವನ್ನು ಮಾಡಿ ಹಣವನ್ನು ಕೊಟ್ಟರೂ ನಿಮ್ಮ ವಿಷಯಕ್ಕೆ ಅವರಿಗಿದ್ದ ಗೌರವದ ಬಣ್ಣವು

ಕಡಿಮೆಯಾಗುತ್ತದೆ. ನಿಮಗೆ ಸ್ವತಂತ್ರಜೀವನದ ಧೈರ್ಯವು ತಪ್ಪಿ ಮಾವನ ಪೋಷಣೆಯಿಂದ ಬಾಳುವ ನೀಚಭಾವನೆಯು ಬಂದು ಗಂಟುಬೀಳುತ್ತದೆ. ಎಷ್ಟು ಹಣವನ್ನು ಕೊಟ್ಟರೆತಾನೆ ಜೀವನಕ್ಕೆಲ್ಲ ಸಾಕಾದೀತು? ಹಣದಿಂದ ದಾಂಪತ್ಯ ಸುಖವನ್ನಾಗಲಿ, ಧರ್ಮಜ್ಞಾನಾದಿಗಳನ್ನಾಗಲಿ ಕೊಂಡುಕೊಳ್ಳುವದಕ್ಕೆ ಎಂದಿಗೂ ಆಗಲಾರದು.

ಎಲ್ಲಕ್ಕೂ ಮೇಲಾಗಿ ನಮ್ಮ ಸನಾತನವೈದಿಕಧರ್ಮದ ದೃಷ್ಟಿಯಿಂದ ನೋಡಿದರೆ ಧರ್ಮಾರ್ಥಕಾಮಗಳನ್ನು ಯಥಾಸಂಭವವಾಗಿ ಸಂಪಾದಿಸಿಕೊಳ್ಳುವದಕ್ಕೇ ಮದುವೆಯು. ಆದ್ದರಿಂದ ಧರ್ಮವಿರುದ್ಧವಾದ ಅರ್ಥಕಾಮಗಳ ದೃಷ್ಟಿಯಿಂದ ಎಂದಿಗೂ ಮದುವೆಗೆ ಒಪ್ಪಬಾರದು. ನಿಮ್ಮ ಮನೆಯವರೆಲ್ಲರೂ ಆಸ್ತಿಕ್ಯಬುದ್ಧಿಯವರಾಗಿರುವದರಿಂದಲೂ ನನ್ನನ್ನು ನೀವು ಬುದ್ಧಿವಾದಕ್ಕಾಗಿ ಕೇಳಿಕೊಂಡಿರುವದರಿಂದಲೂ ಈ ಸ್ಪಷ್ಟೋಕ್ತಿಗಳನ್ನು ಬರೆದಿರುತ್ತೇನೆ. ಆದರೆ ಎಷ್ಟಾದರೂ ನಿಮ್ಮ ನಿಮ್ಮ ಪುರುಷಾರ್ಥಸಾಧನೆಗೆ ನೀವೇ ಹೊಣೆಗಾರರಾಗಿರುವದರಿಂದ ನಿಮ್ಮ ಸ್ವಂತಬುದ್ಧಿಗೇ ಇದರಲ್ಲಿ ಹೆಚ್ಚಿನ ಪ್ರಾಧಾನ್ಯವೆಂಬುದನ್ನು ಹೇಳಬೇಕಾದದ್ದಿಲ್ಲವಷ್ಟೆ.

## 39. ಮಕ್ಕಳ ವಿಷಯದಲ್ಲಿ ಕರ್ತವ್ಯ

### (ಜುಲೈ 1949)

*ನಿಮ್ಮ ಪತ್ರವು ತಲುಪಿರುತ್ತದೆ. ಮನೆಯಲ್ಲಿರುವ ಇಬ್ಬರು ಮಕ್ಕಳ ಪೋಷಣೆಯ ವಿಚಾರವು ನನ್ನ ಕಾಲದಲ್ಲಿ ಬಹುಭಾಗವನ್ನು ತೆಗೆದುಕೊಂಡು ಬಿಡುತ್ತವೆ. ಕಿರಿಯವನ ಓದಿಗೆ ತಿಂಗಳು ತಿಂಗಳಿಗೆ ಹಣಕಟ್ಟುವದು ಭಾರಿಯ ಕಂದಾಯವಾಗಿಬಿಟ್ಟಿದೆ. ಹಿರಿಯವನು ಮನೆಯಲ್ಲಿಯೇ ಇದ್ದುಕೊಂಡಿರುತ್ತಾನಾದರೂ ಅವನು ಜಮೀನು ಕಡೆ ಹೋಗಿ ಬರುವದೇ ಅಪರೂಪ. ರೈತರಿಗೆ ಆತನ ಪರಿಚಯವು ಬಹಳ ಕಡಿಮೆ; ಅವರು ಅವನ ಮಾತಿಗೆ ಸೊಪ್ಪು ಹಾಕುವದೂ ಇಲ್ಲ. ಹುಡುಗರನ್ನು ನಮ್ಮ ಗೌರವಕ್ಕೆ ತಕ್ಕಂತೆ ಇರಿಸದಿದ್ದರೆ ನಮಗೇ ಕೆಟ್ಟ ಹೆಸರು ಬರುತ್ತದೆ–ಎಂದು ಹೆಂಡತಿ ಆಗಾಗ್ಗೆ ಹೆದರಿಸುತ್ತಲೇ ಇದ್ದಾಳೆ. ಹೀಗಾಗಿ ಈ ಇಳಿವಯಸ್ಸಿನಲ್ಲಿ ನನಗೆ ಕಾಲ ಕಾಲಕ್ಕೆ ಸಂಧ್ಯಾದಿಕರ್ಮಗಳನ್ನು ಮಾಡುವದಕ್ಕೆ ಕೂಡ ಬಿಡುವಿಲ್ಲದೆ ಹೋಗಿದೆ. ಮನಃಶಾಂತಿಯಂತೂ ಸ್ವಲ್ಪವೂ ಇಲ್ಲ. ಈ ಸಂದರ್ಭದಲ್ಲಿ ನಾನು ಯಾವ ಆಧ್ಯಾತ್ಮ ಸಾಧನವನ್ನು ತಾನೆ ಮಾಡಿಯೇನು?–ಎಂದು ಬರೆದಿರುತ್ತೀರಿ.*

ಮನುಷ್ಯನು ಎದೆಗುಂದದೆ ಇರುವದು ಮೊದಲನೆಯ ಸಾಧನವು. ನಿಮಗೇನೂ ಅನಿವಾರ್ಯವಾದ ಕಷ್ಟಗಳು ಬಂದಿರುವದಿಲ್ಲ. ಸ್ವಯಂಕಲ್ಪಿತವಾದ ಕಷ್ಟಗಳಿಗೆ ಪರಿಹಾರವನ್ನು ಮತ್ತೊಬ್ಬರು ಹೇಳಲಾರರು. ನಿಮಗೆ ಈಗ ಬಂದಿರುವ ಕಷ್ಟಗಳೆಲ್ಲ ಬಹುಮಟ್ಟಿಗೆ ನಿಮ್ಮ ದೃಷ್ಟಿವಿಶೇಷದಿಂದಲೇ ಆಗಿರುತ್ತವೆ. ಆದರೂ ನೀವು ಕೇಳಿರುವುದರಿಂದ ಕೆಲವು ಸೂಚನೆಗಳನ್ನು ಇಲ್ಲಿ ಬರೆಯುವೆನು.

'ನನಗೆ ಸಾಧನಕ್ಕೆ ಅವಕಾಶವಿಲ್ಲವಲ್ಲ!' ಎಂಬ ಪಶ್ಚಾತ್ತಾಪವು ನಿಮಗಿರುವದರಿಂದಲೇ ನಮಗೆ ಸಾಧನವನ್ನು ಮಾಡುವದಕ್ಕೆ ಅವಕಾಶವಿದೆ ಎಂದು ನನಗೆ ತೋರುತ್ತದೆ. ನೀವು ಯಾವ ಕೆಲಸದಲ್ಲಿಯೇ ಇರಲಿ, ಭಗವಂತನ ನಾಮವನ್ನು ಜಪಿಸುವದಕ್ಕೂ ಮನಸ್ಸಿಗೆ ಆತಂಕವು ತೋರಿಕೊಂಡಾಗ ಭಗವನ್ನಾಮವನ್ನು ಗಟ್ಟಿಯಾಗಿ ಉಚ್ಚರಿಸುವದಕ್ಕೂ ಯಾವ ಅಡ್ಡಿಯೂ ಇರುವದಿಲ್ಲ. ರಾತ್ರೆ ಮಲಗುವ ಮುಂಚೆಯೂ ಬೆಳಗ್ಗೆ ಹಾಸಿಗೆಯಿಂದ ಏಳುವ ಮುಂಚೆಯೂ ಭಗವಂತನನ್ನು ಸ್ಮರಿಸಿಕೊಳ್ಳುವದಕ್ಕೆ ನಿಮಗೆ ಯಾವಾಗಲೂ ವಿರಾಮವಿರುತ್ತದೆ. ಆ ಕಾಲಗಳಲ್ಲಿ ಭಗವಂತನನ್ನು ನೆನಪಿಸಿಕೊಳ್ಳಿರಿ. 'ನನಗೆ ಸಿಕ್ಕಿದಷ್ಟು ಕಾಲ ನಿನ್ನ ಸ್ಮರಣೆಯಲ್ಲಿರುವಂತೆ ಅನುಗ್ರಹಿಸು' ಎಂದು ಬೇಡಿಕೊಳ್ಳಿರಿ. ಕ್ರಮಕ್ರಮವಾಗಿ ಈಗ ತೋರುತ್ತಿರುವ ಅಡ್ಡಿಗಳೆಲ್ಲವೂ ಮರೆಯಾಗುವವು, ಸಾಧನದಲ್ಲಿ ಹೆಚ್ಚಿನ ಅಭಿರುಚಿಯು ತೋರಿಕೊಳ್ಳುವದು' ಸಾಧನಕ್ಕೆ ಕಾಲವೂ ದೊರಕುವದು.

ಆದರೆ ಒಂದು ವಿಷಯ, ಹಿಂದಿನಂತೆ ಪರೀಕ್ಷೆಗಳನ್ನು ಪ್ಯಾಸುಮಾಡಿದವರಿಗೆ ಕೆಲಸಗಳು ಸಿಕ್ಕುವದು ಈಗ ಕಷ್ಟ. ಅಬ್ರಾಹ್ಮಣರೇ ದಂಡುದಂಡಾಗಿ ಸರಕಾರಿಯ ನೌಕರಿಯ ಬೇಟೆಗೆ ಹೊರಟಿರುತ್ತಾರೆ. ಇನ್ನು ನಿಮ್ಮಂಥ ಬಡ ಬ್ರಾಹ್ಮಣರಿಗೆ ಎಲ್ಲಿಂದ ಸಿಕ್ಕಬೇಕು? ಈಗ ನೀವು ನಿಮ್ಮ ಹುಡುಗನ ಓದಿಗೆಂದು ಖರ್ಚುಮಾಡುತ್ತಿರುವ ಹಣದಲ್ಲಿ ಅರ್ಧವನ್ನಾದರೂ ಅವನು ಮುಂದೆ ದುಡಿಯುವಂತೆ ಕಾಣಿಸುವದಿಲ್ಲವಲ್ಲ! ಈ ದುಡ್ಡನ್ನು ಅವನಿಗೆ ಯಾವದಾರೊಂದು ದುಡಿಮೆಯ ಕೈ ಕೆಲಸಕ್ಕೆ ಏತಕ್ಕೆ ವೆಚ್ಚ ಮಾಡಬಾರದು?

ಯಾವ ಉದ್ಯೋಗವನ್ನೇ ಮಾಡಲಿ, ಮನುಷ್ಯನು ಇಹಸೌಖ್ಯಕ್ಕೆ ಅನುಕೂಲ್ಯವನ್ನು ಒದಗಿಸುವ, ಪರಲೋಕಕ್ಕೆ ಸಾಧನವನ್ನೂ ಮರೆಯಿಸುವ, ಆಚಾರವಿಚಾರಗಳನ್ನು ಕೈಬಿಡಿಸುವ, ಕೆಲಸಗಳನ್ನೂ ಎಂದಿಗೂ ಹಿಡಿಯಬಾರದು. ನಿಮಗೆ ವಿರಾಮವು ಬೇಕಿದ್ದರೆ ನಿಮ್ಮ ಹುಡುಗನಿಗಾಗಿ ವ್ಯರ್ಥಕಾಲಕ್ಷೇಪಕ್ಕಾಗಿ ಹಣವನ್ನು ದುಡಿಯುವದರಲ್ಲಿಯೇ ಈ ವಯಸ್ಸಿನ ಕಾಲವನ್ನು ಹಾಕದೆ ಯಾವದಾದರೊಂದು ಉದ್ಯೋಗಕ್ಕೆ ಅವನನ್ನು ಹತ್ತಿಸಿ ಕೂಡಲೆ ಪರಮಾರ್ಥಸಾಧನೆಗೆ ಹೆಚ್ಚು ಹೊತ್ತನ್ನು ವಿನಿಯೋಗಿಸಿರಿ. ಹಿರಿಯ ಹುಡುಗನು

ಏನೂ ಕೆಲಸವನ್ನು ಮಾಡದೆ ಇದ್ದರೆ, ಅವನೇಕೆ ಮನೆಯಲ್ಲಿರಬೇಕು? ಸೋಮಾರಿಗಳನ್ನೂ ದುರಾಚಾರಿಗಳನ್ನೂ ಸ್ವೇಚ್ಛಾಪ್ರವರ್ತಕರನ್ನೂ ಪೋಷಿಸುವದು ತಂದೆಯ ಕರ್ತವ್ಯವೆಂದು ಯಾರು ತಾನೆ ಹೇಳಿಯಾರು? ಹಾಗೆ ಅವರನ್ನು ಪ್ರೋತ್ಸಾಹಿಸುವದು ನಿಮ್ಮ 'ಗೌರವಕ್ಕೂ' ಕುಂದನ್ನೇ ತರುವದೆಂಬುದನ್ನು ನಿಮ್ಮ ಸಹ ಧರ್ಮಿಣಿಗೆ ತಿಳಿಸಿಕೊಡುವದೂ ನಿಮ್ಮ ಕರ್ತವ್ಯವೆಂದೇ ನನ್ನ ಭಾವ.

ಕಣ್ಣುಕಟ್ಟಿಕೊಂಡು ಜೂಜಿನ ಓಟಕ್ಕೆ ನಿಂತಿರುವವರಂತೆ ಮಕ್ಕಳನ್ನು ವಿದ್ಯೆಯ ಹೆಸರಿನಲ್ಲಿ ವ್ಯರ್ಥಕಾಲಕ್ಷೇಪಕ್ಕೆ ಬಿಡುವದೂ ಅವರಿಗೆ ಆಚಾರವಿಚಾರಗಳ ಅರಿವೇ ಇಲ್ಲದಂತೆ ಸ್ವೇಚ್ಛಾ ಪ್ರವೃತ್ತಿಯಲ್ಲಿರುವಂತೆ ಪ್ರೋತ್ಸಾಹಿಸಿ "ಈಗಿನ ಕಾಲದ ಮಕ್ಕಳು ನಮ್ಮ ಮಾತು ಕೇಳುವದಿಲ್ಲ" ಎನ್ನುವದು ಎಂದಿಗೂ ಜಾಣತನವಾಗಲಾರದು.

ಋಷಿಗಳ ವಂಶದಲ್ಲಿ ಹುಟ್ಟಿರುವೆವೆಂದು ಹೇಳಿಕೊಳ್ಳುವ ಬ್ರಾಹ್ಮಣರಿಗೆ ಅವಶ್ಯಕರ್ತವ್ಯವಾದದ್ದು ಒಂದು ಕೆಲಸವಿದೆ. ಮಿಕ್ಕ ಎಲ್ಲಾ ಕೆಲಸಗಳನ್ನೂ ಬಿಟ್ಟು ಪರಮೇಶ್ವರನ ಸ್ವರೂಪದ ಜ್ಞಾನವನ್ನು ಮಾಡಿಕೊಂಡು ಆತನನ್ನು ಭಕ್ತಿಯಿಂದ ಸೇವಿಸುವದೇ ಆ ಕೆಲಸವು. ಪರಮೇಶ್ವರನನ್ನು ಎಡೆಬಿಡದೆ ಚಿಂತಿಸುವವರಿಗೆ ಯಾವ ಇಹಸೌಖ್ಯಕ್ಕೂ ಆತ್ತಿ ಬರುವದಕ್ಕೆ ಕಾರಣವಿಲ್ಲ. ಆದ್ದರಿಂದ ನೀವು ನಿಮ್ಮ ಕುಟುಂಬದವರನ್ನೆಲ್ಲ ದಿನಕ್ಕೆ ಎರಡು ಮೂರು ವೇಳೆ ಭಗವಂತನ ಧ್ಯಾನವನ್ನು, ಪ್ರಾರ್ಥನೆಯನ್ನು, ಅಥವಾ ಅರ್ಚನೆಯನ್ನು ಮಾಡುವದಕ್ಕೂ ವ್ಯವಹಾರದಲ್ಲಿ ತೊಡಗಿರುವಾಗಲೂ ಆತನ ನಾಮೋಚ್ಚಾರಣೆಯನ್ನು ಅಥವಾ ನಾಮಸ್ಮರಣೆಯನ್ನು ಮಾಡುತ್ತಿರುವದಕ್ಕೂ ಪ್ರಯತ್ನಿಸುವಂತೆ ಮಾಡಿರಿ. ಮೊಟ್ಟ ಮೊದಲು ನೀವು ಈ ಕೆಲಸಕ್ಕೇ ಮನಸ್ಸು ಹಾಕಿರಿ. ಭಗವಂತನು ತನ್ನನ್ನು ನಂಬಿದವರನ್ನು ಎಂದಿಗೂ ಕೈಬಿಡುವದಿಲ್ಲ; ಅನನ್ಯಭಕ್ತಿಯಿಂದ ತನ್ನನ್ನೇ ಸೇವಿಸುತ್ತಿರುವವರ ಯೋಗಕ್ಷೇಮಗಳನ್ನು ನೋಡಿಕೊಳ್ಳುವದೆಂಬುದು ಆತನ ಬಿರುದು.

ಆದ್ದರಿಂದ ನೀವು ನಿಶ್ಶಂಕೆಯಿಂದ ಸಾಧನಕ್ಕೇ ಮೊದಲು ಕಾಲವನ್ನು ಗೊತ್ತುಮಾಡಿಕೊಳ್ಳಿರಿ. ಉಳಿದ ಹೊತ್ತಿನಲ್ಲಿ ಆತನ ಪ್ರೇರಣೆಯಿಂದ ನಿಮಗೆ ಯುಕ್ತವೆಂದು ತೋರುವ ಉದ್ಯೋಗವನ್ನು—ಹೊಲಮನೆಯ ಕೆಲಸವೋ, ಕೈ ಕೆಲಸವೋ, ಓದು ಬರಹವೋ, ಅಂಗಡಿಯ ಕೆಲಸವೋ ಅಥವಾ ಮತ್ತೆ ಯಾವದಾದರೊಂದನ್ನು—ವಂಚನೆಯಿಲ್ಲದೆ ಮಾಡಿರಿ. ಆ ಉದ್ಯೋಗದಿಂದ ನಿಮಗೂ ನಿಮ್ಮ ಸುತ್ತುಮುತ್ತಿನವರಿಗೂ ಪ್ರಯೋಜನವಾಗಬೇಕೆಂಬ ದೃಷ್ಟಿಯಿಂದ ದುಡಿಯಿರಿ. ಜನರಿಗೆ ಉಪಯೋಗವಾಗಿ ತನ್ನ ಜೀವನವನ್ನು ಸಾಗಿಸುವದಕ್ಕೆ ಮಾಡುವ ಉದ್ಯೋಗವು ಪರಮೇಶ್ವರ ಆರಾಧನೆ

ಎಂಬ ಭಾವನೆಯನ್ನು ಮನಸ್ಸಿನಲ್ಲಿ ತುಂಬಿಕೊಂಡು ಇದೇ ಉಪದೇಶವನ್ನೇ ನಿಮ್ಮ ಮಕ್ಕಳಿಗೂ ನಿಮ್ಮ ಕುಟುಂಬಕ್ಕೆ ಸೇರಿದವರಿಗೂ ಮಾಡುತ್ತಿರಿ. ನಿಮ್ಮ ಪುರುಷಾರ್ಥವೂ ಕೈವಶವಾಗುವದಲ್ಲದೆ ನಿಮ್ಮ ಮಕ್ಕಳ ವಿಷಯಕ್ಕೆ ನಿಮ್ಮ ಕರ್ತವ್ಯತೆಯನ್ನೂ ನೆರವೇರಿಸಿದಂತೆ ಆಗುವದು. ಆರು ತಿಂಗಳ ಮಟ್ಟಿಗಾದರೂ ನನ್ನ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವನ್ನು ಮಾಡಿ ಫಲಿತಾಂಶವನ್ನು ಮತ್ತೆ ನನಗೆ ಬರೆಯಬೇಕೆಂದು ಪ್ರಾರ್ಥಿಸುತ್ತೇನೆ.

## 40. ಸಂಧ್ಯಾವಂದನ

### (ಆಗಸ್ಟ್1949)

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. "ಈಗಿನ ನಮ್ಮ ಪರಿಸ್ಥಿತಿಯಲ್ಲಿ ನನಗೆ ಭಗವಂತನ ಚಿಂತೆಗೆ ಒಂದಿಷ್ಟೂ ಅವಕಾಶವಿಲ್ಲ. ಹಗಲೆಲ್ಲ ದುಡಿದರೂ ಸಂಸಾರಕ್ಕೆ ಸಾಕಾಗುವದಿಲ್ಲ. ಇನ್ನು ನಾನು ಯಾವ ಸಾಧನವನ್ನು ಮಾಡಿ ಯಾವ ಪುರುಷಾರ್ಥವನ್ನು ಸಾಧಿಸಿಕೊಳ್ಳಲಿ? ಪತ್ರಿಕೆಯೇನೋ ಹತ್ತಿರವೇ ಇರುತ್ತದೆ. ಆದರೆ ಅದನ್ನು ಓದುವದಕ್ಕೇ ಅವಕಾಶವಿಲ್ಲ" ಎಂತ ಬರೆದಿರುತ್ತೀರಿ.*

ನವನಾಗರಿಕತೆಯ ಈ ಕಾಲದಲ್ಲಿ ನಮಗೆ ಹಿಂದೆ ಇಲ್ಲದಷ್ಟು ಸೌಕರ್ಯಗಳು ಏರ್ಪಾಡಾಗಿವೆ. ಆದರೆ ಮನುಷ್ಯನಿಗೆ ಹೊಟ್ಟೆಯಪಾಡು ನೋಡಿಕೊಳ್ಳುವದರಲ್ಲಿಯೇ ಕಾಲವೆಲ್ಲ ವೆಚ್ಚವಾಗುತ್ತಿದೆ ಎಂಬುದು ಆಶ್ಚರ್ಯವಲ್ಲವೆ? ಇದು ಹೇಗಾದರೂ ಇರಲಿ. ಈಗಲೂ ನೀವು ಸಾಧನ ಮಾಡುವದಕ್ಕೆ ಅವಕಾಶವಿದೆ. ಬೆಳಗ್ಗೆ ಎಂಟರಿಂದ ನಿಮ್ಮ ಆಫೀಸು ಕೆಲಸ ಮೊದಲಾಗುತ್ತದೆಯಷ್ಟೆ. ನೀವು ಹೇಗೂ ಮುಂಚೆ ಏಳಲೇಬೇಕಾಗಿದೆ. ಬೆಳಗ್ಗೆ ಎದ್ದ ಕೂಡಲೆ ನಿತ್ಯಸ್ನಾನಮಾಡಿ ಕಾಫಿ ತೆಗೆದುಕೊಂಡೇ ಕೆಲಸಕ್ಕೆ ಹೋಗುತ್ತೀರಿ. ಆಗ ಸಂಧ್ಯಾವಂದನೆಗೆ ಕಾಲುಘಂಟೆ ಏಕೆ ಉಳಿಸಿಕೊಳ್ಳಬಾರದು? ಹೀಗೆಯೇ ಸಾಯಂಕಾಲ ಆರು ಘಂಟೆಗೆ ನಿಮ್ಮ ಆಫೀಸು ಮುಗಿಯುತ್ತದೆ. ಮನೆಗೆ ಬಂದ ಕೂಡಲೆ ಕಾಲು ತೊಳೆದುಕೊಂಡು ಮತ್ತೊಂದು ಸಂಧ್ಯಾವಂದನೆಯನ್ನು ಏಕೆ ಮಾಡಬಾರದು? "ಬೆಳಗ್ಗೆ ಆಫೀಸಿನ ಯೋಚನೆಯಿಂದ ಮನಸ್ಸು ಗಡಿಬಿಡಿಯಾಗಿರುತ್ತದೆ; ಸಾಯಂಕಾಲ ಕೆಲಸದ ಆಯಾಸದಿಂದ ಏನೂ ಬೇಡವಾಗಿರುತ್ತದೆ" ಎಂತ ಬರೆದಿದ್ದೀರಿ. ಆದರೆ ಭಗವಂತನ ಚಿಂತನೆಯು ಗಡಿಬಿಡಿಯನ್ನು ನಿಲ್ಲಿಸುವದಕ್ಕೆ, ಮತ್ತು ಆಯಾಸಪರಿಹಾರವನ್ನು ಮಾಡಿಕೊಳ್ಳುವದಕ್ಕೆ, ಉತ್ತಮ ಸಾಧನವೆಂಬುದನ್ನು ಎಂದಾದರೂ ಮನಸ್ಸಿಗೆ ತಂದುಕೊಂಡಿರುತ್ತೀರೇನು?

ಸಂಧ್ಯಾವಂದನೆ ಎಂದರೇನು? ರಾತ್ರಿಯಲ್ಲಿ ಮಾಡಿದ ಪಾಪವನ್ನು ಬೆಳಗ್ಗೆ ಮತ್ತು ಹಗಲು ಮಾಡಿದ ಪಾಪವನ್ನು ರಾತ್ರಿ ತೊಳೆದುಕೊಳ್ಳುವದಕ್ಕೆ ಒಂದು ಅಮೂಲ್ಯಸಾಧನವದು. ಭಗವಂತನ ಚಿಂತನೆಯಿಂದ ಕೆಳಕ್ಕೆ ಜಾರಿರುವದೇ ಪಾಪವು; ಭಗವಂತನ ಚಿಂತನೆಯೇ ಅದಕ್ಕೆ ಪ್ರಾಯಶ್ಚಿತ್ತವು. ಪಾಪದಿಂದ ಗಡಿಬಿಡಿ, ಆಯಾಸ, ದುಗುಡ, ದುಮ್ಮಾನ, ಬಡತನ, ಭಯ–ಮುಂತಾದವುಗಳೆಲ್ಲ ಕಾಣಿಸಿಕೊಳ್ಳುವವು. ಭಗವಂತನಲ್ಲಿ ಚಿತ್ತವನ್ನು ನಿಲ್ಲಿಸಿಕೊಳ್ಳುವ ಸಾಧನದಿಂದ ಇವುಗಳೆಲ್ಲ ತೊಲಗುವವು. ಶಾಂತಿ, ಸಮಾಧಾನ, ಸಂತೋಷ, ಉಲ್ಲಾಸ, ಧೈರ್ಯ–ಇವುಗಳೆಲ್ಲ ತಾವೇ ಬಂದು ನಮ್ಮಲ್ಲಿ ಮನೆಮಾಡಿಕೊಳ್ಳುವವು. ಸಂಧ್ಯಾವಂದನೆಯ ಕಾಲದಲ್ಲಿ ನೀರಿನ ಮಾರ್ಜನೆಯನ್ನು ಮಾಡಿಕೊಳ್ಳುವಾಗ 'ಭಗವಂತನ ಅನುಗ್ರಹದಿಂದ ಅಮೃತವು ಚಿಮುಕಿಸುತ್ತಿದೆ' ಎಂದು ಭಾವನೆ ಮಾಡಿಕೊಳ್ಳಿರಿ; 'ನನ್ನ ಸಕಲಕಷ್ಟಗಳೂ ನಿವಾರಣೆಯಾಗಿವೆ, ನಾನು ಭಗವಂತನ ದಯದಿಂದ ಧನ್ಯನಾಗಿರುವೆನು' ಎಂದು ಭಾವಿಸಿಕೊಳ್ಳಿರಿ.

ಗಾಯತ್ರಿಯ ಜಪವನ್ನು ಆದಷ್ಟು ನಿಧಾನವಾಗಿ ಮಾಡಿರಿ. ಗಾಯತ್ರಿಯ ಅರ್ಥವೇನೆಂದರೆ: **''ಸರ್ವಜಗದ್ವ್ಯಾಪಕನಾದ ಸರ್ವಾತ್ಮಕನಾದ ಸಕಲಕಲ್ಯಾಣಗಳಿಗೂ ಕಾರಣನಾಗಿರುವ ಭಗವಂತನ ತೇಜಸ್ಸನ್ನು ನಾವು ಧ್ಯಾನ ಮಾಡುವೆವು. ಆತನು ನಮ್ಮ ಬುದ್ಧಿವೃತ್ತಿಗಳನ್ನು ಸರಿಯಾದ ದಾರಿಯಲ್ಲಿ ಪ್ರೇರಿಸಲಿ!''** ಭಗವಂತನಲ್ಲಿ ನಾವು ಬೇಡಬೇಕಾದದ್ದು ಇದೇ. ನಮ್ಮ ಬುದ್ಧಿಯು ಒಳ್ಳೆಯ ಹಾದಿಯನ್ನು ಹಿಡಿಯಬೇಕೆಂದೇ ಹಾರೈಸಬೇಕು. ಭಗವಂತನ ಚಿಂತನೆಯಿಂದ ಅವಶ್ಯವಾಗಿ ಈ ಫಲವುಂಟಾಗುವದು. ಇದರಿಂದ ನಮ್ಮ ಸಕಲ ಇಷ್ಟಾರ್ಥಗಳೂ ನೆರವೇರುವವು.

''ಮುಖ್ಯವಾಗಿ ಮಧ್ಯಾಹ್ನದಲ್ಲಿ ಆಫೀಸಿನ ಕೆಲಸದಲ್ಲಿ ಮುಳುಗಿರುತ್ತೇನೆ. ಆಗ ಒಂದೂವರೆ ಘಂಟೆಗೆ ಸ್ವಲ್ಪ ಬಿಡುವು ಇರುತ್ತದೆ. ಫಲಾಹಾರ, ಸ್ನೇಹಿತರೊಡನೆ ಮಾತು ಕಥೆ–ಇವುಗಳಲ್ಲಿ ಆ ಕಾಲವು ಕಳೆದು ಹೋಗುತ್ತದೆ'' ಎಂದು ಬರೆದಿದ್ದೀರಿ, ಆದರೆ ಆಗ ಸಾಧ್ಯವಾದರೆ ಉಡುಪನ್ನು ಬದಲಾಯಿಸಿಕೊಂಡು ಮಾಧ್ಯಾಹ್ನಿಕವನ್ನು ಮಾಡುವದಕ್ಕೆ ಹತ್ತು ನಿಮಿಷವನ್ನು ವಿನಿಯೋಗಿಸಿ. ಅದಕ್ಕೂ ಅವಕಾಶವಿಲ್ಲದಿದ್ದರೆ ಕಾಲು ತೊಳೆದುಕೊಂಡು ಐದು ನಿಮಿಷವಾದರೂ ''ಭಗವಂತ, ನನ್ನ ವ್ಯವಹಾರವೆಲ್ಲವೂ ನಿನ್ನ ಅನುಗ್ರಹದಿಂದ ಸಾಗುತ್ತಿರುವದು; ನನಗೆ ಈ ದಿನದ ವ್ಯವಹಾರದಲ್ಲಿ ಸದ್ಬುದ್ಧಿಯಿಂದ ವರ್ತಿಸುವಂತೆ ಅನುಗ್ರಹಿಸು'' ಎಂದು ಬೇಡಿಕೊಳ್ಳಿರಿ. ಇದರಿಂದ ಏನು ಫಲವಾಗುವದೆಂಬುದನ್ನು ಮುಂದಿನ ತಿಂಗಳು ನೋಡಿ ಮತ್ತೆ ನಿಮ್ಮ ಅನುಭವವನ್ನು ನನಗೆ ಬರೆಯುವಿರಾ?

# 41. ಹರಿಜನಪ್ರೇಮ

## (ಸಪ್ಟೆಂಬರ್ 1949)

*ತಾವು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಡುವದು ನನಗೆ ಬಹಳ ಕಠಿನವಾಗಿರುತ್ತದೆ. ಏಕೆಂದರೆ ಮೊದಲನೆಯದಾಗಿ ನಾನು ಸಮಾಜಸುಧಾರಕನಲ್ಲ. ಎರಡನೆಯದಾಗಿ ನಾನು ರಾಜಕೀಯ ಚಳುವಳಿಯಲ್ಲಿ ಯಾವಾಗಲೂ ಭಾಗವನ್ನು ತೆಗೆದುಕೊಂಡವನಲ್ಲ. "ಈಗ ಎಲ್ಲಾ ಕಡೆಯಲ್ಲಿಯೂ ಹರಿಜನರನ್ನು ದೇವಾಲಯಗಳಿಗೆ ಸರ್ಕಾರದವರ ಪ್ರೋತ್ಸಾಹದಿಂದ ಪ್ರವೇಶ ಮಾಡಿಸುತ್ತಿದ್ದಾರೆ. ಅಸವರ್ಣವಿವಾಹವನ್ನೂ ಕಾನೂನಿನಿಂದ ಒಪ್ಪಿರುತ್ತಾರೆ. ಕಾಲಕ್ರಮದಲ್ಲಿ ಹರಿಜನರಿಗೂ ಇತರ ಸವರ್ಣಹಿಂದೂಗಳಿಗೂ ವಿವಾಹವೂ ಆದರೆ, ಎಲ್ಲಾ ಕ್ಷೇತ್ರಗಳೂ ದೇವಾಲಯಗಳೂ ಹರಿಜನರಿಗೆ ಆಶ್ರಯವನ್ನು ಕೊಟ್ಟರೆ, ಬ್ರಾಹ್ಮಣವರ್ಣದವರೂ ಹರಿಜನಗಳ ರಕ್ತಸಂಬಂಧಕ್ಕೆ ಆಶ್ರಯ ಕೊಟ್ಟರೆ, ಆಗ ಆರ್ಯಸಂಸ್ಕೃತಿಯು ಇನ್ನೂ ಉಳಿದುಕೊಳ್ಳುವದೆ? ಈ ಆಚರಣೆಯಿಂದ ದಿವಂಗತ ಮಹಾತ್ಮಗಾಂಧಿಯವರ ಆತ್ಮಕ್ಕೆ ಶಾಂತಿ ದೊರಕುವದೆಂದೂ ನಮ್ಮ ದೇಶವು ಮಿಕ್ಕ ನಾಗರಿಕದೇಶಗಳ ಸಾಲಿಗೆ ನಿಲ್ಲುವಂಥ ಉನ್ನತಿಯನ್ನು ಪಡೆಯುವದೆಂದೂ ಹಲವರ ಅಭಿಪ್ರಾಯವಿದೆ. ಇದಕ್ಕೆ ನೀವೇನೆನ್ನುತ್ತೀರಿ?" ಎಂದು ಕೇಳಿರುತ್ತೀರಿ. ಈ ವಿಷಯಕ್ಕೆ ಸರ್ವಥಾ ಅನಧಿಕಾರಿಯಾದ ನಾನು ಏನು ತಾನೆ ಉತ್ತರವನ್ನು ಕೊಡಬಲ್ಲೆನು?*

ಇದು ಬಹು ದೊಡ್ಡ ಪ್ರಶ್ನೆಯಾದ್ದರಿಂದ ನಾನು ಯಥಾಶಕ್ತಿಯಾಗಿ ಉತ್ತರವನ್ನು ಬರೆಯಲೂ ಅಸಮರ್ಥನಾಗಿರುತ್ತೇನೆ. ಆದರೂ ಸಂದರ್ಭವು ದೊರೆತಂತೆ ಭಾಗಭಾಗವಾಗಿ ನನ್ನ ಆಶಯವನ್ನು ಆದ ಮಟ್ಟಿಗೆ ವ್ಯಕ್ತಗೊಳಿಸುತ್ತಾ ಬರುವೆನು.

ಮೊಟ್ಟಮೊದಲು ಮಹಾತ್ಮಗಾಂಧಿಯವರ ವಿಷಯ. ಅವರು ಸತ್ಯ, ಅಹಿಂಸೆ, ಪ್ರೇಮ–ಇವುಗಳ ಮೂರ್ತಿಯಾಗಿದ್ದರೆಂಬುದಕ್ಕೆ ಭೂಮಂಡಲದಲ್ಲಿ ಯಾರೊಬ್ಬರೂ, ಭಿನ್ನಾಭಿಪ್ರಾಯರಾಗಿಲ್ಲ; ಅವರೊಬ್ಬ ಮಹಾ ವಿಭೂತಿಪುರುಷರೆಂದೇ ನನ್ನ ಸ್ವಂತ ಅಭಿಪ್ರಾಯವಾಗಿರುತ್ತದೆ. ಆದರೆ ಅವರ ಮೇಲೆ ನಮ್ಮ ದೇಶದ ಭಗವದವತಾರಗಳ, ಆಚಾರ್ಯಪುರುಷರ, ಮತ್ತು ಸಾಧುಸಂತರ ಪ್ರಭಾವಕ್ಕಿಂತಲೂ ಹೆಚ್ಚಾಗಿ ಪಾಶ್ಚಾತ್ಯದೇಶಗಳ ಸಾಧುಸಂತರ, ಅದಕ್ಕಿಂತಲೂ ಮಿಗಿಲಾಗಿ ಪಾಶ್ಚಾತ್ಯಸಮಾಜ ಸುಧಾರಕರ ಮತ್ತು ರಾಜಕಾರಣಪಟುಗಳ, ಪ್ರಭಾವವು ಹೆಚ್ಚಾಗಿ ಬಿದ್ದಿತ್ತು. ಅವರು ನೇರಾಗಿ ಧಾರ್ಮಿಕವಿಚಾರಗಳಲ್ಲಿಯೂ ಧರ್ಮತತ್ತ್ವವಿವೇಚನೆಯಲ್ಲಿಯೂ ಕಾಲವನ್ನು ಕಳೆದ ನಮ್ಮ ದೇಶದ ಆಚಾರ್ಯರುಗಳ ಅಥವಾ ಸಾಧುಸಂತರ ಸಾಲಿಗೆ ಸೇರಿದವರಲ್ಲ; ಆರ್ಥಿಕಸುಧಾರಣೆಯ ಮತ್ತು ಸಮಾಜಶೋಧನೆಯ ಕೆಲಸದಲ್ಲಿ, ಎಲ್ಲಕ್ಕಿಂತಲೂ ಮೇಲಾಗಿ ರಾಜಕೀಯವಿಚಾರಗಳಲ್ಲಿ ಅವರಿಗೆ ಹೆಚ್ಚಿನ ಆದರವಿದ್ದಿತು. ಅವರನ್ನು

ಸನಾತನಧರ್ಮಪ್ರೇಮಿಗಳು ಸಂಪೂರ್ಣವಾಗಿ ಅನುಸರಿಸದೆ ಇರುವದಕ್ಕೆ ಇದೇ ಕಾರಣ ವೆಂದು ನನಗೆ ತೋರುತ್ತದೆ.

ಹರಿಜನರೆಂಬ ಹೆಸರನ್ನು ಗಾಂಧೀಜಿಯವರು ಪ್ರಸಿದ್ಧಿಗೆ ತಂದರು. ಇದು ಉತ್ತಮವಾದ ಹೆಸರೇ ಸರಿ. ಆದರೆ ಹರಿಜನರು ನಿಜವಾಗಿ ಹರಿಜನರಾಗಿದ್ದರೆ, ತಮಗೆ ತೊಂದರೆಕೊಡುವವರೆಂದು ತಾವು ಭಾವಿಸಿಕೊಂಡಿರುವವರ ಮನಸ್ಸನ್ನು ನೋಯಿಸುವ ದಕ್ಕೆ ಎಂದಿಗೂ ಬಯಸಬಾರದು. ಅವರು ಹರಿಜನರೆಂಬ ಅನ್ವರ್ಥನಾಮವನ್ನು ಪಡೆಯಬೇಕೆಂದು ಬಯಸುವವರು ಅವರಿಗೆ ಆಸುರೀಭಾವಗಳನ್ನು ಕಲಿಸುವದಕ್ಕೆ ಎಂದಿಗೂ ಪ್ರೋತ್ಸಾಹವನ್ನು ಕೊಡಬಾರದು. ಅಲ್ಲವೆ? ದೇವಾಲಯವು ಹರಿಜನರಿಗೆ ಬೇಕೆಂಬ ವಿಷಯದಲ್ಲಿ ಯಾರೊಬ್ಬರಿಗೂ ವಿಮತಿಯಿರಲಾರದು. ಹರಿಜನರ ವಿಷಯದಲ್ಲಿ ಯಾರಿಗೂ ತಿರಸ್ಕಾರವಿರಬಾರದೆಂಬುದೂ ತಿಳಿದವರಿಗೆಲ್ಲ ಸಮ್ಮತವಾಗಿಯೇ ಇರುತ್ತದೆ. ಆ ಜನರನ್ನು ಹಳಿಯುವದು, ತುಚ್ಛಭಾವದಿಂದ ಕಾಣುವದು–ಇವು ಮಹಾ ಪಾಪವೇ ಸರಿ. ಆದರೆ ದೇವಾಲಯಗಳು ದೇವಾಲಯಗಳೇ ಆಗಿರಬೇಕಾದರೆ ಅಲ್ಲಿ ಪವಿತ್ರಭಾವನೆಗೆ ಕುಂದು ಬರುವ ಯಾವ ಕೆಲಸವನ್ನೂ ಮಾಡಬಾರದಲ್ಲವೆ? ಹರಿಜನರಲ್ಲದ ಬೇರೆ ಜಾತಿಯವರು ಕೂಡ ದೇವಾಲಯಗಳ ಸದುಪಯೋಗವನ್ನು ಮಾಡಿಕೊಳ್ಳದೆ ಇರುವ ಈ ಕಾಲದಲ್ಲಿ, ಕಾನೂನಿನಿಂದ ಬಲಾತ್ಕರಿಸಿ, ಹರಿಜನರನ್ನು ದೇವಾಲಯಗಳಲ್ಲಿ ಹೊಗಿಸದರೆ ದೇವಾಲಯಗಳಲ್ಲಿ ಶಾಂತಿ, ಪವಿತ್ರತೆ, ಪೂಜ್ಯಭಾವನೆಯ ಉತ್ಕರ್ಷ–ಇವುಗಳಿಗೆ ಉತ್ತೇಜನವು ದೊರಕುವದೊ, ಅಥವಾ ಅಶಾಂತ್ಯಾದಿಗಳು ಹೆಚ್ಚುವವೋ? ನೀವೇ ಯೋಚಿಸಿರಿ.

''ಹರಿಜನರು ಹಿಂದುಗಳೇ ಆಗಿರುತ್ತಾರೆ. ಅವರು ಹಿಂದುಗಳ ಶಾಸ್ತ್ರಗಳಲ್ಲಿ ಹೇಳಿರುವ ಆಚಾರಗಳನ್ನು ಮನ್ನಿಸುತ್ತಾರೆ. ಸಮಾಜದ ಒಂದಂಗವಾದ ಅವರಿಗೂ ಉಳಿದವರಿಗೆ ಸಮಾನವಾದ ಪೂಜೆಗೆ ಹಕ್ಕು ಇರಬೇಡವೆ? ಶಾಸ್ತ್ರಗಳಲ್ಲಿ ಕೂಡ ಜಾತಿ, ವರ್ಣ, ಕುಲ–ಮುಂತಾದ ಭೇದಭಾವನೆಗಳನ್ನು ಮಾಡಬಾರದೆಂದು ಹಳಿದಿಲ್ಲವೆ? ಹೀಗಿರುವಲ್ಲಿ ಮೇಲಿನ ವರ್ಣದವರೆಂಬ ಅಭಿಮಾನಿಗಳು ಅವರಿಗೆ ಇಲ್ಲದ ತೊಂದರೆಗಳನ್ನು ಕೊಡುತ್ತಿದ್ದರೆ ಸರಕಾರದವರು ಅವರ ಸ್ಥಾನಮಾನಗಳನ್ನು ದೊರಕಿಸಿಕೊಡುವದು ಕರ್ತವ್ಯವಲ್ಲವೆ?'' ಎಂದು ಅನೇಕರು ಕೇಳುತ್ತಾರೆ–ಎಂದು ನೀವು ಬರೆದಿದ್ದೀರಿ. ಈ ವಿಷಯವನ್ನು ಮತ್ತೊಂದು ಪತ್ರದಲ್ಲಿ ಪ್ರಸ್ತಾಪಿಸಿ ನನ್ನ ಅಭಿಪ್ರಾಯವನ್ನು ವಿವರಿಸುವೆನು.

# 42. ಹರಿಜನಪ್ರೇಮ

## (ಅಕ್ಟೋಬರ್ 1949)

*ಹಿಂದಿನ ಪತ್ರದಲ್ಲಿ ನಿಮ್ಮ ಪ್ರಶ್ನೆಗೆ ಸಾಮಾನ್ಯಮುಖದಿಂದ ಉತ್ತರವನ್ನು ಕೊಟ್ಟಿದ್ದೆನು. ಎಂಥ ಮಹಾತ್ಮರಿಗೂ ನಮ್ಮ ಸಂಸ್ಕೃತಿಯನ್ನೇ ತಲೆಕೆಳಗು ಮಾಡುವ, ನಮ್ಮ ಶಾಸ್ತ್ರಚಾರಗಳನ್ನು ಹಿಂದುಮುಂದುಗೊಳಿಸುವ. ಜನ ಸಾಮಾನ್ಯಕ್ಕೆ ಒಗ್ಗದ. ಕ್ರಾಂತಿಕಾರಕವಾದ ಸಮಾಜದ ಆಂದೋಲನವನ್ನು ಎಬ್ಬಿಸಲು ಅಧಿಕಾರವಿರುವದಿಲ್ಲ ಎಂಬುದನ್ನು ಅಲ್ಲಿ ತಿಳಿಸಿರುತ್ತೇನೆ. ಬುದ್ಧನಂಥ ಉದಾರಹೃದಯನು ಮಾಡಿದ ದಮ, ದಯಾ, ಕ್ಷಾಂತಿ ಮುಂತಾದ ಸದ್ಗುಣಗಳನ್ನು ತಲೆಯ ಮೇಲಿಟ್ಟು, ಕೊಂಡಾಡಿ ಆತನನ್ನು ಒಂದು ಅವತಾರವೆಂದೇ ಪರಿಗಣಿಸಿದ ಭರತಖಂಡನಿವಾಸಿಗಳು ಆತನು ಸಮಾಜದಲ್ಲಿ ಮಾಡಲೆಳಸಿದ ಕಲಸುಮೇಲೋಗರವನ್ನು ಮಾತ್ರ ಸರಿಯೊಂದೊಪ್ಪಲಿಲ್ಲ; ಆತನ ಆ ಸಮಾಜ ಸೇವೆಯ ಫಲಿತವಾಗಿ ಎಷ್ಟೋ ಶತಮಾನಗಳವರೆಗೆ ಬೌದ್ಧಮತವೇ ಈ ದೇಶದಿಂದ ಕಣ್ಮರೆಯಾಯಿತೆಂಬುದನ್ನು ಇತಿಹಾಸವು ನಮಗೆ ಕಲಿಸಿಕೊಟ್ಟಿರುತ್ತದೆ.*

ಇನ್ನು ಶಾಸ್ತ್ರದಲ್ಲಿ ಹೇಳಿರುವ ಭೇದಭಾವನಾತ್ಯಾಗದ ವಿಚಾರ. ಸನಾತನ ಧರ್ಮದ ಶಾಸ್ತ್ರಗಳು ಎರಡು ಘಟ್ಟದ ಬುದ್ಧಿಯವರ ದೃಷ್ಟಿ ಭೇದವನ್ನವಲಂಬಿಸಿ ಎರಡು ಪ್ರಕಾರವಾದ ಬೋಧೆಯನ್ನು ಮಾಡಿರುತ್ತವೆ. ಜನ್ಮ, ತಪಸ್ಸು, ಪಾಂಡಿತ್ಯ– ಮುಂತಾದವುಗಳನ್ನು ನೋಡಿ ಹೆಚ್ಚು ಹೆಚ್ಚು ಗುಣಗಳುಳ್ಳವನನ್ನು ಹೆಚ್ಚು ಹೆಚ್ಚು ಗೌರವಿಸಬೇಕು ಎಂದು ಕರ್ಮದೃಷ್ಟಿಯಿಂದ ಬೋಧಿಸಿರುತ್ತವೆ. ಭಕ್ತಿಯ ದೃಷ್ಟಿಯಿಂದ ''ಜನ್ಮ, ರೂಪ, ತಪಸ್ಸು, ಪಾಂಡಿತ್ಯ, ಓಜಸ್ಸು, ತೇಜಸ್ಸು, ಪ್ರಭಾವ, ಬಲ, ಪೌರುಷ, ಬುದ್ಧಿ, ಯೋಗ– ಮುಂತಾದ ಯಾವ ಗುಣಗಳಿದ್ದರೂ ಭಗವಂತನಿಂದ ವಿಮುಖನಾಗಿರುವ ಬ್ರಾಹ್ಮಣನಿಗಿಂತಲೂ ತನ್ನ ತನುಮನೋಧನಗಳನ್ನು ಪರಮಾತ್ಮನಿಗೆ ಅರ್ಪಿಸಿರುವ ಚಾಂಡಾಲನೇ ಶ್ರೇಷ್ಠನು. ಭಗವಂತನ ನಾಮವನ್ನು ಸ್ಮರಿಸುತ್ತಿರುವ ಶ್ವಪಚನು ಎಲ್ಲರಿಗಿಂತಲೂ ಶ್ರೇಷ್ಠನು; ಅವನು ಮಹಾತಪಸ್ವಿ, ಸತ್ಕರ್ಮಿ, ಮಹಾಧ್ಯಾಪಕನು– ಎಂದೆಣಿಸಬೇಕು'' ಎಂದು ಭಕ್ತಿಯ ಮಹಿಮೆಯನ್ನು ಹಾಡಿ ಹೊಗಳಿರುತ್ತದೆ. ಜ್ಞಾನ ದೃಷ್ಟಿಯಿಂದಲಂತೂ ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣ. ಗೋವು, ಆನೆ, ನಾಯಿ, ಚಂಡಾಲ– ಎಲ್ಲರಲ್ಲಿಯೂ ಸಮಬುದ್ಧಿಯಿರುವವನು ಸರ್ವಶ್ರೇಷ್ಠನೆಂದು ಹೇಳಿರುತ್ತದೆ. ಆದರೆ ಶಾಸ್ತ್ರದ ಅಭಿಪ್ರಾಯವು ಬ್ರಾಹ್ಮಣಾದಿಗಳ ಭೇದವನ್ನೇ ಕಿತ್ತೊಗೆಯಬೇಕೆಂದಾಗಲಿ ಒಬ್ಬರ ಕರ್ಮವನ್ನು ಮತ್ತೊಬ್ಬರು ಮಾಡಬಹುದೆಂದಾಗಲಿ ಇರುವದಿಲ್ಲ. ಜಾತಿಯು

ಯಾವದೇ ಆಗಿರಲಿ, ಭಕ್ತನಾದವನು ಯಾವಾಗಲೂ ಭಗವಂತನಿಗೆ ಪ್ರಿಯನಾಗಿರುತ್ತಾನೆ; ಲೋಕಪೂಜ್ಯನಾಗಿರುತ್ತಾನೆ. ಜ್ಞಾನಿಗಳಾದವರು ಜಾತಿ, ರೂಪ, ಧನ—ಮುಂತಾದ ತಾರತಮ್ಯವನ್ನು ಲಕ್ಷ್ಯದಲ್ಲಿಟ್ಟು ಜನರನ್ನು ಗೌರವಿಸುವದಿಲ್ಲ ಅಥವಾ ತಿರಸ್ಕರಿಸುವದಿಲ್ಲ; ಎಲ್ಲರಲ್ಲಿಯೂ ಭಗವದ್ಭಾವನೆಯಿಂದ ಎಲ್ಲರನ್ನೂ ಆದರದಿಂದ ಕಾಣುತ್ತಾರೆ ಎಂದಿಷ್ಟೇ ಶಾಸ್ತ್ರಗಳ ಪರಮಾಶಯವಾಗಿರುತ್ತದೆ.

ಸಮಾಜದ ಒಂದಂಗವಾಗಿರುವ ಹರಿಜನರಿಗೂ ಉಳಿದವರಿಗೆ ಸಮಾನವಾಗಿ ಪೂಜೆಗೆ ಹಕ್ಕು ಇರಬೇಡವೆ?— ಎಂಬ ನಿಮ್ಮ ಪ್ರಶ್ನೆಯನ್ನು ಕೇಳಿ ನನಗೆ ನಗೆ ಬರುತ್ತಿದೆ. 'ಪೂಜೆಗೆ ಹಕ್ಕು' ಎಂದರೇನು? ಜಮೀನಿನ ಹಕ್ಕು, ಸ್ಕೂಲಿನಲ್ಲಿ ಓದುವದಕ್ಕೆ ಸ್ಥಾನದ ಹಕ್ಕು, ಮ್ಯುನಿಸಿಪಲ್ ಸಂಘಕ್ಕೆ ಮೆಂಬರಾಗುವ ಹಕ್ಕು—ಎಂಬಂತೆ ಇದೂ ಒಂದು ಹಕ್ಕೆ? ಜಮೀನು ಮುಂತಾದವುಗಳು ಸಂಕುಚಿತವಾಗಿರಬಹುದು; ಸ್ವಾರ್ಥಪರರಾದವರು ಹಲವರು ಒಂದೇ ಒಂದು ಜಮೀನು ಮುಂತಾದ ಪದಾರ್ಥವನ್ನು ಬಯಸಿ ಮಿಕ್ಕವರನ್ನು ತಳ್ಳಿ ಹಾಕಿ ಅವರ ಹಕ್ಕನ್ನು ಅಪಹರಿಸಲೂಬಹುದು. ನಿತ್ಯನೂ ಸರ್ವಗತನೂ ಯಾರೊಬ್ಬರ ಹಿಡಿತಕ್ಕೆ ಸಿಕ್ಕದವನೂ ಆಗಿರುವ ಪರಮೇಶ್ವರನನ್ನು ಪೂಜೆ ಮಾಡುವ ಹಕ್ಕನ್ನು ಒಬ್ಬರು ಇಟ್ಟುಕೊಳ್ಳುವದೆಂದರೇನು? ಮತ್ತೊಬ್ಬರು ಪೂಜಿಸದಂತೆ ಅವರ ಹಕ್ಕನ್ನು ತಪ್ಪಿಸುವದೆಂದರೇನು? ಹಕ್ಕು ಬಾಧ್ಯತೆಗಳಿಗಾಗಿ ಕಾದಾಡುವ ಚಟವುಳ್ಳ ವಿದೇಶೀಯರು ಪೂಜೆಗೂ ಇದನ್ನು ಅನ್ವಯಿಸಿರುವದು ಅವರಿಗೆ ಚೆನ್ನಾಗಿರಬಹುದು. ಆದರೆ ನಮ್ಮ ದೇಶದವರೂ ಅದಕ್ಕೆ ಮರುಳಾಗಿರುವದು ಆಶ್ಚರ್ಯವಲ್ಲವೆ? ತಮ್ಮತಮ್ಮ ಮನಸ್ಸಿನ ನೆಮ್ಮದಿಗಾಗಿ ಒಂದೊಂದು ಕಡೆ ಕೆಲವು ಜನರು ಪೂಜೆಗೆಂದು ದೇವಸ್ಥಾನಗಳನ್ನು ಕಲ್ಪಿಸಿ ಕೊಂಡಿರಬಹುದು. ಒಬ್ಬರ ಆಶೋತ್ತರಗಳಿಗೆ ಭಂಗವಿಲ್ಲದಂತೆ ಮತ್ತೆ ಕೆಲವರೂ ಅಲ್ಲಿಗೆ ಬರಲೂಬಹುದು. ಇದೆಲ್ಲ ಅವರವರ ಅನುಕೂಲ್ಯದ ವಿಚಾರ. ಆದರೆ ಇಲ್ಲಿಯೂ ಸಮಾಜದ ಹಕ್ಕಿನ ಜಗಳವನ್ನು ತೂರಿಸುವದು ಎಂಥ ಮೌರ್ಖ್ಯವು! ಪೂಜಕ ಸಮಾಜವು ಕೆಲವರು ಇಲ್ಲಿಗೆ ಬರಬಾರದೆಂದರೆ ಅವರನ್ನು ಬಲಾತ್ಕಾರದಿಂದ ಸರಕಾರದವರು 'ಸ್ಥಾನಮಾನ'ಗಳನ್ನು ದೊರಕಿಸಿಕೊಡುತ್ತೇವೆನ್ನುವದು ಎಂಥ ನಗೆಗೇಡಿತನವು! ಪೂಜೆ ಎಂಬುದು ಪರಮೇಶ್ವರನಲ್ಲಿ ಪಶ್ಚಾತ್ತಾಪದಿಂದ ಮೊರೆಯಿಡುವದೊ? ಅಥವಾ ಮಾನವರು ಹಕ್ಕುಬಾಧ್ಯತೆಗಳಿಗಾಗಿ ಹೊಡೆದಾಡುವ ಕುಸ್ತಿಯೋ?

# 43. ಪರಮತಸಹನೆ

## (ನವಂಬರ್ 1949)

*"ಭರತಖಂಡದಲ್ಲಿ ಅನೇಕ ಮತಗಳಿರುವವು. ಅವುಗಳೆಲ್ಲವೂ ಇದ್ದರೂ ನಮ್ಮ ದೇಶಕ್ಕೆ ಶಾಂತಿಯು ಬಂದಿಲ್ಲ. ಒಂದು ಮತದವರು ಮತ್ತೊಂದು ಮತದವರಲ್ಲಿ ಸಹನೆಯನ್ನು ಕೂಡ ತೋರಿಸುತ್ತಿಲ್ಲ. ಸರಕಾರದವರು ಮತವಿಚಾರಗಳ ಪಕ್ಷವನ್ನು ರಾಜ್ಯಭಾರವನ್ನು ನಿರ್ವಹಿಸುವದು ಕಷ್ಟವೆಂದು ಭಾವಿಸಿ ತಮ್ಮದು 'ಲೌಕಿಕ ಸರಕಾರ' ಎಂದು ಘೋಷಿಸಿಬಿಟ್ಟಿರುತ್ತಾರೆ. ಹೀಗಿರುವಲ್ಲಿ ಯಾವ ಧರ್ಮದಿಂದ ತಾನೆ ಏನಾಗಬೇಕು?–ಎಂಬ ನಿರಾಶೆಯು ಜನರ ಮನಸ್ಸಿನಲ್ಲಿ ಮೂಡುವದು ಸ್ವಾಭಾವಿಕವಾಗಿದೆ. ಇದಕ್ಕೇನಾದರೂ ಪರಿಹಾರವಿದ್ದರೆ ದಯವಿಟ್ಟು ತಿಳಿಸಿ" ಎಂದು ನೀವು ಬರೆದಿರುವ ಪತ್ರವು ತಲುಪಿರುತ್ತದೆ.*

ಇದಕ್ಕೆ ಉತ್ತರವನ್ನು ಕೊಡುವ ಮುಂಚೆ ಧರ್ಮಕ್ಕೆ ಆಧ್ಯಾತ್ಮಿಕ (ಒಳಗಿನದು), ಬಾಹ್ಯ (ಹೊರಗಿನದು)–ಎಂದು ಎರಡು ಭಾಗಗಳಿರುವವೆಂಬುದನ್ನು ನಿಮಗೆ ನಾನು ತಿಳಿಸಬೇಕಾಗಿದೆ. ಬಾಹ್ಯಧರ್ಮವು ಬೇರೆ ಬೇರೆಯ ಮತಗಳೆನಿಸಿಕೊಂಡು ನಾನಾ ಪ್ರಕಾರವಾಗಿ ತೋರಿಕೊಳ್ಳುತ್ತಿರುತ್ತದೆ. ಯಹೋದಿ, ಮುಸಲ್ಮಾನ, ಕ್ರಿಸ್ತೀಯ, ಜರಥುಸ್ತ್ರೀಯ, ಹಿಂದೂ, ಜೈನ, ಬೌದ್ಧ–ಮುಂತಾದ ಪ್ರಭೇದಗಳು ಈ ಬಾಹ್ಯಮತದಲ್ಲಿ ಇರುತ್ತವೆ. ಸಂಘ, ಚರ್ಚ್, ದೇವಾಲಯ, ಮಸೀದಿ–ಮುಂತಾದವುಗಳಿಗೆ ಸಂಬಂಧಪಟ್ಟಿರುವ ರಬ್ಬಿ, ಪೋಪ್, ಮಠಾಧಿಪತಿ, ಪ್ರವಾದಿಗಳು–ಎಂಬ ಆಚಾರ್ಯಪೀಠದವರ ಅಪ್ಪಣೆಗೆ ಒಳಪಟ್ಟಿರುವ, ಮತ್ತು ಭಸ್ಮ, ಗೋಪೀಚಂದನ, ರುದ್ರಾಕ್ಷಿ, ತುಳಸೀಮಾಲೆ, ಜಪ, ಉಪವಾಸ, ಯಾತ್ರೆ–ಮುಂತಾದ ರೂಪಗಳಲ್ಲಿ ತೋರಿಕೊಳ್ಳುತ್ತಾ ಒಂದಕ್ಕೊಂದು ಭಿನ್ನವಾಗಿ ಅಥವಾ ವಿರುದ್ಧವೇ ಆಗಿರುವ ಆಚಾರಗಳನ್ನು ಹೊರಪಡಿಸುವ ಈ ಬಾಹ್ಯಮತಗಳ ವಿಷಯಕ್ಕೆ ಮತಭೇದವಿರುವದು ಸಹಜವಾಗಿರುತ್ತದೆ. ಜನರಿಗೆ ವೈಮನಸ್ಯವುಂಟಾಗಿರುವದೂ ಸರಕಾರದವರು ತಾಟಸ್ಥ್ಯವನ್ನು ವಹಿಸುತ್ತೇವೆನ್ನುವದೂ ಈ ಮತವಿಷಯದಲ್ಲಿಯೇ ಆಗಿರುತ್ತವೆ.

ಆದರೆ ಮತಕ್ಕೆ ಇನ್ನೊಂದು ಭಾಗವಿದೆ; ಅದು ಹೃದಯಕ್ಕೂ ಒಳಗಿನ ಅನುಭವಕ್ಕೂ ಸಂಬಂಧಪಟ್ಟದ್ದು, ಧ್ಯಾನೋಪಾಸನೆಗಳೆಂಬ ಸಾಧನಕ್ಕೆ ಸೇರಿದ್ದು; ಹೃದಯದ ಮತವೇ ನಿಜವಾದ ಧರ್ಮವು, ಅದಕ್ಕೆ ಶಾಶ್ವತವಾದ ಬೆಲೆ ಇರುತ್ತದೆ. ಇಹದಲ್ಲಿ ಸುಖವೂ ಪರದಲ್ಲಿ ಗತಿಯೂ ಆಗಬೇಕಾದರೆ ಇದರಿಂದಲೇ ಎಂಬುದನ್ನು ನಾವು ನೆನಪಿಡಬೇಕು. ಆಧ್ಯಾತ್ಮಿಕದೃಷ್ಟಿಯಿಂದ ನೋಡಿದರೆ ಯಾವದೊಂದು ಮತವೂ

ಮತ್ತೊಂದಕ್ಕಿಂತ ಹೆಚ್ಚಿನದಲ್ಲ, ಎಲ್ಲಕ್ಕೂ ಒಂದೇ ಬೆಲೆ. ಪರಮೇಶ್ವರನನ್ನು ಪ್ರೀತಿಸುವದು, ಪರಮೇಶ್ವರನ ಮಕ್ಕಳಾದ ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಆತನು ಇದಾನೆಂದು ತಿಳಿದು ಸಮಬುದ್ಧಿಯನ್ನು ಅವಲಂಬಿಸುವದು—ಇದೇ ಧರ್ಮದ ತಿರುಳು. ಈ ದೃಷ್ಟಿಯಲ್ಲಿ ಒಂದು ಮತದವರು ಮತ್ತೊಂದು ಮತದವರನ್ನು ತಿರಸ್ಕಾರದಿಂದ ಕಾಣುವದಕ್ಕಾಗಲಿ ಒಂದು ಮತದವರಿಗೆ ಮತ್ತೊಂದು ಮತದವರ ವಿಷಯದಲ್ಲಿ ಸಂಶಯವಾಗಲಿ ಅಸೂಯೆಯಾಗಲಿ ಇರುವದಕ್ಕಾಗಲಿ ಯಾವ ಕಾರಣವೂ ಇರುವದಿಲ್ಲ.

ಬಾಹ್ಯಾಚಾರರೂಪವಾದ ಧರ್ಮವು ಶುದ್ಧಾಂಗವಾಗಿ ಅನವಶ್ಯವೆಂದಾಗಲಿ ಅದನ್ನು ನಾವು ಕೈಬಿಟ್ಟುಬಿಡಬೇಕೆಂದಾಗಲಿ ತಿಳಿಯಬಾರದು. ಬೆಳೆಯುವ ಸಸಿಗೆ ಬೇಲಿಯು ಬೇಕಾಗಿರುವಂತೆ, ಒಳಗಿನ ಧರ್ಮವು ಬೆಳೆಯುವದಕ್ಕೂ ಸಫಲ ವಾಗುವದಕ್ಕೂ ಕೆಲಕೆಲವು ಆಚಾರವಿಚಾರಗಳು ಬೇಕಾಗಿರುತ್ತವೆ. ಆದ್ದರಿಂದಲೇ ಎಲ್ಲಾ ಮತಗಳಲ್ಲಿಯೂ ಅವುಗಳು ಅಲ್ಪಸ್ವಲ್ಪ ಪರಿಣಾಮದಲ್ಲಿಯಾದರೂ ಇದ್ದೇ ಇರುತ್ತವೆ. ದೇವರನ್ನು ಧ್ಯಾನಮಾಡುವದಕ್ಕೆ ಕೆಲವು ಸ್ಥಲಗಳನ್ನು ಆರಿಸಿಕೊಳ್ಳುವದು, ಅಲ್ಲಿ ನಮಸ್ಕಾರಸ್ತೋತ್ರಾದಿಗಳನ್ನು ಮಾಡುವದು; ಜಪ, ತಪ, ಯಾತ್ರೆ—ಮುಂತಾದವುಗಳನ್ನು ಆಚರಿಸುವದು ಇವು ಬೇಡವೆಂದು ಯಾವ ಮತದವರೂ ಹೇಳಿಲ್ಲ. ಬೇರೆಬೇರೆಯ ವಾಯುಗುಣಕ್ಕೆ ತಕ್ಕಂತೆ ಆಹಾರ, ವಿಹಾರ, ವಸ್ತ್ರ—ಮುಂತಾದವುಗಳು ಬೇರೆ ಬೇರೆಯಾಗಿರುವಂತೆಯೇ ಈ ಆಚಾರವಿಚಾರಗಳೂ ಬೇರೆಬೇರೆಯಾಗಿದ್ದರೂ ಇವುಗಳ ಗುರಿಯು ಮಾತ್ರ ಒಂದೇ ಆಗಿರುತ್ತದೆ. ಪರಮೇಶ್ವರನ ಭಕ್ತಿಯು ಅಂಕುರಿಸಿ ಬೆಳೆಯುವಂತೆ ಮಾಡುವದೊಂದೇ ಅವುಗಳಿಂದ ಆಗುವ ಪ್ರಯೋಜನವು. ಹೀಗಿರುವಲ್ಲಿ ಆಚಾರ ವಿಚಾರಗಳ ಹೆಚ್ಚು ಕಡಿಮೆಯಿಂದ ಮತಗಳಲ್ಲಿಯೇ ಕಚ್ಚಾಟವಿರುವದಕ್ಕೆ ಯಾವದೊಂದು ಕಾರಣವೂ ಇರುವದಿಲ್ಲ.

ಬೇರೆಬೇರೆಯ ಮತದವರೆಂದು ಹೇಳಿಕೊಳ್ಳುತ್ತಿರುವವರಿಗೆ ಆಗಿಂದಾಗ್ಗೆ ಜಗಳಗಳೂ ಹೊಡೆದಾಟವೂ ಆಗುವದಕ್ಕೆ ಕಾರಣವೇನು? ಧರ್ಮದ ತಿರುಳು ಹೃದಯಕ್ಕೆ ಸಂಬಂಧಪಟ್ಟಿರುವದೆಂಬುದು ಅನೇಕರಿಗೆ ತಿಳಿದಿರುವದಿಲ್ಲದಿರುವದು ಒಂದು ಕಾರಣ. ಸ್ವಾರ್ಥಪರರಾದವರು ಧರ್ಮದ ಹೆಸರಿನಿಂದ ಅಜ್ಞಜನ ಸಾಮಾನ್ಯವನ್ನು ಒಬ್ಬರಮೇಲೊಬ್ಬರು ಬೀಳುವಂತೆ ಛೂ ಬಿಡುತ್ತಿರುವದು ಮತ್ತೊಂದು ಕಾರಣ. ನಮ್ಮ ಸರಕಾರದವರು ತಾವು ಲೌಕಿಕಸರಕಾರದವರೆಂದು ಹೇಳಿಕೊಂಡರೂ ಧರ್ಮದ ಬಾಹ್ಯರೂಪದಲ್ಲಿ ಏಕರೂಪತೆಯನ್ನು ಕಲ್ಪಿಸುವೆವೆಂದು ಸಮಾಜಸುಧಾರಣೆಯನ್ನು

ಧಾರ್ಮಿಕ ಆಚಾರವಿಚಾರಗಳಲ್ಲಿಯೂ ಏರ್ಪಡಿಸುವದಕ್ಕೆ ಹೋಗಿರುವದೂ ಒಂದಿಷ್ಟು ಗಲಭೆಗೆ ಅವಕಾಶವಾಗಿದೆ.

ಇದೆಲ್ಲ ಸರಿಹೋಗಬೇಕಾದರೆ, "ಧರ್ಮದ ಒಳತಿರುಳನ್ನು ಬಲ್ಲ ಮಹನೀಯರು ಜನರಿಗೆ ತಿಳಿವಳಿಕೆ ಕೊಡಬೇಕು. ವಿಶ್ವವ್ಯಾಪಕವಾದ ಧರ್ಮವು ಒಂದೇ; ಪರಮಾತ್ಮನು ನಮ್ಮಗಳ ನಿಜವಾದ ಆತ್ಮನೇ ಆಗಿರುತ್ತಾನೆಂಬ ಪರಮಾರ್ಥವನ್ನು ಕಂಡುಕೊಂಡು ಸರ್ವತ್ರವೂ ಪರಮೇಶ್ವರಭಾವನೆಯನ್ನು ಹಬ್ಬಿಸಿಕೊಳ್ಳುವದೇ ಧರ್ಮದ ಹೆಗ್ಗುರಿಯು–ಎಂಬುದನ್ನು ಹೆಚ್ಚುಹೆಚ್ಚಾಗಿ ಜನರು ತಿಳಿದುಕೊಳ್ಳುವಂತೆ ಮಾಡಬೇಕು. ಇದು ಎಷ್ಟು ಚೆನ್ನಾಗಿ ತಿಳಿಯುವದೋ ಅಷ್ಟರಮಟ್ಟಿಗೆ ವಿಶ್ವವ್ಯಾಪಕಧರ್ಮದ ವಿಷಯದಲ್ಲಿ ಈಗ ನಮಗಿರುವ ತಪ್ಪು ತಿಳಿವಳಿಕೆಗಳು ಹಾರಿಹೋಗುವವು. ಎಲ್ಲರಿಗೂ ಒಂದೇ ಮತದ ದೀಕ್ಷೆ ಕೊಡುವದು, ಎಲ್ಲರ ಮತಗಳ ಉಪದೇಶಗಳನ್ನೂ ಆಚಾರಗಳನ್ನೂ ಕಲಬೆರಕೆ ಮಾಡಿದ ಹೊಸ ಮತವೊಂದನ್ನು ಏರ್ಪಡಿಸುವದು, ಮಿಕ್ಕ ಮತಗಳನ್ನು ಜರಿದು ಒಂದು ಮತವನ್ನು ಹೊಗಳುವದು. ಭೌತಿಕಶಾಸ್ತ್ರಕ್ಕೆ ಅಥವಾ ಕರ್ಮಕ್ಕೆ ಹೊಂದಿಸಿದ ಹೊಸ ಧರ್ಮವನ್ನು ಎಲ್ಲರಿಗೂ ಕೊಡುವದು, ಆಚಾರಗಳೆಲ್ಲ ನಿರುಪಯೋಗವೆಂದು ಕಡೆಗಣಿಸುವದು–ಇವು ಯಾವವೂ ಧರ್ಮದ ಏಕತ್ವವನ್ನು ಅನುಭವಕ್ಕೆ ತರುವ ಉಪಾಯಗಳಲ್ಲ. ಭಗವಂತನನ್ನು ಉಪಾಸನೆಮಾಡುವದು, ಎಲ್ಲೆಲ್ಲಿಯೂ ಭಗವದ್ಭಾವನೆ ಮಾಡುತ್ತಾ ಸರ್ವಭೂತಹಿತವನ್ನೂ ಗುರಿಯಾಗಿಟ್ಟುಕೊಂಡ ಆಚರಣೆಯನ್ನು ಕೈಗೊಳ್ಳುವದು– ಇವೆರಡೇ ಎಲ್ಲರಿಗೂ ಅನ್ವಯಿಸುವ ಪರಮಧರ್ಮದ ಗುರುತುಗಳೆಂಬುದನ್ನು ನಾವು ಮನಗಾಣಬೇಕು. ಆಗಲೇ ಧರ್ಮದಿಂದ ಆಗುವ ಪರಮಫಲವು ಎಲ್ಲರಿಗೂ ಅನುಭವಕ್ಕೆ ಬರುವದು."

ನೀವು ಹುಟ್ಟಿರುವ ಜನತೆಯಲ್ಲಿರುವ ಮತದ ಬಾಹ್ಯಾಚಾರಗಳು ನಿಮಗೆ ಅವಶ್ಯವಾಗಿರಬಹುದು. ಆ ಆಚಾರಗಳು ಯಾವ ಮನೋಭಾವಕ್ಕೆ ಸಂಕೇತವೆಂಬುದನ್ನು ಮಾತ್ರ ಬಲ್ಲವರಿಂದ ತಿಳಿದುಕೊಳ್ಳಿರಿ. ಆದರೆ ಮತ್ತೊಂದು ಮತದವರಲ್ಲಿ ಮತ್ತೊಂದು ಬಗೆಯ ಆಚಾರವಿದ್ದರೆ ಅವನ್ನು ಜರಿಯಬೇಡಿ, ತಿರಸ್ಕರಿಸಬೇಡಿ. ಒಂದೇ ಊರಿಗೆ ಅನೇಕ ಮಾರ್ಗಗಳು ಇರಬಹುದಲ್ಲವೆ? ಅದರಂತೆ ಒಂದೇ ಧಾರ್ಮಿಕ ಭಾವನೆಗೆ ಅನೇಕ ಬಾಹ್ಯಾಚಾರಗಳು ಸಂಕೇತವಾಗಿರಬಹುದಾಗಿದೆ ಎಂಬುದನ್ನು ನಂಬಿರಿ. ಆ ಆಚಾರಗಳಿಗೆಲ್ಲ ಪರಮೇಶ್ವರನೇ ಗುರಿ ಎಂಬುದನ್ನು ನಂಬಿರಿ.

## 44. ಪಾರಿವ್ರಾಜ್ಯ.

### (ಡಿಸೆಂಬರ್ 1949)

*ನೀವು ಬರೆದ ಪತ್ರವು ಬಂದು ತಲುಪಿರುತ್ತದೆ. ಸಂನ್ಯಾಸಾಶ್ರಮವನ್ನು ತೆಗೆದುಕೊಳ್ಳಬೇಕೆಂದು ನನ್ನ ಸ್ನೇಹಿತರೊಬ್ಬರು ಇಚ್ಛಿಸುತ್ತಾರೆ. ಅದಕ್ಕೆ ಎಷ್ಟು ಖರ್ಚು ಆಗಬಹುದು? ಅದಕ್ಕೆ ಯಾವಯಾವ ಕರ್ಮಗಳನ್ನು ನಡೆಸಬೇಕು? ಒಬ್ಬ ಸಂನ್ಯಾಸಿಗಳ ಮೂಲಕವೇ ಆಶ್ರಮಸ್ವೀಕಾರವನ್ನು ಮಾಡಬೇಕೆ? ಅಥವಾ ಬ್ರಾಹ್ಮಣರ ಮೂಲಕವಾಗಿ ತೆಗೆದುಕೊಳ್ಳಬೇಕೆ? ಆಶ್ರಮವನ್ನು ಸ್ವೀಕರಿಸಿದ ಬಳಿಕ ಮಕ್ಕಳು ಮುಂತಾದವರಿಂದ ಭಿಕ್ಷೆಯನ್ನು ಸ್ವೀಕರಿಸಿಕೊಂಡು ಮಕ್ಕಳ ಮನೆಯಲ್ಲಿಯೇ ಇರಬಹುದೆ?–ಎಂದು ಮುಂತಾಗಿ ಹಲವು ಪ್ರಶ್ನೆಗಳನ್ನು ಹಾಕಿರುತ್ತೀರಿ. ಆ ಪ್ರಶ್ನೆಗಳಿಗೆಲ್ಲ ಒಂದೇ ಪತ್ರದಲ್ಲಿ ಉತ್ತರವನ್ನು ಕೊಡುವದು ಆಗುವಂತಿಲ್ಲ. ಆದ್ದರಿಂದ ಸದ್ಯಕ್ಕೆ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವೆನು. ಕಾಲವಿಲಂಬವನ್ನು ಕ್ಷಮಿಸಿರಿ.*

ಮೊಟ್ಟಮೊದಲು ಸಂನ್ಯಾಸಶಬ್ದಕ್ಕೆ ಅರ್ಥವನ್ನು ನೀವು ತಿಳಿದುಕೊಳ್ಳಬೇಕು. ಸಂನ್ಯಾಸವೆಂದರೆ ಬಿಡುವದು. ಪುತ್ರನಿಂದ ಮನುಷ್ಯಲೋಕವನ್ನೂ ಕರ್ಮದಿಂದ ಪಿತೃಲೋಕವನ್ನೂ ಉಪಾಸನೆಯಿಂದ ದೇವಲೋಕವನ್ನೂ ಗೆದ್ದುಕೊಳ್ಳಬಹುದೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಯಾವನಿಗೆ ಈ ಲೋಕಗಳೆಂಬ ಫಲವು ಬೇಕೋ, ಅವನು ಅವಶ್ಯವಾಗಿ ಆ ಫಲಕ್ಕೆ ತಕ್ಕ ಸಾಧನಗಳನ್ನು ಕೈಕೊಳ್ಳಲೇಬೇಕಷ್ಟೆ? ಆದರೆ ಈ ಸಾಧ್ಯಸಾಧನಗಳು ಯಾವವೂ ನಿತ್ಯವಲ್ಲವೆಂಬುದನ್ನು ಮನಗಂಡು ಅವುಗಳಲ್ಲಿ ವಿರಕ್ತನಾದವನೇ ಸಂನ್ಯಾಸಕ್ಕೆ ಅಧಿಕಾರಿಯು. "ಎಂದು ವೈರಾಗ್ಯವುಂಟಾಗುವದೋ ಅಂದೇ ಪಾರಿವ್ರಾಜ್ಯವನ್ನು ಸ್ವೀಕರಿಸಬೇಕು" ಎಂತ ಶ್ರುತಿಯು ಹೇಳುತ್ತದೆ. ಆದ್ದರಿಂದ ನಿಮ್ಮ ಸ್ನೇಹಿತರಿಗೆ ವೈರಾಗ್ಯವಿದೆಯೆ?–ಎಂಬುದನ್ನು ಅವರೇ ಮೊದಲು ನಿಶ್ಚಯಿಸಿಕೊಳ್ಳಲಿ. ಕುಟುಂಬನಿರ್ವಹಣದಲ್ಲಿ ಬೇಸರಿಕೆಯಿಂದ ಅಥವಾ ದಾರಿದ್ರ್ಯಕ್ಕೆ ಬೇಸತ್ತು ಕಾವಿಯನ್ನು ಹೊದೆದುಕೊಳ್ಳುವದು ಎಂದಿಗೂ ಸಂನ್ಯಾಸವಲ್ಲ. ಯಾವದಾದರೊಂದು ಕೋಪದಿಂದ ಗಾರ್ಹಸ್ಥ್ಯವನ್ನು ಬಿಟ್ಟರೆ ಅದೂ ಸಂನ್ಯಾಸವಾಗಲಾರದು.

ಸಂನ್ಯಾಸಕ್ಕೆ ವೈರಾಗ್ಯವೇ ಬಂಡವಾಳವಾಗಿರುವದರಿಂದ ಇದಕ್ಕೆ ಎಷ್ಟು ಖರ್ಚಾದೀತು?–ಎಂಬ ಪ್ರಶ್ನೆ ಹುಟ್ಟುವದಿಲ್ಲ. ತಾನು ಗೃಹಸ್ಥನಾಗಿರುವಾಗ ತನ್ನಲ್ಲಿರುವ ವಿತ್ತದ ಮೇಲಿನಿಂದ ಎಷ್ಟು ಖರ್ಚುಮಾಡಬಹುದೆಂಬುದನ್ನು ಗೊತ್ತುಪಡಿಸಿಕೊಳ್ಳ ಬಹುದು. ಆದರೆ ಸಂನ್ಯಾಸಾಶ್ರಮಸ್ವೀಕಾರಕ್ಕೆ ಇಂತಿಷ್ಟು ಖರ್ಚು ಎಂದು ಯಾರೊಬ್ಬರೂ

ವಿಧಿಸುವದಕ್ಕೆ ಬರುವದಿಲ್ಲ. ನಿಬಂಧಗ್ರಂಥಗಳಲ್ಲಿ ಹೇಳಿರುವಂತೆ ಪ್ರಾಯಶ್ಚಿತ್ತಶ್ರಾದ್ಧಾದಿಗಳನ್ನು ಮಾಡಿ, ಯಥಾ ಯೋಗ್ಯರಾದ ಬ್ರಾಹ್ಮಣರಿಗೆ ದಾನಧರ್ಮಗಳನ್ನು ಮಾಡಿ, ತನ್ನ ಆಸ್ತಿಯನ್ನೆಲ್ಲ ಹೆಂಡಿರು ಮಕ್ಕಳಿಗೆ ಕೊಟ್ಟು ಅವರ ಅನುಮತಿಯಿಂದ ಈ ಆಶ್ರಮವನ್ನು ಸ್ವೀಕರಿಸಬೇಕು.

ಬರಿಯ ವೈರಾಗ್ಯವೇ ಸಂನ್ಯಾಸಕ್ಕೆ ಸಾಕಾದರೂ ಪರಮಾತ್ಮನ ಶ್ರವಣಮನನನಿದಿಧ್ಯಾಸಗಳನ್ನು ಮಾಡಬೇಕೆಂಬ ಉತ್ಕಟೇಚ್ಛೆಯಿದ್ದವರೇ ಈ ಆಶ್ರಮಕ್ಕೆ ಮುಖ್ಯಾಧಿಕಾರಿಗಳಾಗುವರು. ವಿರಕ್ತಿಯೂ ಮುಮುಕ್ಷುತ್ವವೂ ಪ್ರಬಲವಾಗಿರುವವರು ಪಾರಿವ್ರಾಜ್ಯವನ್ನು ಸ್ವೀಕರಿಸುವದಕ್ಕೆ ಬಯಸುವ ಕಾಲಕ್ಕೆ ಸರಿಯಾಗಿ ಅಲ್ಲಿ ಒಳ್ಳೆ ಸಂನ್ಯಾಸಿಗಳು ಸಿಕ್ಕುವದು ಕಷ್ಟ. ಬ್ರಾಹ್ಮಣರ ಮೂಲಕವಾಗಿ ಅವಶ್ಯವಾಗಿ ಸಂನ್ಯಾಸವನ್ನು ಮಾಡಬಹುದು; ಆದರೆ ಮುಂದೆ ಯತಿಧರ್ಮಗಳನ್ನು ತಿಳಿಯುವದಕ್ಕೂ ವೇದಾಂತವಿಚಾರಾದಿಗಳನ್ನು ಮಾಡುವದಕ್ಕೂ ಯೋಗ್ಯರಾದ ಬ್ರಹ್ಮನಿಷ್ಠ ಸಂನ್ಯಾಸಿಗಳು ಬೇಕೇ ಆಗುತ್ತಾರೆ.

ಈಗನ ಕಾಲದಲ್ಲಿ ವಿರಕ್ತಿಯಿಲ್ಲದವರೂ ವೇದಾಂತದಲ್ಲಿ ಅಭಿರುಚಿಯು ಕೂಡ ಇಲ್ಲದಿರುವವರೂ ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸುವದು ಕಂಡು ಬರುತ್ತದೆ. ಆದರೆ ಅದಕ್ಕೆ ಯಾವ ಶಾಸ್ತ್ರದ ಆಧಾರವೂ ಕಂಡುಬರುವದಿಲ್ಲ. ತಾವು ಇರುವ ಆಶ್ರಮದ ಕರ್ಮಗಳನ್ನು ತ್ಯಜಿಸಿ ಯಾವ ಅನುಷ್ಠಾನವೂ ಇಲ್ಲದೆ ಇರುವ ಉಂಡಾಡಿಗಳನ್ನು ಸಂನ್ಯಾಸಿಗಳೆನ್ನುವದಕ್ಕಿಂತಲೂ ಪತಿತರೆಂದು ಭಾವಿಸುವದೇ ಯುಕ್ತವಾಗಿರುತ್ತದೆ. ಕೇವಲ ಇಹಲೋಕದ ವಿಷಯದಲ್ಲಿ ವಿರಕ್ತಿಯಿದ್ದು ಮುಮುಕ್ಷುಗಳಲ್ಲದವರು ಸ್ಮೃತ್ಯುಕ್ತವಾದ ತ್ರಿದಂಡಿ ಸಂನ್ಯಾಸವನ್ನೇ ಸ್ವೀಕರಿಸಬೇಕೆಂದು ಆಚಾರ್ಯರು ಬೃಹದಾರಣ್ಯಕಭಾಷ್ಯದಲ್ಲಿ (3–5–1) ಹೇಳಿರುತ್ತಾರೆ. ವೇದಾಂತವಿಮುಖರಾಗಿರುವ ಆಶ್ರಮಕರ್ಮಗಳನ್ನು ಮಾಡದ ಯತಿಗಳನ್ನು ಇಂದ್ರನು ಕತ್ತರಿಸಿ ತೋಳಗಳಿಗೆ ತಿನ್ನುವದಕ್ಕೆ ಹಾಕಿದನೆಂದು ಶ್ರುತಿಯಲ್ಲಿ ಒಂದು ವಾಕ್ಯವಿದೆ.

ನಿಮ್ಮ ಸ್ನೇಹಿತರಿಗೆ ಈ ಪತ್ರವನ್ನು ತೋರಿಸಿರಿ. ಅವರಿಗೆ ಪಾರಿವ್ರಾಜ್ಯದ ವಿಷಯಕ್ಕೆ ಮತ್ತೇನಾದರೂ ಸಂಶಯವಿದ್ದರೆ ತಿಳಿಸಿದರೆ ನನಗೆ ತಿಳಿದಷ್ಟು ಮಟ್ಟಿಗೆ ಉತ್ತರವನ್ನು ಕೊಡುವೆನು. (49ನೆಯ ಲೇಖನ ಆಶ್ರಮ ಸಂನ್ಯಾಸ ನೋಡಿರಿ)

## 45. ಮುಪ್ಪಿನಲ್ಲಿ ಮಾಡಬೇಕಾದದ್ದು

**(ಜನವರಿ 1950)**

*"ಕೆಲಸದಿಂದ ನಿವೃತ್ತಿಯೇನೋ ಆಯಿತು. ಆದರೆ ಸಂಸಾರದ ಚಿಂತೆಯು ಹೆಚ್ಚಾಗಿ ಹತ್ತಿಕೊಂಡಿರುತ್ತದೆ. ಮನೆಯಲ್ಲೆಲ್ಲ ಚಿಕ್ಕಮಟ್ಟ ಮಕ್ಕಳು. ಹೆಣ್ಣು ಮಕ್ಕಳು ಎರಡಿವೆ. ಈ ಸಂದರ್ಭವಲ್ಲಿ ನನಗೆ ಪರಮಾರ್ಥ ಚಿಂತನೆಗೆ ಎಡವೆಲ್ಲಿ? ಈಗಿನ ಸ್ಥಿತಿಯಲ್ಲಿ ನಾನು ಹೇಗೆ ಕಾಲವನ್ನು ಹಾಕುತ್ತೇನೋ ಜಗದೀಶ್ವರನೇ ಬಲ್ಲ! ದಿನಕ್ಕೆ ಒಂದೆರಡುಬಾರಿಕೂಡ ಈಶ್ವರಾರ್ಚನೆಗೆ ಅಥವಾ ಜಪಕ್ಕೆ ಅವಕಾಶವಿಲ್ಲವಾಗಿದೆ. ನನಗೆ ತಿಳಿದಷ್ಟು ವೇದಾಂತ ಪಾಠವನ್ನು ನಾಲ್ಕಾರು ಜನರಿಗೆ ಹೇಳಿಕೊಡುತ್ತಿದೇನೆ. ಅದರಿಂದ ಸ್ವಲ್ಪ ಮಟ್ಟಿಗೆ ಐಹಿಕಪ್ರಯೋಜನವೂ ಆಗುತ್ತಿದೆ. ಓದುವವರಿಗೆ ಪ್ರಯೋಜನವಾಗಲಿ ಆಗದಿರಲಿ. ನನಗಂತೂ ಪಾಠಪ್ರವಚನದ ಕಾಲಕ್ಕಾದರೂ ಒಂದಿಷ್ಟು ಸಮಾಧಾನವಾಗುತ್ತಿದೆ. ಇಷ್ಟಾದರೂ ಕೊನೆಯವರೆಗೂ ನಡೆಯುವಂತೆ ಅನುಗ್ರಹಿಸಬೇಕು" ಎಂತ ತಾವು ಬರೆದಿರುತ್ತೀರಿ.*

ಯಾವ ಅನುಗ್ರಹವಾದರೂ ಆ ಭಗವಂತನಿಂದಲೇ ಆಗಬೇಕು. ಆದ್ದರಿಂದ ತಾವು ನನಗೆ ಪತ್ರವನ್ನು ಹಾಕುವ ಬದಲು ಆ ಭಗವಂತನಲ್ಲಿಯೇ ಮೊರೆಯಿಡಿರಿ. ಆತನು ಸರ್ವವ್ಯಾಪಕನು, ದಯಾನಿಧಿ, ಸರ್ವಶಕ್ತನು; ಅವಶ್ಯವಾಗಿ ನಿಮಗೆ ಅನುಗ್ರಹವನ್ನು ಮಾಡುವನು.

ಮನುಷ್ಯನು ತನ್ನ ಬಲದಲ್ಲಿ ವಿಶ್ವಾಸವು ಹೆಚ್ಚು; ಪರಮಾತ್ಮಬಲದಲ್ಲಿ ಕಡಿಮೆ, ಅಥವಾ ಇಲ್ಲವೇ ಇಲ್ಲ. ಸರಕಾರಿಯ ಕೆಲಸದಿಂದ ನಿವೃತ್ತಿಯಾಗುವವರೆಗೂ ದುಡಿದದ್ದು ಆಯಿತು. ಇನ್ನು ಮುಂದೆ ಇರುವ ಸ್ವಲ್ಪ ಕಾಲದೊಳಗೆ ಎಷ್ಟರಮಟ್ಟಿಗೆ ದುಡಿಯಬಹುದು?–ಎಂಬ ಪ್ರಶ್ನೆಯು ನಿಮಗೆ ಮನಸ್ಸಿಗೆ ಬಾರದೆ ಇದ್ದದ್ದು ಆಶ್ಚರ್ಯ, ಈಶ್ವರನೇ ಎಲ್ಲರನ್ನೂ ಕಾಪಾಡುವವನು; ಅವನ ಪ್ರಸಾದದಿಂದಲೇ ಮಕ್ಕಳಾದ ನಾವೆಲ್ಲರೂ ಬದುಕಿದ್ದೇವೆ–ಎಂಬ ತತ್ತ್ವವು ನಿಮ್ಮ ವೇದಾಂತದಲ್ಲಿ ಎಲ್ಲಿಯೂ ಸಿಕ್ಕಲಿಲ್ಲವೇನು? ಹೆಂಡಿರು ಮಕ್ಕಳ ಚಿಂತೆಯಲ್ಲಿ ಪರಮಾರ್ಥಚಿಂತನೆಗೆ ಅವಕಾಶವಿಲ್ಲ–ಎಂದು ಅಭಿಪ್ರಾಯಪಟ್ಟಿರುವವರು ನೀವು ಒಬ್ಬರೇ ಅಲ್ಲ. ಆದರೆ ಈ ಅಭಿಪ್ರಾಯವು ಮಿಥ್ಯಾಜ್ಞಾನದ ಫಲವಾಗಿದೆ. ಸಂಸಾರದ ಚಿಂತೆಯನ್ನು ಹತ್ತಿಸಿಕೊಂಡರೆ ಕುಟುಂಬಪೋಷಣೆಯಾಗುವದೆಂದು ಯಾರು ತಾನೆ ಹೇಳಲಾಪರು? ನನ್ನ ನಿಶ್ಚಿತವಾದ ಮತಿ ಏನೆಂದರೆ ನೀವು ಪರಮಾತ್ಮ ಚಿಂತೆಯನ್ನು ಮಾಡದೆ ಕುಟುಂಬ ಚಿಂತನೆಯಲ್ಲಿ ಮುಳುಗಿರುವದೇ ನಿಮ್ಮ ಸಂಕಟಕ್ಕೆ ಬಹುಮುಖ್ಯ ಕಾರಣವು.

ನೀವು ಮಾಡುವ ಕೆಲಸದ ಪ್ರಮಾಣದಲ್ಲಿ ನಿಮಗೆ ವರಮಾನವು ಬರುವದೆಂಬ ಭ್ರಾಂತಿಯನ್ನು ಮೊದಲು ಬಿಟ್ಟು ಬಿಡಿರಿ. ಬರಿಯ ಬಯಲ ಹಂಬಲಿಕೆಯಲ್ಲಿ ಕಾಲವನ್ನು ಕಳೆಯದೆ ಪರಮೇಶ್ವರನ ಅರ್ಚನೆಗೂ ಅವನ ನಾಮಜಪಕ್ಕೂ ಸ್ವಲ್ಪ ಕಾಲವನ್ನು ಉಪಯೋಗಿಸಿ ನೋಡಿರಿ. ಅನನ್ಯತೆಯಿಂದ ಶರಣು ಬಂದವರ ಯೋಗಕ್ಷೇಮವನ್ನು ನಾನೇ ವಹಿಸುವೆನೆಂದು ಭಗವಂತನು ಅಭಿವಚನವಿತ್ತಿರುತ್ತಾನಲ್ಲವೆ? ಅದರಲ್ಲಿ ನೀವೇಕೆ ಭರವಸೆಯನ್ನಿಡಬಾರದು?

ವೇದಾಂತಕಾಲಕ್ಷೇಪವನ್ನು ಮಾಡುತ್ತಿದ್ದೇನೆಂದು ನೀವು ಬರೆದದ್ದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಆದರೆ ಅದರಿಂದ ಐಹಿಕಪ್ರಯೋಜನವು ಆಗುತ್ತಿದೆ ಎಂದು ಬರೆದಿರುವದು 'ರತ್ನವನ್ನು ಕೊಟ್ಟು ಗಾಜಿನ ಮಣಿಯನ್ನು ತೆಗೆದುಕೊಳ್ಳುತ್ತಿದ್ದೇನೆ' ಎಂಬಂತೆ ನನಗೆ ಆಶ್ಚರ್ಯವನ್ನೂ ಖೇದವನ್ನೂ ಉಂಟು ಮಾಡಿರುತ್ತದೆ. ವೇದಾಂತದಲ್ಲಿ ಹೇಳಿರುವದು ಪರಮಪುರುಷನಾದ ಭಗವಂತನ ವಿಚಾರವನ್ನು. ಆ ಭಗವಂತನು ಷಡ್ಗುಣೈಶ್ವರ್ಯಸಂಪನ್ನನಾದ್ದರಿಂದ ಸಕಲಪುರುಷಾರ್ಥಗಳನ್ನೂ ಕೊಡಬಲ್ಲವನು. ಅವನ ವಿಚಾರವನ್ನು ಮಾತನಾಡಿ ತತ್ಕಾಲದ ಜೀವನದ ಪ್ರಯೋಜನವನ್ನು ಪಡೆಯುವದು ವಿವೇಕವಾದೀತೆ? ನೀವೇ ಯೋಚಿಸಿರಿ.

ನಿಮಗೆ ವೇದಾಂತದ ಪಠನಪಾಠನಗಳು ಸಂತತವಾಗಿ ಲಭಿಸಲಿ! ವೇದಾಂತದಲ್ಲಿ ಹೇಳಿರುವ ಪರಮಾತ್ಮನು ಎಲ್ಲಕ್ಕೂ ಆತ್ಮನಾಗಿರುವ ಪರಮಾರ್ಥವೆಂಬ ಜ್ಞಾನಕ್ಕೆ ಬೇಕಾದ ಸಾಧನಗಳು ನಿಮಗೆ ಅಳವಡಲಿ! ವೇದಾಂತದಲ್ಲಿ ಹೇಳಿರುವ ಯಾವದಾದರೊಂದು ಸಗುಣೋಪಾಸನೆಯಲ್ಲಿ ನಿಮಗೆ ಅಭಿರುಚಿಯುಂಟಾಗಲಿ ! ಭಕ್ತಿಯಿಂದ ಮಾಡಿದ ಆ ಉಪಾಸನೆಯಿಂದ ತುಷ್ಟನಾದ ಭಗವಂತನು ನಿಮಗೆ ಜ್ಞಾನವೈರಾಗ್ಯಗಳ ಆಳವನ್ನು ತೋರಿಸಿಕೊಡಲಿ ! ಭಗವಂತನ ನಾಮಜಪ, ಆತನ ಧ್ಯಾನ, ಆತನಲ್ಲಿಯೇ ನಿಷ್ಠೆ—ಇವುಗಳ ಆನಂದಕ್ಕೆ ಯಾವ ಇಹಪರಸುಖವೂ ಸರಿಗಟ್ಟಲಾರದೆಂಬ ತತ್ತ್ವವು ನಿಮ್ಮ ಮನಸ್ಸಿನಲ್ಲಿ ಮಿಂಚಲಿ! – ಎಂಬುದೇ ನಿಮ್ಮ ಮಿತ್ರನಾದ ನನ್ನ ಹಾರೈಕೆ. ಭಗವಂತನು ಸಂತುಷ್ಟನಾದರೆ ನಿಮಗೆ ತನ್ನ ಆನಂದಸ್ವರೂಪವನ್ನೇ ಧಾರೆಯೆರೆಯುವನು. ಆಗ ಐಹಿಕದುಃಖಗಳಿಗೆ ಎಡೆಯೆಲ್ಲಿರುವದು?

## 46. ಮನಮೆಚ್ಚಿದಂತೆ ನಡೆಯುವದು

(ಮಾರ್ಚ್ 1950)

*"ಬಹುದಿನಗಳಿಂದ ನನ್ನ ಮನಸ್ಸಿನಲ್ಲಿರುವ ಒಂದು ಯೋಚನೆಯನ್ನು ಕಾರ್ಯದಲ್ಲಿ ತರುವದಕ್ಕೆ ಪ್ರಬಲವಾದ ಶಕ್ತಿಗಳುಂಟಾಗುತ್ತಿವೆ. ಈ ನಿಮಿತ್ತದಿಂದ ಮನಸ್ಸಿನಲ್ಲಿ ಆಗಿರುವ ಕಿರಿಕಿರಿಯನ್ನು ತಪ್ಪಿಸಿಕೊಳ್ಳಲಾರದೆ ತಮಗೆ ಬರೆದುಕೊಂಡಿರುತ್ತೇನೆ. ನಮ್ಮ ಮನೆಯವರ ಮತ್ತು ಕುಲದವರ ಆಚಾರದಂತೆ ನಾನೂ ಮಡಿಹಿಡಿಯಬೇಕೆಂಬ ಹಂಬಲು ನನಗಿದ್ದರೂ ನಾನು "ಸ್ಕೂಲು ಮೇಡಮ್" ಆಗಿರುವದರಿಂದ ಜೊತೆಯವರನ್ನು ಅನುಕರಣಮಾಡಲೇಬೇಕಾಗಿದೆ. ಇದಲ್ಲದೆ ಪದ್ಧತಿಯಂತೆ ನಡೆದರೆ ಇವರೆ ಎಲ್ಲರ ನಗೆಪಾಟಲಿಗೂ ವಶವಾಗಬೇಕಾದೀತೆಂಬ ಅಂಜಿಕೆ ಬೇರೆ ಇದೆ; ಸರಕಾರದವರು ನನ್ನ ಸ್ಥಿತಿಯನ್ನು ನೋಡಿ ಏನೆನ್ನುವರೋ ಎಂಬ ಕಳವಳವು ಬೇರೆ ಇದೆ. ಆದರೆ ಶುದ್ಧಾಚಾರವನ್ನು ಸ್ವೀಕರಿಸಿ ಜಪಾರ್ಚನಾದಿಗಳನ್ನು ಮಾಡಬೇಕೆಂಬ ಕುತೂಹಲವೂ ಒಕ್ಕಡೆ ಬಾಧಿಸುತ್ತಿದೆ. ಈ ಸಂದರ್ಭದಲ್ಲಿ ನಾನು ಏನು ಮಾಡಬೇಕೋ ದಯವಿಟ್ಟು ತಿಳಿಸಿರಿ" ಎಂದು ಒಬ್ಬರು ನನ್ನನ್ನು ಕೇಳುತ್ತಾರೆ. ಈ ಬಗೆಯ ಸಮಾಜದ ಮತ್ತು ಆಚಾರದ ಸಂಬಂಧದ ಪತ್ರಗಳು ಆಗಾಗ ನನಗೆ ಬರುತ್ತಿರುವದರಿಂದ ಇಲ್ಲಿ ಸಂಗ್ರಹವಾಗಿ ಬರೆದಿರುವ ಉತ್ತರದಿಂದಲೇ ಪತ್ರಲೇಖಕರೆಲ್ಲರೂ ನನ್ನ ಅಭಿಪ್ರಾಯವನ್ನು ತಿಳಿದುಕೊಳ್ಳುವರೆಂದು ಆಶಿಸುತ್ತೇನೆ.*

ಈಗಿನ ಕಾಲದಲ್ಲಿ ಆಚಾರವು ವಿಧವಿಧವಾಗಿ ಆಗಿಬಿಟ್ಟಿದೆ. ಶಿಷ್ಟಾಚಾರವು ಯಾವದೆಂಬುದನ್ನು ನಿರ್ಣಯಿಸುವದು ಕಷ್ಟವಾಗಿಬಿಟ್ಟಿದೆ. ಆದರೆ ಇಷ್ಟಂತೂ ಖಂಡಿತ: ಬಹುಜನರು ಪೂರ್ವದಿಂದಲೂ ಅನುಸರಿಸಿಕೊಂಡು ಬಂದಿರುವ ಶುದ್ಧಾಚಾರದಲ್ಲಿ ಯಾವ ದೋಷವೂ ಕಾಣದಿದ್ದರೆ ಅದನ್ನು ಬಿಡುವದಕ್ಕೆ ಯಾವ ಕಾರಣವೂ ಇಲ್ಲ. ಜನರು ನಮ್ಮನ್ನು ನೋಡಿ ಏನೆಂದಾರು! ಎಂಬ ಶಂಕೆಯು ಸರಿಯಲ್ಲ. ಒಬ್ಬೊಬ್ಬರು ಒಂದು ಪರಿಯಾದ ಆಚಾರವನ್ನು ಅನುಸರಿಸುತ್ತಿರುವಾಗ ಜನತೆಯ ಅಭಿಪ್ರಾಯಕ್ಕೆ ಬೆಲೆಯೇನು? ಇಂಥ ಸಂದರ್ಭದಲ್ಲಿ ಶಾಸ್ತ್ರ, ಶಿಷ್ಟಾಚಾರ—ಇವೇ ಪ್ರಬಲವಾಗುತ್ತವೆ.

ಇನ್ನೊಂದು ವಿಷಯ : ಶ್ರುತಿ, ಸ್ಮೃತಿ, ಸದಾಚಾರ—ಇವು ಮೂರರ ಜೊತೆಗೆ 'ತನ್ನ ಹೃದಯಕ್ಕೆ ಮೆಚ್ಚಾದದ್ದು' ಎಂಬುದೂ ಒಂದು ಧರ್ಮಕ್ಕೆ ಲಕ್ಷಣವಾಗಿರುತ್ತದೆ. ಪ್ರಕೃತವಾದ ಆಚಾರವು ಕೆಲಕೆಲವು ಜಾತಿಯವರಿಗೆ ಸಂಬಂಧಪಟ್ಟಿದ್ದು. ಅವರಲ್ಲಿ ಬಹುಜನ ವಿಧವೆಯರು 'ಮಡಿಹೆಂಗಸರಾಗಿ' ತಪಃಪ್ರಧಾನವಾದ ಜೀವನವನ್ನು

ಅನುಸರಿಸಿರುವದೇ ತಮಗೆ ಶ್ರೇಯಸ್ಕರವೆಂದು ಭಾವಿಸಿರುತ್ತಾರೆ. ಈ ಆಚಾರವು ಮನಸ್ಸಿಗೆ ಮೆಚ್ಚಾಗಿದೆ. ಇದರಲ್ಲಿ ಹಿಂಜರಿಯಬೇಕಾದ ಅಥವಾ ನಾಚಿಕೆಪಡಬೇಕಾದ ಭಾಗಗಳು ಯಾವವೂ ಇಲ್ಲ; ಶಿಷ್ಟಾಚಾರ ಶಾಸ್ತ್ರಗಳ ಬೆಂಬಲವೂ ಇದೆ. ಇಂಥ ವಿಷಯದಲ್ಲಿ ಹಿಂದುಮುಂದು ನೋಡಲು ಕಾರಣವೇನು?

ದೇಹವನ್ನೂ ಇಂದ್ರಿಯವನ್ನೂ ಮನಸ್ಸನ್ನೂ ಶುದ್ಧವಾಗಿಟ್ಟುಕೊಂಡಿರುವದಕ್ಕೆ ಈ ಆಚಾರವು ನಿಮಗೆ ಸಹಾಯಕವೆಂದು ನಿಮ್ಮ ಮನಸ್ಸಿಗೆ ತಟ್ಟಿದ್ದರೆ ಸ್ವಲ್ಪವೂ ತಡಮಾಡದೆ ಅವಶ್ಯವಾಗಿ ಇದನ್ನು ಅನುಷ್ಠಾನಕ್ಕೆ ತರಬಹುದು. ಇದರಿಂದ ಆಗುವ ಮೊದಲನೆಯ ಲಾಭವು ಮನಸ್ಸಮಾಧಾನವು; ಎರಡನೆಯದು ಶಿಷ್ಟರಾದ ಸ್ವಜನರಲ್ಲಿ ಮನಸ್ಸು ಸಮರಸವಾಗುವ ಲಾಭವು. ಮೂರನೆಯದಾಗಿ ಶಾಸ್ತ್ರಸಮ್ಮತವಾದ ರೀತಿಯಿಂದ ಅಧ್ಯಾತ್ಮ ಸಾಧನಗಳನ್ನು ಮಾಡಿ ಶಾಂತಿಯಿಂದ ವ್ಯವಹಾರವನ್ನು ಸಾಗಿಸಬಹುದು.

ಇನ್ನು ಹೊರಗಿನ ಉದ್ಯೋಗಕ್ಕೆ ಇದರಿಂದ ಯಾವ ಅಡ್ಡಿಯಾದೀತು? ನಿಮ್ಮ ಜೊತೆಯವರು ಕೆಲವು ದಿನ ನಿಮ್ಮನ್ನು ನೋಡಿ ನಗಬಹುದು; ಮೊದಮೊದಲು ಸುತ್ತುಮುತ್ತಲಿನ ಸಂನಿವೇಶಗಳು ಸ್ವಲ್ಪ ಬದಲಾಯಿಸಿದಂತೆ ಕಾಣಬಹುದು. ಆದರೆ ನೀವು ಮಾತ್ರ ಮನೋವಾಕ್ಕಾಯಗಳಲ್ಲಿ ಒಂದೇ ರೀತಿಯಿಂದ ವರ್ತಿಸುವವರಾದರೆ ನಿಮ್ಮ ಈ ವರ್ತನೆಯು ನಿಮ್ಮಂತೆಯೇ ಇರುವ ಮನಸ್ಸಿನ ಇನ್ನು ಕೆಲವರು ಜೊತೆಗಾತಿಯವರಿಗೆ ಮೇಲುಪಙ್ಕ್ತಿಯೂ ಆಗಬಹುದು. ಆಗ ಸಮಾಜಕ್ಕೂ ನಿಮ್ಮಿಂದ ಒಂದು ಉಪಕಾರವೇ ಆದಂತಾಗುವದಿಲ್ಲವೆ?

ಈಗಿನ ಸರಕಾರದವರು ನಮ್ಮನಮ್ಮ ಸ್ವಂತವಾದ ಆಚಾರ, ನಿಯಮ, ಮತಪದ್ಧತಿಗಳು—ಇವುಗಳ ವಿಷಯದಲ್ಲಿ ಯಾವ ನಿರ್ಬಂಧವನ್ನೂ ಹಾಕಿರುವದಿಲ್ಲ. ನೀವು ಮನಮುಟ್ಟಿ ಕೆಲಸಮಾಡುವವರೆಂದು ಕಂಡರೆ, ನೀವು ಮಾಡುವ ಕೆಲಸದಲ್ಲಿ ಅಭಿವೃದ್ಧಿಗೆ ಯಾವ ಅಡ್ಡಿಯೂ ಬಾರದಿದ್ದರೆ ನಿಮ್ಮ ಆಚಾರದ ವಿಷಯಕ್ಕೆ ಸರಕಾರದ ಅಧಿಕಾರಿಗಳು ಎಂದಿಗೂ ಆಕ್ಷೇಪವನ್ನು ಮಾಡಲಾರರು ಎಂದೇ ನನಗೆ ಅನಿಸುತ್ತದೆ.

ನೀವು ಹೃದಯದಲ್ಲಿ ಮಾಡಿಕೊಂಡಿರುವ ತೀರ್ಮಾನವನ್ನು ಆಚರಣೆಗೆ ತರುವದಕ್ಕೆ ಭಗವಂತನು ಸಹಾಯಕನಾಗಲಿ!— ಎಂಬುದೇ ನನ್ನ ಹಾರೈಕೆ.''

## 47. ಜನರನ್ನು ತಿದ್ದುವದು

(ಏಪ್ರಿಲ್1950)

*ತಮ್ಮ ಪತ್ರವು ತಲುಪಿದೆ. ''ಈಗಿನ ಕಾಲದಲ್ಲಿ ಜನರು ಕರ್ಮ, ಜ್ಞಾನ, ಭಕ್ತಿ, ವೈರಾಗ್ಯ ಮುಂತಾದವುಗಳನ್ನು ಅನಾದರಮಾಡಿ ಸ್ವೇಚ್ಛೆಯಿಂದ ವರ್ತಿಸುತ್ತಾರಲ್ಲವೆ? ಇದಕ್ಕೆ ಯಾವ ಪ್ರತೀಕಾರವಿದೆ? ನನ್ನ ಕೈಯಲ್ಲಾದ ಮಟ್ಟಿಗೂ ಜನರಿಗೆ ನಿಜವನ್ನು ತಿಳಿಸುವದರಲ್ಲಿಯೇ ಕಾಲವನ್ನು ಕಳೆಯಬೇಕೆಂದೂ ವ್ಯವಹಾರದಲ್ಲಿ ಇದೊಂದೇ ನನಗೆ ಉದ್ಯೋಗವಿರಬೇಕೆಂದೂ ಸಂಕಲ್ಪಿಸಿದ್ದೇನೆ. ಸಂಸ್ಕೃತಭಾಷಾಭ್ಯಾಸ, ವೇದಾಂತಗ್ರಂಥಾವಲೋಕನ–ಇವುಗಳನ್ನು ತಕ್ಕ ಮಟ್ಟಿಗೆ ಮಾಡಿರುತ್ತೇನೆ. ನಾನು ಹೇಗೆ ನಡೆದುಕೊಂಡರೆ ನನ್ನ ಸಂಕಲ್ಪವು ಈಡೇರೀತು? ಕೆಲವು ಸೂಚನೆಗಳನ್ನು ದಯವಿಟ್ಟು ಅನುಗ್ರಹಿಸಬೇಕು''* ಎಂದು ಬರೆದಿರುತ್ತೀರಿ.

ಈಗಿನ ಜನರ ಆಚಾರವಿಚಾರಗಳನ್ನು ಕಂಡು ನಿಮಗೆ ವ್ಯಸನವೂ ಅದನ್ನು ಪರಿಹರಿಸುವದಕ್ಕೆ ಏನಾದರೂ ಪ್ರಯತ್ನವನ್ನು ಮಾಡಬೇಕೆಂಬ ಸಂಕಲ್ಪವೂ ಉಂಟಾಗಿರುವದು ಒಳ್ಳೆಯ ಚಿಹ್ನೆಯೇ ಸರಿ. ಆದರೆ ಜನರನ್ನು ಸರಿಯಾದ ಮಾರ್ಗಕ್ಕೆ ತರುವದು ಭಗವಂತನ ಅನುಗ್ರಹವಿಲ್ಲದೆ ಸಾಮಾನ್ಯರಾದ ನಮ್ಮಂಥವರಿಂದ ಆಗುವ ಕೆಲಸವಲ್ಲ. ನಾವು ಬಲಾತ್ಕಾರದಿಂದ ಜನರನ್ನು ತಿದ್ದುವದಕ್ಕೆ ಹೊರಟರೆ ಅನೇಕರ ದ್ವೇಷವನ್ನು ಕಟ್ಟಿಕೊಳ್ಳಬೇಕಾಗಬಹುದು; ನಮ್ಮ ಸಹಾಯದಿಂದ ಜನರು ಸನ್ಮಾರ್ಗಕ್ಕೆ ಬರುವದರ ಬದಲು ನಾವೇ ಸನ್ಮಾರ್ಗದಿಂದ ಜಾರುವ ಅಪಾಯವೂ ಉಂಟು. ಏಕೆಂದರೆ ಭಗವಂತನು ಆರಿಸಿಕೊಳ್ಳುವ ಅಧಿಕಾರಿಪುರುಷರಾದ ಮಹನೀಯರು ಮಾತ್ರ ಜನರಿಗೆ ಆದರ್ಶ ಉಪದೇಶಕರಾಗುತ್ತಾರೆ.

ತಮ್ಮ ಉತ್ಸಾಹಕ್ಕೆ ಭಂಗವನ್ನು ತರುವ ಯೋಚನೆಯನ್ನು ಮಾಡುತ್ತಿದ್ದೇನೆಂದು ಮಾತ್ರ ಯೋಚಿಸಿಕೊಳ್ಳಬೇಡಿರಿ. ನಿಮ್ಮ ಹೃದಯದಲ್ಲಿ ಅಂಕುರಿಸಿರುವ ಇಚ್ಛೆಯು ಸಫಲವಾಗುವದಕ್ಕೆ ನಾನು ಕೊಟ್ಟ ವಿನಯಪೂರ್ವಕಸೂಚನೆಗಳಿವು ಎಂದು ಭಾವಿಸಬೇಕು. ಇವುಗಳಲ್ಲಿ ನಿಮಗೆ ಯುಕ್ತವೆಂದು ತೋರಿದವುಗಳನ್ನು ಸ್ವೀಕರಿಸಬಹುದು; ಇಲ್ಲದಿದ್ದರೆ ಇವುಗಳ ವಿಷಯವಾಗಿ ಹೆಚ್ಚೇನೂ ಆಲೋಚಿಸಬೇಕಾದದ್ದೇ ಇಲ್ಲ. ಮೊಟ್ಟಮೊದಲು 'ಜನರನ್ನು ಸರಿಯಾದ ಹಾದಿಗೆ ತರುವದು ನನ್ನ ಕರ್ತವ್ಯ' ಎಂಬ ಭಾವನೆಯನ್ನು ಪೂರ್ಣವಾಗಿ ಬಿಟ್ಟುಬಿಡಬೇಕು. ನನ್ನ ವರ್ತನೆಯನ್ನು ನಾನು ತಿದ್ದಿಕೊಳ್ಳುವೆನು. ನನ್ನನ್ನು ಯಾರಾದರೂ ಕೇಳಿದರೆ, ನನಗೆ ನಿಜವಾಗಿ ತಿಳಿದಿರುವದನ್ನು ಮಾತ್ರ ಅರಿಕೆಮಾಡಿಕೊಳ್ಳುವೆನು'' ಎಂದು ಸಂಕಲ್ಪಿಸಿಕೊಳ್ಳಿರಿ.

'ಲೋಕವು ಈಗ ನೆಟ್ಟಗಿಲ್ಲ; ನನ್ನ ಬೋಧನೆಯಿಂದ ಅದು ಉತ್ತಮವಾಗುವದು' ಎಂಬುದೊಂದು ಬರಿಯ ಭ್ರಮೆಯು. ಲೋಕವು ಇರುವಂತೆ ಸರಿಯಾಗಿಯೇ ಇದೆ. ಅದರಲ್ಲಿ ಯಾವಾಗಲೂ ಕೆಲವರು ತಿಳಿದವರು, ಕೆಲವರು ಅಜ್ಞರು; ಕೆಲವರು ಒಳ್ಳೆಯವರು, ಕೆಲವರು ಕೆಟ್ಟವರು; ಕೆಲವರು ಆಸ್ತಿಕರು, ಕೆಲವರು ನಾಸ್ತಿಕರು—ಹೀಗೆ ಇದ್ದೇ ಇರುವರು. ಇದೇ ಲೋಕದ ಸ್ಥಿತಿ. ದಾನ, ಧರ್ಮ, ಪರೋಪಕಾರ, ಉಪದೇಶ—ಇವುಗಳನ್ನು ಮಾಡುವವರು ತಮ್ಮತಮ್ಮ ಪುರುಷಾರ್ಥವನ್ನು ಸಾಧಿಸಿಕೊಳ್ಳುವರೇ ಹೊರತು ಲೋಕಕ್ಕೆ ಯಾವ ಉಪಕಾರವನ್ನೂ ನಿಜವಾಗಿ ಮಾಡುವದಿಲ್ಲ. ತನ್ನ ಪುರುಷಾರ್ಥವನ್ನು ತಾನು ಗಳಿಸಿಕೊಂಡರೆ ಆಯಿತು; ತಾನು ಕರ್ಮ, ಜ್ಞಾನ, ಭಕ್ತಿ ವೈರಾಗ್ಯ—ಮುಂತಾದ ಸಾಧನಗಳಲ್ಲಿ ನಿರತನಾದರೆ ಆಯಿತು. ಲೋಕವೂ ಈ ಆದರ್ಶಗಳಲ್ಲಿ ಬೇಕಾದದ್ದನ್ನು ಆರಿಸಿಕೊಳ್ಳುವದು; ಕೆಲವು ಜನರು ಈ ಮೇಲುಪಙ್ಕ್ತಿಯನ್ನು ಅನುಸರಿಸಲೂ ಬಹುದು. ಆದರೆ ಒಟ್ಟಿನಲ್ಲಿ ತನ್ನ ಉದ್ಧಾರಕ್ಕಾಗಿಯೇ ತಾನು ದುಡಿಯಬೇಕಾಗಿದೆ.

ಸಂಸ್ಕೃತಭಾಷೆಯನ್ನು ಚೆನ್ನಾಗಿ ಅಭ್ಯಾಸಮಾಡುವದೂ ವೇದಾಂತಗ್ರಂಥಗಳನ್ನು ಅಭ್ಯಾಸಮಾಡುವದೂ ಒಳ್ಳೆಯದೇ ಸರಿ. ಆದರೆ ಭಾಷಾಜ್ಞಾನವು ಹೆಚ್ಚಾದರೆ, ಶಾಸ್ತ್ರಗ್ರಂಥಗಳ ಪರಿಚಯವು ಬೆಳೆದರೆ, ನಿಜವಾದ ಅಧ್ಯಾತ್ಮದ ತಿಳಿವಳಿಕೆಯೂ ಹೆಚ್ಚುವದೆಂಬ ನಿಯಮವೇನೂ ಇಲ್ಲ. ವಿದ್ವಾನ್, ಪಂಡಿತ, ಆಚಾರ್ಯ—ಮುಂತಾದ ಬಿರುದುಗಳನ್ನು ಸಂಪಾದಿಸುವದು ಸುಲಭ. ಆದರೆ ನಿಜವಾದ ವೇದಾಂತಕ್ಕೆ ಬೇಕಾದ ಶಮದಮಾದಿಗಳನ್ನು ಸಂಪಾದಿಸಿ ಶಾಂತದರ್ಪನಾಗಿ ಅಂತರ್ಮುಖನಾಗಿ ಆತ್ಮತತ್ತ್ವದ ಶ್ರವಣಮನನನಿದಿಧ್ಯಾಸನಗಳನ್ನು ಮಾಡುವ ಶೀತಲಹೃದಯವನ್ನು ಸಂಪಾದಿಸಿ ಕೊಳ್ಳುವದು ಬಲುಕಷ್ಟ. ಪಂಡಿತರನ್ನು ಲೋಕವು ಮೆಚ್ಚುವದು; ಆದರೆ ನಿಜವಾಗಿ ಸಾಧಕರೂ ಅನುಭವಿಗಳೂ ಆದ ಮಹನೀಯರುಗಳ ಆಚಾರವನ್ನು ಅನುಕರಿಸುವದು.

ಶ್ರೀರಾಮಕೃಷ್ಣಪರಿಮಹಂಸರು ಹೇಳಿರುವದನ್ನು ನಾವು ಮನಸ್ಸಿಗೆ ತಂದುಕೊಳ್ಳ ಬಹುದು. ಹೂವುಗಳು ಮಕರಂದವನ್ನು ಪಾನಮಾಡುವದಕ್ಕೆ ಬನ್ನಿರೆಂದು ಜೇನುನೊಣಗಳಿಗೆ ಆಹ್ವಾನವನ್ನೇನೂ ಕೊಡಬೇಕಾದದ್ದಿಲ್ಲ, ಅವು ಅರಳಿದರೆ ಸಾಕು,. ಅವುಗಳ ಘಮವು ಆ ಪ್ರಾಣಿಗಳನ್ನು ಸೆಳೆದುಕೊಳ್ಳುವದು. ನಾವು ಭಗವಂತನ ಭಕ್ತಿಯಲ್ಲಿ ನಿಂತರೆ ಸಾಕು; ಆತನು ನಮ್ಮನ್ನು ಮಿಕ್ಕವರಿಗೆ ಪ್ರಯೋಜನವಾಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾನೆ.

# 48. ಉದ್ಯೋಗದ ಘನತೆ

## (ಮೇ1950)

*ತಮ್ಮ ಪತ್ರವನ್ನು ಓದಿದೆನು. "ಲಾಯರ ಕೆಲಸವನ್ನು ಬಹುಕಾಲ ಮಾಡಿದ್ದಾಯಿತು. ಈ ವೃತ್ತಿಯು ಅನೇಕ ದೋಷಗಳಿಂದ ಕೂಡಿದೆ ಎಂತ ನನ್ನ ಮನಸ್ಸಿಗೆ ಹೆಚ್ಚು ಹೆಚ್ಚಾಗಿ ತೋರುತ್ತಿದೆ. ಈ ನಡುವಯಸ್ಸಿನಲ್ಲಿ ಬೇರೆ ಒಂದು ವೃತ್ತಿಯನ್ನು ಅವಲಂಬಿಸುವ ಹಾಗೂ ಇಲ್ಲ. ಪರಮಾರ್ಥಸಾಧನೆಯ ಕಡೆಗೆ ಮನಸ್ಸು ಒಲಿಯುತ್ತಿದೆಯಾದರೂ ಪೂರ್ಣವೈರಾಗ್ಯವಿಲ್ಲದ್ದರಿಂದ ಎಲ್ಲವನ್ನೂ ತ್ಯಾಗ ಮಾಡಿ ಸಾಧನವನ್ನೇ ಮುಖ್ಯವಾಗಿ ಹಿಡಿಯುವ ಅವಸ್ಥೆಗೂ ನಾವು ಏರಿಲ್ಲ. ಈಗಿನ ಸ್ಥಿತಿಯಲ್ಲಿ ನಾನು ಹೇಗೆ ನಡೆಯಬೇಕೆಂಬುದನ್ನು ದಯವಿಟ್ಟು ಬರೆಯಬೇಕು" ಎಂದು ಕೇಳಿರುತ್ತೀರಿ.*

ವ್ಯವಹಾರದಲ್ಲಿ ಯಾರು ಯಾವ ಉದ್ಯೋಗವನ್ನು ಅವಲಂಬಿಸಬೇಕೆಂಬುದನ್ನು ಮತ್ತೊಬ್ಬರು ಹೇಳಿಕೊಡುವದು ಆಗಲಾರದೆಂಬುದು ನಿಮಗೆ ಗೊತ್ತೇ ಇದೆ. ಆದರೆ ಯಾವ ವೃತ್ತಿಯೇ ಆಗಲಿ, ಸರ್ವಥಾ ನಿರ್ದೋಷವೆಂದಾಗಲಿ ನಿರ್ಗುಣವೆಂದಾಗಲಿ ಹೇಳುವದಕ್ಕೆ ಬರುವದಿಲ್ಲ; ಲಾಯರ ಕೆಲಸವೂ ಈ ನಿಯಮಕ್ಕೆ ಪ್ರತಿಷೇಧವಲ್ಲ. ಈ ವೃತ್ತಿಯನ್ನು ಸ್ವತಃ ಕೆಟ್ಟದ್ದೆಂದು ಹೇಳುವದಕ್ಕೆ ಆಗುವದಿಲ್ಲ ; ಇಷ್ಟೇ ಅಲ್ಲ, ನೀವು ಮನಸ್ಸು ಮಾಡಿದರೆ ಇಂದಿನಿಂದಲೇ ಅದನ್ನು ಇಹಪರಗಳೆರಡಕ್ಕೂ ಸಾಧನವಾಗಿ ಮಾಡಿಕೊಳ್ಳುವದಕ್ಕೆ ಬರುತ್ತದೆ. ಈ ದೃಷ್ಟಿಯಿಂದ ಒಂದೆರಡು ಸೂಚನೆಯ ಮಾತುಗಳಲ್ಲಿ ಇಲ್ಲಿ ಬರೆಯುತ್ತೇನೆ. ನಿಮಗೆ ಯೋಗ್ಯವೆಂದು ಕಂಡಷ್ಟನ್ನು ಉಪಯೋಗಿಸಿಕೊಳ್ಳಿರಿ.

ಲಾಯರುಗಳು ಸುಳ್ಳುಗಾರರು (Lawyers are liers) ಎಂದು ಕೆಲವರು ಇಂಗ್ಲಿಷಿನಲ್ಲಿ ಗಾದೆಮಾಡಿಕೊಂಡಿರುತ್ತಾರೆ–ಎಂದು ಬರೆದಿದ್ದೀರಿ. ಈ ಗಾದೆಯಲ್ಲಿ ಏನೂ ಹುರುಳಿಲ್ಲ. ಏಕೆಂದರೆ ಅನ್ಯಾಯದಿಂದ ಬೇಗನೆ ಹಣವನ್ನೂ ಕೀರ್ತಿಯನ್ನೂ ಸಂಪಾದಿಸುವದಕ್ಕೆ ಸುಳ್ಳು ಬೇಕಾಗಬಹುದು. ಆದರೆ ಸುಳ್ಳನ್ನು ಹೇಳಿಯೇ ತೀರಬೇಕೆಂಬ ನಿರ್ಬಂಧವೇನೂ ಇರುವದಿಲ್ಲ. "ನಾನು ನಿಜವನ್ನೇ ಹೇಳುತ್ತೇನೆ; ನನ್ನ ಕಕ್ಷಿಗಾರನಿಗೆ ಅನ್ಯಾಯವಾಗದಂತೆ ಕೈಯಲ್ಲಾದ ಪ್ರಯತ್ನವನ್ನೇ ಮಾಡುತ್ತೇನೆ" ಎಂಬ ಪ್ರತಿಜ್ಞೆಯನ್ನು ಮಾಡಿಕೊಂಡರೆ ಅವಶ್ಯವಾಗಿ ಅದರಂತೆಯೇ ನಡೆಯಬಹುದು. ಆದಕ್ಕೆ ಯಾರೊಬ್ಬರ ಅಡ್ಡಿಯೂ ಇರುವದಿಲ್ಲ.

'ಇನ್ನು ಪರಮಾರ್ಥಸಾಧನದ ಕಡೆಗೆ ಮನಸ್ಸು ಒಲಿಯುತ್ತಿದೆ' ಎಂದು ನೀವು ಬರೆದಿರುವದನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ನಿಮ್ಮ ವೃತ್ತಿಯನ್ನು ಪರಮೇಶ್ವರನ ಆರಾಧನೆಯೆಂತ ಭಾವಿಸಿಕೊಂಡು ಕೆಲಸವನ್ನು ಮಾಡುವದಕ್ಕೆ

ಪ್ರಾರಂಭಿಸಿದರೆ, ಆಗ ನಿಮಗೆ ಪ್ರಪಂಚವೂ ಪರಮಾರ್ಥವೂ ಎರಡೂ ತಪ್ಪದೆ ಸಾಧಿಸುವವು. ಕರ್ಮಯೋಗವನ್ನು ಮುಖ್ಯವಾಗಿ ಶಾಸ್ತ್ರೀಯಕರ್ಮಕ್ಕೆ ಹೇಳಿದೆಯಾದರೂ ನಮ್ಮನಮ್ಮ ಉದ್ಯೋಗದ ಕೆಲಸಗಳಿಗೂ ಆದರ ತತ್ತ್ವವನ್ನು ಅನ್ವಯಿಸಿಕೊಳ್ಳಲು ಯಾವ ಅಡ್ಡಿಯೂ ಇರುವದಿಲ್ಲ. ನಿರಪರಾಧಿಗಳ ಮೇಲೆ ಯಾವದೋ ದೈವಿಕಕಾರಣಗಳಿಂದ ಕೆಲವು ಆರೋಪಗಳು ಬಿದ್ದಿರುತ್ತವೆ; ಬಡವರಿಗೆ ನ್ಯಾಯವು ದೊರೆಯುವದಕ್ಕೆ ಕೆಲವು ಅಡಚಣೆಗಳು ಇರುತ್ತವೆ. ಅಂಥ ಸಂದರ್ಭಗಳಲ್ಲಿ ಈಶ್ವರಾರಾಧನೆಯ ಬುದ್ಧಿಯಿಂದ ಅಂಥ ಜನರಿಗೆ ನ್ಯಾಯವನ್ನು ದೊರಕಿಸುವದಕ್ಕೆ ಮಾಡುವ ಪ್ರಯತ್ನವು ಒಂದು ಬಗೆಯ ಕರ್ಮಯೋಗವೇ ಆಗುತ್ತದೆ. ನಿಜವಾಗಿ ನೋಡಿದರೆ ನ್ಯಾಯಶೋಧನೆಗೆ ಸಹಾಯವನ್ನು ಮಾಡುವದೇ ವಕೀಲನ ಕರ್ತವ್ಯವು; ಅದನ್ನು ಬಿಟ್ಟರೆ ಕರ್ತವ್ಯಲೋಪವಾಗುತ್ತದೆ. ನ್ಯಾಯವನ್ನು ದೊರಕಿಸುವದಕ್ಕೆ ಯುಕ್ತಿಗಳಿಂದ ಅಡ್ಡಿಮಾಡುವದೂ, ಕಲ್ಪಿತ ಪ್ರಮಾಣಗಳನ್ನು ಒದಗಿಸುವದೇ ಮುಂತಾದ ಅನ್ಯಾಯದ ಪ್ರಯತ್ನಗಳಿಗೆ ಬಲಿಬೀಳುವದೂ ಮಹಾದೋಷವನ್ನೇ ತಂದಿಡುವವು. ಆದ್ದರಿಂದ ಸ್ವವೃತ್ತಿಯನ್ನು ಸತ್ಯಧರ್ಮಬದ್ಧನಾಗಿ ಈಶ್ವರಾರಾಧನೆಯೆಂದು ಮಾಡುವದು ಇಹಪರಗಳಿಗೆ ಸಾಧಕವಾಗುವದೆಂಬುದಕ್ಕೆ ಯಾವ ಸಂಶಯವೂ ಇಲ್ಲ.

ಸತ್ಯಧರ್ಮಗಳನ್ನು ಅವಲಂಬಿಸಿದರೆ ಕಷ್ಟನಿಷ್ಠುರಗಳನ್ನು ಸಹಿಸಬೇಕೆಂದು ಅಂಜುವವರು ಕೆಲವರು; ಹಣವನ್ನು ಗಳಿಸುವ ಪ್ರಮಾಣವು ಕಡಿಮೆಯಾದೀತೆಂದು ಅಂಜುವವರು ಮತ್ತೆ ಕೆಲವರು. ಈ ಅಂಜಿಕೆಗೆ ಯಾವ ತಳವೂ ಇಲ್ಲವೆಂದು ನಾನು ಹೇಳಲಾರೆ. ಆದರೆ ಅಸತ್ಯ ಅಧರ್ಮಗಳಿಂದ ಗಳಿಸಿದ ಹಣವು ರಾಶಿಯಾದರೂ ಅದು ಮನಸ್ಸಿಗೆ ನೆಮ್ಮದಿಯನ್ನು ತಂದು ಕೊಡುವದೆಂಬ ಭರವಸೆಯಿಲ್ಲ. ತಪ್ಪುಮಾರ್ಗದಿಂದ ಗಳಿಸಿದ ಕೀರ್ತಿಯು ಬಹುಕಾಲ ನಿಲ್ಲಲೂ ಆರದು. ಪರಮಾರ್ಥದೃಷ್ಟಿಯಿಂದಂತೂ ಅದು ನರಕಕ್ಕೆ ಹಾದಿಯಾಗಿರುವದು. ಸತ್ಯಧರ್ಮಗಳಿಂದ ಆಗುವ ಕಷ್ಟನಿಷ್ಠುರಗಳು ಕೆಲಕಾಲ ನಮ್ಮನ್ನು ಪರೀಕ್ಷಿಬಹುದು; ಆದರೆ ಕೊನೆಗೆ ಸತ್ಯವೇ ಗೆಲ್ಲುವದು. ಸತ್ಯಧರ್ಮಗಳಿಂದ ಬರುವ ಹಣವು ಅಲ್ಪವಾಗಿರಬಹುದು; ಆದರೆ ಅದರಿಂದ ನಮಗೆ ಸುಖಶಾಂತಿಗಳು ತಪ್ಪದೆ ಸಿಕ್ಕುವವು.

ನನಗೆ ಕಾನೂನು ಪ್ರಪಂಚದ ಒಳವಿವರಗಳು ಯಾವವೂ ತಿಳಿಯುವದಿಲ್ಲ. ಆದರೂ ಸತ್ಯ, ಧರ್ಮ, ಈಶ್ವರಭಕ್ತಿ–ಇವುಗಳನ್ನು ನಿಮ್ಮ ವೃತ್ತಿಯಲ್ಲಿ ಅನುಷ್ಠಾನಕ್ಕೆ ಇಟ್ಟುಕೊಳ್ಳುವದು ಆಗಲಾರದೆಂಬುದನ್ನು ಮಾತ್ರ ನಾನು ನಂಬಲಾರೆ. ನನ್ನ ಮಾತಿನಲ್ಲಿ ಅಲ್ಪಸ್ವಲ್ಪವಾದರೂ ವಿಶ್ವಾಸವಿದ್ದರೆ ತಾವು ಕೆಲವು ದಿನಗಳು ಪರೀಕ್ಷಾರ್ಥ

ವಾಗಿಯಾದರೂ ಈ ಋಜುಮಾರ್ಗವನ್ನು ಅವಲಂಬಿಸಿ ನೋಡಿರಿ. "ದೇವ, ನಾನು ಸತ್ಯಧರ್ಮಗಳನ್ನು ತಪ್ಪದೆ ನನ್ನ ಕಕ್ಷಿಗಾರರಿಗೆ ನ್ಯಾಯವನ್ನು ದೊರಕಿಸುವಂತೆ ಸಹಾಯಮಾಡು; ಕಾಮಕ್ರೋಧಲೋಭಗಳಿಗೆ ವಶನಾಗಿ ಅನ್ಯಾಯಮಾರ್ಗದಲ್ಲಿ ಕಾಲಿಡುವದಕ್ಕೆ ನನ್ನನ್ನು ಬಿಡಬೇಡ" ಎಂದು ಪ್ರತಿದಿನವೂ ಬೆಳಗ್ಗೆ ಮತ್ತು ಸಾಯಂಕಾಲ ಭಗವಂತನಲ್ಲಿ ಮೊರೆಯಿಡಿರಿ. ಆ ದಯಾನಿಧಿಯು ಅವಶ್ಯವಾಗಿ ನಿಮ್ಮ ಪ್ರಾರ್ಥನೆಯನ್ನು ನೆರವೇರಿಸಿ ನಿಮ್ಮ ವ್ಯವಹಾರವನ್ನು ಸುಪಥವಾಗಿ ಮಾಡಿಕೊಡುವನು.

## 49. ಆಶ್ರಮಸಂನ್ಯಾಸ

### (ಜೂನ್ 1950)

*ನಿಮ್ಮ ಪ್ರಶ್ನೆಗೆ ಅತಿಸಂಕ್ಷೇಪವಾಗಿಯೇ ಉತ್ತರವನ್ನು ಬರೆಯುವೆನು. ಏಷಣಾತ್ರಯವನ್ನು ತ್ಯಜಿಸುವದೇ ಪೂರ್ಣಸಂನ್ಯಾಸವೆಂದು ಶಾಸ್ತ್ರದಲ್ಲಿ ಹೇಳಿರುತ್ತದೆಯಾದರೂ ಈಗಿನ ಕಾಲದಲ್ಲಿ ಪರಮಹಂಸಸಂನ್ಯಾಸಿಗಳೆಂಬ ಹೆಸರಿನಿಂದ ಆಶ್ರಮವೊಂದನ್ನು ಧರಿಸಿರುವವರೂ ಕಾಣಬರುತ್ತಾರಷ್ಟೆ. ಆಚಾರ್ಯರು ಅಲ್ಲಲ್ಲಿ 'ಧ್ಯಾನಯೋಗವು ಗೃಹಸ್ಥನಿಗೆ ಹೇಳಿಲ್ಲ; 'ಗೃಹಸ್ಥರಿಗೆ ಅನೃತಾದಿಗಳು ಅವರ್ಜನೀಯ'–ಎಂದು ಮುಂತಾಗಿ ಬರೆದು ಸಂನ್ಯಾಸಕ್ಕೇ ಬಲವನ್ನು ಕೊಟ್ಟು ಭಾಷ್ಯದಲ್ಲಿ ಬರೆದಿರುವದು ಕಂಡು ಬರುತ್ತದೆ. ನನಗೆ ತೀವ್ರವಾದ ವಿರಕ್ತಿಯೇನೋ ಬಂದಿರುತ್ತದೆ. ಆದರೆ ಸಂನ್ಯಾಸಾಶ್ರಮವನ್ನೇ ಸ್ವೀಕರಿಸಬೇಕೆಂಬ ಆಗ್ರಹವಾಗಲಿ ಅದು ಬೇಡವೆಂಬ ಅನಾದರವಾಗಲಿ ಇಲ್ಲ. ನನ್ನಂಥ ಮುಮುಕ್ಷುಗಳು ಸಂನ್ಯಾಸಾಶ್ರಮವನ್ನು ಸ್ವೀಕರಿಸುವದು ಮೇಲೊ, ಗೃಹಸ್ಥಾಶ್ರಮದಲ್ಲಿಯೇ ಇದ್ದರೂ ಆಗುವದೊ?–ದಯವಿಟ್ಟು ತಿಳಿಸಬೇಕು" ಎಂದು ಬರೆದಿರುತ್ತೀರಿ.*

ಇಂಥ ವಿಷಯದಲ್ಲಿ ಒಬ್ಬರಿಗೆ ಮತ್ತೊಬ್ಬರು ಸಲಹೆಯನ್ನು ಕೊಡುವದು ಕಷ್ಟವಾಗಿರುತ್ತದೆ. ಆದರೂ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿಬಿಡುತ್ತೇನೆ. ಇದನ್ನು ನೀವು ಮನನ ಮಾಡಿ ನಿಮ್ಮ ತೀರ್ಮಾನವನ್ನು ಮಾಡಿಕೊಳ್ಳಬೇಕು. ವಿರಕ್ತನಿಗೆ ಸಂನ್ಯಾಸವೇ ಸ್ವಾಭಾವಿಕವಾಗಿರುತ್ತದೆ. ಗೃಹಸ್ಥನ ಕರ್ಮಗಳು ಜನ್ಮಾಂತರಲೋಕಾಂತರಗಳಲ್ಲಾಗುವ ಉತ್ತಮಫಲಗಳಿಗಾಗಿಯೂ ಈ ಲೋಕದಲ್ಲಾಗಬೇಕಾಗಿರುವ ಕೆಲವು ದೃಷ್ಟಫಲ ಗಳಿಗಾಗಿಯೂ ಮಾಡತಕ್ಕವುಗಳಾಗಿವೆ. ಅವುಗಳಲ್ಲಿ ಆಶೆಯಿಲ್ಲದವನು ಆ ಕರ್ಮಗಳನ್ನು ಮಾಡುವದೇ ಇಲ್ಲವೆಂದು ಸ್ಪಷ್ಟವಾಗಿರುತ್ತದೆ. ಯಾವನಿಗೆ ಆತ್ಮಜ್ಞಾನವೊಂದೇ ಬೇಕೋ ಅವನಿಗೆ ಆತ್ಮವಿಷಯಕವಾದ ಶ್ರವಣಮನನನಿದಿಧ್ಯಾಸನಗಳೇ ಬೇಕಾಗಿರುತ್ತವೆ. ಅವನ್ನು ಪರಿಪೂರ್ಣವಾಗಿ ಅನುಷ್ಠಾನ ಮಾಡುವದಕ್ಕೆ ಸಂನ್ಯಾಸಾಶ್ರಮವು ಉತ್ತಮವಾದದ್ದೆಂಬ ವಿಷಯಕ್ಕೆ ಸಂಶಯವೇನು?

ಆದರೆ ಒಂದು ವಿಷಯ: ಈಗ ನಾವು ಮಾಡುತ್ತಿರುವ ವೈದಿಕಕರ್ಮಗಳು ಯಾವವು? ವೇದಾಧ್ಯಯನವನ್ನೂ ವೇದಾರ್ಥವಿಚಾರವನ್ನೂ ಮಾಡುತ್ತಿದ್ದೇವೆಯೆ? ಅವುಗಳ ಮತ್ತು ಅವುಗಳ ಫಲಗಳ ಬೆಲೆಯನ್ನು ಪೂರ್ಣವಾಗಿ ನಿಶ್ಚಯಿಸಿ ಅವು ನಮಗೆ ನಿಶ್ಚಯವಾಗಿ ಬೇಡವೆಂದೂ ನಿರ್ಧರಿಸಿರುತ್ತೇವೆಯೆ? ಇದನ್ನು ಚೆನ್ನಾಗಿ ಮನನ ಮಾಡಬೇಕು. ಇನ್ನೊಂದು ವಿಚಾರ. ವೈರಾಗ್ಯವು ನಮಗೆ ತೀವ್ರವಾಗಿ ಬಂದಿದೆ ಎಂಬುದಕ್ಕೆ ಗುರುತೇನು? ಯಾವ ದೃಷ್ಟಾದೃಷ್ಟಫಲಗಳನ್ನೂ ಬಯಸದೆ, ''ಇದನ್ನು ಮಾಡಲೊ ಅದನ್ನು ಮಾಡಲೊ?'' ಎಂದು ತೂಗುಮನಸ್ಸಿನಿಂದ ಆಲೋಚಿಸದೆ, 'ಆತ್ಮನೇ ನನಗೆ ಬೇಕು' ಎಂಬ ಇಚ್ಛೆಯಿಂದ ಎಲ್ಲವನ್ನೂ ಬಿಡುವದೇ. ಇಂಥ ವೈರಾಗ್ಯವು ಬಂದವರು ಯಾವಾಗಲಾದರೂ ಈ ಆಶ್ರಮಕರ್ಮವನ್ನು ಬಿಡಲೆ?– ಎಂದು ಕೇಳಿಯಾರೇನು? ಪಕ್ವವಾಗಿರುವ ಹಣ್ಣು 'ತೊಟ್ಟು ಕಳಚಿ ಬೀಳಲೋ, ಬೇಡವೋ?' ಎಂದು ಯೋಚನೆ ಮಾಡುತ್ತದೆಯೇನು?

ಆಚಾರ್ಯರು ಸಂನ್ಯಾಸಿಗಳಲ್ಲದವರಿಗೆ ವಿದ್ಯಾಧಿಕಾರವಿಲ್ಲವೆಂದೇನೂ ಬರೆದಿಲ್ಲ. ಜ್ಞಾನನಿಷ್ಠೆಗೆ ಸಂನ್ಯಾಸಿಗಳೇ ವಿಶೇಷಾಧಿಕಾರಿಗಳು ಎಂದು ಬರೆದಿರುತ್ತಾರೆ; ಆದರೆ ಆ ಮಾತು ಬೇರೆ. ಈಗ ನಿಮಗೆ ವಿದ್ಯೆಯಲ್ಲಿಯೇ ಅಭಿಲಾಷೆಯಿದೆಯೆ? ತತ್ತ್ವವಿಚಾರಕ್ಕಾಗಿ ದೇಹದ ಅನುಕೂಲ್ಯಗಳೆಲ್ಲವನ್ನೂ ತೊರೆಯುವದಕ್ಕೆ ಸಿದ್ಧರಾಗಿರುವಿರಾ? ದಿನದಲ್ಲಿ ಊಟ ನಿದ್ರೆ ಮುಂತಾದ ದೇಹಧಾರಣೆಗೆ ವ್ಯವಹಾರದ ಅನಿವಾರ್ಯವಾದ ಲೌಕಿಕಕಾಲವನ್ನು ಬಿಟ್ಟರೆ ಉಳಿದ ಕಾಲವನ್ನೆಲ್ಲ ತತ್ತ್ವವಿಚಾರಕ್ಕೇ ವಿನಿಯೋಗಿಸುತ್ತಿರುವಿರೇನು? ಇಂದ್ರಿಯಗಳಿಗೂ ಮನಸ್ಸಿಗೂ ತೃಪ್ತಿಯನ್ನುಂಟುಮಾಡುವ ವಿನೋದಗಳನ್ನು ಅತ್ತಕಡೆಗೆ ಸರಿಯಿಸಿ ಬ್ರಹ್ಮವಿದ್ಯೆಗಾಗಿ ತತ್ತ್ವವಿಚಾರವನ್ನೇ ಮಾಡುವದರಲ್ಲಿ ಕಾಲವನ್ನು ಹಾಕುವದಕ್ಕೆ ಸಿದ್ಧರಾಗಿರುವಿರೇನು? ಇದನ್ನು ಮನಸ್ಸಿಗೆ ಚೆನ್ನಾಗಿ ಆಲೋಚನೆಮಾಡಿಕೊಂಡು ಉತ್ತರವನ್ನು ನಿಮಗೆ ನೀವೇ ಹೇಳಿಕೊಳ್ಳಿರಿ. ಆಗ ಜ್ಞಾನನಿಷ್ಠೆಗಾಗಿ ಸಂನ್ಯಾಸಾಶ್ರಮವು ನಿಮಗೆ ಬೇಕೋ ಬೇಡವೋ ತಾನೇ ತಿಳಿಯುತ್ತದೆ.

ಇನ್ನೂ ಒಂದು ವಿಷಯವನ್ನು ಕುರಿತು ನೀವು ಮನಸ್ಸಿನಲ್ಲಿ ಆಲೋಚನೆಗೆ ತಂದುಕೊಳ್ಳುವದು ಅವಶ್ಯವು. ಹೊರಗಿನ ಲೌಕಿಕಕರ್ಮಗಳಿಗಿಂತಲೂ ಜಪ, ಉಪವಾಸ, ಸುರಾರ್ಚನೆ, ವ್ರತಪರಿಪಾಲನೆ–ಮುಂತಾದ ನಿಯಮಪ್ರಧಾನವಾದ ಕರ್ಮಗಳಿಗಿಂತಲೂ ಭಗವತ್ಪ್ರೇಮಪ್ರಧಾನವಾದ ಉಪಾಸನೆಯ ಕಡೆಗೆ ನಿಮ್ಮ ಮನಸ್ಸು ಧಾವಿಸುತ್ತಿದೆಯೇನು? ನಿಮಗೆ ಯಾವ ಲೋಕವಾರ್ತೆಯಲ್ಲಿಯೂ ವಿಶೇಷವಾದ ಆದರವೂ ಕಾಣುವದಿಲ್ಲವಷ್ಟೆ? ಹೀಗಿದ್ದರೆ ಶಮಪ್ರಧಾನವಾದ ಆಶ್ರಮಕ್ಕೆ ನಿಮ್ಮ ಮನಸ್ಸು

ಅರ್ಹವಾಗುತ್ತಿದೆ; ಇಲ್ಲದಿದ್ದರೆ ಆ ಆಶ್ರಮ ವಿಚಾರವನ್ನು ಮನಸ್ಸಿಗೆ ಹತ್ತಿಸಿಕೊಳ್ಳದೆ ಇರುವದೇ ಮೇಲು.

ಕೊನೆಯಲ್ಲಿ ಒಂದು ಆತ್ಮಪರೀಕ್ಷೆಯ ಪ್ರಕಾರವನ್ನು ನಿಮಗೆ ಸೂಚಿಸುವೆನು. ಅದರಿಂದ ನಿಮ್ಮ ಪ್ರಶ್ನೆಗೆ ಬೇಗನೆ ಉತ್ತರವನ್ನು ಕಂಡುಕೊಳ್ಳಬಹುದು. ನೀವು ಈಗಲೇ ಸಂನ್ಯಾಸಿಗಳಾಗಿದೇವೆಂದು ತಿಳಿದುಕೊಳ್ಳಿರಿ. ನಿಮ್ಮ ಮಕ್ಕಳು, ನೆಂಟರು, ಆಸ್ತಿ–ಯಾವದೊಂದನ್ನೂ ಉಪಯೋಗಿಸುವ ಹಕ್ಕೂ ನಿಮಗೆ ಇಲ್ಲವೆಂಬುದನ್ನು ಪರಿಭಾವಿಸಿರಿ. ನೀವು ನಿಮಗೆ ಅಪರಿಚಿತವಾದ, ನಿಮ್ಮ ಭಾಷೆಯನ್ನು ಕೂಡ ಅರಿಯದ, ಆಚಾರವಿಚಾರಗಳಲ್ಲಿ ನಿಮಗೆ ಅತ್ಯಂತ ಹೊಸದಾಗಿ ತೋರುವ, ದೇಶಕ್ಕೆ ಹೋಗಿದ್ದೀರೆಂದೂ ಅಲ್ಲಿ ನಿಮ್ಮ ಸಂನ್ಯಾಸಿಯ ವೇಷಮಾತ್ರದಿಂದ ನಿಮಗೆ ಯಾವ ಗೌರವವೂ ಸಿಕ್ಕದೆ ಹೋಗಿದೆಯೆಂದೂ, ನಿಮ್ಮನ್ನು ಭಿಕ್ಷವಂದನಾದಿಗಳಿಂದ ಸತ್ಕರಿಸುವದಕ್ಕೆ ಬದಲು ಜನರು ನಿಮ್ಮನ್ನು ಸಂಶಯಗ್ರಸ್ತವಾದ ದೃಷ್ಟಿಯಿಂದ ನೋಡುವದಕ್ಕೆ ಮೊದಲಿಟ್ಟಿರುವರೆಂದೂ, ನಿಮಗೆ ಕಾಲ ಕಾಲಕ್ಕೆ 'ಮಧುಕರಿ'ಯ ಅನ್ನವು ಕೂಡ ಸಿಕ್ಕುವದು ಕಷ್ಟವಾಗಿದೆ ಎಂದೂ ಇಟ್ಟುಕೊಳ್ಳಿರಿ. ಈ ಸಂನಿವೇಶದಲ್ಲಿ ನಿಮ್ಮ ಚಿತ್ತವೃತ್ತಿಯು ಹೇಗಿರುವದು? ಈಗಲೂ ನಿಮಗೆ ಪ್ರಯಾಣಾದಿಗಳಿಗೆ ಬೇಕಾದಷ್ಟು ಸ್ವಲ್ಪ ಹಣವನ್ನು ಹೇಗಾದರೂ ಸಂಪಾದಿಸಿಕೊಳ್ಳಬೇಕೆಂಬ ಹವಣಿಕೆಯುಂಟಾಗುವದಿಲ್ಲವಷ್ಟೆ? ಈಗಲೂ ನಿಮಗೆ ಪೂರ್ವಾಶ್ರಮದಲ್ಲಿ ಮನೆಯಲ್ಲಿ ಇರುತ್ತಿದ್ದ ಸೌಕರ್ಯಗಳ ನೆನಪು ಉಂಟಾಗುವದಿಲ್ಲವಷ್ಟೆ? ಈಗಲೂ ಅನವರತವಾಗಿ ಪರಮಾತ್ಮಚಿಂತನೆಗೂ ಪರಮಾತ್ಮವಿಚಾರಕ್ಕೂ ನಿಮ್ಮ ಮನಸ್ಸು ಸಮಾಧಾನದಿಂದ ಒಲಿಯುತ್ತಿರವದಷ್ಟೆ? ಹಾಗಾದರೆ ಯೋಚಿಸಿರಿ. ನೀವು ತುರೀಯಾ ಶ್ರಮಕ್ಕೆ ಹತ್ತಿರದಲ್ಲಿರುತ್ತೀರಿ. ಇಲ್ಲದಿದ್ದರೆ ಈಗ ನೀವು ಇರುವ ಆಶ್ರಮವೇ ನಿಮಗೆ ಉತ್ತಮಸ್ಥಾನವು.

ಪರಮಾತ್ಮವಿಚಾರ, ಪರಮಾತ್ಮಧ್ಯಾನ, ಸರ್ವತ್ರ ಪರಮಾತ್ಮಭಾವನೆ–ಇವೇ ಸಂನ್ಯಾಸಾಶ್ರಮದ ಕರ್ತವ್ಯಗಳು. ಈಶ್ವರನು ಜೀವಕಲೆಯಿಂದ ಎಲ್ಲರಲ್ಲಿಯೂ ಹೊಕ್ಕಿರುತ್ತಾನೆ. ಎಲ್ಲಾ ಪ್ರಾಣಿಗಳಲ್ಲಿಯೂ ಹೊಕ್ಕಿರುತ್ತಾನೆ–ಎಂಬ ಉದಾತ್ತಭಾವನೆಯು ಸಂನ್ಯಾಸಿಗೆ ಇರಬೇಕು. ಜನರಲ್ಲಾಗಲಿ ಪ್ರಾಣಿಗಳಲ್ಲಾಗಲಿ ಪಕ್ಷಪಾತದ ಕೃಪೆಯಾಗಲಿ ನೈಷ್ಠುರ್ಯವಾಗಲಿ ಹೃದಯದೊಳಗೆ ಎದ್ದುಕೊಳ್ಳಬಾರದು. ಇದೇ ಸಂನ್ಯಾಸಿಯ ಧರ್ಮವು. ಈ ಧರ್ಮವು ಯಾವನಿಗೆ ಮೆಚ್ಚಾಗುವದೋ ಅವನು ಪರಿವ್ರಾಜಕನಾಗುವದಕ್ಕೆ ಹಿಂಜರಿಯುವದಿಲ್ಲ; ಇದು ಯಾವನಿಗೆ ಸೊಗಸದೋ ಅವನು ಆಶ್ರಮಕ್ಕೆ ತಕ್ಕವನೂ ಆಗುವದಿಲ್ಲ.

# 50. ಧರ್ಮಶಾಸ್ತ್ರವೂ ಸಮಾಜಸ್ಥಿತಿಯೂ

## (ಜುಲೈ 1950)

*ತಮ್ಮ ಪತ್ರವು ಬಂದಿರುತ್ತದೆ. ನಾನು ಬರೆಯುತ್ತಿರುವ ಪತ್ರಗಳು ಚರ್ಚೆಗಾಗಿ ಬರೆಯುವದಿಲ್ಲವೆಂಬುದನ್ನು ತಾವು ದಯವಿಟ್ಟು ನೆನಪಿನಲ್ಲಿಡಬೇಕು. ನಡತೆಯಲ್ಲಿ ಯಾವ ಮಾರ್ಗವನ್ನು ಅನುಸರಿಸಿದರೆ ಒಳ್ಳೆಯದೆಂದು ನನ್ನಲ್ಲಿ ವಿಶ್ವಾಸವಿರುವವರು ಕೆಲವರು ಕೇಳುತ್ತಾರೆ. ಅವರ ಪ್ರಶ್ನೆಗಳಿಗೆ ಹೀಗೆ ಪತ್ರಿಕೆಯ ಮೂಲಕ ಉತ್ತರಕೊಡುವದರಿಂದ ಅದೇ ವಿಧವಾದ ತೊಡಕುಗಳಿಂದ ಕಷ್ಟಪಡುತ್ತಿರುವವರಿಗೆ ಪ್ರಯೋಜನವಾಗಬಹುದೆಂದು ನನ್ನ ಪತ್ರಗಳನ್ನು ಹೀಗೆ ಪ್ರಕಟಿಸುತ್ತಿದ್ದೇನೆ. ಆದ್ದರಿಂದ ''ಶಂಕರನ ಪತ್ರ'ಗಳನ್ನು ವಾದ ಭೂಮಿಯಾಗಿ ಮಾರ್ಪಡಿಸುವ ಪ್ರಯತ್ನವನ್ನು ಮಾಡಬಾರದೆಂದು ಓದುಗರೆಲ್ಲರನ್ನೂ ಈ ಮೂಲಕ ಬೇಡಿಕೊಳ್ಳುತ್ತೇನೆ.*

ಸಮಾಜದಲ್ಲಿ ಕೆಲವರಿಗೆ ಬರುವ ಅಡ್ಡಿ ಆತಂಕಗಳ ನಿವಾರಣೆಯನ್ನು ಈಗಿನ ಕಾಲಕ್ಕೆ ತಕ್ಕಂತೆ ಬಿಡಿಸುವ ಸಮಾಜಸುಧಾರಣೆಯ ದೃಷ್ಟಿಯೂ ಅತೀಂದ್ರಿಯವಾದ ಪುರುಷಾರ್ಥಕ್ಕೆ ಉಪಾಯವನ್ನು ಸೂಚಿಸುವ ಧರ್ಮಶಾಸ್ತ್ರಕಾರರ ದೃಷ್ಟಿಯೂ ಒಂದೇ ಎಂಬ ಭಾವನೆ ತಮ್ಮ ಪತ್ರದಲ್ಲಿದೆ. ಕೆಲವು ಜನ ಸುಧಾರಕರು ಪ್ರಕೃತಸ್ಥಿತಿಯಲ್ಲಿ ''ವಿಧವಾ ವಿವಾಹ''ವೇ ಮುಂತಾದವುಗಳನ್ನು ಪುಷ್ಟೀಕರಿಸಿ ಮಾತನಾಡಿದರೆ ಅಥವಾ ಆಚರಣೆಗೆ ತಂದರೆ ಸನಾತನಿಗಳು ''ಶಾಂತಂ ಪಾಪಂ'' ಎಂದು ಕಿವಿಮುಚ್ಚಿಕೊಳ್ಳುವದು ಧರ್ಮಾಭಿಮಾನಿಗಳಿಗೆ ಭಯಂಕರ ಕಳವಳವುಂಟಾಗಲಿಕ್ಕಿಲ್ಲವೆ?–ಎಂದು ಕೇಳಿರುತ್ತೀರಿ. ನಾನು ಆ ಸುಧಾರಣಾ ಕುಶಲರ ಅಥವಾ ಅವರ ವಿರೋಧಿಪಕ್ಷದ 'ಸನಾತನಿ'ಗಳ ತಂಡದಲ್ಲಿ ಒಬ್ಬನಾಗಿರುವವನಲ್ಲ. ''ವೈರಾಗ್ಯವು ವಿಧವೆಯರ ಮೇಲೆ ಒತ್ತಾಯದಿಂದ ಹೇರುವ ವಸ್ತುವೆ?''–ಎಂದು ಕೇಳಿರುತ್ತೀರಿ. ''ಐವತ್ತು ವರ್ಷದ ವಿಧುರರು ಹದಿನೆಂಟು ವರ್ಷದ ತರುಣಿಯನ್ನು ಲಗ್ನವಾಗಲು ಆಧಾರವಿದೆ; ಆದರೆ 18–25 ವರ್ಷದ ತರುಣಿಯಾದ ವಿಧವೆಗೆ ಜನ್ಮಾಂತರದವರೆಗೆ ಲಗ್ನದ ಧರ್ಮಾಧಾರವಿಲ್ಲ!'' ಎಂದು ಮುಂತಾಗಿ ಹಿಂದೂ ಸಮಾಜದ ಆಚಾರಗಳು ಕೆಲವನ್ನು ಹಳಿದಿರುತ್ತೀರಿ. 'ಹಿಂದೂಧರ್ಮ' ಎಂದರೆ ಸಮಾಜದ ಕೆಲವು ವ್ಯಕ್ತಿಗಳ ದೃಷ್ಟಿ ಎಂದು ನೀವು ತಿಳಿದಿದ್ದರೆ ಆ ವಿಷಯಕ್ಕೆ ಸಮಾಜಸುಧಾರಕರೂ ಸನಾತನಿಗಳೂ ಕುಸ್ತಿಯನ್ನಾಡಿ ಈ ಪ್ರಶ್ನೆಯನ್ನು ಬಿಡಿಸುವದೇ ಒಳ್ಳೆಯದು. ಅದಕ್ಕೆ ಚರ್ಚೆಯಿಂದ ಆಗಬೇಕಾದ ಪ್ರಯೋಜನವು ಯಾವದೂ ನನಗೆ ಕಾಣಿಸುತ್ತಿಲ್ಲ. ಪ್ರಕೃತ ಕಾಲದಲ್ಲಿ ಯಾವ ಚರ್ಚೆಯೂ ಬೇಕಿಲ್ಲ; ಏಕೆಂದರೆ ಎಲ್ಲಾ ಸಮಾಜದವರೂ ಇಂಥ ವಿಚಾರಗಳಲ್ಲಿ ತಮ್ಮ ತಮ್ಮ ಇಚ್ಛೆಗೆ ಅನುಗುಣವಾಗಿ

ನಡೆಯುತ್ತಲೇ ಇರುತ್ತಾರೆ; 'ಧರ್ಮಾನಪೇಕ್ಷ'ವಾದ ಈಗಿನ ಸರಕಾರವು ಅವರಿಗೆ ತಕ್ಕಂತೆ 'ಕೋಡು'ಗಳೆಂಬ ಶಾಸನಗಳನ್ನು ಆಚರಣೆಗೆ ತಂದು ಆ ನಡೆವಳಿಕೆಗೆ ಪುಷ್ಟಿಕೊಡುತ್ತಲೂ ಇರುತ್ತದೆ.

ಆದರೆ ಧರ್ಮಶಾಸ್ತ್ರದ ದೃಷ್ಟಿಯೇ ಬೇರೆ. ಮನುಷ್ಯನು ಹೇಗೆ ನಡೆದುಕೊಂಡರೆ ಇಹದಲ್ಲಿಯೂ ಪರದಲ್ಲಿಯೂ ಪುರುಷಾರ್ಥವನ್ನು ಪಡೆಯುವನು?–ಎಂಬುದಿಷ್ಟನ್ನೇ ಅದು ತಿಳಿಸುತ್ತದೆ. ಆ ಶಾಸ್ತ್ರವನ್ನು ಬೇಕಾದವರು ಅನುಸರಿಸಬಹುದು; ಬೇಡವಾದವರು ಉಲ್ಲಂಘಿಸಬಹುದು. ಅದಕ್ಕಾಗಿ ಧರ್ಮಶಾಸ್ತ್ರವನ್ನು ಬದಲಾವಣೆಮಾಡಬೇಕಾದ ಅವಶ್ಯಕತೆಯೂ ಇಲ್ಲ, ಅದನ್ನು ಬದಲಾಯಿಸುವದು ಶಕ್ಯವೂ ಇಲ್ಲ. ಲೌಕಿಕ ಶಾಸ್ತ್ರಗಳಲ್ಲೊಂದಾದ ಆಯುರ್ವೇದವು ಇಂಥಿಂಥ ಪಥ್ಯವನ್ನು ರೋಗಿಗಳು ಅನುಸರಿಸಬೇಕು ಎಂದು ವಿಧಾನ ಮಾಡಿರುತ್ತದೆಯಷ್ಟೆ. ಆದರೆ ನಾಲಗೆಯ ಚಾಪಲ್ಯಕ್ಕೆ ಒಳಗಾದ ರೋಗಿಗಳು ರಹಸ್ಯವಾಗಿ ಅಥವಾ ಎಲ್ಲರೂ ತಿಳಿಯುವಂತೆಯೇ ಆ ವಿಧಾನಗಳನ್ನು ಉಲ್ಲಂಘಿಸಿ ನಡೆಯುತ್ತಲೇ ಇರುತ್ತಾರೆ; ಅದಕ್ಕೆ ತಕ್ಕ ಫಲವನ್ನು ಅನುಭವಿಸುತ್ತಲೂ ಇರುತ್ತಾರೆ. ಆದರೆ ರೋಗಿಗಳ 'ಬಹುಮತ'ವನ್ನು ಕಂಡು ಅಥವಾ ಅವರ ಮನಸ್ಸಿನ ಒಲವಿಗೆ ಅನುಸಾರವಾಗಿ ವೈದ್ಯಶಾಸ್ತ್ರದ ನಿಯಮಗಳನ್ನು ಸಡಿಲ ಮಾಡದೆ ಇರುವವರು ಶಾಸ್ತ್ರಜ್ಞರಲ್ಲವೆಂದು ಹಳಿಯುವದಕ್ಕೆ ಆದೀತೇನು? ಇಲ್ಲ. ಹಿಂದೂ ಸಮಾಜದಲ್ಲಿ ಈಗ ಆಗುತ್ತಿರಬಹುದಾದ ಕೆಲವು ಅನಾಚಾರಗಳನ್ನು ನೀವು ಉದಾಹರಿಸಿ, ಧರ್ಮಪಾಲನೆಯವರು ಇದನ್ನೆಲ್ಲ ನೋಡಿ ಸುಮ್ಮನಿದ್ದರೆ ಅವರ ಕರ್ತವ್ಯವು ನೆರವೇರಿತೆ?–ಎಂದು ಕೇಳುತ್ತೀರಲ್ಲವೆ? ಆ ಪ್ರಶ್ನೆಗೆ ನನ್ನ ಉತ್ತರವು ಇಷ್ಟೇ; ವೈದ್ಯಶಾಸ್ತ್ರಜ್ಞರು ಜನರ ಹಿತಕ್ಕಾಗಿ ರೋಗದ ನಿದಾನ (ಮೂಲಕಾರಣ) ಚಿಕಿತ್ಸಾಪಥ್ಯಾದಿಗಳನ್ನು ಹೇಗೆ ರೋಗಿಗಳ ನಡತೆಯನ್ನು ಲಕ್ಷ್ಯದಲ್ಲಿಡದೆ ತಿಳಿಸುತ್ತಲೇ ಇರುವರೋ ಹಾಗೆಯೇ ಧರ್ಮಶಾಸ್ತ್ರಜ್ಞರೂ ಸಮಾಜದವರ ಆಚಾರವನ್ನು ಲೆಕ್ಕಕ್ಕೆ ತಾರದೆ ಶಾಸ್ತ್ರದ ತತ್ತ್ವವನ್ನು ತಿಳಿಸುತ್ತಲೇ ಹೋಗಬೇಕು. ಅದರಿಂದ ಶಾಸ್ತ್ರಕ್ಕೆ ಅಧಿಕಾರಿಗಳಾದ ಕೆಲವರಿಗಾದರೂ ಪ್ರಯೋಜನವಾಗುತ್ತದೆ. ಅತೀಂದ್ರಿಯಪುರುಷಾರ್ಥಕ್ಕೆ ಸಾಧನವನ್ನು ತಿಳಿಸುವದೇ ಶಾಸ್ತ್ರಕ್ಕೆ ಗುರಿಯೇ ಹೊರತು ನಮಗೆ ಪ್ರಿಯವಾದದ್ದನ್ನು ಹೇಳುವ ಅನುಕೂಲ ಸಿಂಧುವೇನೂ ಶಾಸ್ತ್ರವಲ್ಲ.

# 51. ಬೆಳಗ್ಗೆ ಮುಂಚಿತವಾಗಿ ಏಳುವದು

## (ಆಗಸ್ಟ್ 1950)

*ತಾವು ಕೇಳಿರುವ ಪ್ರಶ್ನೆಯು ತಮ್ಮ ಶರೀರಾರೋಗ್ಯಕ್ಕೆ ಸಂಬಂಧಪಟ್ಟದ್ದು. "ಬೆಳಗ್ಗೆ ಮುಂಚಿತವಾಗಿ ಹಾಸಿಗೆ ಬಿಟ್ಟೆದ್ದರೆ ನನ್ನ ಆರೋಗ್ಯವು ಕೆಡುತ್ತದೆ. ಆದ್ದರಿಂದ ನಾನು ಸೂರ್ಯೋದಯವಾದ ಮೇಲೆಯೇ ಎದ್ದು ಎಂಟೊಂಬತ್ತು ಘಂಟೆಗೆ ಸ್ನಾನವನ್ನು ಮಾಡಿ ಪೂಜಾದಿಗಳನ್ನು ಮಾಡುತ್ತೇನೆ. ಇದರಿಂದ ಶಾಸ್ತ್ರವನ್ನು ಅತಿಕ್ರಮಿಸಿದ ಪಾಪವು ನನಗೆ ಬರುತ್ತದೆಯೆ? ನನ್ನ ಆರೋಗ್ಯ ಸ್ಥಿತಿಯ ದೃಷ್ಟಿಯಿಂದ ಈಗ ನಾನು ಹೇಗೆ ತಾನೆ ಶಾಸ್ತ್ರವಿಧಿಯನ್ನು ಪಾಲಿಸಬಹುದು?" ಎಂದು ಕೇಳಿರುತ್ತೀರಿ.*

ಶರೀರದ ಆರೋಗ್ಯಸ್ಥಿತಿಯನ್ನು ಕೆಡಿಸಿಕೊಂಡು ಸಾಧನವನ್ನು ಮಾಡಬೇಕೆಂದೇನೂ ಶಾಸ್ತ್ರವು ಹೇಳಿರುವದಿಲ್ಲ. ಮುಖ್ಯಕಾಲದಲ್ಲಿ ಮಾಡುವದಕ್ಕೆ ಆಗದ ಆಹ್ನಿಕವನ್ನು ಹೊತ್ತುಮೀರಿ ಮಾಡಿದರೂ ಚಿಂತೆಯಿಲ್ಲ. ಆದರಿಂದ ಗೌಣಕಾಲವನ್ನು ಅನುಸರಿಸಿದ ಫಲವು ಬರುತ್ತದೆ ಎಂಬುದೇ ಶಾಸ್ತ್ರಕಾರರ ದೃಷ್ಟಿ. ಆದರೆ ಬೆಳಗಿನ ಜಾವದಲ್ಲಿ ಏಳುವ ಪದ್ಧತಿಯನ್ನು ನಮ್ಮ ಹಿರಿಯರು ಏತಕ್ಕೆ ಹೊಗಳಿರುತ್ತಾರೆ?–ಎಂಬುದನ್ನು ತಾವು ಸ್ವಲ್ಪ ಆಲೋಚಿಸುವದು ಮೇಲು.

ಪ್ರಕೃತಿಯಲ್ಲಿ ಎಲ್ಲಾ ಪ್ರಾಣಿಗಳೂ ರಾತ್ರೆಯಲ್ಲಿ ನಿದ್ರಾರೂಪವಾದ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತವೆ; ಬೆಳಗಾಗುತ್ತಲೂ ಎಚ್ಚರುತ್ತವೆ. ಸಾಯಂಕಾಲದ ಹೊತ್ತಿಗೆ ನಮಗೆಲ್ಲರಿಗೂ ಸ್ವಾಭಾವಿಕವಾಗಿ ವ್ಯವಹಾರ ನಿಮಿತ್ತದಿಂದ ಆಯಾಸವಾಗಿರುತ್ತದೆ. ಈ ಆಯಾಸವನ್ನು ಪರಿಹರಿಸುವದಕ್ಕೋಸ್ಕರ ಪರಮೇಶ್ವರನು ನಮ್ಮನ್ನು ತನ್ನ ಸ್ವರೂಪದಲ್ಲಿ ಸೇರಿಸಿಕೊಂಡಿರುತ್ತಾನೆ. ಆತನ ಅಮೃತಸ್ಪರ್ಶದಿಂದ ನಮ್ಮ ಶರೀರ, ಇಂದ್ರಿಯಗಳು, ಮನಸ್ಸು–ಇವುಗಳಲ್ಲಾಗಿದ್ದ ಶ್ರಮವನ್ನು ಕಳೆದುಕೊಂಡು ಶಕ್ತಿವರ್ಧಕವಾದ ಔಷಧಪಾನವನ್ನು ಮಾಡಿದ ರೋಗಿಯಂತೆ ಚೇತರಿಸಿಕೊಂಡು ಬೆಳಗ್ಗೆ ಉಲ್ಲಾಸದಿಂದ ಏಳುತ್ತೇವೆ. ಆಗ ಶರೀರವು ಹಗುರವಾಗುತ್ತದೆ, ಇಂದ್ರಿಯಗಳು ಕೆಲಸಕ್ಕೆ ಸಿದ್ಧವಾಗಿರುತ್ತವೆ, ಮನಸ್ಸು ಉತ್ಸಾಹಪೂರಿತವಾಗಿರುತ್ತದೆ.

ಆದರೆ ಬೆಳಗಿನ ಜಾವದಲ್ಲಿ ಮಲಗುವ ಅಭ್ಯಾಸವುಳ್ಳವರಿಗೆ ಈ ಅನುಕೂಲ್ಯವು ಯಾವದೊಂದೂ ದೊರಕುವದಿಲ್ಲ. ಬೆಳಗಿನ ಹೊತ್ತು ತಂಗಳು ನಿದ್ರೆಯನ್ನು ಮಾಡುವ ಹವ್ಯಾಸವಿರುವವರಿಗೆ ಕೆಲವು ಕನಸುಗಳು ತೋರಿಕೊಳ್ಳುವವು; ಇದರಿಂದ ಅವರ ಮನಸ್ಸಿಗೆ ವಿಶ್ರಾಂತಿಯಿರುವದಿಲ್ಲ; ಎಚ್ಚತ್ತಾಗ ಶರೀರದಲ್ಲಿ ಚಟುವಟಿಕೆಯಿರುವದಿಲ್ಲ,

ಇಂದ್ರಿಯಗಳೂ ಕೆಲಸಕ್ಕೆ ಸಜ್ಜಾಗಿರುವದಿಲ್ಲ. ಆದ್ದರಿಂದ ಹೊತ್ತಾಗಿ ಏಳುವವರು ಎಚ್ಚತ್ತ ಮೇಲೂ ಹಾಸಿಗೆಯ ಮೇಲೆ, ಅಥವಾ ಮತ್ತೊಂದು ಕಡೆಯಲ್ಲಿ ನಿದ್ರೆಯ ಜಡತೆಯನ್ನು ಕಳೆದುಕೊಳ್ಳುವದಕ್ಕಾಗಿ ಸ್ವಲ್ಪ ಹೊತ್ತು ಕೂತಿರುತ್ತಾರೆ. ಇದು ಪ್ರಕೃತಿವಿರುದ್ಧವೆಂಬುದನ್ನು ಹೇಳಬೇಕಾದದ್ದೇ ಇಲ್ಲ.

ಬ್ರಾಹ್ಮಮುಹೂರ್ತದಲ್ಲಿ ಎದ್ದವರ ಮನಸ್ಸು ಪ್ರಶಾಂತವಾಗಿರುತ್ತದೆ. ಆಗ ಮನಸ್ಸಿನಲ್ಲಿ ಮೂಡುವ ಅಭಿಪ್ರಾಯಗಳು ಬಹುಕಾಲ ನಿಲ್ಲುವವು. ವಿದ್ಯಾರ್ಥಿಗಳು ಮುಂಜಾವದಲ್ಲಿ ಗಟ್ಟಿ ಮಾಡಿದ ಪಾಠವು ಬಹು ಕಾಲ ನೆನಪಿನಲ್ಲಿರುತ್ತವೆ ಎಂಬುದನ್ನು ಎಲ್ಲಾ ಕಾಲದಲ್ಲಿಯೂ ಎಲ್ಲಾ ದೇಶದಲ್ಲಿಯೂ ಮನದಟ್ಟುಮಾಡಿಕೊಂಡಿರುತ್ತಾರೆ. ಈ ಹೊತ್ತಿನಲ್ಲಿ ಉತ್ತಮವಾದ ಸಂಕಲ್ಪವನ್ನು ಮಾಡುವದು, ಉತ್ತಮವಾದ ವಿಚಾರಗಳನ್ನು ಮನಸ್ಸಿಗೆ ತರುವದು–ಈ ಅಭ್ಯಾಸದಿಂದ ಮನುಷ್ಯನ ಸ್ವಭಾವವೇ ಬದಲಾಯಿಸಿ ಬಿಡುತ್ತದೆ. ಅವನ ರಾಜಸ ತಾಮಸ ಸ್ವಭಾವವು ಕ್ರಮಕ್ರಮವಾಗಿ ಬೇರ್ಪಟ್ಟು ಅವನು ಸಾತ್ತ್ವಿಕನಾಗುತ್ತಾನೆ. ಅವನಿಗೆ ಈ ಲೋಕದಲ್ಲಿ ಸುಖವು ಕಟ್ಟಿಟ್ಟ ಬುತ್ತಿಯಾಗುವದು; ಪರಲೋಕದ ಅಂಜಿಕೆಯೂ ಕಡಿಮೆಯಾಗುವದು.

ರಾತ್ರೆಯ ಆಹಾರವನ್ನು ಕಡಿಮೆ ಮಾಡುವದು, ದುರ್ವ್ಯಸನಗಳನ್ನು ಹತ್ತಿಸಿಕೊಳ್ಳದೆ ಇರುವದು, ಒಂಬತ್ತು ಅಥವಾ ಹತ್ತು ಘಂಟೆಯೊಳಗಾಗಿ ಮಲಗಿ ನಿದ್ರಿಸುವದು–ಇವನ್ನು ಮೊದಲು ಅಭ್ಯಾಸ ಮಾಡಿರಿ. ಬೆಳಗಿನ ಜಾವದಲ್ಲಿ ಸ್ವಾಭಾವಿಕವಾಗಿಯೇ ನಿಮಗೆ ಬೇಕಾದಷ್ಟು ನಿದ್ರೆಯಾದ ಒಡನೆ ಕಣ್ಣುಗಳು ತೆರೆದುಕೊಳ್ಳುವವು. ಆದರೆ ಆಗ ಕೂಡಲೆ ಹಾಸಿಗೆಯಿಂದ ಎದ್ದೇಳುವ ಅಭ್ಯಾಸವನ್ನು ಮಾಡಿರಿ. ಸ್ವಲ್ಪ ಪರಮೇಶ್ವರನ ಧ್ಯಾನ ಮಾಡಿದ ಬಳಿಕವೇ ನಿತ್ಯವ್ಯವಹಾರಕ್ಕೆ ಕೈ ಹಾಕುವೆನೆಂದು ಸಂಕಲ್ಪ ಮಾಡಿಕೊಳ್ಳಿರಿ. ನಿಮ್ಮ ಶರೀರಕ್ಕೆ ಆರೋಗ್ಯವೂ ಬರುವದು; ಮನಸ್ಸಿಗೆ ಸ್ವಾಸ್ಥ್ಯವೂ ದೊರಕುವದು.

## 52. ಹಳ್ಳಿಗಳ ಅಭಿವೃದ್ಧಿ

### (ಸಪ್ಟೆಂಬರ್ 1950)

ನಿಮ್ಮ ಪತ್ರವು ತಲುಪಿರುತ್ತದೆ. *"ಹಿಂದಿನ ಕಾಲದಲ್ಲಿ ನಮ್ಮ ಊರೂ ಸುತ್ತಮುತ್ತಲಿನ ಊರುಗಳೂ ಸೌಭಾಗ್ಯದಿಂದ ನಲಿಯುತ್ತಿದ್ದವು. ಈಗ ಅದೆಲ್ಲ ಕನಸಾಗಿದೆ. ಈಗಿನ ಸ್ಥಿತಿಯಲ್ಲಿ ನಾವು ಏನು ಮಾಡಿದರೆ ಹಳ್ಳಿಗಳು ಮೇಲಕ್ಕೆ ಎದ್ದುಕೊಂಡಾವು? ಯಾರು ಯಾರು ಏನೇನು ಉಪಾಯವನ್ನು ಮಾಡಿದರೂ ಅದೆಲ್ಲ ಒಣಗಿದ ಕಟ್ಟಿಗೆಯನ್ನು ನೆಟ್ಟು ನೀರೆರೆದಂತೆ ಆಗಿದೆಯಲ್ಲ!"* ಎಂದು ಬರೆದಿರುತ್ತೀರಿ.

ನಿಮ್ಮ ಮನದಲ್ಲಿ ಮೂಡಿರುವದೊಂದು ಕಲ್ಯಾಣಭಾವನೆ. ಇದನ್ನು ಚೆನ್ನಾಗಿ ಬೆಳೆಯಿಸಿಕೊಳ್ಳಬೇಕು; ಈ ವಿಚಾರವನ್ನು ನಿಮ್ಮ ಮಿತ್ರರೊಡನೆ ಮುಂದುವರಿಸಿರಿ. ಪರಮೇಶ್ವರನ ದಯೆಯಿಂದ ನಿಮ್ಮ ಅಭಿಲಾಷೆಯು ಸಫಲವಾಗಬೇಕಾಗಿದೆ. ನಾನು ಇಲ್ಲಿ ಕೊಟ್ಟಿರುವ ಕೆಲವು ಸೂಚನೆಗಳು ಎಷ್ಟರಮಟ್ಟಿಗೆ ಉಪಯೋಗಕ್ಕೆ ಬರುವವೋ ಪರೀಕ್ಷಿಸಿ ನೋಡಿರಿ.

ಹಿಂದಿನ ಕಾಲವನ್ನು ಈಗ ಮತ್ತೆ ಹಿಡಿದು ಎಳೆದುಕೊಳ್ಳುವದಕ್ಕೆ ಆಗಲಾರದು. ಆದರೆ ಹಿಂದಿನ ಹಳ್ಳಿಗಳ ದೃಷ್ಟಿಯನ್ನು ಅವಲಂಬಿಸಿ ಈಗಿನ ಕಾಲಕ್ಕೆ ತಕ್ಕಂತೆ ಕಾರ್ಯಾಚರಣೆಗೆ ಮೊದಲು ಮಾಡುವದು ಪ್ರಯೋಜನಕಾರಿಯಾದೀತೆಂದೇ ನನ್ನ ಅಭಿಪ್ರಾಯ. ಮೊಟ್ಟ ಮೊದಲು ಹಳ್ಳಿಗಳು ಹಳ್ಳಿಗಳಾಗಿಯೇ ಬೆಳೆಯಬೇಕೆಂಬುದನ್ನು ನಾವು ಮನದಂದುಕೊಳ್ಳಬೇಕು. ಹಳ್ಳಿಗಳು ಪಟ್ಟಣಗಳ ಪದ್ಧತಿಗಳನ್ನು ಅನುಸರಿಸುವದು ಎಂದಿಗೂ ಸರಿಯಾಗುವದಿಲ್ಲ. ಮಾವಿನಗಿಡದಲ್ಲಿ ಎಂದಿಗಾದರೂ ಕಿತ್ತಲೆಯ ಹಣ್ಣು ಬಿಟ್ಟೀತೆಂಬ ಆಶೆಯಿಲ್ಲವಷ್ಟೆ?

ನಮ್ಮ ಭರತಖಂಡದ ಅಭ್ಯುದಯವು–ಅದರಲ್ಲಿಯೂ ಹಳ್ಳಿಗಳ ಅಭ್ಯುದಯವು–ಧರ್ಮದ ತಳಹದಿಯ ಮೇಲೆ ನಿಲ್ಲಬೇಕು. ಧರ್ಮವೆಂದರೆ ಆಚಾರಭೇದಗಳ ಕಡೆಗೆ ಲಕ್ಷ್ಯವಿಟ್ಟು ಮಸೀದಿ, ದೇವಸ್ಥಾನ; ಬ್ರಾಹ್ಮಣ, ಅಬ್ರಾಹ್ಮಣ, ಶೈವ, ವೈಷ್ಣವ–ಮುಂತಾದವುಗಳ ವಿರೋಧವನ್ನು ಕಲ್ಪಿಸಿಕೊಂಡು ಹೊಡೆದಾಡುವದಲ್ಲ. ಸತ್ಯ, ಪ್ರೇಮ, ದಾನ, ಧರ್ಮ, ಪರೋಪಕಾರ, ಈಶ್ವರಭಕ್ತಿ ನಿಃಸ್ವಾರ್ಥವಾದ ಕರ್ತವ್ಯ ತತ್ಪರತೆ–ಇವುಗಳೇ ಧರ್ಮದ ಆಕಾರಗಳು. ಇವುಗಳನ್ನು ಯಾವ ಊರಿನ ಜನರು ಹೆಚ್ಚಾಗಿ ಅವಲಂಬಿಸುವರೋ ಅವರು ಅವಶ್ಯವಾಗಿ ಮುಂದಕ್ಕೆ ಬರುವರು.

ಈಗಿನ ಕಾಲದಲ್ಲಿ ರಾಜಕೀಯ ವೃತ್ತಾಂತಗಳಿಂದ ಜನರ ಮನಸ್ಸನ್ನು ಕಲಕುವ ಸ್ವಾರ್ಥಿ ಜನರು ಬಹಳವಾಗಿರುವರು. ಊರ ಜನರನ್ನು ಪಂಗಡಗಳಾಗಿ ಒಡೆಯುವದು, ಅವರಲ್ಲಿ ರಾಗದ್ವೇಷಗಳನ್ನು ಬೆಳೆಯಿಸಿ ಗ್ರಾಮದ ಅಭ್ಯುದಯಕ್ಕೆ ಕುಂದುತರುವ ಮತಭೇದಗಳನ್ನು ಕಲ್ಪಿಸುವದು, ಕಲ್ಪಿತ ಕಲಹಗಳನ್ನು ನೆಪಮಾಡಿಕೊಂಡು ಕೋರ್ಟು ಕಛೇರಿಗಳ ಬಾಗಿಲುಕಾಯುವಂತೆ ಜನರನ್ನು ಪ್ರೇರೇಪಿಸುವದು, ಲಾಯರುಗಳಿಗೂ ಗುಮಾಸ್ತರು ಮುಂತಾದ ಉದ್ಯೋಗಸ್ಥರಿಗೂ ಲಂಚವನ್ನು ತೋರಿಸಿ ಕೈಯಲ್ಲಿದ್ದ ಹಣವನ್ನೆಲ್ಲ ದುರ್ವಿನಿಯೋಗಮಾಡಿಸಿ ಹಳ್ಳಿಯ ಧನಸಂಪತ್ತನ್ನು ಕುಗ್ಗಿಸುವದು–ಇವೆಲ್ಲ ಸ್ವಾರ್ಥಿ ಜನರ ಕೈ ಚಳಕಗಳು. ಅವಕ್ಕೆ ಮರುಳಾಗದಂತೆ ಊರಿನವರು ಯಾವಾಗಲೂ ಎಚ್ಚರಿಕೆಯಿಂದ ಇರಬೇಕು.

ಊರಿನವರ ಊಟ ಉಪಚಾರಗಳಿಗೆ, ಬಟ್ಟೆಗೆ, ಆರೋಗ್ಯಕ್ಕೆ, ವಿದ್ಯೆಗೆ, ವ್ಯವಹಾರಗಳ ತೀರ್ಮಾನಕ್ಕೆ, ವಿನೋದಗಳಿಗೆ, ಧರ್ಮನೀತಿಗಳ ಬೆಳವಣಿಗೆಗೆ–ಎಲ್ಲಾ ವಿಷಯದಲ್ಲಿಯೂ ಹಳ್ಳಿಯವರು ಆದಷ್ಟು ತಮ್ಮ ಕಾಲಿನ ಮೇಲೆ ತಾವು ನಿಲ್ಲುವದಕ್ಕೆ ಪ್ರಯತ್ನಿಸಬೇಕು. ಅಥವಾ ನೆರೆಯ ಹಳ್ಳಿಯವರ ಸಹಾಯವನ್ನು ವಿನಿಮಯದಿಂದ ಕೋರಬೇಕು. ತಮ್ಮ ಊರಿನಲ್ಲಿ ವಿದ್ಯಾವಂತರಾಗಿರುವವರನ್ನು ಆದ ಮಟ್ಟಿಗೂ ತಮ್ಮ ತಮ್ಮ ಊರಿನಲ್ಲಿ ಉಳಿದುಕೊಳ್ಳುವದಕ್ಕೆ ಪ್ರೋತ್ಸಾಹಿಸಿ ಅವರ ತಿಳಿವಳಿಕೆಯಿಂದ ಲಾಭ ಪಡೆಯುವದು, ಊರಲ್ಲಿಯೇ ಬೆಳೆದ ಧಾನ್ಯಗಳನ್ನೂ ನಡೆಯುವ ಕೈಗಾರಿಕೆಗಳನ್ನೂ ಕೊಂಡು ಪ್ರೋತ್ಸಾಹಿಸುವದು, ಊರ ಪಂಚಾಯಿತಿಯಿಂದಲೇ ವ್ಯಾಜ್ಯಗಳನ್ನು ತೀರ್ಮಾನ ಮಾಡಿಕೊಳ್ಳುವದು, ಊರಿನ ಮೂಲಿಕೆಗಳನ್ನೇ ಅನುಭವವೈದ್ಯರ ಆಧಾರದಿಂದ ಚಿಕಿತ್ಸೆಗೆ ಉಪಯೋಗಿಸಿಕೊಳ್ಳುವದು, ವಿಶೇಷವಾದ ಖರ್ಚುವೆಚ್ಚಗಳಿಲ್ಲದ ಆಟಗಳನ್ನೂ ಗ್ರಂಥವಾಚನಗಳನ್ನೂ ಪುರಾಣಗಳನ್ನೂ ಧರ್ಮೋಪದೇಶಗಳನ್ನೂ ಊರವರಿಂದಲೇ ಏರ್ಪಡಿಸಿಕೊಳ್ಳುವದು–ಇಂಥ ಉಪಾಯಗಳಿಂದ ಗ್ರಾಮದ ಸ್ವಾತಂತ್ರ್ಯವನ್ನೂ ಸಂಪಾದಿಸಿಕೊಳ್ಳಬೇಕು.

ನಾನು ಇಲ್ಲಿ ಬರೆದಿರುವ ಸೂಚನೆಗಳನ್ನು ಆಚರಣೆಗೆ ತರುವದಕ್ಕೆ ನಿಮ್ಮೂರಿನಲ್ಲಿ ಇರುವ ಸೌಕರ್ಯಗಳನ್ನೂ ತಡೆಗಳನ್ನೂ ಬರೆದರೆ ಇನ್ನೊಮ್ಮೆ ನನ್ನ ಅಭಿಪ್ರಾಯವನ್ನು ವಿಸ್ತರಿಸಿ ತಿಳಿಸುವೆನು.

## 53. ಅಧ್ಯಾತ್ಮಸಾಧನದಿಂದಾಗುವ ಪ್ರಯೋಜನ

**(ಅಕ್ಟೋಬರ್ 1950)**

*ನಿಮ್ಮ ಪತ್ರವು ತಲುಪಿ ವಿಷಯವೆಲ್ಲ ಮನಸ್ಸಿಗೆ ಬಂತು. ಈಗ್ಗೆ ನಿಮಗೆ ಬಂದಿರುವ ಅಪಾರವಾದ ಕಷ್ಟವು ನಮ್ಮನ್ನು ಎದೆಗುಂದಿಸಿರುವದೇನೂ ಆಶ್ಚರ್ಯವಲ್ಲ. "ಚಿಕ್ಕಂದಿನಿಂದಲೂ ನಾಮಸ್ಮರಣೆ ಮಾಡುತ್ತಿದ್ದೆನು; ಹಿರಿಯರು ಹೇಳಿದ್ದ ಸೂರ್ಯನಮಸ್ಕಾರ, ಪಾರಾಯಣ–ಮುಂತಾದವುಗಳನ್ನೂ ಕ್ರಮವರಿತು ಮಾಡಿಕೊಂಡುಬಂದೆನು. ಆದರೆ ಅದಕ್ಕೆಲ್ಲ ಆದ ಫಲವೇನು? ಈಶ್ವರನು ತನ್ನನ್ನು ನಂಬಿದವರನ್ನು ಕಾಪಾಡುತ್ತಾನಂತೆ, ಇದು ನಿಜವೆ?–ಎಂಬ ಸಂಶಯವು ನನ್ನನ್ನು ಬಹಳವಾಗಿ ಬಾಧಿಸುತ್ತಿದೆ" ಎಂದು ಮುಂತಾಗಿ ಬರೆದಿರುತ್ತೀರಿ.*

ನಿಮ್ಮ ಪತ್ರವನ್ನು ಓದಿದ ಹಾಗೆಲ್ಲ ನನಗೆ ಹೆಚ್ಚಿನ ದುಃಖವುಂಟಾಯಿತು. ನಿಮಗೆ ಒದಗಿರುವ ಕಷ್ಟವನ್ನು ಕೇಳಿ ಯಾರಿಗಾದರೂ ದುಃಖವಾಗುವದೇ ಸರಿ. ಆದರೆ ನೀವು

ನಾಮಸ್ಮರಣೆಯೇ ಮುಂತಾದ ಸಾಧನಗಳನ್ನು ಹಳಿದು ಬರೆದಿರುವದನ್ನು ಕಂಡು ನನಗೆ ಅದಕ್ಕಿಂತಲೂ ಹೆಚ್ಚಿನ ದುಃಖವಾಯಿತು. 'ನಾನು ಇಂಥಿಂಥ ಸಾಧನವನ್ನು ಮಾಡಿದರೆ ದೇವರು ಇಂಥಿಂಥ ಫಲವನ್ನು ಕೊಡಬೇಕು' ಎಂದು ನಿರೀಕ್ಷಿಸುವವರು ಬಹಳವಿರುತ್ತಾರೆ, ಅದೇನೂ ತಪ್ಪಲ್ಲ. ವಿಶ್ವಾಸವಿಟ್ಟು ಸಾಧನವನ್ನು ಮಾಡಿದವರಿಗೆ ಕೆಲವು ಫಲಗಳು ಕಾಣಿಸಿಕೊಳ್ಳುವದು ಸುಳ್ಳಲ್ಲ. ಆದರೆ ಸಾಧನವೆಂಬುದೊಂದು ವ್ಯಾಪಾರವಲ್ಲ; ಇಂತಿಷ್ಟು ಹಣಕೊಟ್ಟರೆ ಇಂತಿಷ್ಟು ಸೇರು ಅಕ್ಕಿ ದೊರೆಯುತ್ತದೆ ಎಂಬ ನಿಯಮದಂತೆ ಅಲ್ಲ, ಈ ಸಾಧನಫಲಗಳ ಸಂಬಂಧ. ಲೋಕದಲ್ಲಿಕೂಡ ಕಷ್ಟಕ್ಕನುಗುಣವಾಗಿ ಹಣವಾಗಲಿ ಹಣಕ್ಕೆ ತಕ್ಕಂತೆ ಭೋಗ್ಯವಸ್ತುಗಳಾಗಲಿ ಸಿಕ್ಕದೆ ಇರುವ ಈ ಕಾಲದಲ್ಲಿ ಇಂಥ ಸಾಧನಕ್ಕೆ ಇಂತಿಷ್ಟು ಕಷ್ಟ ಪರಿಹಾರ, ಇಂತಿಷ್ಟು ಭೋಗ್ಯ ವಸ್ತುಗಳ ಲಾಭ, ಇಂಥ ವಿದ್ಯಾದಿಗಳ ಸಂಪಾದನೆ–ಎಂದು ಲೆಕ್ಕ ಹಾಕುವದು ಎಷ್ಟರ ಮಟ್ಟಿಗೆ ಸರಿಯಾದೀತು? ನೀವೇ ಯೋಚಿಸಿರಿ.

ಇದಿರಲಿ. ಅಧ್ಯಾತ್ಮಸಾಧನದಲ್ಲಿ ಒಂದು ಗುಟ್ಟಿದೆ. ಸಾಧನದಿಂದ ನಾವು ಈಶ್ವರನ ಸಂಕಲ್ಪವನ್ನು ಬದಲಾಯಿಸುವೆವೆಂದಾಗಲಿ, ಈಶ್ವರನ ನಿಯಮವು ಮಾರ್ಪಡುವ ದೆಂದಾಗಲಿ ಯೋಚಿಸುವದು ದೊಡ್ಡ ತಪ್ಪು. ಒಬ್ಬ ಕ್ರಿಸ್ತಿಯನ್ ಆಸ್ತಿಕನು ಬೈಬಲಿನಲ್ಲಿರುವ ಒಂದು ವಾಕ್ಯವನ್ನು ಓದಿದ್ದನು. ಶ್ರದ್ಧೆಯೊಂದಿದ್ದರೆ ಬೆಟ್ಟವಾದರೂ ಅಲುಗಾಡುವದು– ಎಂಬ ಆ ವಾಕ್ಯದ ಅರ್ಥವನ್ನು ಅರಿಯದೆ ಅವನು ಒಂದು ಬೆಟ್ಟದ ಮುಂದೆ ನಿಂತು "ಎಲಾ, ಇದೇನು, ಬೈಬಲು ವಾಕ್ಯವು ಸುಳ್ಳಾಯಿತಲ್ಲ; ಅಥವಾ ನನಗೇ ಶ್ರದ್ಧೆಯಿಲ್ಲವೊ? ಇದೇಕೆ ಬೆಟ್ಟವು ಅಲುಗಾಡಲಿಲ್ಲ?" ಎಂದುಕೊಂಡನಂತೆ. ಇದು ಎಷ್ಟರಮಟ್ಟಿಗೆ ಸರಿಯಾದ ತಿಳಿವಳಿಕೆ ಎಂಬುದನ್ನು ಮತ್ತೆ ಹೇಳಬೇಕಿಲ್ಲವಷ್ಟೆ? ಈಶ್ವರನಲ್ಲಿ ಭಕ್ತಿ ಭಗವತ್ಕರ್ಮದಲ್ಲಿ ಪ್ರೇಮ–ಇವುಗಳಿಂದ ಹೊರಗಿನ ಪ್ರಕೃತಿಯೇನೂ ಮಾರ್ಪಡುವ ದಿಲ್ಲ. ನಮ್ಮ ಅಂತಃಕರಣದಲ್ಲಿ ಹೊಸ ಸಂಸ್ಕಾರವುಂಟಾಗುತ್ತದೆ; ಅದರಿಂದ ನಮ್ಮ ವ್ಯವಹಾರವೂ ಮಾರ್ಪಡುತ್ತದೆ. ಆಗ ನಮ್ಮ ಸುತ್ತುವಳೆಯವೂ ಉತ್ತಮವಾಗಿ ನೇರ್ಪಡುವದು ಸ್ವಾಭಾವಿಕವೇ ಆಗಿದೆ.

ಒಬ್ಬ ಹುಡುಗನು ಒಂದು ಗಡಿಗೆಯೊಳಗಿಂದ ಬಾದಾಮಿಕಾಯಿಗಳನ್ನು ಹಿಡಿಹಿಡಿಯಾಗಿ ತೆಗೆದುಕೊಳ್ಳಬೇಕೆಂದು ಕೈ ಹಾಕಿದನು. ಆದರೆ ಹಿಡಿಯು ಗಡಿಗೆಯ ಬಾಯಿಗಿಂತ ದಪ್ಪವಾಗಿದ್ದದ್ದರಿಂದ ಕೈ ಈಚೆಗೆ ಬಾರದೆ ಹೋಯಿತು. ಆಗ ಅವನು ಒಂದೆರಡು ಕಾಯಿಗಳನ್ನು ಬಿಟ್ಟಿದ್ದರೆ ಸುಲಭವಾಗಿ ಬಾದಾಮಿ ಕಾಯಿಗಳು ದೊರೆಯುತ್ತಿದ್ದವು. ಅಲ್ಲವೆ? ಲೋಕದಲ್ಲಿ ನಮಗೆ ಆಶೆ ಬಹಳ. ನಾವು ಒಂದೇ ಸಲಕ್ಕೆ

ದೊಡ್ಡ ಸ್ಥಿತಿಗೆ ಏರಬೇಕು; ಸಮಾಜದಲ್ಲಿ ಸ್ಥಾನಮಾನಗಳು, ಆರೋಗ್ಯ, ಐಶ್ವರ್ಯ, ಆಯುಸ್ಸು, ಸಂತತಿ, ವಿದ್ಯಾಬುದ್ಧಿಗಳು–ಎಲ್ಲವೂ ಒಂದೇ ಸಮನೆ ಏರುತ್ತಿರಬೇಕೆಂದು ನಮಗೆ ಹಿರಿಯಾಸೆಯಿರುತ್ತದೆ. ಆದರೆ ಅದಕ್ಕೆ ತಕ್ಕಷ್ಟು ಸ್ವಾರ್ಥತ್ಯಾಗ, ಉದ್ಯೋಗಶೀಲತೆ, ಕಷ್ಟಸಹಿಷ್ಣುತೆ, ತಾಳ್ಮೆ ಸ್ಥಿರಪ್ರಯತ್ನ–ಮುಂತಾದವುಗಳನ್ನು ಕೈಕೊಳ್ಳುವದಕ್ಕೆ ನಾವು ಸಿದ್ಧರಾಗಿಲ್ಲ. ಇದಕ್ಕೆ ಬದಲು ಯಾವಾಗಲೋ ಒಂದು ಘಂಟೆ ದೇವರನಾಮವನ್ನೂ ಸ್ಮರಣೆ ಮಾಡಿ ಮಾಲೆಯನ್ನು ತಿರುಹುವದರಿಂದ, ಅಥವಾ ಒಂದು ಗ್ರಂಥದಲ್ಲಿ ಒಂದಿಷ್ಟು ಭಾಗ ಪಾರಾಯಣ ಮಾಡಿದೆವೆಂಬ ಹೆಸರಿನಿಂದ ಓದುವದರಿಂದ, ನಮಗೆ ಇದೆಲ್ಲ ದೊರೆಯಬೇಕು; ಇದೆಂಥ ಹಿಡಿಯದಾಸೆ?

ಸಾಧನೆಯಿಂದ ಪ್ರಯೋಜನವಿಲ್ಲವೆಂದು ಎಂದಿಗೂ ಹೇಳುವದಕ್ಕೆ ಬರುವದಿಲ್ಲ. ಈಶ್ವರನು ತನ್ನನ್ನು ನಂಬಿದವರನ್ನು ಎಂದಿಗೂ ಕೆಡಿಸುವದಿಲ್ಲ; ಅವಶ್ಯವಾಗಿ ಕಾಪಾಡುತ್ತಾನೆ ಎಂಬುದು ಖಂಡಿತ. ಆದರೆ ನಾವು ಸತತವಾಗಿ ಆತನನ್ನು ನಂಬಬೇಕು. ಆತನನ್ನೇ ನಂಬಿ ಸಾಧನಮಾಡಬೇಕು. ಆತನ ಪ್ರೇರಣೆಯಿಂದ ವ್ಯವಹಾರದಲ್ಲಿ ಯುಕ್ತವಾದ ಬಗೆಯಿಂದ ಪ್ರಯತ್ನವನ್ನು ಮಾಡಿದರೆ ಅದು ಅವಶ್ಯವಾಗಿ ಸಫಲವಾಗುವದು. ಮನಸ್ಸಿಗೆ ಶಾಂತಿ ಸುಖಗಳು ದೊರೆಯುವವು. ಆದ್ದರಿಂದ ನೀವು ಸಾಧನವು ವ್ಯರ್ಥವಾಯಿತೆಂದು ಎಂದಿಗೂ ಬಗೆಯಬೇಡಿ. ಈಶ್ವರನಲ್ಲಿ ಶ್ರದ್ಧೆಯಿಟ್ಟು ಕರ್ತವ್ಯ ಕರ್ಮವನ್ನು ಮಾಡುತ್ತಾ ನಡೆಯಿರಿ.

## 54. ಉಪನ್ಯಾಸಗಳು, ಉಪದೇಶಗಳು

### (ನವಂಬರ್ 1950)

*ನಿಮ್ಮ ಊರಿನಲ್ಲಿ ಒಂದು ಆಧ್ಯಾತ್ಮಿಕವಿಚಾರಸಂಘವನ್ನು ಏರ್ಪಡಿಸಬೇಕೆಂಬ ನಿಮ್ಮ ಕುತೂಹಲವು ಸ್ತುತ್ಯವಾದದ್ದು. ಆಗಾಗ್ಗೆ ವಿದ್ವಾಂಸರಿಂದ ಉಪನ್ಯಾಸವನ್ನು ಮಾಡಿಸುತ್ತೇನೆ, ನಾನೂ ಕೆಲವು ಉಪನ್ಯಾಸವನ್ನು ಮಾಡಿದೇನೆ–ಎಂದು ಬರೆದಿರುತ್ತೀರಿ. ಇದೂ ಮೆಚ್ಚತಕ್ಕದ್ದೇ ಸರಿ. ಈಶ್ವರನು ನಿಮ್ಮ ಸಂಘದ ಬೆಳವಣಿಗೆಗೆ ಪ್ರೋತ್ಸಾಹವನ್ನು ಕೊಡಲಿ!*

ಆದರೆ ಒಂದು ವಿಷಯದಲ್ಲಿ ಎಚ್ಚರಿಕೆ ತೆಗೆದುಕೊಳ್ಳಬೇಕು. ಈಗಿನ ಕಾಲಕ್ಕೆ ಉಪನ್ಯಾಸಗಳ ಪ್ರಚಾರವು ಬಹಳವಾಗಿದೆ. ಪ್ರತಿಯೊಂದು ಸಂಘದಲ್ಲಿಯೂ ವಾರ್ಷಿಕೋತ್ಸವ, ರಜತಮಹೋತ್ಸವ–ಮುಂತಾದ ಹೆಸರುಗಳಿಂದ ಉಪನ್ಯಾಸಕರುಗಳ ಭಾಷಣಮಾಲಿಕೆಯನ್ನು ಮಾಡಿಸುವ ಪದ್ಧತಿಯು ಎಲ್ಲೆಲ್ಲಿಯೂ ಹಬ್ಬುತ್ತಿದೆ. ಸಂಘಗಳು

ಇನ್ನೂ ಪ್ರಾರಂಭವಾಗುವದರೊಳಗೇ ಅವುಗಳಿಗೆ ಅಚ್ಚಿನ ಪತ್ರಿಕಾಶೀರ್ಷಿಕೆಗಳಿಂದ (Letter Head) ಕಾಗದಗಳು, ರಬ್ಬರು ಸ್ಟಾಂಪುಗಳು, ವರದಿಗಳು—ಇವೆಲ್ಲ ಸಿದ್ಧವಾಗುತ್ತವೆ. ವರ್ತಮಾನ ಪತ್ರಿಕೆಗಳಲ್ಲಿ ಆಗಾಗ ಸಂಘದ ಮೆಂಬರುಗಳ ಹೆಸರುಗಳೂ ಭಾವಚಿತ್ರಗಳೂ ಪ್ರಕಟವಾಗುತ್ತವೆ. ಇವು ವ್ಯಾಪಾರದ ಸಂಘಗಳಿಗೂ ರಾಜಕೀಯ ಸಾಮಾಜಿಕ ಸುಧಾರಣೆಯ ಸಂಘಗಳಿಗೂ ಪ್ರಯೋಜನಕರವಾಗಿರಬಹುದು. ಆದರೆ ಅಧ್ಯಾತ್ಮವಿಚಾರಸಂಘಗಳಿಗೆ ಬಹಳ ಹಾನಿಕರವಾಗಿರುತ್ತವೆ. ಏಕೆಂದರೆ ಸಾಧಕರು ಪ್ರಾರಂಭದಲ್ಲಿಯೇ ತಮ್ಮ ವಿಚಾರಕ್ರಮವನ್ನು ತಾವೇ ಮೆಚ್ಚಿ, ಬಡಾಯಿಕೊಚ್ಚಿಕೊಳ್ಳುವ ದಾಂಭಿಕರಾಗುತ್ತಾರೆ; ಅಧ್ಯಾತ್ಮಮಾರ್ಗದಿಂದ ಚ್ಯುತರಾಗುತ್ತಾರೆ.

ಅಧ್ಯಾತ್ಮ ವಿಚಾರವು ನಮ್ಮ ನಮ್ಮ ಅಂತರಂಗಕ್ಕೆ ಸೇರಿದ್ದು. ಈಶ್ವರನಿಗೂ ನಮ್ಮ ಅಂತಃಕರಣಕ್ಕೂ ಇರುವ ಸಂಬಂಧವನ್ನು ಎಷ್ಟು ರಹಸ್ಯವಾಗಿಟ್ಟುಕೊಂಡರೆ ಅಷ್ಟು ಮೇಲು. ನಮ್ಮಂತೆಯೇ ಸಾಧನ ಮಾರ್ಗದಲ್ಲಿರುವ ಅಣ್ಣತಮ್ಮಂದಿರುಗಳನ್ನು ಜೊತೆಗೂಡಿ ತತ್ತ್ವವನ್ನು ವಿಚಾರಮಾಡುವದು ತಪ್ಪಲ್ಲ; ಅದರಿಂದ ಪರಸ್ಪರ ಪ್ರೋತ್ಸಾಹವಾಗಿ ಸಾಧನೆಗೆ ಸಹಾಯವೂ ದೊರೆಯಬಹುದು. ಆದರೆ ನಾವು ಇನ್ನೂ ವಿಷಯವನ್ನು ತಿಳಿಯುವ ಮುಂಚೆಯೇ, ಭಗವಂತನ ಪ್ರಾಪ್ತಿಯು ನಮಗೆ ಆಗುವ ಮುಂಚೆಯೇ, ಆಗಲೆ ನಮಗೆ ಎಲ್ಲವೂ ತಿಳಿದಂತೆ ನಟಿಸುವದು ಅಜ್ಞಾನದ ಪ್ರದರ್ಶನವಲ್ಲದೆ ಮತ್ತೇನು? ನಮಗೆ ವಿಷಯವು ತಿಳಿಯದೆ ಇರುವಾಗ, ಸಾಧನವು ಅಳವಡದಿರುವಾಗ, ಧ್ಯಾನಯೋಗ, ವೈರಾಗ್ಯ, ಜೀವನ್ಮುಕ್ತಿ—ಮುಂತಾದ ದೊಡ್ಡದೊಡ್ಡ ವಿಷಯಗಳನ್ನು ಕುರಿತು ಉಪನ್ಯಾಸ ಮಾಡುವದು ಆ ವಿಷಯಗಳನ್ನು ಹಾಸ್ಯಮಾಡಿದಂತೆ ಆಗುವದಿಲ್ಲವೆ? ನಮಗೆ ಏನೂ ತಿಳಿಯದಿದ್ದರೂ ಮಿಕ್ಕವರಿಗೆ ಉಪದೇಶವನ್ನು ಮಾಡುವದಕ್ಕೆ ಹೊರಡುವದಂತೂ ಆತ್ಮದ್ರೋಹ, ಗುರುದ್ರೋಹ, ದೈವದ್ರೋಹ—ಎಲ್ಲವೂ ಆಗುವದಿಲ್ಲವೆ? ಇದನ್ನು ಚೆನ್ನಾಗಿ ಆಲೋಚಿಸಿರಿ.

ನಿಮ್ಮ ಸಂಘದಲ್ಲಿ ಯಾರಾದರೂ ತತ್ತ್ವವನ್ನು ಕಂಡುಕೊಂಡಿರುವ ಮಹಾತ್ಮರ ಉಪದೇಶವು ಸಿಕ್ಕಿದರೆ ಅವಶ್ಯವಾಗಿ ಕೇಳಬೇಕು. ಅವರ ಉಪದೇಶದಂತೆ ನಡೆಯಬೇಕು; ನಡೆಯುವದಕ್ಕೆ ಏನಾದರೂ ಅಡ್ಡಿಯಾದರೆ ಅದನ್ನು ಅವರಿಗೆ ತಿಳಿಯಪಡಿಸಿ ಸರಿಯಾದ ಪರಿಹಾರವನ್ನು ತಿಳಿದುಕೊಳ್ಳಬೇಕು. ನಿಮ್ಮ ನಿಮ್ಮ ಅನುಭವಗಳನ್ನು ರಹಸ್ಯವಾಗಿ ವಿನಿಮಯ ಮಾಡಿಕೊಂಡು ಸಾಧನಕ್ಕೆ ಒಬ್ಬರೊಬ್ಬರ ಅನುಭವವನ್ನು ಉಪಯೋಗಿಸಬೇಕು. ಇದೆಲ್ಲವೂ ನಿಜವಾದ ಅಧ್ಯಾತ್ಮ ಸಂಘದ ಗುರುತುಗಳು.

ಯಾವ ಜ್ಞಾನಿಗಳೂ ನಿಮಗೆ ಸಿಕ್ಕದೆ ಇದ್ದರೆ ಭಗವದ್ಗೀತೆ, ಭಾಗವತ, ಅಧ್ಯಾತ್ಮರಾಮಾಯಣ–ಇಂಥ ಪುಸ್ತಕಗಳನ್ನು ಭಕ್ತಿಶ್ರದ್ಧೆಗಳಿಂದ ಓದಬೇಕು, ಅವುಗಳ ಅರ್ಥವನ್ನು ತಿಳಿದುಕೊಳ್ಳುವದಕ್ಕೂ ಅಲ್ಲಿರುವ ಉಪದೇಶವನ್ನು ಆಚರಣೆಗೆ ತರುವದಕ್ಕೂ ಅನುಗ್ರಹಿಸೆಂದು ಭಗವಂತನಲ್ಲಿ ಮೊರೆಯಿಡಬೇಕು. ಪ್ರಾಸಾದಿಕವಾದ ಅನುಭವಿಗಳು ಬರೆದಿರುವ ಗ್ರಂಥಗಳು ಸಾಧುಗಳ ಉಪದೇಶದ ಸ್ಥಾನದಲ್ಲಿರುವವು.

ಆದರೆ ಎಂದಿಗೂ ಸಂಘದ ರಿಪೋರ್ಟುಗಳನ್ನು ಪ್ರಚಾರ ಮಾಡುವ ಉದ್ದೇಶವನ್ನು ಮುಖ್ಯವೆಂದು ಎಣಿಸಬೇಡಿರಿ. ನಿಮಗಿಂತ ಹೆಚ್ಚಿನ ತಿಳಿವಳಿಕೆಯವರೆಂದೂ ವಿರಕ್ತರೆಂದೂ ಜ್ಞಾನಿಗಳೆಂದೂ ನಿಮಗೆ ನಿಶ್ಚಿತವಾಗಿ ಗೊತ್ತಿರುವವರಲ್ಲಿ ಮಾತ್ರ ನಿಮ್ಮ ವಿಷಯವನ್ನು ತಿಳಿಸಿ ಗುಣದೋಷಗಳನ್ನು ತಿಳಿಸಿಕೊಡುವಂತೆ ಕೇಳಿಕೊಳ್ಳಿರಿ.

ಈಗಿನ ಕಾಲದಲ್ಲಿ ಕಾಮಕ್ರೋಧಾದಿಗಳು ಜನರಿಗೆ ಸ್ವಭಾವದಿಂದ ಹೆಚ್ಚುತ್ತಿವೆ. ದಂಭ, ದರ್ಪ, ಅಭಿಮಾನ–ಇವುಗಳು ಯಾವ ಉಪದೇಶವೂ ಇಲ್ಲದಿದ್ದರೂ ತಾವಾಗಿಯೇ ಬಂದು ನಮ್ಮಲ್ಲಿ ಮನೆ ಮಾಡಿಕೊಳ್ಳುತ್ತವೆ. ಅವುಗಳನ್ನು ತಳ್ಳುವದಕ್ಕೆ ಭಗವಂತನ ನಾಮಸ್ಮರಣೆ, ಅರ್ಚನೆ, ಬಲ್ಲವರ ಸೇವೆ, ಅವರ ಉಪದೇಶಶ್ರವಣ–ಇವೇ ಉಪಾಯಗಳೆಂದು ನನ್ನ ಅಭಿಪ್ರಾಯ.

## 55. ಹುಡುಗರು ಗೀತೆಯನ್ನು ಹೇಗೆ ಉಪಯೋಗಿಸಬೇಕು?

**(ಡಿಸೆಂಬರ್ 1950)**

*ನಿಮ್ಮ ಪತ್ರವು ತಲುಪಿದೆ. "ಪ್ರತಿಯೊಂದು ವರ್ಷದಲ್ಲಿಯೂ ಗೀತಾ ಜಯಂತಿಯನ್ನು ಅಲ್ಲಲ್ಲಿ ಮಾಡಿಸುತ್ತಾ ಇರುತ್ತಾರೆ. ನಮ್ಮ ಸ್ಕೂಲಿನಲ್ಲಿಯೂ ಈ ಉತ್ಸವವು ನೆರವೇರುತ್ತದೆ. ಇದರಲ್ಲಿ ಹಿರಿಯವರೇ ಬಹಳಮಟ್ಟಿಗೆ ಭಾಗವನ್ನು ವಹಿಸುತ್ತಾರೆ. ಅಲ್ಲಾಗುವ ಉಪನ್ಯಾಸಗಳು ನಮಗೆ ಉತ್ಸಾಹಜನಕವಾಗಿರುತ್ತವೆ, ನಿಜ. ಆದರೆ ನಮ್ಮಂಥ ಹುಡುಗರು ಏನು ಮಾಡಬೇಕೆಂಬುದು ನನಗೆ ಇನ್ನೂ ತಿಳಿದಿಲ್ಲ, ಗೀತೆಯನ್ನು ನಾವು ಹೇಗೆ ಉಪಯೋಗಿಸಬೇಕೆಂಬ ಬಗ್ಗೆ ದಯವಿಟ್ಟು ಕೆಲವು ಸೂಚನೆಗಳನ್ನು ಅಪ್ಪಣೆಕೊಡಬೇಕು" ಎಂದು ಬರೆದಿರುತ್ತೀರಿ. ಈ ಪ್ರಶ್ನೆಯು ಬಹಳ ಮುಖ್ಯವಾದದ್ದು. ಏಕೆಂದರೆ ಸ್ಕೂಲಿನಲ್ಲಾಗುವ ಉತ್ಸವಗಳು ಸ್ಕೂಲಿನ ವಿದ್ಯಾರ್ಥಿಗಳಿಗೆ ಪ್ರಧಾನವಾಗಿ ಪ್ರಯೋಜನಕರವಾಗಿರತಕ್ಕದ್ದು ಯುಕ್ತ, ನನಗೆ ತಿಳಿದ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸುತ್ತೇನೆ. ಇದರ ಉಪಯೋಗವನ್ನು ನೀವು ಮಾಡಿಕೊಳ್ಳಬೇಕೆಂದು ಬೇಡುತ್ತೇನೆ.*

ಗೀತೆಯಲ್ಲಿ ಬಹಳ ಮೇಲುಮಟ್ಟದ ವಿಚಾರಗಳಿವೆ. ಅವೆಲ್ಲ ನಿಮಗೆ ತಿಳಿಯುವದು ಕಷ್ಟ. ಆದರೆ ಒಂದೆರಡು ವಾಕ್ಯಗಳನ್ನು ನೀವೂ ಈಗಲೇ ಮನನ ಮಾಡಿಕೊಳ್ಳಬಹುದು; ಮಾಡಿಕೊಂಡರೆ ನಿಮಗೆ ಒಳ್ಳೆಯದೂ ಆಗುತ್ತದೆ. ಉದಾಹರಣೆಗೆ ಗೀತಾಜಯಂತಿಯ ದಿನ ಅರ್ಜುನನು ಮಾಡಿರುವ ಶ್ರೀ ಕೃಷ್ಣ ಭಗವಂತನ ಸ್ತೋತ್ರದಲ್ಲಿ ಈ ಶ್ಲೋಕವನ್ನು ನಿಧಾನವಾಗಿ ಉಚ್ಚಸ್ವರದಿಂದ ರಾಗವಾಗಿ ಹಾಡಿರಿ; ಹಾಡುತ್ತಿರುವಾಗ ಈ ಶ್ಲೋಕಗಳ ಭಾವಾರ್ಥವನ್ನೂ ಮನಸ್ಸಿಗೆ ತಂದುಕೊಳ್ಳಿರಿ.

**ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ**
**ಜಗತ್ಪ್ರಹೃಷ್ಯತ್ಯನುರಜ್ಯತೇ ಚ ।**

**ರಕ್ಷಾಂಸಿ ಭೀತಾನ ದಿಶೋ ದ್ರವನ್ತಿ**
**ಸರ್ವೇ ನಮಸ್ಯನ್ತಿ ಚ ಸಿದ್ಧಸಙ್ಘಾಃ ॥**

**ಭಾವಾರ್ಥಃ–** "ಭಗವಂತನೆ, ನಿನ್ನನ್ನು ಕೀರ್ತನೆ ಮಾಡಿದರೆ ಜಗತ್ತಿನ ಜನರು ಅತ್ಯಂತವಾಗಿ ಹರ್ಷಗೊಳ್ಳುವರು, ಅನುರಾಗದಿಂದಲೂ ಕೂಡಿಕೊಳ್ಳುವರು. ರಾಕ್ಷಸರು ಭಯದಿಂದ ದಿಕ್ಕು ಪಾಲಾಗಿ ಓಡುವರು. ಸಿದ್ಧಸಂಘಗಳೆಲ್ಲವೂ ನಮಸ್ಕರಿಸುವರು.

ಈ ಶ್ಲೋಕದ ಅಭಿಪ್ರಾಯವೇನೆಂದರೆ ಭಗವಂತನ ಗುಣವನ್ನು ಗಾನ ಮಾಡಿದರೆ, ಆತನ ನಾಮವನ್ನು ಕೀರ್ತನೆ ಮಾಡಿದರೆ, ನಮಗೆ ಹೆಚ್ಚಿನ ಆನಂದವುಂಟಾಗುತ್ತದೆ. ಏಕೆಂದರೆ ಆ ಭಗವಂತನು ನಮ್ಮೆಲ್ಲರ ಆತ್ಮನಾಗಿರುತ್ತಾನೆ. ಭಗವಂತನಲ್ಲಿ ನಮಗೆ ಅನುರಾಗವೂ ಇದರಿಂದ ಉಂಟಾಗುತ್ತದೆ. ಆತನು ನಮ್ಮೆಲ್ಲರ ಆತ್ಮನಾದ್ದರಿಂದ ನಮಗೆ ಎಲ್ಲರಲ್ಲಿಯೂ ಅನುರಾಗವುಂಟಾಗುತ್ತದೆ; ನಮ್ಮಲ್ಲಿಯೂ ಎಲ್ಲರಿಗೂ ಅನುರಾಗ ವುಂಟಾಗುತ್ತದೆ.

ಇಷ್ಟೇ ಅಲ್ಲ, ರಾಕ್ಷಸರು, ಎಂದರೆ ನಮ್ಮನ್ನು ಪೀಡಿಸುವ ಕೆಟ್ಟ ಆಲೋಚನೆಗಳು, ಇನ್ನು ಮೇಲೆ ನಮ್ಮಲ್ಲಿ ನಿಲ್ಲುವದಿಲ್ಲ; ಏಕೆಂದರೆ ಭಗವಂತನ ನಾಮಕೀರ್ತನೆಯು ಕೆಟ್ಟ ಆಲೋಚನೆಗಳನ್ನು ಹೊಡೆದಟ್ಟುವ ಮಹಾ ಮಂತ್ರವಾಗಿರುತ್ತದೆ. ಭಗಂತನೆಂದರೆ ಅತ್ಯಂತ ಉತ್ತಮವಾದ ಗುಣಗಳ ಗನಿಯು; ಅವನು ನಮ್ಮ ಹೃದಯದಲ್ಲಿದ್ದಾನೆಂಬುದನ್ನು ಮನಸ್ಸಿಗೆ ತಂದುಕೊಂಡರೆ ಅಲ್ಲಿ ದುಷ್ಟಭಾವನೆಗಳು ಹೇಗೆ ತಾನೆ ಉಳಿದುಕೊಂಡಾವು?

ಭಗವಂತನ ಕೀರ್ತನೆಯಿಂದ ಮತ್ತೊಂದು ಫಲವುಂಟಾಗುವದು. ಸಿದ್ಧರೆಲ್ಲರೂ ಭಗವಂತನಿಗೆ ಅಡಿಯಾಳುಗಳು. ಸಿದ್ಧರೆಂದರೆ ಕಾರ್ಯವು ಸಂಕಲ್ಪಮಾತ್ರದಿಂದ ನೆರವೇರುವಂಥ ಶಕ್ತಿಯುಳ್ಳವರು. ಭಗವಂತನ ಭಕ್ತಿಯಿಂದಲೇ ಅವರಿಗೆ ಆ ಸಿದ್ಧಿಗಳು

ಬಂದಿರುತ್ತವೆ; ಆದ್ದರಿಂದ ಅವರು ಭಗವಂತನನ್ನು ಯಾವಾಗಲೂ ನಮಸ್ಕರಿಸುತ್ತಿರುವರು. ಭಗವಂತನ ಕೀರ್ತನೆಯನ್ನು ಮಾಡುವವರು ಹೃದಯದಲ್ಲಿ ಭಗವಂತನು ಇರುವದರಿಂದ ಸಿದ್ಧರ ನಮಸ್ಕಾರವು ಕೀರ್ತನ ಮಾಡಿದವರಿಗೂ ಮುಟ್ಟುವದು; ಎಂದರೆ ಅವರಿಗೂ ಆ ಭಗವದ್ಭಕ್ತರಂತೆ ಸಿದ್ಧಿಗಳುಂಟಾಗುವವು. ಯಾರು ಭಗವಂತನನ್ನು ಕೀರ್ತನಮಾಡುವರೋ ಅವರಿಗೆ ಕಾರ್ಯಗಳು ಸುಲಭವಾಗಿ ಸಿದ್ಧಿಸುವವವು, ಅವರ ಇಷ್ಟಾರ್ಥಗಳು ಈಡೇರುವವು.

ಈ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಂಡು ಮೇಲಿನ ಶ್ಲೋಕವನ್ನು ಕೀರ್ತನ ಮಾಡಬೇಕು. ಈ ಪತ್ರವು ನಿಮಗೆ ಗೀತಾಜಯಂತಿಯ ದಿನ ಸಿಕ್ಕದಿದ್ದರೂ ಚಿಂತೆಯಿಲ್ಲ. ನೀವು ಇದನ್ನು ಎಂದು ಓದಿ ಮನಸ್ಸಿಗೆ ತಂದುಕೊಂಡರೆ ಅಂದೇ ನಿಮ್ಮ ಪಾಲಿಗೆ ಗೀತಾಜಯಂತಿಯಾಗುವದು.

ಇದೇ ಸ್ತೋತ್ರದಿಂದ ಇನ್ನೊಂದು ಶ್ಲೋಕವನ್ನು ಇಲ್ಲಿ ಉದಾಹರಿಸುವೆನು.

**ನಮಃ ಪುರಸ್ತಾದಥ ಪೃಷ್ಠತಸ್ತೇ**
**ನಮೋಽಸ್ತು ತೇ ಸರ್ವತ ಏವ ಸರ್ವ ।**
**ಅನನ್ತವೀರ್ಯಾಮಿತವಿಕ್ರಮಸ್ತ್ವಂ**
**ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥**

ಭಾವಾರ್ಥ: ಮುಂದುಗಡೆ ನಿನಗೆ ನಮಸ್ಕಾರ! ಹಿಂದುಗಡೆ ನಿನಗೆ ನಮಸ್ಕಾರ! ಎಲೈ ಸರ್ವನೆ, ನಿನಗೆ ಎಲ್ಲಾ ಕಡೆಯಿಂದಲೂ ನಮಸ್ಕಾರ! ನೀನು ಅನಂತವೀರ್ಯನು ಅನಂತವಿಕ್ರಮನು! ಎಲ್ಲವನ್ನೂ ವ್ಯಾಪಿಸಿಕೊಂಡಿರುವೆ, ಆದ್ದರಿಂದ ನೀನು ಸರ್ವನು.''

ಈ ಶ್ಲೋಕದಿಂದ ತಿಳಿದುಕೊಳ್ಳಬೇಕಾದದ್ದೇನೆಂದರೆ ಭಗವಂತನ ಗುಣಗಾನವನ್ನು ನಾವು ಎಲ್ಲಿದ್ದರೆ ಅಲ್ಲಿ ಮಾಡಬಹುದು. ಆತನ ನಾಮಕೀರ್ತನೆಯಿಂದ ನಮಗೆ ಯಾವಾಗಲೂ ಎಲ್ಲೆಲ್ಲಿಯೂ ಉತ್ತಮಫಲವೆ ಆಗುತ್ತದೆ. ದುಷ್ಟಸಂಕಲ್ಪಗಳು ಬಿಟ್ಟೋಡುವವು, ಸದ್ಭಾವನೆಗಳು ಬಂದು ಮನೆಮಾಡಿಕೊಳ್ಳುವವು, ಹಿಡಿದ ಕಾರ್ಯವು ಕೈಗೂಡುವದು. ಭಗವಂತನೆಂದರೆ ನಮ್ಮಗಳಂತೆ ಒಂದು ದೇಹಕ್ಕೆ ಕಟ್ಟುಬಿದ್ದವನಲ್ಲ. ಹಾಗಿದ್ದರೆ ಅವನು ಒಂದು ದೇಶದಲ್ಲಿ ಒಂದು ಕಾಲದಲ್ಲಿ ಮಾತ್ರ ಇರುತ್ತಿದ್ದನು. ನಮ್ಮಂತೆ ಅವನಿಗೆ ದೇಹದ ಅಳತೆಯಿಲ್ಲ. ಅವನು ಎಲ್ಲೆಲ್ಲಿಯೂ ಇರುವನು. ಇದು ಹೇಗೆ ಸಾಧ್ಯವೆಂದು ಶಂಕಿಸಬಾರದು. ನಮ್ಮ ಮನಸ್ಸು ನಮ್ಮ ದೇಹದಲ್ಲಿದ್ದರೂ ಎಲ್ಲಿಗೆಂದರೆ ಅಲ್ಲಿಗೆ ವ್ಯಾಪಿಸಿಕೊಂಡು ಯಾವ ವಿಷಯವೆಂದರೆ ಅದನ್ನು ಆಲೋಚನೆಗೆ

ತೆಗೆದುಕೊಳ್ಳುವದಲ್ಲವೆ? ಇದರಂತೆ ಸರ್ವವ್ಯಾಪಿಯಾಗಿರುತ್ತಾನೆ, ಆ ಭಗವಂತನು. ಆತನು ಮನಸ್ಸುಗಳನ್ನು ಕೂಡ ವ್ಯಾಪಿಸಿರುವನೆಂದು ಬಲ್ಲವರು ಹೇಳುತ್ತಾರೆ. ಆದ್ದರಿಂದ ಆ ಭಗವಂತನು ಈಗ ಇಲ್ಲಿಯೇ ನನ್ನ ಮುಂದೆ, ಹಿಂದೆ, ಎಡಕ್ಕೆ, ಬಲಕ್ಕೆ, ಕೆಳಗೆ ಮೇಲಕ್ಕೆ, ಎಲ್ಲೆಲ್ಲಿಯೂ ಇರುತ್ತಾನೆಂದು ಭಾವಿಸಬೇಕು.

ಆ ಭಗವಂತನಿಗೆ ಸಾಧ್ಯವಾಗದ್ದು ಯಾವದೊಂದೂ ಇಲ್ಲ, ಆತನ ವಿಕ್ರಮಕ್ಕೆ ವಶವಾಗದೆ ಇರುವದು ಯಾವದೊಂದೂ ಇಲ್ಲ. ಯಾರು ಆ ಭಗವಂತನು ಇಲ್ಲಿಯೇ ಇರುತ್ತಾನೆ, ಈಗಲೇ ಇರುತ್ತಾನೆ–ಎಂಬ ಭಾವನೆಯಿಂದ ಆತನ ಕೀರ್ತನೆಯನ್ನು ಮಾಡುವರೋ ಅವರ ಕಷ್ಟಗಳೆಲ್ಲ ಪರಿಹಾರವಾಗುವವು. ಕಷ್ಟಗಳೇ ಬರುವದಿಲ್ಲವೆಂದಲ್ಲ, ಅವು ಬಂದರೂ ಅವನ್ನು ಸುಲಭವಾಗಿ ಅವರು ದಾಟಿಬಿಡುವರು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಶ್ಲೋಕವನ್ನು ಹಾಡಬೇಕು.

ಈ ಗೀತಾಜಯಂತಿಯ ದಿನ ಈ ಶ್ಲೋಕಗಳನ್ನು ಮನಮುಟ್ಟಿ ಹಾಡುವದಕ್ಕೆ ಪ್ರಾರಂಭಿಸಿ ಮುಂದೆ ಪ್ರತಿದಿನವೂ ''ಭಗವಂತನು ಸರ್ವವ್ಯಾಪಕನು, ಸರ್ವರಲ್ಲಿಯೂ ಅವರ ಆತ್ಮನಾಗಿರುತ್ತಾನೆ; ಆತನ ನಾಮಕೀರ್ತನೆಯಿಂದಲೂ ಗುಣಗಾನದಿಂದಲೂ ನಮ್ಮ ಇಷ್ಟಾರ್ಥಗಳು ನೆರವೇರುವವು, ಅನಿಷ್ಟಗಳು ಪರಿಹಾರವಾಗುವವು'' ಎಂದು ನಂಬಿ ಹಾಡುತ್ತಾಬನ್ನಿರಿ. ನಿಮ್ಮ ಜೀವನವೇ ಮಂಗಲಮಯವಾಗುವದು.

## 56. ಸಾತ್ತ್ವಿಕವೇಷಭಾಷೆಗಳು

### (ಜನವರಿ 1951)

*''ನಮ್ಮ ಹುಡುಗರಿಗೆ ದೈವಭಕ್ತಿಯು ಮೆಚ್ಚಾಗುವದಕ್ಕೇನು ಮಾಡಬೇಕು? ಈ ಕಾಲದಲ್ಲಿ ದೊಡ್ಡವರಿಗೂ ಕೂಡ ವ್ಯವಹಾರಕ್ಕೇ ಕಾಲವು ಸಾಲದೆ ಇದೆ. ವ್ಯವಹಾರದಲ್ಲಂತೂ ಶ್ರದ್ಧಾಭಕ್ತಿಗಳಿಗೆ ಅವಕಾಶವು ದೊರಕುವಂತೆಯೇ ಇಲ್ಲ. ಹೀಗಿರುವಲ್ಲಿ ಮಕ್ಕಳಿಗೆ ಇಂಥ ಉತ್ತಮಭಾವನೆಗಳು ಹೇಗೆ ಉಂಟಾಗಬೇಕು? ಅನುಷ್ಠಾನಕ್ಕೆ ತರಬಹುದಾದ ಆಚರಣೆಗಳು ಯಾವದಾದರೂ ಇದ್ದರೆ ದಯವಿಟ್ಟು ಸೂಚಿಸಬೇಕು'' ಎಂದು ನಿಮ್ಮ ಹಿಂದಿನ ಪತ್ರದಲ್ಲಿ ಬರೆದಿದ್ದಿರಿ. ಅದಕ್ಕೆ ಈಗ ಉತ್ತರವನ್ನು ಬರೆಯುತ್ತೇನೆ; ಈಗ ತಲುಪಿರುವ ನಿಮ್ಮ ಮತ್ತೊಂದು ಪತ್ರಕ್ಕೆ ಸ್ವಲ್ಪ ಕಾಲಾನಂತರ ಉತ್ತರವನ್ನು ಬರೆಯುವೆನು. ಕಾಲವಿಳಂಬವನ್ನು ಕ್ಷಮಿಸಬೇಕು.*

ನಿಮ್ಮ ಪ್ರಶ್ನೆಗೆ ಕೂಡಲೆ ಆಚರಣೆಗೆ ತರಬೇಕಾದ ಸಾಧನಗಳನ್ನು ತಿಳಿಸುವದು ನನಗೆ ಸ್ವಲ್ಪ ಕಷ್ಟವಾಗಿರುತ್ತದೆ. ಏಕೆಂದರೆ ಈಗ ಹೊಟ್ಟೆಬಟ್ಟೆಗಳಿಗೆ ಸಾಲುವಷ್ಟು

ಸಂಪಾದನೆ ಮಾಡುವದಕ್ಕೇ ನಮ್ಮ ಕಾಲವು ಬಹುಮಟ್ಟಿಗೆ ವಿನಿಯೋಗವಾಗುತ್ತಿದೆ. ಆದರೂ ಬಹುಜನರು ಬಡತನದಲ್ಲಿಯೇ ಕಾಲವನ್ನು ಹಾಕುತ್ತಿದಾರೆ. ಇದನ್ನು ನೋಡಿದರೆ ನಮ್ಮ ವ್ಯವಹಾರಕ್ರಮದಲ್ಲಿಯೇ ಏನೋ ದೋಷವಿರಬೇಕೆಂದು ಹೇಳಬೇಕಾಗುತ್ತದೆ. ಹೀಗಿದ್ದರೂ ಅದೇನು ಮಾಯೆಯೊ, ಜನರು ತಮ್ಮ ಜೀವನಕ್ರಮವನ್ನು ಮಾರ್ಪಡಿಸುವ ಯೋಚನೆಯನ್ನು ಸ್ವಲ್ಪವೂ ಮಾಡುತ್ತಿಲ್ಲ; ಅದಕ್ಕೆ ಬದಲಾಗಿ ಜೀವನದಲ್ಲಿ ಕಷ್ಟಗಳನ್ನು ಹೆಚ್ಚಿಸಿಕೊಳ್ಳುವ ವ್ಯವಹಾರವನ್ನೇ ಹೆಚ್ಚಿಸಿಕೊಳ್ಳುತ್ತಿದಾರೆ. ಆದ್ದರಿಂದ ಈಶ್ವರಭಕ್ತಿಯನ್ನು ವೊಳೆಯಿಸುವ, ಮತ್ತು ಅದನ್ನು ಬೆಳೆಯಿಸಿಕೊಳ್ಳುವ, ಸಾಧನಗಳಿಗೆ ಅವಕಾಶವಿಲ್ಲದಂತಾಗಿದೆ ಎಂಬುದು ನಿಜವೇ ಆಗಿದೆ. ಆದರೂ ಒಂದೆರಡು ಸೂಚನೆಗಳನ್ನು ನಿಮಗೆ ಕೊಡುವೆನು; ನೀವು ಅವನ್ನು ಸಾಧ್ಯವಾದಷ್ಟು ಆಚರಣೆಗೆ ತಂದು ನೋಡಬಹುದು.

ನಮ್ಮ ವೇಷಭಾಷೆಗಳು ನಮ್ಮ ಭಾವನೆಗಳಮೇಲೆ ಹೆಚ್ಚಿನ ಪರಿಣಾಮವನ್ನು ಮಾಡುತ್ತವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಇಂಗ್ಲಿಷುಜನರು ನಮ್ಮನ್ನು ಆಳುತ್ತಿದ್ದಾಗ ನಮಗೂ ಅರಿಯದಂತೆಯೇ ನಮ್ಮ ವೇಷಭಾಷೆಗಳನ್ನೂ ಬಹಿರಾಚಾರಗಳನ್ನೂ ಬದಲಾಯಿಸಿಬಿಟ್ಟರು. ಜುಬ್ಬ, ಷರಟು, ತೋಳಿಲ್ಲದಂಗಿ, ಮೇಲಂಗಿ, ಇಜಾರ–ಮುಂತಾದ ಹಲವು ಬಗೆಯ ಉಡುಪುಗಳು ಬೇಕೆಂಬ ಅಭಿಪ್ರಾಯವು ನಮಗೆ ಆಗ ಮೂಡಿಕೊಂಡಿತ್ತು; ಇಂಗ್ಲಿಷು ಮಾತನಾಡುವದು, ಓದುವದು, ಬರೆಯುವದು–ಇವುಗಳಿಲ್ಲದವರಿಗೆ ಗೌರವವಾಗಲಿ ವ್ಯವಹಾರದಲ್ಲಿ ಮಾನಮರ್ಯಾದೆಗಳಾಗಲಿ ಸಿಕ್ಕುವಂತಿಲ್ಲವೆಂದು ಮನಸ್ಸಿನಲ್ಲಿ ಆಗ ಪ್ರತಿಬಿಂಬಿಸಿತ್ತು. ಆದರೆ ದೇಶಭಕ್ತಿಯ ಜನರು ಇದನ್ನೆಲ್ಲ ಮಾರ್ಪಡಿಸಿಬಿಟ್ಟರು. ಖಾದಿಯ ಒಂದೆರಡು ಬಟ್ಟೆಗಳಿಂದಲೂ ನಮ್ಮ ಎಲ್ಲಾ ವ್ಯವಹಾರವೂ ಸಾಗುತ್ತದೆಯೆಂದೂ ನಮಗೆ ಗೌರವವೂ ಉಂಟಾಗುವದಲ್ಲದೆ ಮಿತವ್ಯಯದಿಂದ ಹಣದ ಉಳಿತಾಯವೂ ಆಗಿ ದೇಶದ ಸಂಪತ್ತೂ ಅಭಿವೃದ್ಧಿಯಾಗುವದೆಂಬ ತಿಳಿವಳಿಕೆಯನ್ನು ದೊಡ್ಡದೊಡ್ಡ ಜನನಾಯಕರು ನಮಗೆ ಮಾಡಿಕೊಟ್ಟರು. ಹಿಂದೀಭಾಷೆಯ ಪ್ರಚಾರದಿಂದ ಇಂಗ್ಲಿಷಿನ ಮೋಹವನ್ನೂ ಕಡಿಮೆಮಾಡಿದರು. ಕೂಡಲೆ ಐ.ಸಿ.ಎಸ್. ಪರೀಕ್ಷೆ, ರಾವಬಹದ್ದೂರ್–ಮುಂತಾದ ಬಿರುದುಗಳು, ವಿಲಾಯಿತಿಗೆ ಶಿಕ್ಷಣಕ್ಕಾಗಿ ಪ್ರಯಾಣ–ಇವೇ ಮುಂತಾದವುಗಳಲ್ಲಿ ಎಲ್ಲರಿಗೂ ಉಂಟಾಗಿದ್ದ ಹುಚ್ಚು ಬಿಟ್ಟುಹೋಯಿತು. ಸತ್ಯ, ಅಹಿಂಸೆ, ದೇಶಭಕ್ತಿ ಸತ್ಯಾಗ್ರಹ–ಮುಂತಾದ ಮಾತುಗಳ ಬಳಕೆಯು ಹೆಚ್ಚಾಯಿತು. ಜನರ ಮನೋಭಾವವು ಬದಲಾಗಿ ಬಿಟ್ಟಿತು.

ಈ ಉದಾಹರಣೆಯನ್ನು ನಾವು ಸ್ವಲ್ಪಮಟ್ಟಿಗಾದರೂ ಅನುಕರಿಸುವದನ್ನು ಕಲಿಯಬೇಕು. ಆಗ ಧರ್ಮಬುದ್ಧಿಯು ನಮ್ಮ ಹುಡುಗರಿಗೆ ಉಂಟಾಗುವದಕ್ಕೆ ಅವಶ್ಯವಾಗಿ ದಾರಿಯಾಗುತ್ತದೆ. ಸ್ನಾನ, ಭೋಜನ, ಫಲಾಹಾರ ಮುಂತಾದವುಗಳನ್ನು ಹೇಗೋ ಎಲ್ಲಿಯೋ ಮಾಡುವ ಪದ್ಧತಿಯನ್ನು ಕೂಡಲೆ ನಿಲ್ಲಿಸಿ ಆದ ಮಟ್ಟಿಗೂ ಶುಚಿಯಾದ ನೀರು, ಆಹಾರಪದಾರ್ಥಗಳು–ಮುಂತಾದವನ್ನು ಕಷ್ಟಪಟ್ಟಾದರೂ ಸಂಪಾದಿಸಬೇಕು. ಆ ಕಾಲದಲ್ಲಿ ಪರಮೇಶ್ವರನ ನಾಮಕೀರ್ತನ, ಸ್ತೋತ್ರ–ಮುಂತಾದವುಗಳನ್ನು ಆಚರಣೆಗೆ ತರಬೇಕು. ಹುಟ್ಟಿದ ಗಂಡುಮಕ್ಕಳಿಗೆಲ್ಲ ಚಲ್ಲಣಗಳನ್ನೂ ಜುಬ್ಬಗಳನ್ನೂ ಹೊಲಿಸಿಕೊಟ್ಟು ತಲೆಗೆ ಕ್ರಾಪನ್ನು ಮಾಡಿಸಿ ಬಾಚಿಕೊಳ್ಳುವದನ್ನು ಕಲಿಸಬೇಕೆಂಬ ಹುಚ್ಚು ನಂಬಿಕೆಯನ್ನು ಸ್ವಲ್ಪವಾಗಿಯಾದರೂ ಸಡಿಲಿಸಬೇಕು; ದೇವಸ್ಥಾನಗಳಲ್ಲಿ, ಮನೆಯಲ್ಲಿ, ವಿಶೇಷವಾದ ಉತ್ಸವಕಾಲದಲ್ಲಿ–ಇಂಥ ಸಂದರ್ಭದಲ್ಲಾದರೂ ಶುದ್ಧಾಚಾರಗಳನ್ನು ಸೂಚಿಸುವ ಪಂಚೆ, ವೇಷ್ಟಿ, ಭಸ್ಮ ನಾಮ–ಮುಂತಾದವುಗಳನ್ನು ಉಪಯೋಗಿಸುವದು; ಉಪನಯನ ಉಪಾಕರ್ಮ, ಮಂತ್ರೋಪದೇಶ–ಮುಂತಾದವುಗಳನ್ನೂ ಯಥಾಕಾಲದಲ್ಲಿ ಯಥಾವಿಧಿಯಾಗಿ ನಮ್ಮನಮ್ಮ ಪದ್ಧತಿಗಳನ್ನನುಸರಿಸಿ ನಡೆಸುವದು; ಸಂಸ್ಕೃತ ಸ್ತೋತ್ರ, ಮಂತ್ರತಂತ್ರಗಳು ಮುಂತಾದವುಗಳ ಮೂಲಕ ಸಂಸ್ಕೃತಭಾಷೆಯಲ್ಲಿ ಪ್ರೇಮವನ್ನು ಹೆಚ್ಚಿಸುವದು–ಈ ಕೆಲಸಕ್ಕೆ ಕೂಡಲೆ ಕೈ ಹಾಕಬೇಕು. ಹಬ್ಬ ಹುಣ್ಣಿಮೆಗಳಲ್ಲಿ ನಮ್ಮ ಯೋಗ್ಯತೆಗೆ ಮೀರಿದ ಭಕ್ಷ್ಯಭೋಜ್ಯಗಳ ತಯಾರಿಕೆಗೆ ಹಣವನ್ನು ವೆಚ್ಚಮಾಡುವದರಲ್ಲಿ ಕಾಲವನ್ನು ಹಾಕುವದಕ್ಕೆ ಬದಲು ಈಶ್ವರನ ಸ್ಮರಣೆಯುಂಟಾಗುವದಕ್ಕೆ ಅನುಕೂಲವಾದ ಪೂಜೆ, ಅಭಿಷೇಕ, ಪಾರಾಯಣ–ಮುಂತಾದವುಗಳನ್ನು ಏರ್ಪಡಿಸುವ ಕಡೆಗೆ ತಿರುಗಬೇಕು.

ಹಳೆಯ ಸಂಪ್ರದಾಯಗಳಿವು ಎಂದು ಕಡೆಗಣಿಸಬಾರದು. ಈಶ್ವರನ ಭಕ್ತಿಯು ಹೃದಯಕ್ಕೆ ಸಂಬಂಧಪಟ್ಟಿದ್ದಾದ್ದರಿಂದ ಹೊರಗಿನ ವೇಷಭಾಷೆಗಳು ಹೇಗಾದರೂ ಇರಬಹುದು ಎಂಬ ಶುಷ್ಕವೇದಾಂತದ ಮಾತುಗಳನ್ನೂ ಬಳಸುವದನ್ನು ಬಿಡಬೇಕು. ಕೈಯಲ್ಲಿ ಶಸ್ತ್ರವಿರುವವನು ಅದನ್ನು ಒಂದಲ್ಲ ಒಂದು ದಿನದಲ್ಲಿ ಒಳ್ಳೆಯ ಅಥವಾ ಕೆಟ್ಟ ಕೆಲಸಕ್ಕೆ ವಿನಿಯೋಗಿಸಿಯೇ ತೀರುವಂತೆ ಮಡಿ, ಮೈಲಿಗೆ, ವಿನಯ–ಮುಂತಾದವುಗಳ ಅಭ್ಯಾಸವು ಸಾತ್ತ್ವಿಕಭಾವನೆಗಳಲ್ಲಿ ಪರ್ಯವಸಾನವಾಗಿಯೇ ತೀರುತ್ತವೆ.

ದೇಶಭಕ್ತಿಯೂ ರಾಜಕೀಯವಿಚಾರವೂ ಎಲ್ಲರ ಮನಸ್ಸಿನಲ್ಲಿಯೂ ತುಂಬಿತುಳುಕುವ ಈ ಕಾಲದಲ್ಲಿ ಎಲ್ಲೆಂದರೆ ಅಲ್ಲಿ ಜನನಾಯಕರ ಚಿತ್ರಗಳಿರುತ್ತವೆ; ಎಲ್ಲೆಂದರೆ ಅಲ್ಲಿ ರಾಜಕೀಯ ಭಾಷಣಗಳೂ ರೇಡಿಯೋ ಸುದ್ದಿಗಳೂ ಕೇಳಬರುತ್ತವೆ; ಎಲ್ಲೆಂದರೆ ಅಲ್ಲಿ ಭೂಮಂಡಲದ ವರ್ತಮಾನಗಳನ್ನು ತರುವ ಪತ್ರಿಕೆಗಳ

ವಾಚನಾಲಯಗಳು ಕಾಣಬರುತ್ತವೆ. ಆದರೆ ನಮ್ಮನಮ್ಮ ಮನೆಗಳಲ್ಲಾದರೂ ಪರಮೇಶ್ವರನ ಮತ್ತು ಅವನ ಭಕ್ತರ ಒಂದೆರಡು ಚಿತ್ರಗಳೇತಕ್ಕೆ ಇರಬಾರದು? ಯಾವಗಲಾದರೊಮ್ಮೆ ದೇವಾಲಯಗಳಲ್ಲಿ ಈಶ್ವರಭಕ್ತಿಯನ್ನು ಹೆಚ್ಚಿಸುವ ಉತ್ಸಾಹಜನಕವಾದ ಭಾಷಣಗಳೇತಕ್ಕೆ ಆಗಬಾರದು? ಭಕ್ತರ ವರ್ತನೆಯನ್ನು ಸರಿಯಾಗಿ ಪ್ರದರ್ಶಿಸುವ ಚಲಚ್ಚಿತ್ರಗಳೇತಕ್ಕೆ ಇರಬಾರದು? ಸಾಧನಾನುಷ್ಠಾನಗಳ ಸುದ್ದಿಗಳೇಕೆ ನಮ್ಮ ಮಕ್ಕಳ ಕಿವಿಗೆ ಬೀಳಬಾರದು? ಇದನ್ನೆಲ್ಲ ನೀವೂ ನಿಮ್ಮ ಮಿತ್ರಮಂಡಲಿಯವರೂ ಆಲೋಚನೆ ಮಾಡಬೇಕು. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನೆಂಬ ಬಗ್ಗೆ ಒಂದು ಪತ್ರವನ್ನು ಹಾಕಿರಿ.

## 57. ವೈರಬುದ್ಧಿಯಿಂದಾಗುವ ಹಾನಿ

(ಫೆಬ್ರುವರಿ 1951)

*ನಿಮ್ಮ ಕಾಗದವು ಬಂದು ತಲುಪಿತು. ನಿಮ್ಮ ಮನೆಯಲ್ಲಿ ಹೀಗೆ ಒಬ್ಬರಿಗೊಬ್ಬರಲ್ಲಿ ವೈರವು ಬೆಳೆಯುತ್ತಿರುವದನ್ನು ಕೇಳಿ ಬಹಳ ವ್ಯಥೆಯುಂಟಾಯಿತು. ವೈರದಿಂದ ಎಂದಿಗೂ ಶಾಂತಿಯಾಗುವದಿಲ್ಲ ಎಂಬುದು ಅನುಭವಿಗಳ ಉಕ್ತಿ. ಆದರೂ ಜನರು ವೈರವನ್ನು ಬೆಳೆಸುತ್ತಿದ್ದರೇ ವೈರಿಗಳನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ ಆಗುವದೆಂದು ನಂಬಿಕೊಂಡಿದ್ದಾರೆ. ಈ ಪ್ರಪಂಚದಲ್ಲಿ ಕಾಣಬರುವ ಪರಮಾಶ್ಚರ್ಯಗಳಲ್ಲಿ ಇದೂ ಒಂದು. ಇದಂತಿರಲಿ. ನೀವು ನನ್ನ ಅಭಿಪ್ರಾಯವನ್ನು ಕೇಳಿರುವದರಿಂದ ನನಗೆ ತಿಳಿದದ್ದನ್ನು ಸ್ಪಷ್ಟಮಾತುಗಳಿಂದ ತಿಳಿಸಿಬಿಡುವೆನು. ಇದರಿಂದ ನಿಮಗೆ ಮುಂದಿನ ವರ್ತನೆಗೆ ಯಾವದಾದರೂ ಸೂಚನೆಗಳು ಸಿಕ್ಕಿದರೆ ನಾನು ಧನ್ಯನು.*

ಮನಸ್ಸಿನಲ್ಲಿ ಒಂದು ಸ್ವಭಾವವು ಇರುತ್ತದೆ. ಅದು ಯಾರಲ್ಲಿ ವೈರವನ್ನು ಕಟ್ಟಿಕೊಳ್ಳುವನೋ ಅವರಲ್ಲಿ ದೋಷಗಳೇ ಅದಕ್ಕೆ ಎದ್ದುಕಾಣುವವು. ಅಥವಾ ಯಾವವಾದರೂ ಗುಣಗಳು ಕಂಡರೂ ಅಸೂಯೆಯಿಂದ ಅವುಗಳನ್ನು ಅದು ದೋಷಗಳೆಂದೇ ಮಾಡಿಕೊಂಡುಬಿಡುವದು. ದೋಷಗಳನ್ನು ಕಂಡರೆ ದ್ವೇಷವುಂಟಾಗುವದು ಸ್ವಾಭಾವಿಕವಾದ್ದರಿಂದ ಅಂಥ ವೈರಿಗಳನ್ನು ನಾವು ದೂರದಲ್ಲಿಯೇ ಇಡುವದಕ್ಕೆ ಪ್ರಯತ್ನ ಮಾಡುತ್ತೇವೆ. ಅವರೊಡನೆ ವ್ಯವಹಾರ ಮಾಡುವದು ನಮಗೆ ಬೇಡವಾಗಿರುತ್ತದೆ. ಅವರ ಸುದ್ದಿಯನ್ನು ಕೇಳಿದರೂ ಮನಸ್ಸು ಕಿಡಿಕಿಡಿಯಾಗುವದು. ಇದು ಮನಸ್ಸಿನ ಸ್ವಭಾವವು. ಆದರೆ ಈ ಸ್ವಭಾವಕ್ಕೆ ನಾವು ಎಡೆಗೊಡುತ್ತಾ ಬಂದಹಾಗೆಲ್ಲ ನಮಗೆ ಆ ವೈರಿಗಳಲ್ಲಿ ದ್ವೇಷಬುದ್ಧಿಯು ಹೆಚ್ಚುತ್ತಾ

ಬರುತ್ತದೆ; ದ್ವೇಷದಿಂದ ಸಿಟ್ಟು ಹೆಚ್ಚಾಗುತ್ತದೆ; ಸಿಟ್ಟಿನಲ್ಲಿ ಅವರಲ್ಲಿಲ್ಲದ ದೋಷಗಳನ್ನು ಕಲ್ಪಿಸಿಯಾದರೂ ಸಂತೋಷಪಡಬೇಕೆಂಬ ತವಕವುಂಟಾಗುತ್ತದೆ. ಅಂಥವರನ್ನು ಶರೀರರೂಪದಿಂದ ನಾವು ದೂರವಾಗಿಟ್ಟಿದ್ದರೂ ಒಂದಲ್ಲ ಒಂದು ರೂಪದಿಂದ ಅವರ ನೆನಪು ನಮಗೆ ಬರುತ್ತದೆ, ಅಥವಾ ಅವರು ನಮ್ಮ ವಿಷಯದಲ್ಲಿ ಆಡಿದ ಕೆಟ್ಟ ಮಾತುಗಳ ಸುದ್ದಿಯು ನಮಗೆ ತಲುಪುತ್ತದೆ. ಅವರು ಅಭಿವೃದ್ಧಿ ಹೊಂದುತ್ತಿದ್ದಾರೆಂದು ಕೇಳಿದರೂ ನಮಗೆ ಸಹಿಸದಂತಾಗುತ್ತದೆ. ಹೀಗಾಗಿ ಮನಸ್ಸಿನಲ್ಲಿ ಯಾವದಾದರೊಂದು ಬಗೆಯಿಂದ ಅವರ ಚಿಂತೆಯೆಂಬ ಜ್ವರವೇ ಎದ್ದುಕೊಂಡುಬಿಡುತ್ತದೆ. ಒಂದು ಇಡಿಯ ಜನ್ಮವನ್ನೇ ಹೀಗೆ ವೈರಬುದ್ಧಿಯಿಂದ ಕಳೆಯುವವರೂ ಉಂಟು; ಅಂಥವರು ಜನ್ಮಾಂತರದಲ್ಲಿ ಅದೇ ವಾಸನೆಯಿಂದ ಮತ್ತೆ ವೈರಸಮೇತವಾಗಿಯೆ ಹುಟ್ಟುವರೆಂದು ಶಾಸ್ತ್ರಜ್ಞರು ಹೇಳುತ್ತಾರೆ.

ಈ ಅನರ್ಥದಿಂದ ಪಾರಾಗುವದಕ್ಕೆ ಒಂದು ಉತ್ತಮವಾದ ಉಪಾಯವಿದೆ. ಆದರೆ ಅದನ್ನು ಅಭ್ಯಾಸಮಾಡುವದಕ್ಕೆ ನಮ್ಮ ಮನಸ್ಸು ಒಲಿಯುವದು ಕಷ್ಟ. ಲೋಕದಲ್ಲಿ ಯಾವ ವಸ್ತುವೂ ನಿರ್ಗುಣವಾಗಿರುವದಿಲ್ಲ; ನಮ್ಮ ವೈರಿಗಳೇ ಆಗಿದ್ದರೂ ಅವರಲ್ಲಿ ಕಾಣುವ ಗುಣಗಳನ್ನು ಮೊದಲು ಮನಸ್ಸಿಗೆ ತಂದುಕೊಳ್ಳಬೇಕು. ನನಗೆ ಅವರಲ್ಲಿ ಕಾಣುತ್ತಿರುವ ದೋಷಗಳು ನಿಜವಾಗಿಯೂ ಗುಣಗಳೇ ಆಗಿರಬಾರದೇಕೆ? ಅವನ್ನು ದೋಷಗಳೆಂದೆಣಿಸುವದನ್ನು ಸ್ವಲ್ಪ ತಡೆದುಕೊಳ್ಳುವೆನು—ಎಂಬ ಸಂಕಲ್ಪವನ್ನು ಮಾಡಿಕೊಳ್ಳಬೇಕು. ಆಮೇಲೆ ಇದಕ್ಕಿಂತ ಇನ್ನೊಂದು ಹೆಜ್ಜೆ ಮುನ್ನಡೆಯಬಹುದಾಗುವದು. ಲೋಕದಲ್ಲಿ ಕಾಣುವದೆಲ್ಲವೂ ಪರಮೇಶ್ವರನ ವಿಭೂತಿಯೇ; ಎಲ್ಲದರಲ್ಲಿಯೂ ಯಾವದಾದರೊಂದು ರೂಪದಿಂದ ಪರಮೇಶ್ವರನು ಹೊರತೋರುತ್ತಿರುವನು—ಎಂದು ಗೀತೆಯು ಹೇಳುತ್ತಿದೆ. ಈ ವೈರಿ ಎಂಬವನ ರೂಪದಿಂದ ನನ್ನ ಮನಃಸ್ಥೈರ್ಯವನ್ನು ಪರೀಕ್ಷಿಸುವದಕ್ಕೆ ಈಶ್ವರನೇ ಏತಕ್ಕೆ ಈ ಸಂನಿವೇಶವನ್ನೊಡ್ಡಿರಬಾರದು?—ಎಂದು ಚಿಂತಿಸಿಕೊಳ್ಳಬೇಕು. ಆಗ ವೈರವು ಎಷ್ಟೋ ಕಡಿಮೆಯಾಗಿಬಿಡುತ್ತದೆ.

ಕೊನೆಯದಾಗಿ ಇನ್ನೊಂದು ಸಾಧನವನ್ನು ಇಲ್ಲಿ ಸೂಚಿಸುವೆನು. ಇಡಿಯ ಜಗತ್ತೇ ಭಗವಂತನ ಒಂದಂಶವು; ಅದನ್ನು ಕಂಡು ನಲಿಯುವದನ್ನು, ಅದನ್ನು ಪ್ರೇಮದಿಂದಲೇ ಕಾಣುವದನ್ನು, ಕಲಿಯುವದು ನಮ್ಮ ಕರ್ತವ್ಯವು. ಇಲ್ಲಿ ಯಾರೊಡನೆ ವೈರವನ್ನು ಮಾಡಿಕೊಂಡರೂ ಅದು ಪರಮೇಶ್ವರನಿಗೇ ಮಾಡಿದ ಅಪಚಾರವಾಗುವದು ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಆ ನಮ್ಮ ವೈರಿಯಾದವನು ಹೇಗಾದರೂ ವರ್ತಿಸಲಿ, ನಾನು ಮಾತ್ರ ಆತನಲ್ಲಿರುವ ಪರಮೇಶ್ವರನ ಪ್ರೇಮವನ್ನೇ ಸಾಧಿಸುವೆನು ಎಂದು ಸಂಕಲ್ಪಿಸಿಕೊಂಡು ಅದರಂತೆ ನಡೆದುನೋಡಿರಿ. ಕೆಲವು ದಿನಗಳು ಹೀಗೆ ಮಾಡಿದ ಬಳಿಕ ನಿಮ್ಮ ಮನಸ್ಸಿನ ಸ್ಥಿತಿ ಹೇಗಿರುವದೆಂಬುದಕ್ಕೆ ನನಗೆ ಒಂದು ಪತ್ರವನ್ನು ಹಾಕಿರಿ.

## 58. ವ್ಯವಹಾರಕ್ಕೆ ಅಂಟದೆ ಇರುವದು

### (ಮಾರ್ಚ್ 1951)

*ನೀವು ಕೇಳಿರುವ ಪ್ರಶ್ನೆ ವ್ಯವಹಾರದಲ್ಲಿರುವವರಿಗೆಲ್ಲ ಅನ್ವಯಿಸುತ್ತದೆ. ನೀವು ಸರಕಾರಿಯ ನೌಕರಿಯಲ್ಲಿದ್ದರೂ ದೈವಯೋಗದಿಂದ ಆದಷ್ಟು ಪರಿಶುದ್ಧವಾದ ಉಪಾಧ್ಯಾಯ ವೃತ್ತಿಯಲ್ಲಿರುತ್ತೀರಿ. ಇನ್ನೂ ಅನೇಕರು ವ್ಯವಹಾರದಲ್ಲಿ ಅನೇಕ ಸಂಕಷ್ಟಗಳಿಗೆ ಅವಕಾಶವಿರುವ ಬೇರೆಬೇರೆಯ ನೌಕರಿಗಳಲ್ಲಿರುತ್ತಾರೆ. ಮೇಲಿನ ಅಧಿಕಾರಿಗಳಿಗೆ ಉತ್ತರದಾಯಿಗಳಾಗಿರುವದೂ ಮಹಾ ಜನರ ಟೀಕೆಗೆ ಒಳಪಟ್ಟಿರುವದೂ ಅವರೆಲ್ಲರಿಗೂ ಸಮಾನವಾಗಿರುತ್ತದೆ. ಇದಲ್ಲದೆ ವ್ಯವಹಾರಮಾಡಲೇಬೇಕಾಗುತ್ತದೆಯಷ್ಟೆ. ಇದರಿಂದ ಬಗೆಬಗೆಯ ಮನಸ್ಸಿನಂತಸ್ತಿನ ಜನರ ಸಂಗದಿಂದ ಬಗೆಬಗೆಯ ಪರಿಣಾಮಗಳಾಗುವದು ಸ್ವಾಭಾವಿಕವಾಗಿದೆ. ಆದ್ದರಿಂದ ವ್ಯವಹಾರದಲ್ಲಿದ್ದೂ ಅದರಿಂದ ಮನಸ್ಸಿಗೆ ವಿಕ್ಷೇಪವನ್ನು ಮಾಡಿಕೊಳ್ಳದೆ ಇರುವದು ಹೇಗೆ?–ಎಂಬುದು ನಮ್ಮೆಲ್ಲರ ಸಮಸ್ಯೆಯೂ ಆಗಿರುತ್ತದೆ.*

ಲೋಕದಲ್ಲಿ ಎಲ್ಲಿಯೋ ಕೆಲವರು ಎಲ್ಲವನ್ನೂ ನಗೆಮುಖದಿಂದ ಬರಮಾಡಿಕೊಳುತ್ತಾರೆ. ಇಷ್ಟಾನಿಷ್ಟಗಳಿಗೆ ಎರಡಕ್ಕೂ ಹೊಂದಿಕೊಂಡು ಹೋಗುತ್ತಾರೆ. ಮತ್ತೆ ಕೆಲವರು ತಮಗೆ ಅನಿಷ್ಟವಾದದ್ದು ಏನಾದರೂ ಒದಗಿದರೆ–ಅಥವಾ ಅನಿಷ್ಟವು ಒದಗದಿದ್ದರೂ ಅದು ಅನಿಷ್ಟವೆಂದು ತಾವೇ ಕಲ್ಪಿಸಿಕೊಳ್ಳುವದೂ ಉಂಟು; ಅಂಥ ಸಂದರ್ಭಗಳಲ್ಲಿ–ಮನಸ್ಸಿಗೆ ಕೊರಗುಹಚ್ಚಿಕೊಂಡು ಜನರೊಡನೆ ವ್ಯವಹಾರವನ್ನು ಕಹಿಯಾಗಿ ಮಾಡಿಕೊಳ್ಳುತ್ತಿರುವರು. ಮತ್ತೆ ಕೆಲವರು ನೀವು ವ್ಯಥೆಯ ಭಾರದಲ್ಲಿ ಸೂಚಿಸಿರುವತೆ ಎಲ್ಲಾ ವ್ಯವಹಾರಗಳನ್ನೂ ಕೈಬಿಟ್ಟು ಕುಳಿತುಕೊಳ್ಳಬೇಕೆಂದು ಬಯಸುವರು. ಆದರೆ ಇದು ಸರಿಯಾದ ಮಾರ್ಗವಲ್ಲ. ಏಕೆಂದರೆ ವ್ಯವಹಾರವನ್ನೆಲ್ಲ ಬಿಡುವದು ಯಾರಿಂದ ತಾನೆ ಸಾಧ್ಯ? ಯಾವದಾದರೊಂದು ಬಗೆಯ ವ್ಯವಹಾರವಿಲ್ಲದೆ ಈ ಲೋಕದಲ್ಲಿ ಜೀವಿಸಿರುವದೂ ಆಗುವದಿಲ್ಲ. ಊರುಕೇರಿಗಳನ್ನು ಬಿಟ್ಟು ಕಾಡಿಗೆ ಹೋಗಿ ತಪಸ್ಸು ಮಾಡಿಕೊಂಡಿರುವದು, ಕಾಶಿಯಾತ್ರೆ ಹೊರಡುವದು, ಅಥವಾ ಕಾಷಾಯವಸ್ತ್ರವನ್ನು ಧರಿಸಿ ಪರಿವ್ರಾಜಕನಾಗುವದು–ಇವೆಲ್ಲವೂ ವ್ಯವಹಾರವೇ ಎಂಬುದನ್ನು ನೀವು ಮನಸ್ಸಿನಲ್ಲಿ ಚೆನ್ನಾಗಿ ನೆನಪಿಡಬೇಕು.

ಗೀತೆಯಲ್ಲಿ ಹೇಳಿರುವ ಕರ್ಮಯೋಗದ ಭಾವವನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ನಿಮಗೆ ಈಗ ಸಮಯವಾಗುತ್ತದೆ ಎಂದು ನನ್ನ ಭಾವನೆ. ಸಾಮಾನ್ಯವಾಗಿ ಮಕ್ಕಳುಗಳ ಮುಖವು ಪ್ರಸನ್ನವಾಗಿ, ಎಂಥವರ ದುಗುಡವನ್ನಾದರೂ ಪರಿಹರಿಸುವದಕ್ಕೆ ಸಾಧನವಾಗಿರುತ್ತದೆ. ನೀವು ವಿದ್ಯಾರ್ಥಿಗಳನ್ನು ಕಾಣುವಾಗಲೆಲ್ಲ

ಅವರಲ್ಲಿ ಪರಮೇಶ್ವರನು ಇರುತ್ತಾನೆಂದೂ ಅವನ ಆರಾಧನೆಗೆ ನೀವು ಕಟಿಬದ್ಧರಾಗಿದ್ದೀರೆಂದೂ ಭಾವಿಸಿಕೊಳ್ಳಿರಿ. ಹುಡುಗರಿಗೆ ನಾನು ಕಲಿಸುತ್ತೇನೆ–ಎಂಬ ಹೆಮ್ಮೆಯನ್ನು ಬಿಡಿರಿ. ಅವರ ರೂಪಿನಿಂದ ನನ್ನನ್ನು ಭಗವಂತನು ಪರೀಕ್ಷೆ ಮಾಡುತ್ತಿದಾನೆ; ತಾಳ್ಮೆ, ಸಮಾಧಾನ, ಜ್ಞಾನರಸಿಕತೆ, ವಿಚಾರಪ್ರಿಯತ್ವ, ಸಮಯೋಚಿತವಾದ ನಡತೆ–ಇವುಗಳನ್ನು ಅನುಗ್ರಹಿಸುವದಕ್ಕೆ ಭಗವಂತನು ಕಲ್ಪಿಸಿಕೊಟ್ಟಿರುವ ಸದಾವಕಾಶವಿದೆಂದು ಭಾವನೆ ಮಾಡುತ್ತಾ ಕೆಲಸವನ್ನು ಪೂಜ್ಯಭಾವದಿಂದಲೂ ಶ್ರದ್ಧೆಯಿಂದಲೂ ಸಾಗಿಸುತ್ತಿರಿ.

ಹುಡುಗರ ತಾಯಿತಂದೆಗಳಾಗಲಿ ಮೇಲಿನ ಪರೀಕ್ಷಕ ಅಧಿಕಾರಿಗಳಾಗಲಿ ನಿಮ್ಮಲ್ಲಿ ಏನಾದರೂ ಲೋಪದೋಷಗಳನ್ನು ಕಂಡು– ಅಥವಾ ಕಲ್ಪಿಸಿ– ಟೀಕೆ ಮಾಡುತ್ತಾ ಬಂದರೆ ಅದಕ್ಕೆ ಒಂದಿಷ್ಟೂ ಮನಸ್ಸಿನಲ್ಲಿ ಏರುಪೇರುಹೊಂದಬೇಡಿ. 'ನನ್ನಲ್ಲಿ ಲೋಪಗಳಿದ್ದರೆ ತಿದ್ದಿಕೊಳ್ಳುವದಕ್ಕೆ ಇವರ ಮೂಲಕ ಆ ಭಗವಂತನೇ ಸೂಚಿಸುತ್ತಿದಾನೆ' ಎಂದುಕೊಳ್ಳಿರಿ. ಲೋಪದೋಷಗಳಿಲ್ಲದಿದ್ದರೂ ಬರುವ ಟೀಕೆಗಳು ಅಂಥ ಲೋಪದೋಷಗಳಿಲ್ಲದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳುವದಕ್ಕೆ ಸಾಧಕವೆಂದು ಎಣಿಸಬೇಕು.

ಹೀಗೆ ನೀವು ಕೂಡಲೆ ಭಗವದಾರಾಧನಾರೂಪವಾಗಿ ನಿಮ್ಮ ಬೋಧನ ಕಾರ್ಯವನ್ನು ಮಾರ್ಪಡಿಸಿಕೊಂಡರೆ ನಿಮಗೆ ಈಶ್ವರಭಾವನೆಯು ಬಲವಾಗುವದು; ಹೃದಯದಲ್ಲಿ ಹೊಸ ಹೊಸ ವಿಚಾರಗಳು ಹೊಳೆಯುವವು; ನಿಮ್ಮ ಬೋಧನೆಯು ವಿದ್ಯಾರ್ಥಿಗಳ ಮೇಲೆ ಸತ್ಪರಿಣಾಮವನ್ನು ಮಾಡುವದು. ನಿಮ್ಮ ತರಗತಿಯೊಂದು ದೇವತೆಗಳ ಮಂದಿರವಾಗಿ ಮಾರ್ಪಡುವದು. ನಿಮ್ಮ ಕೀರ್ತಿಯು ಹೆಚ್ಚುವದು, ಇಹಲೋಕದ ಕಷ್ಟಗಳೆಲ್ಲವೂ ಮುನ್ನಡೆಗೆ ಸಾಧನವಾಗಿ ಮೇಲಿನ ಅಧಿಕಾರಿಗಳೂ ಸುತ್ತಮುತ್ತಲಿನ ಉಪಾಧ್ಯಾಯರೂ ಮಕ್ಕಳ ತಾಯಿತಂದೆಗಳೂ ನಿಮ್ಮಲ್ಲಿ ಹೆಚ್ಚಿನ ಗೌರವವನ್ನಿಟ್ಟುಕೊಳ್ಳುವರು. ಹಾಗೆ ಭಗವಂತನು ಅನುಗ್ರಹಿಸಲಿ!

## 59. ಗುರುಸೇವೆಯ ಗುಟ್ಟು

### (ಏಪ್ರಿಲ್1951)

*ನಿಮ್ಮ ಪತ್ರವು ತಲುಪಿರುತ್ತದೆ. ನಮ್ಮ ಗುರುಗಳು ದೊಡ್ಡವರು ಎಂದು ಅವರ ಸೇವೆಯಲ್ಲಿ ನಿಂತಿದ್ದೇನೆ. ಅವರಿಂದ ನನಗೆ ಅಧ್ಯಾತ್ಮ ವಿಷಯದ ಲಾಭವೂ ಆಗುತ್ತಲೇ ಇರುತ್ತದೆ. ಆದರೆ ಅವರ ನಡೆನುಡಿಗಳಲ್ಲಿ ನನಗೆ ಕೆಲವು ಸಂಶಯಗಳು ಆಗಾಗ್ಗೆ ಮೊಳೆಯುತ್ತವೆ. ಅವು ನನ್ನನ್ನು*

*ಕಾಡದಂತೆ ಆಗುವದಕ್ಕೆ ನಾನು ಅನುಸರಿಸಬಹುದಾದ ಕೆಲವು ಸೂಚನೆಗಳನ್ನು ಅಪ್ಪಣೆ ಕೊಡಿಸಬೇಕು–ಎಂದು ಬರೆದಿರುತ್ತೀರಿ. ಇದು ಬಹಳ ದೊಡ್ಡ ವಿಷಯ. ಯಾರು ಸದ್ಗುರುಸೇವೆಯನ್ನು ಮನಸಾರೆ ಮಾಡಿ ಸಿದ್ಧಿಯನ್ನು ಹೊಂದಿರುವರೋ ಅವರು ಮಾತ್ರ ಈ ವಿಷಯಕ್ಕೆ ತಿಳಿವಳಿಕೆಯನ್ನು ಕೊಡಬಲ್ಲರು. ಇಂಥ ವಿಷಯಗಳನ್ನು ಗುರುಸಮೀಪದಲ್ಲಿರುವ ಅನುಭವಿಗಳಾದ ಶಿಷ್ಯರಿಂದಲೇ ತಿಳಿಯಬೇಕೇ ಹೊರತು ಪತ್ರಮುಖದಿಂದ ತಿಳಿಯುವದು ಕಷ್ಟ. ಆದರೂ ನಿಮ್ಮ ಕುತೂಹಲನಿವೃತ್ತಿಗಾಗಿ ಒಂದೆರಡು ವಾಕ್ಯಗಳನ್ನು ಬರೆಯುವೆನು. ಸಾರಗ್ರಹಣದೃಷ್ಟಿಯಿಂದ ಅವನ್ನು ಉಪಯೋಗಿಸಿಕೊಳ್ಳಿರಿ.*

ಸದ್ಗುರುವೆಂದರೆ ಸದ್ರೂಪನಾದ ಭಗವಂತನ ತತ್ತ್ವವನ್ನು ನಡೆನುಡಿಗಳಿಂದ ತಿಳಿಯಬಲ್ಲವನು. ಯಾವ ಮಹಾತ್ಮನು ಯಾವಾಗಲೂ ಪರಮಾತ್ಮ ತತ್ತ್ವದಲ್ಲಿಯೇ ನಿಷ್ಠನಾಗಿರುವನೋ ಅಂಥವನ ನಡೆನುಡಿಗಳಲ್ಲಿ ನಮಗೆ ಯಾವಾಗಲೂ ಉತ್ತಮವಾದ ಆದರ್ಶವೇ ದೊರೆಯುತ್ತಿರಬೇಕು. ಆದರೆ ಅಲ್ಲಿ ನಮಗೆ ಯಾವದಾದರೂ ಕಶ್ಮಲಬುದ್ಧಿಯು ಉಂಟಾದರೆ ಒಂದೊ, ಆ ಗುರುವು ಠಕ್ಕನಾಗಿರಬೇಕು, ಅಥವಾ ನಮ್ಮ ಪಾಪಶೇಷವು ಬಲವಾಗಿರಬೇಕು. ಗುರುವಿನಲ್ಲಿ ನಮಗೆ ಭಕ್ತಿಯು ಕಡಿಮೆಯಾದರೆ ನನಗೆ ಸರಿಯಾದ ಮಾರ್ಗವನ್ನು ತೋರೆಂದು ಭಗವಂತನನ್ನು ಬೇಡಿಕೊಳ್ಳಬೇಕು; ಅಥವಾ ಆ ಗುರುವಿನಿಂದ ನಮಗೆ ಯಾವ ಲಾಭವೂ ಆಗಲಾರದೆಂದು ಮನಗಂಡರೆ ಅವನನ್ನು ಬಿಟ್ಟು ದೂರ ಸರಿಯಬೇಕು.

ಸದ್ಗುರುವಾದವನು ಪರಮೇಶ್ವರನನ್ನೇ ತನ್ನ ಆತ್ಮನಾಗಿಟ್ಟುಕೊಂಡಿರುತ್ತಾನೆ. ಶಾಸ್ತ್ರದೃಷ್ಟಿಯಿಂದ ಆತನು ಪರಮಾತ್ಮನೇ ಆಗಿರುತ್ತಾನೆ. ತತ್ತ್ವಜಿಜ್ಞಾಸುವಾದವನು ಆತನ ದೇಹ, ವಾಣಿ–ಮುಂತಾದವುಗಳಲ್ಲಿರುವ ಕೊಂಕುಗಳನ್ನು ಎತ್ತೆಣಿಸುವದಕ್ಕಿಂತ ಆತನು ಯಾವಾಗಲೂ ನಿಷ್ಠೆಯಿಂದ ಭಾವಿಸುತ್ತಿರುವ ತತ್ತ್ವವೇ ಆತನೆಂದು ತಿಳಿಯಬೇಕು. ಶಾಲಗ್ರಾಮಶಿಲೆಯು ಛಿದ್ರವಾಗಿದ್ದರೂ ವಿಷ್ಣುವಿಗೆ ಚಿಹ್ನವೇ ಆಗಿರುತ್ತದೆ. ಅಲ್ಲವೆ? ಆದ್ದರಿಂದ ಸದ್ಗುರುವು ಯಾವಾಗಲೂ ಪರಮಾತ್ಮನೇ ಎಂಬುದನ್ನು ಮನದಂದುಕೊಳ್ಳಿರಿ.

ಗುರುವಿನ ಬಳಿಯಲ್ಲಿ ನಿಮ್ಮ ಲೌಕಿಕವ್ಯವಹಾರವನ್ನು ಕುರಿತ ಪ್ರಸ್ತಾವವನ್ನು ಮಾಡಬೇಡಿರಿ. ಲೋಕದಲ್ಲಿ ಕೆಲವು ಕಷ್ಟಗಳು ಬರುವದು ನಿಜ; ಆದರೆ ಅವು ನಮಗೆ ಉತ್ತಮವಾದ ಅನುಭವಗಳನ್ನು ಕೊಟ್ಟು ಮೇಲಕ್ಕೆತ್ತುವದಕ್ಕೆ ಸಾಧನವಾಗಿರುತ್ತವೆ. ಈ ಸಾಲವನ್ನು ಹೇಗೆ ತೀರಿಸಲಿ? ಆ ರೋಗವನ್ನು ಹೇಗೆ ಪರಿಹರಿಸಿಕೊಳ್ಳಲಿ? ಈ ಶತ್ರುವನ್ನು ಹೇಗೆ ದಮನಮಾಡಬೆಕು? ಇಂಥವನೊಬ್ಬನು ನನ್ನ ವಿಷಯಕ್ಕೆ ಕೆಟ್ಟದಾಗಿ ನಡೆಯುತ್ತಾನಲ್ಲ!–ಎಂದು ಮುಂತಾಗಿ ನಾವು ಎಂದಿಗೂ ಮನಸ್ಸಿನಲ್ಲಿ ಕಿರಿಕಿರಿ

ಹಚ್ಚಿಕೊಳ್ಳಬಾರದು. ಭಗವಂತನ ಧ್ಯಾನದಿಂದ ಸಾತ್ತ್ವಿಕಸಾಧನಗಳ ಬಲದಿಂದ ಇಂಥ ಕಷ್ಟಗಳು ತಮಗೆ ತಾವೇ ಪಾರಾಗುವವು.

ನಿಮ್ಮ ಗುರುಗಳು ಅನುಗ್ರಹಬುದ್ಧಿಯಿಂದ ನಿಮಗೆ ಯಾವದಾದರೊಂದು ಕಷ್ಟಪರಿಹಾರವನ್ನು ತಿಳಿಸಿದರೆ ಅದನ್ನು ಭಗದನುಗ್ರಹವೆಂದು ಭಾವಿಸಿರಿ. ಅವರು ಕೊಡಬಹುದಾದ ಹಣ, ತಿಳಿಸಬಹುದಾದ ಔಷಧಿ, ವ್ಯವಹಾರದಲ್ಲಿ ನಡೆಯುವದಕ್ಕೆ ಹೇಳಬಹುದಾದ ಬುದ್ಧಿವಾದ–ಇವುಗಳಿಂದ ಗುರುವನ್ನು ಸಾಹುಕಾರನು, ವೈದ್ಯನು, ವ್ಯವಹಾರಕುಶಲನು ಎಂದು ಮುಂತಾಗಿ ಎಣಿಸದಿರಿ. ಗುರುವನ್ನು ಅವನ ಸಾಹುಕಾರಿಕೆಗಾಗಿ, ವೈದ್ಯಜ್ಯೋತಿಷಾದಿಗಳ ತಿಳಿವಳಿಕೆಗಾಗಿ, ಅಥವಾ ವ್ಯವಹಾರ ಕೌಶಲಕ್ಕಾಗಿಯಲ್ಲ ನೀವು ಸೇರಿರುವದು; ಮತ್ತೇನೆಂದರೆ ಪರಮಾರ್ಥಸಾಧನೆಗಾಗಿ.

ಸದ್ಗುರುವನ್ನು ಕಂಡ ಕೂಡಲೆ ಆತನಲ್ಲಿ ಪ್ರಕಟವಾಗಿರುವ ಸಾತ್ತ್ವಿಕ ಭಾವಗಳನ್ನೆಲ್ಲ ಭಗವಂತನ ವಿಭೂತಿಗಳೆಂದೂ ಆತನು ಪರಮಾತ್ಮನೇ ಎಂದೂ ಭಾವಿಸಿರಿ. ಆತನಲ್ಲಿ ಯಾವದೊಂದು ಮನುಷ್ಯಭಾವನೆಯನ್ನೂ ತಂದುಕೊಳ್ಳಬೇಡಿರಿ. ಒಂದೂರಿನಲ್ಲಿ ಒಂದು ಹಾಳು ಗುಡಿಯಿತ್ತು, ಅಲ್ಲಿಗೆ ದಾರಿಹೋಕನೊಬ್ಬನು ಬಂದು ಹತ್ತಿರವಿದ್ದ ಕೊಳದಲ್ಲಿ ಮಿಂದು ಅಡಿಗೆಮಾಡಲಾರಂಭಿಸಿದನು. ಮೆಣಸಿನ ಕಾರವನ್ನು ಅರೆಯುವದಕ್ಕೆಂದು ಒಂದು ದುಂಡನೆಯ ಕಲ್ಲನ್ನು ಹುಡುಕುತ್ತಿರುವಲ್ಲಿ ದೈವಯೋಗದಿಂದ ಒಂದು ನಯವಾದ ಕಲ್ಲು ಸಿಕ್ಕಿತು. ಅದನ್ನು ಹತ್ತಿರವೇ ಇದ್ದ ಒರಳಲ್ಲಿ ಹಾಕಿ ಕಾರವನ್ನು ಅರೆಯುತ್ತಿರಲು ಮಧ್ಯ ಕಾಲದಲ್ಲಿ ಅವನಿಗೆ ಆ ಶಿಲೆಯು ಒಂದು ಶಿವಲಿಂಗವಿರಬಹುದೆಂಬ ಭಾವನೆ ಬಂದಿತು. ಅವನು ಕೂಡಲೆ ಆ ಕಲ್ಲನ್ನು ತೊಳೆದು ಪರೀಕ್ಷಿಸಲು ಅದು ನಿಜವಾಗಿಯೂ ಲಿಂಗವೇ ಆಗಿತ್ತು, ಈ ಲಿಂಗವನ್ನು ಇಲ್ಲಿಯೇ ಪ್ರತಿಷ್ಠೆ ಮಾಡುವೆನು ಎಂಬ ಸಂಕಲ್ಪವನ್ನು ಮಾಡಿಕೊಂಡು ಒಂದು ಶುಚಿಯಾದ ಸ್ಥಳವನ್ನು ಹುಡುಕುತ್ತಿದ್ದನು, ಬಳಿಯಲ್ಲಿದ್ದ ಒಂದು ಹಾಸುಗಲ್ಲನ್ನು ಸ್ವಲ್ಪ ಹಿಂದಕ್ಕೆ ಸರಿಸಲು ಅದರ ಕೆಳಗೆ ಒಂದು ಸಣ್ಣ ಕೊಪ್ಪರಿಗೆಯ ತುಂಬ ಹಣವಿರುವದು ಕಣ್ಣಿಗೆ ಬಿತ್ತು, ಆ ಪಾಂಥನು ಕೂಡಲೆ ಆ ಊರಿನ ಮಹಾಜನರನ್ನು ಸಹಾಯಕ್ಕೆ ಕರೆದುಕೊಂಡು ಶಿವಪ್ರತಿಷ್ಠೆಯನ್ನು ಮಾಡಿಸಿಯೇ ಬಿಟ್ಟನಂತೆ! ಸದ್ಗುರುವಿನಲ್ಲಿ ಕಾಣುವ ಉತ್ತಮಗುಣಗಳನ್ನೆಲ್ಲ ಹೀಗೆ ಪರಮಾತ್ಮಸಾಕ್ಷಾತ್ಕಾರಕ್ಕೆ ಉಪಯೋಗಿಸಿಕೊಳ್ಳಿರಿ. ಆತನನ್ನು ನಿಮ್ಮ ವ್ಯವಹಾರಕ್ಕೆ ಬಳಸುವದು ಶಿವಲಿಂಗವನ್ನು ಕಾರ ಅರೆಯುವ ಗುಂಡೆಂದು ಭಾವಿಸಿದಂತೆ ಆಗುವದು.

ಗುರುವಿನ ಸರಳಭಾವದಿಂದ ಆತನು ಸಾಧಾರಣನೆಂದು ಭಾವಿಸಿ ಮೋಸ ಹೋಗಬೇಡಿರಿ. ಪರಮೇಶ್ವರನು ಜಗತ್ತಿನಲ್ಲೆಲ್ಲ ತುಂಬಿರುತ್ತಿದ್ದರೂ ಅದರ ಕಲಂಕವು

ಆತನಿಗೆ ಹೇಗೆ ಸ್ವಲ್ಪವೂ ಅಂಟದೆ ಇರುವದೋ ಹಾಗೆ ಮಹಾತ್ಮನಾದ ಗುರುವು ತನ್ನ ಶಿಷ್ಯರವುಟ್ಟಕ್ಕೆ ಇಳಿದು ಎಲ್ಲರಿಗೂ ಸಲಿಗೆಯನ್ನು ಕೊಟ್ಟು ಅವರನ್ನು ಉದ್ಧಾರಮಾಡುತ್ತಿರುವನು. ರತ್ನವು ಎಲ್ಲಿದ್ದರೂ ರತ್ನವೇ ಆಗಿರುವಂತೆ ಸದ್ಗುರುವು ನಮ್ಮ ಮಟ್ಟಕ್ಕೆ ಇಳಿದು ವ್ಯವಹರಿಸಿದರೂ ನಾವು ಆತನನ್ನು ಸರ್ವದಾ ಪೂಜ್ಯಬುದ್ಧಿಯಿಂದ ಕಂಡು ಆತನಿಂದ ಅಧ್ಯಾತ್ಮದ ಲಾಭವನ್ನು ಪಡೆಯಬೇಕು.

ಗುರುಗಳಲ್ಲಿ ಶಿಷ್ಯರು ಅನೇಕರಿರಬಹುದಷ್ಟೆ. ಅವರನ್ನೆಲ್ಲ ಅಣ್ಣತಮ್ಮಂದಿರೆಂದೂ ಅಕ್ಕತಂಗಿಯರೆಂದೂ ಭಾವಿಸಿರಿ. ಹಿರಯವರಾದ ಶಿಷ್ಯರನ್ನು ಗೌರವದಿಂದ ಕಾಣಬೇಕು. ಹಿರಿಯವರೆಂದರೆ ವಯಸ್ಸಿನಿಂದಲ್ಲ, ಮುಖ್ಯವಾಗಿ ಗುಣಗಳಿಂದ ಅಧ್ಯಾತ್ಮಲಾಭವನ್ನು ಪಡೆದಿರುವವರಲ್ಲಿ ಮೇಲುಗೈಯಾಗಿರುವರು. ಗುರುಗಳ ಬಳಿಯಲ್ಲಿ ಹೇಗೆ ಗೌರವಬುದ್ಧಿಯಿಂದಿರಬೇಕೋ ಹಾಗೆಯೇ ಅವರಲ್ಲಿಯೂ ಗೌರವದಿಂದ ಇದ್ದುಕೊಂಡು ಸಾಧನವಿಚಾರವನ್ನೂ ಸಿದ್ಧಾಂತವಿಚಾರವನ್ನೂ ವಿನಿಮಯಮಾಡಿಕೊಳ್ಳಬೇಕು. ಗುರುಬೋಧೆ, ತನ್ನ ಸಾಧನ, ಜೊತೆಯವರ ಸಹವಾಸ–ಈ ಮೂರರಿಂದಲೂ ಸಾಧನವು ವೀರ್ಯವನ್ನು ಪಡೆಯಬೇಕಾಗಿರುತ್ತದೆ.

ಈ ಪತ್ರವನ್ನು ಇಷ್ಟಕ್ಕೆ ಮುಗಿಸುವೆನು. ಹೆಚ್ಚಿನ ವಿಷಯವು ಮುಂದಿನ ಪತ್ರದಲ್ಲಿ.

## 60. ಸಂನ್ಯಾಸದ್ವಯ

### (ಮೇ1951)

*ತಮ್ಮ ಪ್ರಶ್ನೆಗೆ ಉತ್ತರವನ್ನು ಬರೆಯಲು ನನ್ನ ಮನಸ್ಸು ಸ್ವಲ್ಪ ಹಿಂತೆಗೆಯಿತು. ಏಕೆಂದರೆ 'ಈಗಿನ ಕಾಲದಲ್ಲಿ ಸಂನ್ಯಾಸವನ್ನು ಸ್ವೀಕರಿಸಬಹುದೆ? ಸಂನ್ಯಾಸಾಶ್ರಮದ ಧರ್ಮಗಳನ್ನು ಸರಿಯಾಗಿ ಪಾಲಿಸುವದು ಕಷ್ಟವಲ್ಲವೆ? ಗೃಹಸ್ಥನಾಗಿಯೇ ಇರುವವನು ನಿವೃತ್ತಿಧರ್ಮವನ್ನು ಅನುಸರಿಸುವದಕ್ಕೆ ಆಗುವದೆ?'–ಎಂಬ ಪ್ರಶ್ನೆಗಳೆರಡಕ್ಕೂ ಒಂದೇ ಪತ್ರದಲ್ಲಿ ಉತ್ತರವನ್ನು ಕೊಡುವದು ಕಷ್ಟ. ಇದಲ್ಲದೆ ಸಂನ್ಯಾಸದ ಪ್ರಶ್ನೆಯನ್ನು ಕೇಳುವದು ಸುಲಭ; ಆದರ ನಿಜವನ್ನು ಅರಿತುಕೊಳ್ಳುವ ಮನಸ್ಸು ಮಾತ್ರ ಈಶ್ವರನ ಪ್ರಸಾದದಿಂದ ಬರತಕ್ಕದ್ದಾಗಿದೆ. ಹೇಗದರೂ ಆಗಲಿ, ಸಂನ್ಯಾಸದ ವಿಷಯಕ್ಕಿರುವ ತಪ್ಪು ಅಭಿಪ್ರಾಯವನ್ನಾದರೂ ಕಳೆದುಕೊಳ್ಳುವದರಿಂದ ಲಾಭವುಂಟೆಂದು ತೋರಿದ್ದರಿಂದ ಈ ಪತ್ರದಲ್ಲಿ ಆ ವಿಷಯವನ್ನು ಮೊದಲು ಚರ್ಚಿಸಿ ಬರೆಯುವೆನು. ಗೃಹಸ್ಥನ ವಿಚಾರಕ್ಕೆ ಇನ್ನೊಂದು ಪತ್ರದಲ್ಲಿ ನೀವು ಉತ್ತರವನ್ನು ನಿರೀಕ್ಷಿಸಬಹುದು.*

ಮೊಟ್ಟ ಮೊದಲು 'ಸಂನ್ಯಾಸ'ವು ಸ್ವೀಕರಿಸತಕ್ಕದ್ದಲ್ಲವೆಂಬುದನ್ನು ನೀವು ಮನಸ್ಸಿಗೆ ತಂದುಕೊಳ್ಳಬೇಕು. ಸಂನ್ಯಾಸವೆಂದರೆ ಸರ್ವಕರ್ಮಗಳನ್ನೂ ಬಿಡುವದೆಂದು

ಅರ್ಥವೆ ಹೊರತು ಯಾವದೊಂದು ಕರ್ಮವನ್ನಾಗಲಿ ಹಿಡಿಯುವದೆಂದಲ್ಲ. ಪರಮಾರ್ಥವಾದ ಸಂನ್ಯಾಸವು ನಿಜವಾಗಿ ಬಿಡತಕ್ಕದ್ದೂ ಅಲ್ಲ. ಏಕೆಂದರೆ ಕರ್ಮವನ್ನು ಬಿಡುವದೆಂಬುದೂ ಒಂದು ಬಗೆಯ ಕರ್ಮವೇ ಆಗಿದೆ. ಮಾಡುವದು, ಬಿಡುವದು–ಎಂಬ ಕ್ರಿಯೆಗಳು ಇಂದ್ರಿಯಗಳಿಗೂ ಮನಸ್ಸಿಗೂ ಸಂಬಂಧಪಟ್ಟಿರುತ್ತವೆ. ಏಕೆಂದರೆ ಈ ಎರಡು ಬಗೆಯ ಕರಣಗಳೂ ಹೊರಗಿನ ಶಬ್ದಸ್ಪರ್ಶ ಮುಂತಾದವುಗಳನ್ನು ಅಥವಾ ಒಳಗಿನ ಸುಖದುಃಖಾದಿಗಳನ್ನು ತೆಗೆದುಕೊಳ್ಳುತ್ತಲೋ ಅಥವಾ ಬಿಡುತ್ತಲೋ ಇರುತ್ತವೆ. ಯಾವ ವಿಷಯವನ್ನು ಬಿಟ್ಟರೂ ಕರ್ಮವನ್ನು ಮಾಡಿದಂತೆ. ಕರ್ಮವನ್ನು ಮಾಡುವದೆಂದರೂ ಒಂದೇ, ಅಂತಃಕರಣಬಹಿಃಕರಣಗಳನ್ನು ತಾನೆಂದು ತಪ್ಪಾಗಿ ತಿಳಿದುಕೊಂಡಿರುವದೆಂದರೂ ಒಂದೇ. ಆದ್ದರಿಂದ ಯಾವ ಕರಣಗಳಲ್ಲಿಯೂ ತಾನು ತನ್ನದೆಂಬ ಅಭಿಮಾನವನ್ನು ಮಾಡಿಕೊಳ್ಳದೆ ಇರುವ ಜ್ಞಾನದಿಂದ ಕರ್ತೃತ್ವ ಬುದ್ಧಿಯನ್ನು ಬಿಡುವದನ್ನು ಸಾಧಿಸಿಕೊಳ್ಳಬೇಕು. ಯಾವ ಕ್ರಿಯೆಯೂ ಇಲ್ಲದೆ ಆತ್ಮನಲ್ಲಿಯೇ ತಾನೆಂಬ ಬುದ್ಧಿಯನ್ನು ಸಂಪಾದಿಸಿಕೊಳ್ಳಬೇಕು. ಇದೇ ಜ್ಞಾನವು. ಈ ಜ್ಞಾನವು ಬಂದಾಗ ಇದು ನನ್ನ ಜ್ಞಾನವು ಎಂಬ ರೂಪದಲ್ಲಿ ಉಳಿಯುವದಿಲ್ಲ; ಅದು ಆತ್ಮನ ರೂಪದಲ್ಲಿಯೇ ಕೊನೆಗಂಡುಬಿಡುವದು. ಈ ಆತ್ಮರೂಪದಿಂದ ನೆಲೆನಿಲ್ಲುವದನ್ನೇ ವಿದ್ವತ್ಸಂನ್ಯಾಸವೆಂದು ಕರೆಯುತ್ತಾರೆ.

ಮೇಲೆ ಹೇಳಿರುವ ಸಂನ್ಯಾಸವು ಜ್ಞಾನದ ಫಲವಾಗಿ ಬರತಕ್ಕದ್ದಾದ್ದರಿಂದ ಅದಕ್ಕೆ ಅನುಕೂಲವಾಗಿರುವಂತೆ ಮತ್ತೊಂದು ಸಂನ್ಯಾಸವನ್ನು ಶ್ರುತಿಯಲ್ಲಿ ವರ್ಣಿಸಿರುತ್ತದೆ. ಗೃಹಸ್ಥನಿಗೆ ವಿಧಿಸಿರುವ ವೈದಿಕಕರ್ಮಗಳು ಮನುಷ್ಯಲೋಕ, ಪಿತೃಲೋಕ, ದೇವಲೋಕ–ಎಂಬ ಲೋಕತ್ರಯಗಳಿಂದಾಗುವ ಫಲಕ್ಕಾಗಿ ವಿಹಿತವಾಗಿರುವದರಿಂದ ಅವುಗಳಲ್ಲಿ ಆಶೆಯಿಲ್ಲದವರೂ ಅವುಗಳಿಗಿಂತಲೂ ಉತ್ತಮವಾದ ಪರಮಾತ್ಮಸಾಯುಜ್ಯ ವೆಂಬ ಪರಮಪುರುಷಾರ್ಥವನ್ನು ಪಡೆಯಬೇಕೆನ್ನುವವರೂ ಶಾಸ್ತ್ರದಲ್ಲಿ ಹೇಳಿರುವ ಕ್ರಮದಿಂದ ಸರ್ವಕರ್ಮಗಳನ್ನೂ ಬಿಡಬೇಕು. ಮುಂದೆ ಪರಮಹಂಸಪಾರಿವ್ರಾಜ್ಯವೆಂಬ ಸ್ಥಿತಿಯಲ್ಲಿದ್ದುಕೊಂಡು ಯಮನಿಯಮಾದಿಗಳನ್ನು ಅನುಷ್ಠಾನಮಾಡುತ್ತಾ ಸದ್ಗುರುವಿನ ಸೇವಾಪೂರ್ವಕವಾಗಿ ಶ್ರವಣಮನನನಿಧಿಧ್ಯಾಸನಗಳನ್ನು ಮಾಡಿ ಆತ್ಮಜ್ಞಾನವನ್ನು ಸಂಪಾದಿಸಬೇಕು. ಹೀಗೆ ಮುಮುಕ್ಷುಗಳು ಮಾಡಬೇಕಾಗಿರುವ ಸಂನ್ಯಾಸಕ್ಕೆ **ವಿವಿದಿಷಾಸಂನ್ಯಾಸವೆಂಬ** ಹೆಸರು ಬಂದಿದೆ.

ಈ ಎರಡು ಬಗೆಯ ಸಂನ್ಯಾಸಗಳ ವಿವರವನ್ನು ಶಂಕರಭಗವತ್ಪಾದರವರು ತಮ್ಮ ಪ್ರಸ್ಥಾನತ್ರಯಭಾಷ್ಯದಲ್ಲಿ ಪ್ರಸ್ತಾಪಿಸಿರುತ್ತಾರೆ. ವಿಶೇಷವಾಗಿ ಗೀತಾಭ್ಯಾಸದಲ್ಲಿ ಐದನೆಯ

ಅಧ್ಯಾಯದ ಅವತರಣಿಕೆಯನ್ನು ನೋಡಿರಿ. ಜ್ಞಾನಕ್ಕೋಸ್ಕರವಲ್ಲದೆ ಇದ್ದರೂ ಬ್ರಹ್ಮಲೋಕದಲ್ಲಿ ಶಾಶ್ವತವಾದ ಸುಖವನ್ನು ಪಡೆಯಬೇಕೆಂಬುವರು ಮಾಡಬೇಕಾದ ಯಜ್ಞೋಪವೀತದಂಡಧಾರಣಾದಿಚಿಹ್ನಗಳ ಸಮೇತವಾದ ಮತ್ತೊಂದು ಸಂನ್ಯಾಸವನ್ನು ಸ್ಮೃತಿಗಳಲ್ಲಿ ವಿಧಿಸಿದೆ. ಆ ಆಶ್ರಮವು ಸ್ವೀಕರಿಸತಕ್ಕದ್ದು. ಅದನ್ನು ಬೃಹದಾರಣ್ಯಕಭಾಷ್ಯ ದಲ್ಲಿ ಹೇಳಿದೆ. ಆಶ್ರಮರೂಪಸಂನ್ಯಾಸವನ್ನು ಕಲಿಯುಗದಲ್ಲಿ ಗ್ರಹಣಮಾಡಬಹುದೆ?– ಎಂಬುದು ವಾದಗ್ರಸ್ತ. ಆದರೆ ಜ್ಞಾನಸಂಬದ್ಧವಾದ ಸಂನ್ಯಾಸವನ್ನು ಯಾವ ಸ್ಮೃತಿಯಲ್ಲಿಯೂ ನಿಷೇಧಿಸಿರುವದಿಲ್ಲ.

ಆಶ್ರಮಸಂನ್ಯಾಸಿಗಳಿಗೆ ಪರಲೋಕದ ಭೋಗದಲ್ಲಿ ವಿರಕ್ತಿಯಾದರೆ ಅವರೂ ಪರಮಹಂಸಪಾರಿವ್ರಾಜ್ಯವನ್ನೇ ಪಡೆಯಬೇಕು. ಪರಮಹಂಸರಿಗೆ ಮಾಡಬೇಕಾದ ಅಥವಾ ಬಿಡಬೇಕಾದ ಯಾವ ಕರ್ಮವೂ ಇಲ್ಲವೆಂದೂ ಯಮನಿಯಮಗಳಿಂದ ಕೂಡಿದ ಜ್ಞಾನಾಭ್ಯಾಸವು ಮಾತ್ರ ಅವರಿಗೆ ಗುರುತೆಂದೂ ಮೇಲೆ ಹೇಳಿರುತ್ತೇನೆ. ಇದಕ್ಕೆ ಯೋಗ್ಯತೆಯಿಲ್ಲದವರೂ ಪರಮಹಂಸರೆಂದು ಕರೆದುಕೊಳ್ಳುತ್ತಿರುವದು ಕಲಿಪ್ರಭಾವದ ಒಂದು ಗುರುತು. ಸಂನ್ಯಾಸದ ವಿಷಯಕ್ಕೆ ನಿಮಗೆ ಮತ್ತೇನಾದರೂ ಸಂಶಯಗಳಿದ್ದರೆ ದಯವಿಟ್ಟು ಬರೆಯಿರಿ.

## 61. ಪರಮಾರ್ಥದ ಹಸಿವು

### (ಜೂನ್1951)

ನಿಮ್ಮ ಪತ್ರವು ಬಂದಿರುತ್ತದೆ. *''ಈಚೆಗೆ ಮನೆಯ ಕಡೆ ತಾಪತ್ರಯವು ಹೆಚ್ಚಿಕೊಂಡಿರುವದರಿಂದ ತಮ್ಮಲ್ಲಿಗೆ ಬರುವದು ಆಗಲಿಲ್ಲ. ಆದ್ದರಿಂದ ಇಲ್ಲಿಯ ತೊಂದರೆಗಳನ್ನೆಲ್ಲ ಪರಿಹರಿಸಿಕೊಂಡು ಬೇಗನೆ ಅಲ್ಲಿಗೆ ಒಮ್ಮೆ ಬರುವಂತೆ ಅನುಗ್ರಹ ಮಾಡಬೇಕು''* ಎಂತ ಬರೆದಿರುತ್ತೀರಿ.

ಮನುಷ್ಯನಿಗೆ ಯಾವದು ಅತ್ಯವಶ್ಯವಾಗಿ ಬೇಕಾಗಿರುವದೋ ಅದು ದೊರಕಬೇಕು ಎಂಬುದು ಒಂದು ಭಗವಂತನ ನಿಯಮವು. ನಿಮಗೆ ಈಚೆಗೆ ವ್ಯವಹಾರವೆಲ್ಲ ಸರಿಯಾಗಬೇಕು ಎಂಬ ಆಶೆಯು ಬಲವಾಗಿರಬೇಕು. ಆದ್ದರಿಂದಲೇ ಭಗವಂತನು ಪರಮಾರ್ಥದ ವಿಚಾರವನ್ನು ಅಷ್ಟಾಗಿ ನಿಮಗೆ ಕೊಟ್ಟಿರುವದಿಲ್ಲ. ಹಸಿವು ಉಂಟಾದಾಗ ಮನುಷ್ಯನಿಗೆ ಏತರ ಚಿಂತೆ ಇರುತ್ತದೆ? ಆಹಾರವನ್ನು ಬಿಟ್ಟು ಆಗ ಅವನಿಗೆ

ಮತ್ತೇನಾದರೂ ಬೇಕಾಗಿರುವದೇನು? ಇಲ್ಲ. ಇದರಂತೆ ಪರಮಾರ್ಥವೇ ಬೇಕೆನ್ನಿಸುವದಕ್ಕೆ ಅದರ ಹಸಿವು ಉಂಟಾಗಿರಬೇಕು. ಆಗ ಮತ್ತೊಂದರ ಗೊಡವೆಯೇ ಬೇಡವಾಗಿರುತ್ತದೆ.

ಪರಮಾರ್ಥದ ಚಿಂತೆಯಲ್ಲಿಯೇ ಇದ್ದುಬಿಟ್ಟರೆ ಪ್ರಪಂಚವು ಹೇಗೆ ಸಾಗಬೇಕು?–ಎಂದು ಕೆಲವರು ಕೇಳುತ್ತಾರೆ. ಆದರೆ ನಿಜವು ಹೀಗಿಲ್ಲ. ಪ್ರಪಂಚವು ಸಾಗದೆ ಅದಕ್ಕೆ ಯಾವಾಗ ತಾನೆ ಅಡ್ಡಿಯಾಗಿರುತ್ತದೆ? ಧನ, ಪುತ್ರ, ಪಶು, ವಿದ್ಯಾ, ಕೀರ್ತಿ–ಮುಂತಾದವುಗಳಲ್ಲೆಲ್ಲ ಅದ್ವಿತೀಯನೆನಿಸಬೇಕು ಎಂಬ ಹಿಡಿಯದಾಸೆ ಇದ್ದರೆ ಮಾತ್ರ ಅದು ಸಾಗದೆ ಇರಬಹುದು. ಈ ಲೋಕದ ಯಾತ್ರೆಗೆ ಬೇಕಾದಷ್ಟು ಆಹಾರವಸ್ತ್ರಾದಿಗಳು ಅಭಾವವಾಗಿರುವಂತೆ ಭಗವಂತನು ಯಾರಿಗೂ ಎಂದಿಗೂ ಮಾಡಿರುವದಿಲ್ಲ. ಅದರಲ್ಲಿಯೂ ಆದರವನ್ನು ಅನನ್ಯಚಿತ್ತತೆಯಿಂದ ಚಿಂತಿಸುತ್ತಿರುವ ಭಕ್ತರಿಗಂತೂ ಎಂದಿಗೂ ಯಾವ ಕೊರತೆಯೂ ಇರುವದೇ ಇಲ್ಲ. ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವನೆಂಬುದೇ ಭಗವಂತನ ಬಿರುದು.

ನೀವು ಎಂದಿನಂತೆ ಭಗವಂತನ ಸ್ಮರಣೆಗೆ ಆರಂಭಿಸಿರಿ. ಪರಮಾರ್ಥದ ಹಸಿವನ್ನು ಸಂಪಾದಿಸಿಕೊಳ್ಳಿರಿ. ಭಗವಂತನ ಅನುಗ್ರಹವೂ ಆಗುತ್ತದೆ; ಇಹಲೋಕದ ವ್ಯಾಪಾರವೂ ಸಾಗುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

## 62. ಮೌನದ ಸ್ವರೂಪ

### (ಜುಲೈ 1951)

*"ಮನಃಸ್ಥೈರ್ಯಕ್ಕೆ ಮೌನವ್ರತವು ಉತ್ತಮವೆಂದು ಒಂದು ಗ್ರಂಥದಲ್ಲಿ ಬರೆದಿದೆ. ಮೌನವೆಂದರೆ ಪ್ರಾಪಂಚಿಕ ವಿಷಯದ ಮಾತುಗಳನ್ನಾಡದಿರುವದೆ? ಅಥವಾ ಏನೂ ಮಾಡದೆ ಸುಮ್ಮನಿರುವದೆ? ಮೌನಕಾಲದಲ್ಲಿ ಸಂಧ್ಯಾವಂದನೆ, ಜಪ, ಪಾರಾಯಣ–ಇತ್ಯಾದಿಗಳನ್ನು ಮಾಡಬಹುದೆ? ಅವುಗಳನ್ನು ಬಿಟ್ಟರೆ ದೋಷವಿಲ್ಲವೆ? ಅಥವಾ ಎಲ್ಲವನ್ನೂ ಮಾನಸವಾಗಿ ಮಾಡಬೇಕೆ?–ಎಂಬುದನ್ನು ತಿಳಿಸಬೇಕಾಗಿ ಪ್ರಾರ್ಥನೆ" ಎಂದು ನೀವು ಕೇಳಿರುತ್ತೀರಿ.*

ಮೌನವೆಂದರೆ ಮಾತನಾಡದೆ ಇರುವದೆಂಬುದು ಲೌಕಿಕಾರ್ಥ, ಆದರೆ ಅದು ಮೂಕರಿಗೆ ಸ್ವಭಾವದಿಂದಲೇ ಇರುತ್ತದೆ. ಪರಮಾರ್ಥಕ್ಕೆ ಅದರಿಂದೇನೂ ಆಗಲಾರದೆಂಬುದು ಸ್ಪಷ್ಟ. ಪ್ರಪಂಚದ ಮಾತುಗಳನ್ನು ಆಡದೆ ಇರುವದೆಂಬುದು ಇದಕ್ಕಿಂತ ಹೆಚ್ಚಿನ ಅರ್ಥವೇ ಸರಿ. ಆದರೆ ಗೃಹಸ್ಥರಾದವರಿಗೆ ಇದು ಸಾಧ್ಯವಲ್ಲ. ಅವರು ವ್ಯವಹಾರಕ್ಕೆ ಅತ್ಯವಶ್ಯವಾಗಿರುವಷ್ಟು ಮಿತವಾಗಿ ಮಾತನಾಡುತ್ತಾ ಮಿಕ್ಕಕಾಲದಲ್ಲಿ

ಪರಮಾತ್ಮನ ನಾಮಸ್ಮರಣೆಯನ್ನು ಮಾಡುತ್ತಿರಬಹುದು. ಈ ದೃಷ್ಟಿಯಿಂದ ಸಂಧ್ಯಾವಂದನೆ, ಪಾರಾಯಣ—ಮುಂತಾದವುಗಳು ಇನ್ನೂ ಹೆಚ್ಚಿನ ಮೌನವೇ ಆಗುತ್ತವೆ. ಏಕೆಂದರೆ ಮನಸ್ಸನ್ನು ವ್ಯವಹಾರದ ಚಿಂತನೆಯಿಂದ ತಪ್ಪಿಸುವದೇ ಮೌನದ ಹೆಗ್ಗುರಿಯಾಗಿರುತ್ತದೆ.

ವಾಙ್ಮೌನವನ್ನು ಸಂಪಾದಿಸಿಕೊಂಡಮೇಲೂ ಒಳಗೆ ಮನಸ್ಸು ಸುಮ್ಮನಿರುವದಿಲ್ಲ. ಅದು ಯಾವದಾದರೊಂದು ವಿಷಯದ ಚಿಂತನೆಯನ್ನು ಮಾಡುತ್ತಲೇ ಇರುತ್ತದೆ. ಆದ್ದರಿಂದ ಮಾನಸಮೌನವು ಅತ್ಯವಶ್ಯ. ಮನಸ್ಸಿನಲ್ಲಿ ಪರಮಾತ್ಮನನ್ನು ಧ್ಯಾನಮಾಡುತ್ತಿರುವದು ಈ ದೃಷ್ಟಿಯಿಂದ ಇನ್ನೂ ಹೆಚ್ಚಿನ ಮೌನವಾಗಿರುತ್ತದೆ.

ಪರಮಾತ್ಮನಲ್ಲಿಯೇ ಮನಸ್ಸಿಟ್ಟುಕೊಂಡಿರುವ ನಿದಿಧ್ಯಾಸನವನ್ನು ಎಲ್ಲಕ್ಕೂ ಹೆಚ್ಚಿನ ಮೌನವೆಂದು ದೊಡ್ಡವರು ಹೇಳುತ್ತಾರೆ. ಪಾಂಡಿತ್ಯ, ಬಾಲ್ಯ, ಮೌನ—ಎಂಬ ಸಾಧನಗಳನ್ನು ಸಂನ್ಯಾಸಿಗಳಿಗೆ ಶಾಸ್ತ್ರದಲ್ಲಿ ವಿಧಿಸಿದೆ. ಆತ್ಮವಿಷಯದ ಜ್ಞಾನವನ್ನು ಸಂಪೂರ್ಣವಾಗಿ ಸಂಪಾದಿಸಿಕೊಂಡು, ಬಾಲಕನಂತೆ ದಂಭದರ್ಪಾದಿರಹಿತನಾಗಿದ್ದುಕೊಂಡಿರುವದು, ಅನಾತ್ಮಚಿಂತನೆಗೆ ಒಂದಿಷ್ಟೂ ಎಡೆಗೊಡದೆ ಪರಮಾತ್ಮನ ಅನುಸಂಧಾನದಲ್ಲಿಯೇ ಇರುವದು—ಇದೇ ಈ ಮೌನವು.

## 63. ಸಾಧನಕ್ರಮ

**(ಆಗಸ್ಟ್ 1951)**

*ನಿಮ್ಮ ಪತ್ರವು ಬಂದಿದೆ. "ಪ್ರತಿದಿನವೂ ಸ್ನಾನಸಂಧ್ಯಾದಿಗಳನ್ನು ಯಥಾಕಾಲದಲ್ಲಿ ಮಾಡುತ್ತೇನೆ. ನಮಗಿರುವ ಸ್ವಲ್ಪ ಆಸ್ತಿಯನ್ನು ಕಾಪಾಡಿಕೊಂಡು ಶ್ರಮದಿಂದ ಜೀವಿಸುತ್ತಿರುತ್ತೇನೆ. ರಾಮಾಯಣವನ್ನೂ ಭಗವದ್ಗೀತೆಯನ್ನೂ ನಿಯತವಾಗಿ ಪಾರಾಯಣ ಮಾಡುತ್ತಿರುತ್ತೇನೆ. ಹರಿದಿನಗಳಲ್ಲಿ ಉಪವಾಸವನ್ನೂ ವಿಶೇಷಪೂಜೆಯನ್ನೂ ಮಾಡುತ್ತಿರುತ್ತೇನೆ. ಅಧ್ಯಾತ್ಮಪ್ರಕಾಶ ಪತ್ರಿಕೆಯ ಸಂಚಿಕೆಗಳನ್ನು ಆಗಾಗ್ಗೆ ಓದುತ್ತಿರುತ್ತೇನೆ. ಆದರೆ ನನಗೆ ಭಗವತ್ಪ್ರಾಪ್ತಿಗೆ ಇನ್ನೇನಾದರೂ ಮಾಡತಕ್ಕದ್ದು ಇದೆಯೆ? ಎಂಬುದು ತಿಳಿಯಲಿಲ್ಲ. ವಿಶೇಷವಾಗಿ ಲಕ್ಷಿಸತಕ್ಕದ್ದು ಏನಾದರೂ ಇದ್ದರೆ ತಿಳಿಸಬೇಕು" ಎಂದು ಬರೆದಿರುತ್ತೀರಿ.*

ಇದಕ್ಕೆಲ್ಲ ಒಂದು ಪತ್ರದಲ್ಲಿ ಉತ್ತರವನ್ನು ಬರೆಯುವದು ಕಷ್ಟ. ಸಂಗ್ರಹವಾಗಿ ಬರೆದದ್ದನ್ನು ಓದಿಕೊಂಡರೂ ವಿಷಯವನ್ನು ಮನದಟ್ಟುಮಾಡಿಕೊಳ್ಳುವದೂ ಮತ್ತೂ

ಕಷ್ಟ. ಆದ್ದರಿಂದ ಪ್ರಧಾನವಾದ ಒಂದೆರಡು ವಿಷಯಗಳನ್ನು ಮಾತ್ರ ಈ ಪತ್ರದಲ್ಲಿ ಬರೆದಿರುತ್ತೇನೆ. ಸಮಯವು ಸಿಕ್ಕಿದರೆ ಮತ್ತೊಂದು ಪತ್ರವನ್ನು ತಮಗೆ ಬರೆಯುವೆನು.

ಸಾಧನವೆಂಬುದು ಮುಖ್ಯವಾಗಿ ಅಂತಃಕರಣಕ್ಕೆ ಸೇರಿದ್ದು. ಭಗವತ್ಪ್ರಾಪ್ತಿಯು ಮುಖ್ಯವಾಗಿ ಮನಸ್ಸಿಗೆ ಗೋಚರವಾಗತಕ್ಕದ್ದು–ಎಂಬುದನ್ನು ನೆನಪಿನಲ್ಲಿಡಬೇಕು. ಭಗವಂತನು ಎಲ್ಲಾ ಕಾಲದಲ್ಲಿಯೂ ನಮ್ಮ ಹೃದಯದಲ್ಲಿಯೇ ನಮ್ಮಗಳ ಆತ್ಮನ ರೂಪದಿಂದ ಅತ್ಯಂತಸಂನಿಹಿತನಾಗಿರುತ್ತಾನೆ. ನಮ್ಮ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ–ಇವೆಲ್ಲವೂ ಆತನು ನಮಗೆ ಅನುಗ್ರಹಿಸಿಕೊಟ್ಟಿರುವ ಉಪಕರಣಗಳು. ಅವುಗಳಲ್ಲಿರುವ ಶಕ್ತಿಗಳೆಲ್ಲವೂ ಆತನ ಕರುಣೆಯಿಂದಲೇ ನಮಗೆ ಸಿಕ್ಕಿವೆ. ಈ ಉಪಕರಣಗಳನ್ನು ಆದಷ್ಟು ಮಟ್ಟಿಗೂ ಆತನ ಸೇವೆಗೇ ಧಾರೆಯೆರೆಯುವೆನು–ಎಂಬ ಸಂಕಲ್ಪವನ್ನು ಮಾಡಿಕೊಳ್ಳಬೇಕು. ಪದ್ಧತಿಯಂತೆ ಸ್ನಾನಸಂಧ್ಯಾದಿಗಳನ್ನು ಮಾಡುವದು ಒಳ್ಳೆಯದೇ ಸರಿ. ಆದರೆ ಅವುಗಳೆಲ್ಲವೂ ಆತನ ಆರಾಧನೆಗೆ ಎಂಬುದನ್ನು ತಿಳಿದು ಮಾಡುತ್ತಿದ್ದರೆ ಬೇಗನೆ ನಮಗೆ ಭಗವಂತನ ಪ್ರಸಾದವು ಸಿಕ್ಕುವದು.

ಶರೀರ, ವಾಣಿ, ಮನಸ್ಸು. ಈ ಮೂರರಲ್ಲಿ ಒಂದನ್ನೂ ನಿಷಿದ್ಧ ಕರ್ಮಗಳಿಗೆ ವಿನಿಯೋಗಿಸಬಾರದು. ಕಳವು, ಹಿಂಸೆ, ಅಪವಿತ್ರಕಾರ್ಯಗಳು–ಮುಂತಾದವನ್ನು ಮಾಡುವದಕ್ಕೆ ಶರೀರವನ್ನುಪಯೋಗಿಸುವದೂ ಸುಳ್ಳು, ಬೀಳುಮಾತು, ಬೈಗುಳ, ಮುಂತಾದವಕ್ಕೆ ವಾಣಿಯನ್ನುಪಯೋಗಿಸವದೂ ರಾಗ, ದ್ವೇಷ, ಲೋಭ, ಮೋಹ, ಮಾತ್ಸರ್ಯ–ಮುಂತಾದ ಕುಚಿಂತನೆಗಳಿಗೆ ಅಥವಾ ವ್ಯರ್ಥವಿಚಾರಗಳಿಗೆ ಮನಸ್ಸನ್ನುಪಯೋಗಿಸುವದೂ ನಾವು ಮಾಡಬಹುದಾದ ಸ್ವಲ್ಪ ಸಾಧನೆಗೆ ಕಲಂಕವನ್ನು ತಂದೊಡ್ಡುವದು.

ಸತ್ಸಂಗವನ್ನು ಮಾಡಬೇಕು, ದುಸ್ಸಂಗವನ್ನು ಬಿಡಬೇಕು. ದುಷ್ಟರ ಸಂಗವನ್ನು ಮಾಡುವದೆಂದರೆ ಅವರ ಸಹವಾಸದಲ್ಲಿರುವದು ಮಾತ್ರವೇ ಅಲ್ಲ, ಅವರ ನಡೆನುಡಿಗಳನ್ನು ಮೆಚ್ಚುವದು ಅಥವಾ ಆ ವಿಷಯಗಳನ್ನು ಕುರಿತ ಗ್ರಂಥಗಳನ್ನು, ವರ್ತಮಾನಪತ್ರಿಕೆಗಳನ್ನು ಓದುವದು–ಮುಂತಾದವುಗಳೂ ದುಸ್ಸಂಗವೇ.

ಭಗವಂತನನ್ನು ಪಡೆಯಬೇಕೆಂಬ ಹಂಬಲು ಯಾವಾಗಲೂ ಮನಸ್ಸಿನಲ್ಲಿ ಹೆಚ್ಚುತ್ತಿರಬೇಕು. ಭಗವತ್ಪ್ರಾಪ್ತಿಗೆ ವಿರುದ್ಧವಾದ ವಿಚಾರಗಳಿಗೆ ಮನಸ್ಸು ಎಂದಿಗೂ ಎಡೆಗೊಡಬಾರದು. ಭಗವಂತನ ಗುಣಗಳು, ಲೀಲೆಗಳು–ಮುಂತಾದವನ್ನು ವರ್ಣಿಸುವ ಗ್ರಂಥಗಳನ್ನು ಓದುವದು, ಆ ಗುಣಲೀಲಾದಿಗಳನ್ನೇ ಮನಸ್ಸಿನಲ್ಲಿ ಹೊರಳಾಡಿಸುವದು–ಇವುಗಳಲ್ಲಿಯೇ ಕಾಲಕ್ಷೇಪವನ್ನು ಮಾಡುತ್ತಿರುವ ಮಹನೀಯರಿಗೆ ಭಗವಂತನ

ಪ್ರಾಪ್ತಿಯಾಗಬೇಕೆಂಬ ಹವಣಿಕೆಯು ಕೂಡ ಬಿಟ್ಟು ಹೋಗಬಹುದು. ಅದು ಮತ್ತೂ ಒಳ್ಳೆಯದು. ಏಕೆಂದರೆ ಭಗವಂತನ ನಾಮಸ್ಮರಣೆ, ಗುಣಸ್ಮರಣೆ, ಲೀಲಾಸ್ಮರಣೆ, ಆತನ ಮಹಿಮೆಯನ್ನು ಒಬ್ಬರಿಗೊಬ್ಬರು ಹೇಳಿಕೊಂಡು ನಲಿಯುವದು–ಹೀಗೆ ಭಗವಂತನ ಚಿಂತೆಯಲ್ಲಿಯೇ ಯಾರ ಮನಸ್ಸು ಮುಳುಗಿರುವದೋ ಅವರು ಭಗವತ್ಪ್ರಾಪ್ತಿಯ ಹಾದಿಯಲ್ಲಿಯೇ ನಡೆಯುತ್ತಿರುತ್ತಾರೆ. ಹೆಜ್ಜೆಹೆಜ್ಜೆಗೂ ಊರಿಗೆ ಹತ್ತಿರವಾಗುತ್ತಿರುವವರೂ ನಾವು ಊರಿಗೆ ಎಂದಿಗೆ ಹೋದೆವೆಂದು ಏತಕ್ಕೆ ತಾನೆ ಯೋಚಿಸಿಕೊಳ್ಳುವರು?

ಸಾಧನಗಳನ್ನು ಜಪಸಂಖ್ಯೆ, ಕಾಲದ ಪರಿಮಾಣ–ಮುಂತಾದ ಪರಿಮಿತಿಯಿಂದ ಲೆಕ್ಕ ಮಾಡಬಾರದು, ಸಾಧನಜೀವನವೇ ನಮ್ಮ ಜೀವನವಾಗಬೇಕು. ಇದೇ ನಿಜವಾದ ಆಧ್ಯಾತ್ಮಸಾಧನದ ಮರ್ಮವು.

## 64. ಭಗವಂತನಿಗಾಗಿ ಸರ್ವತ್ಯಾಗ

**(ಸೆಪ್ಟೆಂಬರ್ 1951)**

ನಿಮ್ಮ ಪತ್ರವು ತಲುಪಿರುತ್ತದೆ. *"ನನಗಿರುವ ಒಬ್ಬನೇ ಒಬ್ಬ ಮಗನು ಮೊದಲಿನ ಸದಾಚಾರವನ್ನು ಬಿಟ್ಟುಬಿಟ್ಟಿದಾನೆ. ತಾಯಿತಂದೆಗಳನ್ನೂ ಬಿಟ್ಟಿದಾನೆ. ತನ್ನ ಹೆಂಡತಿ ಮಕ್ಕಳಲ್ಲಿಯೂ ಅವನಿಗೆ ಆದರವಿಲ್ಲ. ಧರ್ಮ, ತತ್ತ್ವವಿಚಾರ–ಇವುಗಳನ್ನು ಕೇಳಿದರೆ ಅವನು ಕಿಡಿಕಿಡಿಯಾಗುತ್ತಾನೆ. ಭಗವಂತ. ಭಗವದ್ಭಕ್ತರು–ಎಂಬವರ ಮಾತೆಲ್ಲ ಕಂಡವರ ಗಂಟನ್ನು ಎಗರಿಸುವ ಯತ್ನ ಎನ್ನುತ್ತಾನೆ. ಅವನನ್ನು ಯಾವ ಮಾರ್ಗದಿಂದ ಹಿಂದಕ್ಕೆ ತಿರುಗಿಸಬೇಕೆಂಬುದು ತಿಳಿಯದೆ ಇದೆ. ಇದೇ ಯೋಚನೆಯಲ್ಲಿ ಹತ್ತುವರ್ಷಗಳು ಕಳೆದು ಹೋಗಿವೆ"* ಎಂದು ಬರೆದಿರುತ್ತೀರಿ.

ಇದು ಬಹಳ ದುಃಖದ ಮಾತು. ನಿಮ್ಮ ಮಗನು ಈಗ ವಯಸ್ಕನಾಗಿದ್ದು ತನ್ನ ಹಾನಿವೃದ್ಧಿಗಳನ್ನು ನೋಡಿಕೊಳ್ಳುವ ಸ್ಥಿತಿಯಲ್ಲಿದ್ದರೂ ತಾನೇ ತನ್ನ ಅಶ್ರೇಯಸ್ಸನ್ನು ಕೋರುತ್ತಿದ್ದರೆ ನೀವು ಏನುತಾನೆ ಮಾಡಲಾಪಿರಿ? ಈ ವಿಷಯದಲ್ಲಿ ನಾನು ನಿಮಗೆ ಯಾವ ಉಪಾಯವನ್ನೂ ಸೂಚಿಸಲಾರದವನಾಗಿರುತ್ತೇನೆ. ಈಶ್ವರನ ಕೃಪೆಯಿಂದಲೇ ನಿಮ್ಮ ಮಗನು ಸನ್ಮಾರ್ಗಕ್ಕೆ ತಿರುಗಬೇಕಾಗಿದೆ.

ಆದರೆ ನೀವು ಈಗ ಅವಶ್ಯವಾಗಿ ಯೋಚಿಸಬೇಕಾದ ಮತ್ತೊಂದು ಮುಖ್ಯ ವಿಷಯವಿದೆ. ನಿಮಗೆ ಆಗಲೆ ವಾರ್ಧಕ್ಯವು ಹತ್ತಿರವಾಗುತ್ತಾಬಂದಿದೆ. ನಿಮ್ಮ ಹುಡುಗನ

ಚಿಂತೆಯಲ್ಲಿ ನಿಮ್ಮ ಪುರುಷಾರ್ಥವನ್ನು ಮರೆಯುವದು ಯಾವ ಜಾಣತನ ? ಈಶ್ವರನು ಅನುಗ್ರಹಿಸಿದ್ದ ಶರೀರೇಂದ್ರಿಯಗಳು, ಐಹಿಕಸಂಪತ್ತು–ಇವುಗಳಿಂದ ನೀವು ಈವರೆಗೆ ಯಾವ ಲಾಭವನ್ನು ಪಡೆದಿರಿ? ಪರಮೇಶ್ವರನಲ್ಲಿ ನಿಮ್ಮ ಮಗನಿಗೆ ಭಕ್ತಿಯಿಲ್ಲದೆ ಇರಬಹುದು. ಆದರೆ ನೀವೇಕೆ ಅವನಿಗೆ ಮಾರ್ಗದರ್ಶಕರಾಗಬಾರದು? ಆ ಮಗನು ಶರೀರಸುಖಕ್ಕಾಗಿ ಎಲ್ಲವನ್ನೂ ಹೇಗೆ ತೊರೆದಿರುತ್ತಾನೋ ಹಾಗೆಯೇ ನೀವು ವಿಶ್ವರೂಪಭಗವಂತನ ಸೇವೆಗಾಗಿ ಮನಃಪೂರ್ವಕವಾಗಿ ನಿಮ್ಮ ಶರೀರವನ್ನೂ ಶರೀರಸಂಬಂಧವಾದ ಭೋಗಾದಿಗಳನ್ನೂ ಏತಕ್ಕೆ ಅರ್ಪಿಸಬಾರದು? ಭಗವಂತನು ಇಡಿಯ ವಿಶ್ವಕ್ಕೇ ಆತ್ಮನಾಗಿರುತ್ತಾನೆ. ನಾವೆಲ್ಲರೂ ಆತನ ಪ್ರೇಮದ ಪುತ್ರರು. ನಾವು ಆತನ ಮಾತನ್ನು ಕೇಳದೆ ಆತನ ಉಪಕಾರವನ್ನು ಮರೆತು ಹೀಗೆ ಐಹಿಕವಿಚಾರಗಳಲ್ಲಿಯೇ ಕಾಲವನ್ನು ಕಳೆಯುತ್ತಿದ್ದರೆ ಆ ವಿಶ್ವಪಿತನಿಗೆ ಎಷ್ಟು ಅಸಮಾಧಾನವಾಗಲಿಕ್ಕಿಲ್ಲ!

ನೀವು ನಿಮ್ಮ ತಂದೆಯಾದ ಆ ಭಗವಂತನಿಗೆ ವಿಧೇಯನಾಗಿರಲು ಯತ್ನಿಸಿದರೆ ನಿಮ್ಮ ಈ ಪುತ್ರನೂ ಸನ್ಮಾರ್ಗಕ್ಕೆ ಬಂದಾನೊ, ಏನೊ, ಏತಕ್ಕೆ ನೋಡಬಾರದು?

## 65. ಆಚಾರಗಳೂ ರಾಜಕೀಯನಿರ್ಬಂಧಗಳೂ

### (ಅಕ್ಟೋಬರ್ 1951)

*''ಈಗ ಒಂದಲ್ಲ ಒಂದು ನೆಪದಿಂದ ನಮ್ಮ ಸನಾತನಾರ್ಯಧರ್ಮವನ್ನು ಅನುಸರಿಸಬೇಕೆನ್ನುವವರಿಗೆ–ಅದರಲ್ಲಿಯೂ ಬ್ರಾಹ್ಮಣರಿಗೆ–ಯಾವದಾದರೊಂದು ಹೊಸ ಕಿರುಕುಳ ತೊಂದರೆಯು ಉಂಟಾಗುತ್ತಲೇ ಇದೆ. ಕೆಲವು ರಾಜಕೀಯ ನಿಬಂಧಗಳಿಂದ ನಮ್ಮ ನಮ್ಮ ಆಚಾರಗಳನ್ನು ನಡೆಯಿಸಿಕೊಂಡುಬರುವದಕ್ಕೆ ತಡೆಯಾಗಿದೆ. ಈಗಿನ ಸರಕಾರವು 'ಲೌಕಿಕ ಸರಕಾರ'ವಾದ್ದರಿಂದ ಧರ್ಮಕ್ಕೆ ಧಕ್ಕೆಯಾದರೂ ಅದು ಮನಸ್ಸಿಗೆ ಹತ್ತಿಸಿಕೊಳ್ಳುವದಿಲ್ಲ. ಇಂಥ ಸಂದರ್ಭದಲ್ಲಿ ನಾವು ಹೇಗೆ ಮಾಡಬೇಕು?'' ಎಂದು ಒಬ್ಬರು ಪ್ರಶ್ನೆ ಮಾಡಿದ್ದಾರೆ. ಅಧ್ಯಾತ್ಮಪ್ರಕಾಶ ಪತ್ರಿಕೆಯು ಮುಖ್ಯವಾಗಿ ಮಾನಸಿಕವಾದ ಆಧ್ಯಾತ್ಮಿಕ ಸಾಧನಗಳ ವಿಚಾರವನ್ನೂ ತತ್ತ್ವವಿಚಾರವನ್ನೂ ಕುರಿತೇ ಪ್ರಕಟಿಸುತ್ತಿದೆಯಾದರೂ ಸಂಪಾದಕರು ಇದೊಂದು ವಿಷಯದ ಲೇಖನಕ್ಕೆ ಅವಕಾಶವನ್ನು ಕಲ್ಪಿಸಿಕೊಡುವರೆಂದು ನಾನು ನಂಬಿರುತ್ತೇನೆ.*

ಸಮಾಜಸುಧಾರಣೆಯ ಹೆಸರಿನಲ್ಲಿ ಈಗ ಅನೇಕ ಅವಿವೇಕಗಳು ನಡೆಯುತ್ತಿರುವದು ನಿಜ. ಸರಕಾರದವರು 'ಲೌಕಿಕ'ವೆಂಬ ನಾಮಧೇಯವನ್ನು ತೊಟ್ಟು ವಿಶೇಷವಾಗಿ ಹಿಂದುಗಳಿಗೇ ಅನವಶ್ಯವಾದ ಅಡಚಣೆಗಳನ್ನು ತಂದೊಡ್ಡುವ 'ಹಿಂದು ಕೋಡು ಬಿಲ್ಲು' ಗಳಂಥ ಬಿಲ್ಲುಗಳನ್ನು ಏರ್ಪಡಿಸುತ್ತಿರುವದೂ ನಿಜ. ಆದರೆ ಅದೆಲ್ಲ

'ರಾಜನೀತಿಯ' ಸಲುವಾಗಿ. ಅಂಥ ಸರಕಾರದ ಅಧಿಕಾರಿಗಳಿಗೆ ಯಾವ ಆಚಾರದಲ್ಲಿಯೂ ವಿಶೇಷವಾಗಿ ನಂಬಿಕೆಯಿರುವದೇ ಇಲ್ಲ. ಆದ್ದರಿಂದ ಸಂದರ್ಭಾನುಸಾರವಾಗಿ ಅವರು ಕಾನೂನುಗಳನ್ನು ಮಾಡುತ್ತಲೂ ಅವು ಬೇಡವಾದಾಗ ಕಿತ್ತುಹಾಕುತ್ತಲೂ ಇರುವರು. ಇಷ್ಟರಿಂದ ಶ್ರದ್ಧಾವಂತರಾದ ಆರ್ಯಧರ್ಮೀಯರು ಎದೆಗೆಡಬೇಕಾಗಿಲ್ಲ. "ಆಚಾರವು ಪ್ರಥಮಧರ್ಮವು, ಧರ್ಮಕ್ಕೆ ಪ್ರಭು ಅಚ್ಯುತನು" ಎಂದು ಬಲ್ಲವರು ಹೇಳಿರುತ್ತಾರೆ. ಆದ್ದರಿಂದ ಭಗವಂತನನ್ನು ನಂಬಿ ನಮ್ಮನಮ್ಮ ಆಚಾರಗಳನ್ನು ಆದಷ್ಟು ಮಟ್ಟಿಗೆ ನಡೆಯಿಸಿದರೆ ಆಯಿತು. ಭಗವಂತನು ಧರ್ಮಪ್ರಿಯನು. ಧರ್ಮವು ಯಾವಾಗ ಕುಂದುವದೋ, ಅಧರ್ಮವು ಯಾವಾಗ ಹೆಚ್ಚುವದೋ, ಆಗ ಆತನು ತಾನೇ ಅವತಾರ ಮಾಡಿ ಧರ್ಮವನ್ನು ಉದ್ಧಾರಮಾಡುವೆನೆಂದು ವಚನವನ್ನು ಕೊಟ್ಟಿರುತ್ತಾನೆ.

ಆದರೆ ಇದು ಕಲಿಯುಗ. ಜನರಿಗೆ ಕಾಮಕ್ರೋಧಲೋಭಗಳು ಹೆಚ್ಚುತ್ತಿರುವದರಿಂದ ಯಾರಿಗೂ ಆಚಾರವಾಗಲಿ ಧರ್ಮವಾಗಲಿ ಬೇಡ. ಜನರು ತಾವು ತಾವೇ ದುರಾಚಾರಕ್ಕೆ ಬೀಳುತ್ತಿರುವಾಗ ಸ್ವಾರ್ಥಿಗಳಾದವರು ಸರಕಾರದ ಹೆಸರಿನಲ್ಲಿ ಕೆಲವು ಕಾನೂನುಗಳನ್ನು ಜಾರಿಗೆ ತಂದರೆ ಅದಕ್ಕಾಗಿ ನಾವೇಕೆ ಸಂತಾಪಪಡಬೇಕು? ಆಹಾರವಿಹಾರಗಳು, ಅತಿಥಿಸತ್ಕಾರಾದಿಗಳು–ಮುಂತಾದವುಗಳಲ್ಲಿ ಶಾಸ್ತ್ರವನ್ನು ಅತಿಕ್ರಮಿಸಿ ಸ್ವೇಚ್ಛೆಯಿಂದ ನಡೆಯುತ್ತಿರುವದು ಜನರಲ್ಲಿ ಹೆಚ್ಚುತ್ತಿದೆ. ಆದ್ದರಿಂದಲೇ ಇಂಥ ಕಾನೂನುಗಳಿಗೆ ಈಗ ಅವಕಾಶವು ದೊರೆತಿದೆ.

ಭಗವಂತನನ್ನು ನಂಬಿ ಶ್ರದ್ಧೆಯಿಂದ ಶಾಸ್ತ್ರೋಕ್ತವಾದ ಆಚಾರಗಳನ್ನು ಮಾಡುತ್ತಿರುವವರಿಗೆ ಯಾವ ಕಾನೂನಿನ ಭಯವೂ ಎಂದಿಗೂ ಬರುವದಿಲ್ಲ. ನಾನು ತಿಳಿದಂತೆ ಒಬ್ಬ ಮಾಮಾಲೆದಾರರಿದ್ದರು. ಅವರು ಶ್ರೌತಾಗ್ನಿಯನ್ನಿಟ್ಟುಕೊಂಡಿದ್ದರು. ಕಾಲಕಾಲಕ್ಕೆ ಆಹ್ನಿಕವನ್ನು ಮಾಡಿಕೊಂಡೇ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಅವರ ಕಚೇರಿಯ ಅವೇಕ್ಷಣಕ್ಕೆಂದು ಒಬ್ಬ ಆಂಗ್ಲ ಹುದ್ದೇದಾರನು ಬಂದನು. ಅಲ್ಲಿ ಎಲ್ಲಾ ಕೆಲಸವೂ ಗಡಿಯಾರದ ವ್ಯಾಪಾರದಂತೆ ಸುವ್ಯವಸ್ಥಿತವಾಗಿ ನಡೆಯುತ್ತಿತ್ತು. ರಿಕಾರ್ಡುಗಳಲ್ಲಿ ಯಾವ ದೋಷವೂ ಕಾಣಲಿಲ್ಲ. ಬೊಕ್ಕಸದಲ್ಲಿ ಒಂದು ಪೈ ಕಡಿಮೆಯಿಲ್ಲದೆ ಹಣಕಾಸು ಸರಿಯಾಗಿತ್ತು ಆ ಕಲೆಕ್ಟರನು "ಸರಿ, ನಿಮ್ಮಮಾಮಾಲೆದಾರರು ಎಲ್ಲಿ?" ಎಂದು ಪ್ರಶ್ನೆಮಾಡಿದನು. "ಈಗ ಅವರು ಯಜ್ಞೇಶ್ವರನ ಪೂಜೆ ಮಾಡಿಕೊಂಡಿದಾರೆ ಇನ್ನು ಒಂದು ಘಂಟೆಯೊಳಗೆ ಬರುತ್ತಾರೆ. ಅವರನ್ನು ಕರೆಯೋಣವೆ?" ಎಂದು ಕೇಳಿದರು. ಕಲೆಕ್ಟರ ಸಾಹೇಬನು "ಬೇಡ; ಅವರ ಪೂಜಾವಿಧಿಗೆ ನಾನೇಕೆ ಅಡ್ಡಬರಬೇಕು?" ಎಂದದ್ದಲ್ಲದೆ 'ವಿಸಿಟರ್ಸ್‌ಬುಕ್' ಎಂಬ ಪ್ರೇಕ್ಷಕರ

ಪುಸ್ತಕದಲ್ಲಿ ಹೀಗೆ ಬರೆದಿಟ್ಟನು; "ಮಾಮಾಲೆಯದಾರರು ಬಹಳ ಪ್ರಾಮಾಣಿಕರು. ಕೆಲಸವನ್ನು ಚಾಚೂ ತಪ್ಪದೆ ಮಾಡುತ್ತಿದಾರೆ. ಅವರು ಕಚೇರಿಗೆ ಸ್ವಲ್ಪ ತಡವಾಗಿ ಬರುತ್ತಾರೆ. ಆದರೆ ಕಾಲಕ್ಕೆ ಸರಿಯಾಗಿ ಬರುವ ಎಷ್ಟೋ ಮಾಮಲೆದಾರರಿಗಿಂತ ಇವರು ಕ್ರಿಯಾನಿಷ್ಠರು, ದಕ್ಷರು. ಈ ದೇವಮಾಮಲೆದಾರರ ಪೂಜಾನಿಮಿತ್ತದಿಂದ ಆಗುವ ಕಾಲವಿಳಂಬವನ್ನು ಮುಂದೆ ಬರುವ ಅಧಿಕಾರಿಗಳೂ ಕ್ಷಮಿಸುವರೆಂದು ನಾನು ನಂಬಿದೇನೆ."

ನಿಮಗೆ ಆಚಾರದಲ್ಲಿ ಶ್ರದ್ಧೆಯಿದ್ದರೆ ಭಗವಂತನು ಅವಶ್ಯಕವಾಗಿ ಅದನ್ನು ಕಾಪಾಡಿಕೊಂಡುಬರುತ್ತಾನೆಂದು ನಂಬಿರಿ.

## 66. ಬಡತಿಯ ಆಶೆ

### (ನವೆಂಬರ್ 1951)

*ತಮ್ಮ ಪತ್ರಕ್ಕೆ ಉತ್ತರ ಬರೆಯುವದು ಹೇಗೆಂಬ ಒಂದು ಯೋಚನೆ ಕೆಲವು ದಿನಗಳಿಂದಲೂ ನನ್ನನ್ನು ಬಾಧಿಸುತ್ತಿತ್ತು. ನನ್ನ ಉತ್ತರದಿಂದ ನಿಮಗೆ ದುಃಖವಾಗಬಹುದೆಂಬ ಅಂಜಿಕೆಯು ಇಷ್ಟು ಕಾಲವಿಲಂಬಕ್ಕೆ ಕಾರಣವಾಯಿತು. ಆದರೆ ಈಗ ನಾನು ಒಂದು ನಿಶ್ಚಯಕ್ಕೆ ಬಂದಿರುತ್ತೇನೆ. ನಿಮಗೆ ಸದ್ಯಕ್ಕೆ ಮನೋವ್ಯಥೆಯುಂಟಾದರೂ ನಿಮ್ಮ ಹಿತೈಷಿಗಳಾದವರು ನಿಜವನ್ನು ಮರೆಮಾಚಬಾರದು. ಈ ನಿಶ್ಚಯದಿಂದ ನನ್ನ ಅಭಿಪ್ರಾಯವನ್ನು ಮುಚ್ಚುಮರೆಯಿಲ್ಲದೆ ಬರೆದಿರುತ್ತೇನೆ. ನೀವು ಇದರ ಸದುಪಯೋಗವನ್ನು ಮಾಡಿಕೊಂಡರೆ ನಾನು ಧನ್ಯನು.*

ನಿಮಗೆ ಸರಕಾರಿ ಉದ್ಯೋಗದಲ್ಲಿ ಬಡತಿ ದೊರೆಯದೆ ಬಹಳ ದೀರ್ಘಕಾಲ ವಾಯಿತು. ಅದಕ್ಕಾಗಿ ನಿಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಬೇರೆ ಬೇರೆ ಪರೀಕ್ಷೆಗಳನ್ನೂ ಕೊಟ್ಟದ್ದಾಯಿತು. ಈಗ ಸ್ವಲ್ಪ ಹಿಂದಿಯನ್ನೂ ಕಲಿತಿದ್ದಾಯಿತು. "ಆದರೂ ಅದೇಕೊ, ಮೇಲಿನವರ ಕೃಪಾದೃಷ್ಟಿ ನನ್ನ ಮೇಲೆ ಬಿದ್ದಿರುವದಿಲ್ಲ. ಇದರಿಂದ ಸ್ವಲ್ಪ ಬೇಸರವಾಗಿದೆ. ಹಗಲುಹೊತ್ತು ಉದ್ಯೋಗವನ್ನು ಮಾಡಿದ ಬಳಿಕ, ಸ್ವಲ್ಪ ನಗರದ ಸಂಚಾರಮಾಡುವದು, ಜೊತೆಯವರ ಸಹವಾಸದಲ್ಲಿ ಸ್ವಲ್ಪ ವಿನೋದಕಾಲಕ್ಷೇಪ ಮಾಡುವದು, ಆಗಾಗ್ಗೆ ಒಂದಿಷ್ಟು ಸಿನಿಮ ನೋಡಿಬರುವದು–ಹೀಗೆ ಕಾಲವನ್ನು ತಳ್ಳುತ್ತಿದ್ದೇನೆ. ಸರಕಾರಿ ಗೆಜಿಟ್ಟಿನಲ್ಲಿ ಈಚೆಗೆ ಸರಿಯಾದ ಸ್ಥಾನಗಳು ಖಾಲಿಯಾಗಿರುವ ಸುದ್ದಿಗಳೇ ಕಾಣುವದಿಲ್ಲ" ಎಂದು ಬರೆದಿದ್ದೀರಿ.

ನಿಮಗೊಂದು ಬಿಚ್ಚು ಮಾತು ಹೇಳಿಬಿಡಲೆ? ಈಗ ಸರಕಾರಿ ಉದ್ಯೋಗಗಳಲ್ಲಿ ಸ್ಥಾನಗಳು ಖಾಲಿಯಾಗಿ ನಿಮಗೆ ಬಡತಿ ಸಿಕ್ಕುವದು ಬಹಳ ಕಷ್ಟವಾಗಿದೆ ಎಂಬುದು ಸ್ವಾಭಾವಿಕವಾಗಿದೆ. ಏಕೆಂದರೆ ಈಗ ಕೆಲಸಗಳಿಗೆ ಪೈಪೋಟಿ ಹೆಚ್ಚಾಗಿದೆ. ನೀವು ಹೇಳುವಂತೆ ಬ್ರಾಹ್ಮಣರಿಗೆ ಕೆಲಸಗಳು ಸಿಕ್ಕುವದು ಕಷ್ಟವೇ ಸರಿ. ಆದರೆ ನೀವು ಇದರ ದುಃಖವನ್ನು ಮನಸ್ಸಿಗೆ ಹತ್ತಿಸಿಕೊಂಡು ನೀವು ಬರೆದಿರುವ ರೀತಿಯಲ್ಲಿ ವ್ಯರ್ಥಕಾಲಕ್ಷೇಪವನ್ನು ಮಾಡುವದು ಹೇಗೆ ಸರಿಯಾದೀತು? ನಿಮಗೆ ವಯಸ್ಸು ದಿನದಿನಕ್ಕೂ ಹೆಚ್ಚಾಗುತ್ತಿದೆ. ಶರೀರದ ಸೌಂದರ್ಯವೂ ಬಲವೂ ಇದ್ದಂತೆ ಎಂದಿಗೂ ಇರುವದಿಲ್ಲವೆಂಬುದು ನಿಶ್ಚಿತ. ಮಧ್ಯಮವಯಸ್ಸಿಗೆ ಬಂದಿರುವ ನೀವು ಹೀಗೆಯೇ ಉಲ್ಲಾಸದಿಂದ ಕಾಲವನ್ನು ಹಾಕುವದು ಕೊನೆಯವರೆಗೂ ಸಾಧ್ಯವೆ? ಅದು ಸಾಧ್ಯವಾದರೂ ಈ ಜನ್ಮದ ಶರೀರವೊಂದೇ ನಿಮ್ಮ ವಿಚಾರಕ್ಕೆ ವಿಷಯವಾಗಿರಬೇಕೆ? ನಿಮ್ಮ ಆಧ್ಯಾತ್ಮಿಕ ಅಭಿವೃದ್ಧಿಯನ್ನು ಕುರಿತು ಒಂದು ದಿನವೂ ವಿಚಾರಮಾಡುವದು ಬೇಡವೆ? ಇದನ್ನು ನೀವು ಸಾವಧಾನವಾಗಿ ಆಲೋಚಿಸಬೇಕು.

ನಿಮಗೆ ನನ್ನ ಹಿತೋಸಕ್ತಿಯಲ್ಲಿ ಆದರವಿದ್ದರೆ, ವಿಲಾಸಿಜೀವನದಲ್ಲಿ ಕೂಡಲೆ ವೈರಾಗ್ಯವನ್ನು ಸಂಪಾದಿಸಿಕೊಳ್ಳಿರಿ. ಹೋದಕಾಲವು ಮತ್ತೆ ಹಿಂತಿರುಗುವದಿಲ್ಲ ವೆಂಬುದನ್ನು ನಂಬಿರಿ. ಧರ್ಮಮಾರ್ಗಕ್ಕೆ ಯಾವಾಗಲೆಂದರೆ ಆಗ ಮನಸ್ಸು ಒಲಿಯುವದೆಂಬ ನಿರೀಕ್ಷಣೆಯನ್ನು ಇಟ್ಟುಕೊಳ್ಳಬೇಡಿರಿ. ಯಾವ ಜನರಲ್ಲಿಯೂ ಪಕ್ಷಪಾತವಿಲ್ಲದೆ, ಅವರವರ ಕರ್ಮಕ್ಕೆ ಅನುಗುಣವಾಗಿ ಫಲವನ್ನು ಕೊಡುವ ಪ್ರಭುವಾದ ಈಶ್ವರನೊಬ್ಬನು ಇದ್ದಾನೆಂದು ದೃಢವಾಗಿ ನಂಬಿರಿ. ಈ ಕೂಡಲೆ ಅಧ್ಯಾತ್ಮ ವಿಚಾರದಲ್ಲಿಯೂ ಧಾರ್ಮಿಕವಿಚಾರದಲ್ಲಿಯೂ ನಡೆನುಡಿಗಳಿಂದ ಉಪದೇಶಿಸಬಲ್ಲ ಸತ್ಪುರುಷರನ್ನು ಸೇವಿಸಿರಿ. ಅದರಿಂದ ಖಂಡಿತವಾಗಿ ನಿಮ್ಮ ಮನೋವ್ಯಥೆಯು ತಪ್ಪುವದು. ನೀವು ಎಷ್ಟಾದರೂ ಒಂಟಿಗರಾಗಿ ಜೀವನ ಮಾಡುತ್ತಿರುವವರು. ಮಿತವ್ಯಯವನ್ನು ಅಭ್ಯಾಸಮಾಡಿದರೆ ಈಗಿನ ಆದಾಯವೇ ನಿಮ್ಮ ಜೀವನಕ್ಕೆ ಸಾಕಾಗಬಹುದು. ಭಗವಂತನ ದಯೆಯಿದ್ದರೆ ನಿಮ್ಮ ಮನಸ್ಸಿನ ಈ ಮಾರ್ಪಾಡಿನಿಂದ ಭಕ್ತಿವೈರಾಗ್ಯಗಳು ನಿಮ್ಮಲ್ಲಿ ಹುಟ್ಟಬಹುದು. ನಿಮ್ಮ ಕರ್ಮವು ಪಕ್ವವಾದಾಗ ಉದ್ಯೋಗದಲ್ಲಿ ಬಡತಿಯೂ ದೊರಕಬಹುದು. ಆದರೆ ಆ ಬಡತಿಯು ದೊರಕಲಿ ದೊರಕದಿರಲಿ, ನಿಮ್ಮ ಇಹಪರ ಸುಖಶಾಂತಿಗಳ ಬಡತಿಯು ಎಂದಿಗೂ ತಪ್ಪುವದಿಲ್ಲ.

ಇನ್ನೊಂದು ಮಾತು. ಮನಸ್ಸಿಗೆ ಒಂದು ಸ್ವಭಾವವಿರುತ್ತದೆ. ಆದಕ್ಕೆ ಕಡಿಮೆಯ ವೆಚ್ಚದಲ್ಲಿ ಜೀವನಮಾಡಿಕೊಂಡು ನೆಮ್ಮದಿಯಾಗುತ್ತಿದ್ದರೂ ಹೆಚ್ಚಿನ ಆದಾಯವು

ಬಂದಬಳಿಕ ಅದು ಅತೃಪ್ತಿಯನ್ನು ಕಲಿತುಕೊಳ್ಳುವದು. ನಮ್ಮನ್ನು ಆಶೆಯ ದಾಸರನ್ನಾಗಿ ಮಾಡಿ, ಎಲ್ಲರಿಗೂ ದಾಸರಾಗುವಂತೆ ಮಾಡಿಬಿಡುವದು. ಆಗ ಹಣದ ಬಡತಿಯಂತೆ ದುಃಖಕ್ಕೂ ಬಡತಿಯಾದರೆ ಏನು ಗತಿ? ನಿಮಗೆ ತೃಪ್ತಿಸುಖಶಾಂತಿಗಳ ಬಡತಿಯು ಬೇಕೆ, ಅತೃಪ್ತಿ ದುಃಖವಿಕ್ಷೇಪಗಳ ಬಡತಿಯು ಬೇಕೆ? ಇದನ್ನು ಆಲೋಚಿಸಿಕೊಂಡು ನಿಮ್ಮ ವ್ಯವಹಾರಗಳನ್ನು ತಕ್ಕಂತೆ ಮಾರ್ಪಡಿಸಿಕೊಳ್ಳುವದೇ ಒಳ್ಳೆಯದೆಂದು ನನ್ನ ಭಾವನೆ.

## 67. ಯುವಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ

**(ಡಿಸೆಂಬರ್ 1951)**

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. ನಿಮಗೆ ಚಿಕ್ಕ ವಯಸ್ಸಿನಲ್ಲಿಯೇ ಈ ದೊಡ್ಡ ಹುದ್ದೆ ಸಿಕ್ಕಿರುವದಕ್ಕೆ ಹರ್ಷವಾಗುತ್ತದೆ. ''ಮೇಲಿನ ಆಫೀಸರರು ಮೊದಮೊದಲು ನನ್ನ ಮೇಲೆ ತೋರಿಸುತ್ತಿದ್ದ ಅಭಿಮಾನವನ್ನು ಈಗ ತೋರಿಸುತ್ತಿಲ್ಲ; 'ಹಿಡಿದದ್ದೂ ತಪ್ಪು, ಬಿಟ್ಟದ್ದೂ ತಪ್ಪು' ಎಂಬ ನೀತಿಯನ್ನು ಅನುಸರಿಸುತ್ತಿದಾರೆ. ಮನೆಯಲ್ಲಿ ತಂದೆತಾಯಿಗಳೂ ನನ್ನಲ್ಲಿ ಏನಾದರೊಂದು ನಿಮಿತ್ತದಿಂದ ಅಸಮಾಧಾನಮಾಡಿಕೊಳ್ಳುತಿದಾರೆ. ನನಗೆ ವಿದ್ಯಾಭ್ಯಾಸದ ಕಾಲದಲ್ಲಿ ಸಹಾಯ ಮಾಡಿ ಪ್ರೋತ್ಸಾಹಕೊಡುತ್ತಿದ್ದವರಿಗೆಕೂಡ ನಾನು ಅತೃಪ್ತಿಯನ್ನುಂಟುಮಾಡಿರುವಂತೆ ಭಾಸವಾಗುತ್ತಿದೆ. ನನ್ನೊಳಗೆ ನಾನು ಪರೀಕ್ಷೆಮಾಡಿಕೊಂಡಿರುವದರಲ್ಲಿ ನನ್ನಲ್ಲಿ ಯಾವ ತಪ್ಪೂ ಕಾಣಿಸುವದೇ ಇಲ್ಲ. ಈಗ ನಾನು ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಕೆಲವು ಸೂಚನೆಗಳನ್ನು ಬರೆದು ತಿಳಿಸಿಕೊಡಬೇಕು'' ಎಂದು ಕೇಳಿರುತ್ತೀರಿ. ಈ ವಿಷಯದಲ್ಲಿ ನಿಮ್ಮ ಸಂನಿವೇಶವು ಹೇಗಿದೆಯೊ, ಏತಕ್ಕೆ ಹಾಗೆ ನಿಮ್ಮ ವರ್ತನೆಯು ಅನೇಕರಿಗೆ ಅಸಮಾಧಾನಕರವಾಗಿದೆಯೋ, ಇಷ್ಟು ದೂರದಿಂದ ತಿಳಿಸುವದು ಕಷ್ಟ. ಇದರ ಮೇಲೆ ಇಂಥಿಂಥ ವಿಶೇಷಸಂದರ್ಭಗಳಲ್ಲಿ ಹೀಗೆ ಹೀಗೆ ನಡೆದುಕೊಳ್ಳಬೇಕು ಎಂದು ತಿಳಿಸುವದು ಯಾರಿಂದಲೂ ಸಾಧ್ಯವಿಲ್ಲ. ನನ್ನಂಥವರ ಪಾಡೇನು? ಆದರೂ ನಿಮ್ಮ ಪ್ರಶ್ನೆಗೆ ಸಾಮಾನ್ಯರೀತಿಯಿಂದ ಒಂದು ಉತ್ತರವನ್ನು ಬರೆದಿದ್ದೇನೆ. ಇದರಿಂದ ನಿಮಗೆ ಏನಾದರೂ ಸಹಾಯವು ದೊರೆಯಿತೆಂದು ತಿಳಿದರೆ ನನಗೆ ಸಂತೋಷವಾಗುವದು.*

ಬಾಲ್ಯ, ಯೌವನ, ಕೌಮಾರ, ವಾರ್ಧಕ–ಎಂಬೀ ಅವಸ್ಥೆಗಳು ಪ್ರಾಣಿಗಳಿಗೆಲ್ಲ ಸಹಜವಾಗಿಯೇ ಉಂಟಾಗುವವಷ್ಟೆ. ಆಯಾ ಅವಸ್ಥೆಯು ಬಂದಾಗ ಶರೀರದಲ್ಲಿ ಕೆಲವು ಮಾರ್ಪಾಡುಗಳು ಆಗುವವೆಂಬುದು ನಿರೀಕ್ಷಿಸತಕ್ಕದ್ದೇ ಆಗಿರುತ್ತದೆ. ಗಿಡಮರಬಳ್ಳಿಗಳಲ್ಲಿ ಕೂಡ ಈ ಬೇರೆಬೇರೆಯ ಅವಸ್ಥೆಗಳಲ್ಲಿ ಬೇರೆ ಬೇರೆಯ ವೇಷಗಳು ಕಂಡು ಬರುತ್ತವೆಯಲ್ಲವೆ? ಈ ಆಕಾರಗಳ ಬದಲಾವಣೆಗೆ ಹಿನ್ನಲೆಯಾಗಿ ಶರೀರದ ಒಳಗೂ ಕೆಲವು ಮಾರ್ಪಾಡುಗಳು ಇದ್ದೇ ಇರಬೇಕಷ್ಟೆ. ಪಶುಪಕ್ಷಿಗಳಲ್ಲಿಯೂ ಹೀಗೆಯೇ

ಬದಲಾವಣೆಯಾಗುತ್ತದೆ. ಆಗ ಅವುಗಳ ಚಲನವಲನಗಳೇ ಬೇರೆಯಾಗಿಬಿಡುತ್ತವೆ. ಇನ್ನು ಮನುಷ್ಯನ ವಿಷಯದಲ್ಲಿ ಹೇಳತಕ್ಕದ್ದೇನು? ನಿಮಗೆ ಈಗತಾನೆ ತಾರುಣ್ಯವು ತೋರಿಕೊಂಡಿರುತ್ತದೆ. ಆದ್ದರಿಂದ ಶರೀರದ ಅವಯವಗಳಲ್ಲಿ ಕೆಲಕೆಲವು ಮಾರ್ಪಾಡುಗಳು ಅವಶ್ಯವಾಗಿ ಆಗುತ್ತಿವೆ. ಇದರ ಪರಿಣಾಮವು ಮನಸ್ಸಿನ ಮೇಲೆಯೂ ಆಗಬಹುದೆಂಬುದನ್ನು ನೀವು ಮನದಂದುಕೊಳ್ಳಬೇಕು.

ಮಾನವನಿಗೆ ಯೌವನವು ಬರುವದು ಒಂದು ದೊಡ್ಡ ಕ್ರಾಂತಿಯ ಅವಸ್ಥೆ. ಆಗ್ಗೆ ಅವನ ಶರೀರದಲ್ಲಿ ಶಕ್ತಿಯೂ ಹುರುಪೂ ಹೆಚ್ಚುವವು; ಆದ್ದರಿಂದ ಮನಸ್ಸಿನಲ್ಲಿಯೂ ಉತ್ಸಾಹವು ಹೆಚ್ಚುವದು ಸ್ವಾಭಾವಿಕವಾಗಿದೆ. ಆಗ ಯುವಕನಾದವನು ತನಗೂ ತಿಳಿಯದೆಯೇ ಕೆಲವು ಅಡ್ಡಹಾದಿಗಳನ್ನು ಹಿಡಿಯುವ ಸಂದರ್ಭವುಂಟು. ಇಂಥ ಕಾಲದಲ್ಲಿ ಹೊಸಹೋರಿಗಳನ್ನೂ ಹೊಸಕುದುರೆಗಳನ್ನೂ ಪಳಗಿಸುವ ಹಾಗೆ ಶರೀರವನ್ನೂ ಮನಸ್ಸನ್ನೂ ಹತೋಟಿಯಲ್ಲಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಮನಸ್ಸಿಗೆ ಸ್ವಾತಂತ್ರ್ಯಲಾಲಸೆಯು ಹೆಚ್ಚಾಗಿದ್ದರೂ ಅದನ್ನು ಗುರುಹಿರಿಯರ ಮೇಲುವಿಚಾರಣೆಗೆ ಹೊಣೆಮಾಡಿರುವದೇ ಕ್ಷೇಮಕರ. ಅನುಭವಿಗಳಾದ ಸಾಧುಜನರ ಸಹವಾಸವು ಈ ಕಾಲಕ್ಕೆ ಬಹಳ ಉಪಯೋಗವಾಗುವದು. ಸಾತ್ತ್ವಿಕವಾದ ಆಹಾರವಿಹಾರಗಳನ್ನು ಈಗ ತಪ್ಪದೆ ಅನುಸರಿಸಬೇಕು.

ನಮ್ಮ ಕಾರ್ಯಕರಣಸಂಘಾತವು ಒಂದಾನೊಂದು ಪುರುಷಾರ್ಥವನ್ನು ಸಂಪಾದಿಸಿಕೊಡುವದಕ್ಕೆ ತಕ್ಕಂತೆ ಏರ್ಪಟ್ಟಿರುತ್ತದೆ. ಪರಮೇಶ್ವರನು ನಮಗೆ ದಯಪಾಲಿಸಿರುವ ಈ ದೇಹೇಂದ್ರಿಯಾದಿಗಳ ಯಂತ್ರವನ್ನು ಸದುಪಯೋಗ ಮಾಡಿಕೊಳ್ಳುವದು ಅಥವಾ ದುರುಪಯೋಗಮಾಡಿಕೊಳ್ಳುವದು–ಇದು ಯೌವನದ ಅವಸ್ಥೆಯಲ್ಲಿ ನಿರ್ಣೀತವಾಗತಕ್ಕದ್ದಾಗಿದೆ. ನಿಮ್ಮ ಮನಸ್ಸಿಗೆ ಶುಭವಾಸನೆಗಳ ಸಂಗ್ರಹವನ್ನು ಮಾಡಿಕೊಳ್ಳುವದಕ್ಕೆ ಇದೇ ಸಮಯ. ಭಗವದ್ಗೀತೆಯಂಥ ಪ್ರಾಸಾದಿಕಗ್ರಂಥವೊಂದನ್ನು ಅನುವಾದಸಹಿತವಾಗಿ ಪಾರಾಯಣಮಾಡಿ ಅದರ ಉಪದೇಶವನ್ನು ಕಾರ್ಯದಲ್ಲಿ ಆಚರಣೆಗೆ ತಂದುಕೊಳ್ಳುವದಕ್ಕೆ ಯತ್ನಿಸಿರಿ. ಒಂದು ದಿನವೂ ತಪ್ಪದೆ ಬೆಳಗಿನ ಜಾವಕ್ಕೆ ಎದ್ದು ಪರಮೇಶ್ವರನ ಧ್ಯಾನವನ್ನು ಮಾಡಿರಿ; ಸಾಯಂಕಾಲ ಮತ್ತೊಮ್ಮೆ ಮಾಡಿರಿ. ದೊಡ್ಡವರ ಉಪದೇಶವನ್ನು ಸಾವಧಾನವಾಗಿ ಕೇಳಿರಿ. ನಿಮಗೆ ಅವರು ಹೇಳುವದು ಒಗ್ಗದೆ ಇರುವಾಗಲೂ ಅದರಲ್ಲಿ ಏನೋ ಸಾರವಿರಬೇಕೆಂಬ ನಂಬಿಕೆಯನ್ನು ಅಭ್ಯಾಸ ಮಾಡಿರಿ. ಭಗವಂತನ ಅನುಗ್ರಹದಿಂದ ನಿಮ್ಮ ಜೀವನವು ಸುಖಮಯವಾಗುವದು; ಮನಸ್ಸಿಗೆ ಶಾಂತಿಸುಖಗಳು ದೊರೆಯುವವು.

# 68. ಬೇನೆ ಬಿದ್ದಾಗ ಮನಸ್ಸನ್ನು ಹೇಗಿಟ್ಟುಕೊಂಡಿರಬೇಕು?

## (ಜನವರಿ 1952)

*ನಿಮ್ಮ ಪತ್ರವನ್ನು ಓದಿದೆನು. ನಿಮಗೆ ವರ್ಷವರ್ಷವೂ ಯಾವದಾದರೊಂದು ಬಗೆಯ ರೋಗವು ಕಾಣಿಸಿಕೊಳ್ಳುತ್ತಲೇ ಇರುತ್ತದೆ. ಆಗ ನಿಮ್ಮ ಆಪ್ತರೂ ನೆಂಟರಿಷ್ಟರೂ ಬೇಕಾದವರೂ ತಕ್ಕ ಮಟ್ಟಿಗೆ ಉಪಚಾರಗಳನ್ನು ಮಾಡುತ್ತಲೇ ಇರುತ್ತಾರೆ. ಆದರೆ ಕೆಲವರು ಮಾತ್ರ ಮರ್ಮಚ್ಛೇದಕವಾದ ಮಾತುಗಳಿಂದ ನಿಮ್ಮನ್ನು ಚುಚ್ಚುತ್ತಾರೆ. ರೋಗದ ವ್ಯಥೆಯ ಜೊತೆಗೆ ಈ ಮನೋವ್ಯಥೆಯೊಂದು ಸೇರಿಕೊಂಡು ಬಹಳ ಕ್ಲೇಶಪಡಿಸುತ್ತದೆ. ಉಪಚಾರವನ್ನು ಮಾಡುವದಕ್ಕೆ ನಿಜವಾಗಿಯೂ ಮನಸ್ಸಿರುವವರಂತೆ ಈ ಮನಸ್ಸಿಲ್ಲದವರೂ ಆಗಾಗ್ಯೆ ಕಾಣಿಸಿಕೊಂಡು ಏನಾದರೊಂದು ರೂಪದಿಂದ ನಿಮ್ಮ ಮನಸ್ಸಿಗೆ ತಾಪವನ್ನುಂಟುಮಾಡಿ ಹೋಗುತ್ತಿರುತ್ತಾರೆ. ರೋಗಾದಿಗಳು ಶರೀರವನ್ನು ಕಾಡುತ್ತಿರುವಾಗ ಪರಮಾತ್ಮನ ಸ್ಮರಣೆಯನ್ನು ಮಾಡುವದು ಒಳ್ಳೆಯ ಸಾಧನವೆಂದೂ ಅದು ರೋಗಕ್ಕೂ ಪರಂಪರೆಯಿಂದ ಉಪಶಮನವೆಂದೂ ನಮಗೆ ತಿಳಿದೇ ಇದ್ದರೂ "ಈ ಹಿತಶತ್ರುಗಳ ಕಾಟವನ್ನು ತಾಳಲಾರೆ" ನೆಂದು ಬರೆದಿರುತ್ತೀರಿ. "ಇವರು ಇನ್ನೇನು ಸಹಾಯವನ್ನೂ ಮಾಡದಿದ್ದರೂ ಪರಮಾತ್ಮನಕಡೆಯಿಂದ ಮನಸ್ಸನ್ನು ಈಚೆಗೆ ಎಳೆಯದಿದ್ದರೆ ಸಾಕು; ತಮ್ಮಲ್ಲಿರುವ ಆಸುರೀಮಾಯೆಯ ವಿಲಾಸವನ್ನು ಬಿಚ್ಚದಿದ್ದರೆ ಸಾಕು"–ಎಂದು ಬಹಳ ವ್ಯಥೆಯಿಂದ ಬರೆದಿರುತ್ತೀರಿ. ನಿಮ್ಮ ದೃಷ್ಟಿಯಿಂದ ಇದು ಸರಿಯೇ ಆದರೂ ಇಲ್ಲಿಯೂ ನಿಮಗೊಂದು ಹಿತಸೂಚನೆಯನ್ನು ತಿಳಿಸಬೇಕೆಂದಿದ್ದೇನೆ. ಮನಸ್ಸಿಗೆ ಬೇಸರಮಾಡಿಕೊಳ್ಳದೆ ಈ ಪತ್ರಭಾಗವನ್ನು ಓದಬೇಕು–ಎಂದು ನನ್ನ ಪ್ರಾರ್ಥನೆ.*

ರೋಗರುಜಿನಗಳು ಶರೀರಕ್ಕೂ ಮನಸ್ಸಿಗೂ ತಾಪವನ್ನು ತಂದೊಡ್ಡುವದರಲ್ಲಿ ಒಂದು ರಹಸ್ಯವಿದೆ. ನಾವು ಹಿಂದೆ ಮಾಡಿರುವ ದುಷ್ಕರ್ಮಗಳ ಫಲಗಳು ಈ ದುಃಖದ ರೂಪದಿಂದ ಕಳೆದುಹೋಗಬೇಕೆಂಬುದು ಒಂದು ಗುರಿಯು. ಶರೀರಾಭಿಮಾನದಿಂದ ಬಗೆಬಗೆಯ ಪಾಪಗಳು ಡಿಪಾಜಿಟ್ಟಾಗಿ ನಮ್ಮ ಆಶ್ರಯದಲ್ಲಿ ಉಳಿದುಕೊಂಡುಬಿಟ್ಟಿರುತ್ತವೆ ಯಾದ್ದರಿಂದ ಇನ್ನು ಮುಂದೆಯಾದರೂ ಪಾಪವಾಸನೆಗಳಿಗೆ ಎಡೆಗೊಡದೆ ಇರಬೇಕೆಂಬ ಸೂಚನೆಯನ್ನು ಕೊಡುವದು ಮತ್ತೊಂದು ಗುರಿ. ನಮಗೆ ಹಿತವಾದವರು ಕಷಾಯ, ಮುಲಾಮು, ಶಾಖ, ಪಥ್ಯ–ಮುಂತಾದವುಗಳನ್ನು ಸಿದ್ಧಗೊಳಿಸುವದರಿಂದ ನಮಗೆ ತತ್ಕಾಲದ ದುಃಖವೇದನೆಯನ್ನು ಕಡಿಮೆಮಾಡಬಹುದಾದರೂ ರೋಗರುಜಿನಗಳ ಈ ಪರಮೋದ್ದೇಶವು ನೆರವೇರುವದಕ್ಕೆ ಅವರ ಉದಾರ ಕ್ರಿಯೆಯು ಸ್ವಲ್ಪ ಭಂಗವನ್ನು ತರುವದೆಂದೇ ಹೇಳಬೇಕಾಗುತ್ತದೆ. ಆದರೆ ಮರ್ಮೋದ್ಘಾಟನೆಯ ಮಾತುಗಳನ್ನು

ಆಡುವರೆಂದು ನೀವು ಬರೆದಿರುವ ಈ ಮಹಾನುಭಾವರಾದರೋ ನಾನು ಮೇಲೆ ತಿಳಿಸಿರುವ ಈ ಪರಮೇಶ್ವರನ ನಿಯಮವನ್ನು ಪಾಲಿಸುವದಕ್ಕೆ ಪ್ರೋತ್ಸಾಹಕರಾಗುವರೆಂಬುದನ್ನು ನೀವು ಮನದಂದುಕೊಳ್ಳಬೇಕು.

ನೀವು ಮಾಡಿರಬಹುದಾದ ಅಲ್ಪಸ್ವಲ್ಪ ಅಪಕಾರವನ್ನೂ ಮಾಡದೆ ಇರಬಹುದಾದ ಅಪಕಾರವನ್ನೂ ಸತ್ಯಾನೃತಗಳ ಮಿಶ್ರಣದಿಂದ ನಿಮ್ಮೆದುರಿಗೆ ವ್ಯಂಗ್ಯವಾಗಿ ತಿಳಿಸುವ ಇಂಥ ಉಪಕಾರಕರ ಸ್ಮರಣೆಯನ್ನು ನೀವು ತಪ್ಪದೆ ಮಾಡಬೇಕು. ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಆಗಿರುವ ಆಧಿವ್ಯಾಧಿಗಳ ಉರುಬೆಯನ್ನು ಕಣ್ಣಿಗೆ ಕಟ್ಟಿದಂತೆ ಎತ್ತಿಹಿಡಿದುಕೊಂಡು ವ್ಯಥೆಪಡುವದಕ್ಕೆ ಬದಲು 'ಇನ್ನು ಮೇಲೆ ನಾನು ನನ್ನ ಅಥವಾ ಪರರ ವಾಙ್ಮನಃಕರಣಗಳ ವ್ಯಾಪಾರಗಳನ್ನು ಈ ಅಂತಃಕರಣದಲ್ಲಿ ಹೊರಳಾಡಿಸುವದನ್ನು ಬಿಟ್ಟುಬಿಡುವೆನು, ಆ ದಯಾಘನನಾದ ಭಗವಂತನು ನನ್ನ ಹೃದಯದಲ್ಲಿಯೇ ಯಾವಾಗಲೂ ಸನ್ನಿಹಿತನಾಗಿರುವನೆಂಬುದನ್ನು ನೆನಪಿಗೆ ತಂದುಕೊಳ್ಳುವೆನು, ಈ ನೆಂಟರಿಷ್ಟರು ಮಾಡುತ್ತಿರುವ ಉಪಚಾರಗಳು, ಮೃದುವಾದ ಉಪಚಾರೋಕ್ತಿಗಳು, ಆ ಪರಮಾತ್ಮನ ಕಡೆಯಿಂದ ಬರುವ ದಿವ್ಯ ಸಂದೇಶಗಳೆಂದು ತಿಳಿದುಕೊಳ್ಳುವೆನು. ಹಿಂದೆ ನಾನು ಮಾಡಿರಬಹುದಾದ ಅಥವಾ ಮಾಡದೆ ಇರಬಹುದಾದ ಅನ್ಯಾಯಗಳನ್ನು ಎತ್ತೆಣಿಸಿ ನನ್ನನ್ನು ಹಂಗಿಸುವವರ ವಚನಗಳನ್ನು ಈ ಮೂರು ಗಳಿಗೆಯ ವ್ಯವಹಾರದ ಭೂಮಿಗೆ ಇಳಿಯದಿರು, ನಿನ್ನ ಮೂಲಧಾಮನಾಗಿರುವ ಆ ಪರಮಾತ್ಮನ ಚಿಂತನೆಯನ್ನು ಹತ್ತಿಸಿಕೊ'–ಎಂದು ಸಾರುತ್ತಿರುವ ತುತ್ತೂರಿಗಳೆಂದು ಭಾವಿಸುವೆನು, ನನ್ನ ಮುಂದೆ ಕಾಣಿಸುವ ಒಳ್ಳೆಯ ಅಥವಾ ಕೆಟ್ಟ ದೃಶ್ಯಗಳು ನನ್ನ ಹಿಂದಿನ ಕರ್ಮದ ಫಲಗಳು, ಅವು ನಿಜವಾಗಿ ಪರಮಾತ್ಮನ ದಿವ್ಯವಿಭೂತಿಗಳಾಗಿವೆ, ಎಂದು ಸರ್ವದಾ ಚಿಂತಿಸಿ ಕೊಳ್ಳುವೆನು'–ಎಂದು ಮನಸ್ಸಿನಲ್ಲಿ ಯಾವಾಗಲೂ ಹೊರಳಿಸಿಕೊಳ್ಳುತ್ತಿರಿ. ಯಾವನೊಬ್ಬ ಜೀವನನ್ನೂ ಯಾವದೊಂದು ಪದಾರ್ಥವನ್ನೂ ಹುಬ್ಬುಗಂಟಿನಿಂದ ನೋಡಬೇಡಿ. 'ತಿಳಿಯಿತು, ಭಗವಂತನ ಕಡೆಗೆ ಮನಸ್ಸು ಮಾಡೆಂದು ನೀವೆಲ್ಲರೂ ಹೇಳುತ್ತಿದ್ದೀರಿ'–ಎಂದು ಕೃತಜ್ಞತೆಯ ನುಡಿಗಳನ್ನು ಆಡುತ್ತಾ ನಿಮ್ಮ ಹೊರಗೂ ಒಳಗೂ ತೋರುವ ದೃಶ್ಯಗಳನ್ನೆಲ್ಲ ಪರಮಾತ್ಮನ ತೇಜೋಂಶವೆಂದು ಭಾವಿಸಿಕೊಳ್ಳಿರಿ. ಇದೊಂದು ಮಹಾತಪಸ್ಸು. ಇದರಿಂದ ಮನಸ್ಸಿಗೆ ಹರ್ಷವಾಗುವದಂತಿರಲಿ, ಉತ್ತಮವಾದ ಪರಮ ಗತಿಯು ಕಟ್ಟಿಟ್ಟ ಬುತ್ತಿಯಾಗುವದು.

# 69. ನಮ್ಮ ಸುತ್ತುವಳಿಯವನ್ನು ಹಿತಕರವಾಗಿ ಮಾಡಿಕೊಳ್ಳುವ ಬಗೆ

**(ಫೆಬ್ರುವರಿ 1952)**

*ನಿಮ್ಮ ಪತ್ರವನ್ನು ಓದಿದೆನು. ಕುಟುಂಬವು ದೊಡ್ಡದಾಗಿರುವದರಿಂದ ಒಬ್ಬರ ಮನಸ್ಸು ಒಬ್ಬರಿಗೆ ಹೊಂದುವದು ಬಹು ಕಷ್ಟವಾಗಿದೆ; ನಿತ್ಯವೂ ಏನಾದರೊಂದು ವೈಮನಸ್ಯಕ್ಕೆ ಕಾರಣವು ಇದ್ದೇ ಇರುತ್ತದೆ–ಎಂದು ಬರೆದಿರುತ್ತೀರಿ. ನಿಮ್ಮ ಅಭಿಪ್ರಾಯದಲ್ಲಿ ಗರ್ಭಿತವಾಗಿರುವ ಕಾರ್ಯಕಾರಣಭಾವವು ನಿಜವಾದ ಸ್ಥಿತಿಗೆ ವಿಪರೀತವಾಗಿದೆ. ಏಕೆಂದರೆ ನಮ್ಮ ಮನಸ್ಸಿನ ಸ್ಥಿತಿಯು ಹೊರಗಿನ ಸನ್ನಿವೇಶವು ಮಾರ್ಪಟ್ಟ ಮೇಲೆಯೇ ಸರಿಯಾಗಬೇಕೆಂಬ ನಿರೀಕ್ಷೆಯು ಸಮುದ್ರದ ಅಲೆಗಳು ನಿಂತ ಮೇಲೆಯೇ ಸ್ನಾನ ಮಾಡೋಣವೆಂಬ ಸಂಕಲ್ಪವನ್ನು ಹೋಲುವದು. ಹೊರಗಿನ ಸ್ಥಿತಿಗಳು ತಾವಾಗಿಯೇ ಎಂದಿಗೂ ನೇರ್ಪಡುವದೇ ಇಲ್ಲ.*

ನಮ್ಮ ಈಗಿನ ಸುತ್ತುವಳಿಯವು ನಮ್ಮ ಹಿಂದಿನ ಮನೋವಾಸನೆಗಳ ಫಲವಾಗಿ ಏರ್ಪಟ್ಟಿರುವದು. ಪ್ರತಿಯೊಂದು ಮನಸ್ಸೂ ತನತನಗೆ ಅನುಗುಣವಾಗಿರುವ, ಎಂದರೆ ತಾನು ಮುಂದುವರಿಯುವದಕ್ಕೆ ಅಥವಾ ಹಿಂದುಬೀಳುವದಕ್ಕೆ ಬೇಕಾದ ಹೊರಗಿನ, ಪರಿವೇಷವನ್ನು ಏರ್ಪಡಿಸಿಕೊಳ್ಳುತ್ತಲೇ ಇರುವದು. ಈಗ ಈಗಿನ ನಿಮ್ಮ ಕುಟುಂಬ ದಲ್ಲಿರುವ ವ್ಯಕ್ತಿಗಳು ಎಷ್ಟೇ ಬಗೆಬಗೆಯ ಮನಸ್ಸ್ವಭಾವದವರಾಗಿ ಕಾಣಲಿ, ನಿಮ್ಮ ಮನಸ್ಸಿನ ವಿಕಾಸಕ್ಕೆ ತಕ್ಕ ಸನ್ನಿವೇಶವೇ ಆ ಕುಟುಂಬದಲ್ಲಿ ಏರ್ಪಟ್ಟಿದೆ–ಎಂದು ನೀವು ಭಾವಿಸಬೇಕು. ನೀವು ಒಂದಾನೊಂದು ಅನುಭವವನ್ನು ತಂದುಕೊಂಡು ಮುಂದುವರಿಯಬೇಕಾಗಿದೆ. ಆ ಅನುಭವವನ್ನು ನೀವು ತಂದುಕೊಳ್ಳುವವರೆಗೂ ಈ ಸನ್ನಿವೇಶವು ನಿಮ್ಮ ಸುತ್ತಲೂ ಇದ್ದೇ ಇರುತ್ತದೆ.

ಕುಟುಂಬವು ಮಾತ್ರವೇ ಅಲ್ಲ, ನಮ್ಮ ಪರಿಚಯದವರು, ನಮಗೆ ಸಂಬಂಧಿಸಿದ ಸಮಾಜ–ಇವೇ ಮುಂತಾದವುಗಳೆಲ್ಲವೂ ನಮ್ಮನಮ್ಮ ಮನಸ್ಸಿನ ಮಟ್ಟಕ್ಕೆ ತಕ್ಕಂತೆಯೇ ಏರ್ಪಟ್ಟಿರುತ್ತವೆ. ನಮ್ಮ ಹೊರಗಿನ ಪರಿಸ್ಥಿತಿಯು ನಮಗೆ ಪ್ರಿಯವಾಗಿಯೂ ಹಿತವಾಗಿಯೂ ಇರುವ ರೀತಿಯಲ್ಲಿ ಮಾರ್ಪಡಬೇಕೆ? ಹಾಗಾದರೆ ನಾವು ನಮ್ಮ ಮನಸ್ಸಿನ ಸ್ಥಿತಿಯನ್ನು ಮಾರ್ಪಡಿಸಿಕೊಳ್ಳಬೇಕು. ನಮ್ಮ ಮನಸ್ಸಿನಲ್ಲಿರುವ ಆಲೋಚನೆಗಳೂ ವಾಸನೆಗಳೂ ನಮ್ಮ ಹೊರಗಿನ ಪರಿಸ್ಥಿತಿಯನ್ನು ಗೊತ್ತುಪಡಿಸುವವು. ಈಗ ನಾವು ಅನುಭವಿಸುತ್ತಿರುವ ಸುಖದುಃಖಗಳೆಲ್ಲ ನಮ್ಮ ಮನಸ್ಸಿನ ಸ್ವಭಾವಕ್ಕನುಗುಣವಾಗಿ ಈಶ್ವರನು ಕೊಟ್ಟ ಫಲವು. ''ಮನಸ್ಸಿನಂತೆ ಮಾದೇವ'' ಎಂಬ ಗಾದೆಯು ಅಕ್ಷರಶಃ, ನಿಜ. ನಿಮ್ಮ ಮನಸ್ಸನ್ನು ತಕ್ಕಂತೆ ಮಾರ್ಪಡಿಸಿಕೊಳ್ಳಿರಿ; ಆ ಮಹಾದೇವನು ನಿಮಗೆ ಹಿತವಾದ ಸುತ್ತುವಳಿಯನ್ನು ಏರ್ಪಡಿಸಿಕೊಡುವನು.

# 70. ನಿತ್ಯರೋಗಕ್ಕೆ ಮದ್ದು

## (ಮಾರ್ಚ್ 1952)

*ನಿಮ್ಮ ಪತ್ರವು ತಲುಪಿ ಕೆಲವುದಿನಗಳಾಯ್ತು. ಆಯುರ್ವೇದವೈದ್ಯ, ಆಸ್ಪತ್ರೆಯ ಔಷಧಿ, ಯುನಾನಿಚಿಕಿತ್ಸೆ–ಎಲ್ಲವೂ ಆಯಿತು. ಯಂತ್ರಮಂತ್ರಗಳನ್ನೂ ಮಾಡಿಸಿದ್ದಾಯಿತು. ನನ್ನ ಹೊಟ್ಟೆನೋವು ಮಾತ್ರ ಹೋಗಲಿಲ್ಲ. ಇದರಿಂದಾಗಿರುವ ಮನೋವ್ಯಥೆಯಿಂದ ನನಗೆ ಯಾವ ಕೆಲಸವನ್ನೂ ಸಂತೋಷದಿಂದ ಮಾಡುವದಕ್ಕೆ ಆಗದೆ ಇದೆ–ಎಂದು ಬರೆದಿರುತ್ತೀರಿ. ನನಗೆ ಒಂದು ಉಪಾಯವು ಮನಸ್ಸಿಗೆ ಹೊಳೆದಿದೆ. ಇದನ್ನು ಒಂದೆರಡು ತಿಂಗಳು ಮಾಡಿ ಫಲಿತಾಂಶವನ್ನು ಬರೆಯಬೇಕೆಂದು ಕೇಳಿಕೊಳ್ಳುತ್ತೇನೆ.*

ಸಾಮಾನ್ಯವಾಗಿ ರೋಗಗಳು ಹಿಂದೆ ಮಾಡಿರುವ ಪಾಪದ ಫಲವೆಂದು ಶಾಸ್ತ್ರಗಳಲ್ಲಿ ಹೇಳಿದೆ. ಅದಕ್ಕೆ ಔಷಧ, ದಾನ, ಜಪ, ಹೋಮ, ಸುರಾರ್ಚನ ಇವುಗಳಿಂದ ಶಾಂತಿ ಆಗುವದೆಂದೂ ಹೇಳಿದೆ. ಬರಿಯ ಔಷಧವು ಸ್ವಲ್ಪ ಮಟ್ಟಿಗೆ ರೋಗಕ್ಕೆ ಉಪಶಮನ ಕಾರಣವಾಗಬಹುದು. ಆದರೆ ಅದು ಒಂದು ರೂಪದಿಂದ ಮರೆಯಾದರೆ ಮತ್ತೊಂದು ರೂಪದಿಂದ ತಲೆಹಾಕಿಕೊಳ್ಳಬಹುದು. ಯಾವ ಪಾಪವೇ ಆಗಲಿ ನಮ್ಮಗಳ ಆತ್ಮನಾಗಿರುವ ಪರಮೇಶ್ವರನೆಂಬ ಕೇಂದ್ರವನ್ನು ಬಿಟ್ಟು ನಾವು ಜಾರಿದ್ದರ ರೂಪಾಂತರವೇ ಆಗಿರುತ್ತದೆ. ಆದ್ದರಿಂದ ಪಾಪದ ಫಲವಾದ ರೋಗವು ''ಇನ್ನು ಮುಂದೆ ಪಾಪವನ್ನು ಮಾಡಬೇಡ, ಪರಮೇಶ್ವರನ ಕಡೆಗೆ ತಿರುಗು''–ಎಂಬ ನೆನಪನ್ನು ಕೊಡುವದಕ್ಕೆ ಬಂದಿದೆ ಎಂದು ಭಾವಿಸಬೇಕು.

ನಿತ್ಯವಾಗಿ ಬರುವ ಹೊಟ್ಟೆನೋವು ನಮ್ಮೊಳಗೇ ಮತ್ತೊಬ್ಬರ ವಿಷಯದಲ್ಲಿ ಮಾಡಿಕೊಂಡಿರುವ ಹೊಟ್ಟೆಕಿಚ್ಚಿನ ಮತ್ತು ದ್ವೇಷದ ಫಲವೆಂದು ಭಾವಿಸಬಹುದು. ನೀವು ಯಾರೊಡನೆಯಾದರೂ ಬದ್ಧವೈರವನ್ನು ಮಾಡಿಕೊಂಡಿದ್ದಿರೇನು? ಹಾಗಿದ್ದರೆ ಕೂಡಲೆ ಅದನ್ನು ನಿಲ್ಲಿಸಿ, ಅವರನ್ನು ಪ್ರೇಮದಿಂದಕಾಣುವ ಅಭ್ಯಾಸವನ್ನು ಮಾಡಿರಿ. ಅವರು ಒಂದು ವೇಳೆ ನಿಮ್ಮಮೇಲೆ ಸಿಟ್ಟುಮಾಡಿಕೊಂಡರೂ ಅದನ್ನು ಲೆಕ್ಕಕ್ಕೆ ತಂದುಕೊಳ್ಳದೆ ಅವರಿಗೆ ಏನಾದರೊಂದು ಉಪಕಾರವನ್ನು ಮಾಡುವದಕ್ಕೆ ಪ್ರಾರಂಭಿಸಿರಿ. ಸೇಡುತೀರಿಸಿ ಕೊಳ್ಳುವ ಭಾವವು ನಿಮ್ಮ ಮನಸ್ಸಿನಲ್ಲಿ ಎಂದಿಗೂ ಬರಬಾರದು. ಚಾಡಿ, ಕ್ಷುದ್ರಭಾವನೆಗಳು ಎಂದಿಗೂ ಬರಬಾರದು. ಎಲ್ಲರಲ್ಲಿಯೂ ಪರಮೇಶ್ವರಭಾವನೆಯಿಂದ ಪ್ರೀತಿಯನ್ನು ಮಾಡುತ್ತೇನೆಂದು ಸಂಕಲ್ಪಿಸಿಕೊಳ್ಳಿರಿ. ಅದರ ಫಲವಾಗಿ ನಿಮ್ಮ ಮನಸ್ಸಿನಲ್ಲಿ ಶಾಂತಿ ಯುಂಟಾಗುವದು. ಶರೀರದಲ್ಲಿ ಈಗ ಕಾಣಿಸಿಕೊಂಡಿರುವ ವ್ಯಾಧಿಗಳು ಮೆಲ್ಲ ಮೆಲ್ಲಗೆ ಮರೆಯಾಗುವವು. ಈ ಸಾಧನವು ನಿಮಗೆ ಬೇಗನೆ ಅಳವಡಲೆಂದು ಹಾರೈಸುತ್ತೇನೆ.

# 71. ಮತ್ತೊಬ್ಬರ ವಿಷಯದ ಮಾತು

## (ಏಪ್ರಿಲ್ 1952)

*ನಿಮ್ಮ ಪತ್ರವು ಬಂದು ತಲುಪಿದೆ. ಮತ್ತೊಬ್ಬರ ವಿಷಯಕ್ಕೆ ಚಾಡಿ, ಕ್ಷುದ್ರ-ಮುಂತಾದವುಗಳನ್ನು ಆಡುವದೆಂದರೆ ಮನಸ್ಸಿಗೆ ಬಹಳ ಮೆಚ್ಚು. ಮತ್ತೊಬ್ಬರ ದೋಷಗಳನ್ನು ಎತ್ತೆಣಿಸುವದೂ ಅದಕ್ಕೆ ಬೇಕಾಗಿರುತ್ತದೆ. ನೀವು ಬರೆದಿರುವಂತೆಯೇ ಮತ್ತೊಬ್ಬ ಮಿತ್ರರೂ ಒಂದು ಪತ್ರವನ್ನು ಬರೆದಿರುತ್ತಾರೆ. ಆದ್ದರಿಂದ ಇವೆರಡಕ್ಕೂ ಅನ್ವಯಿಸುವಂತೆ ಒಂದು ಉತ್ತರವನ್ನು ಬರೆದಿರುತ್ತೇನೆ. ವಿಶೇಷವಾಗಿ ನಿಮಗೆ ಯಾವದಾದರೂ ತಿಳಿವಳಿಕೆ ಬೇಕಾದರೆ, ಬರೆಯಿರಿ.*

ಒಬ್ಬರು ನಮಗೆ ಕೇಡು ಬಗೆದರೆ ಅಥವಾ ನಮ್ಮ ವಿಷಯಕ್ಕೆ ಅಪಪ್ರಚಾರವನ್ನು ಮಾಡುತ್ತಿದ್ದರೆ ನಾವೂ ಅವರ ವಿಷಯಕ್ಕೆ ದೋಷೋದ್ಘಾಟನೆಯನ್ನು ಮಾಡಿ ಜನರಲ್ಲಿ ದೂರನ್ನು ಹೇಳಿಕೊಳ್ಳಬೇಕೆಂಬ ಕುತೂಹಲವುಂಟಾಗಬಹುದು. ಆದರೆ ಆ ತವಕವನ್ನು ತಡೆದುಕೊಳ್ಳುವದರಿಂದ ನಮಗೆ ಶ್ರೇಯಸ್ಸಾಗುವದು. ಅವರು ನಮಗೆ ನಿಜವಾಗಿ ಕೇಡು ಮಾಡಿರುತ್ತಾರೆಯೆ, ಅಥವಾ ನಿಜವಾಗಿಯೂ ಅಪಪ್ರಚಾರಮಾಡುತ್ತಿದ್ದಾರೆಯೆ? ಎಂಬಿದನ್ನು ನಮ್ಮಲ್ಲಿ ನಾವು ನೋಡಿಕೊಳ್ಳಬೇಕು. ನಮ್ಮ ದೋಷಗಳೇನಾದರೂ ಇದ್ದರೆ ತಿದ್ದಿಕೊಳ್ಳಬೇಕು; ಇಲ್ಲದಿದ್ದರೆ ಆ ವಿಷಯವನ್ನು ಅಲ್ಲಿಗೆ ಮರೆತುಬಿಡುವದು ಒಳ್ಳೆಯದು.

ಇನ್ನು ನಮಗೆ ಬಿಡುವು ಸಿಕ್ಕಿದಾಗ ಅವರು ಹೀಗೆ, ಅವರಲ್ಲಿ ಇಂಥ ದೋಷವಿದೆ-ಎಂದು ಅಪಪ್ರಚಾರ ಮಾಡಬೇಕೆಂಬ ಅಭಿಪ್ರಾಯವಿಲ್ಲದೆಯೂ ಬೀಳುಮಾತುಗಳನ್ನು ಆಡುವದಕ್ಕೆ ಮನಸ್ಸು ಹಾತುವರಿಯುತ್ತಿರುವದುಂಟು. ಅಂಥ ಸಂದರ್ಭದಲ್ಲಿ ನಾಲಗೆಯನ್ನು ಬಿಗಿಹಿಡಿಯಬೇಕು, ಮೌನವನ್ನು ಅವಲಂಬಿಸುವದಕ್ಕೆ ಪ್ರಯತ್ನಿಸಬೇಕು. ಭಗವಂತನ ನಾಮವನ್ನು ಜಪಿಸುವದರ ಮೂಲಕ ಇಂಥ ವ್ಯರ್ಥಾಲಾಪಗಳನ್ನು ತಪ್ಪಿಸಿಕೊಳ್ಳಬಹುದು. ಆಗ ನಾಲಗೆಯ ದುರಭ್ಯಾಸವು ತಪ್ಪುವದಲ್ಲದೆ ಸಾತ್ತ್ವಿಕವಾದ ಸಾಧನವೂ ಅಭ್ಯಾಸಕ್ಕೆ ಬಂದಂತೆ ಆಗುವದು.

ಮತ್ತೊಬ್ಬರು ನಮಗೆ ಕೇಡನ್ನುಂಟುಮಾಡಿರುವರೆಂಬ ಕಾರಣದಿಂದ ಅವರ ಮೇಲೆ ಸೇಡುತೀರಿಸಿಕೊಳ್ಳುವದಕ್ಕೆ ಎಂದಿಗೂ ಪ್ರಯತ್ನಿಸಬಾರದು. ಸೇಡು ತೀರಿಸಿಕೊಳ್ಳುವ ಆಲೋಚನೆಯು ಮನಸ್ಸಿಗೆ ಮಾಲಿನ್ಯವನ್ನುಂಟುಮಾಡುತ್ತದೆ; ಸದ್ವಿಚಾರಕ್ಕೆ ಎಡೆಯಿಲ್ಲದಂತೆಯೂ ಮಾಡುತ್ತದೆ. ಪರಮೇಶ್ವರನನ್ನು ಪ್ರತಿದಿನವೂ ''ಮತ್ತೊಬ್ಬರಿಗೆ ಕೇಡುಬಗೆಯದಂಥ ಬುದ್ಧಿಯನ್ನು ಕೊಡು'' ಎಂದು ಬೇಡಿಕೊಳ್ಳುತ್ತಿರಬೇಕು. ''ಎಲ್ಲರಿಗೂ ಸ್ವಸ್ತಿಯಾಗಲಿ, ಎಲ್ಲರಿಗೂ ಸದ್ಬುದ್ಧಿಯುಂಟಾಗಲಿ, ಸುಖಶಾಂತಿಗಳು ದೊರಕಲಿ!'' ಎಂದು ಪ್ರಾರ್ಥನೆಯ ಕಾಲಕ್ಕೆ ಹಾರೈಸವದೇ ಉತ್ತಮವಾದ ಮಾರ್ಗ.

# 72. ಗೃಹಸ್ಥಧರ್ಮ

## (ಮೆ ೀ1952)

*ನಿಮ್ಮ ಪತ್ರದಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಡುವದು ಒಂದು ಸಣ್ಣ ಕಾಗದದಲ್ಲಿ ಆಗಲಾರದು. ಗೃಹಸ್ಥನಾದವನು ಹೇಗೆ ನಡೆದುಕೊಳ್ಳಬೇಕು? ಯಾವದಾದರೊಂದು ವಿಷಯದಲ್ಲಿ 'ಈಗ ಏನು ಮಾಡಬೇಕು?'–ಎಂಬ ಸಂಶಯವು ಹುಟ್ಟಿದರೆ ಅದರ ಪರಿಹಾರವನ್ನು ಹೇಗೆ ಮಾಡಿಕೊಳ್ಳಬೇಕು? ಎಂದು ಕೇಳಿರುತ್ತೀರಿ.*

ಮನ್ವಾದಿಸ್ಮೃತಿಗಳಲ್ಲಿ ಗೃಹಸ್ಥನ ಧರ್ಮಗಳನ್ನು ವಿಸ್ತಾರವಾಗಿ ಹೇಳಿದೆ. ಆದರೆ ಅವುಗಳ ಸರಿಯಾದ ಅಭಿಪ್ರಾಯವನ್ನು ತಿಳಿದುಕೊಳ್ಳುವದು ಸಾಮಾನ್ಯರಿಗೆ ಕಷ್ಟ. ನಿಮ್ಮ ಸೌಭಾಗ್ಯದಿಂದ ನೀವು ರಾಮಾಯಣವನ್ನು ಪಾರಾಯಣ ಮಾಡುತ್ತಿದೀರಿ. ಇಂಥ ಸಂದರ್ಭದಲ್ಲಿ ಶ್ರೀರಾಮನು ಹೇಗೆ ನಡೆದುಕೊಂಡನು? ಅಥವಾ ಇಂಥ ಪರಿಸ್ಥಿತಿಯಲ್ಲಿ ಶ್ರೀರಾಮನಾದರೆ ಹೇಗೆ ನಡೆದುಕೊಳ್ಳುತ್ತಿದ್ದನು? ಎಂದು ನಿಮಗೆ ನೀವೇ ಪ್ರಶ್ನೆಯನ್ನು ಹಾಕಿಕೊಳ್ಳುತ್ತಿರಿ. ಹಾಗಾದರೆ ನಿಮಗೆ ಎಲ್ಲಾ ತೊಡಕಿನ ಪ್ರಶ್ನೆಗಳಿಗೂ ಉತ್ತರವು ಸಿಕ್ಕಂತೆ ಆಗುವದು.

ಮೊದಲನೆಯದಾಗಿ ಸತ್ಯಧರ್ಮಗಳನ್ನು ಎಂದಿಗೂ ಬಿಡಬಾರದು. ಶ್ರೀರಾಮಚಂದ್ರನು ಧರ್ಮಾತ್ಮನು, ಸತ್ಯಸಂಧನು–ಎಂಬುದೇ ರಾಮಾಯಣದರ್ಥಕ್ಕೆಲ್ಲ ಮೂಲಸೂತ್ರವಾಗಿದೆ. ಎರಡನೆಯದಾಗಿ ಎಂದಿಗೂ ದುಂದುವೆಚ್ಚಕ್ಕೆ ವಶರಾಗದೆ ಇರಬೇಕು. ಶ್ರೀರಾಮನು ರಾಜಕುಮಾರನಾಗಿದ್ದರೂ ಅರಣ್ಯದಲ್ಲಿದ್ದಾಗ ಎಂಥ ಸರಳಜೀವನವನ್ನು ನಡೆಯಿಸಿಕೊಂಡಿದ್ದನು ಎಂಬುದನ್ನು ಮತ್ತೆಮತ್ತೆ ನೆನಪಿಗೆ ತಂದುಕೊಳ್ಳುತ್ತಿರಿ. ಇನ್ನು ಬ್ರಹ್ಮಚರ್ಯಾಶ್ರಮದಲ್ಲಿದ್ದ ಇಂದ್ರಿಯನಿಗ್ರಹಾದಿಗಳು ಗೃಹಸ್ಥನಾದಕೂಡಲೆ ಬಿಡತಕ್ಕವುಗಳಾಗುವವೆಂದು ಎಣಿಸಬಾರದು. ಶ್ರೀರಾಮನ ಏಕಪತ್ನೀವ್ರತವನ್ನೂ ಸೀತಾರಾಮರ ಪರಸ್ಪರಾನುಕೂಲ್ಯವನ್ನು ಮನಸ್ಸಿನಲ್ಲಿಟ್ಟುಕೊಂಡಿರ ಬೇಕು. ಶೂರ್ಪಣಖಿಯು ಅತ್ಯಂತಸುಂದರಿಯಾಗಿ ರಾಮಚಂದ್ರನ ಮುಂದೆ ಬಂದು ನಿಂತಾಗ ಅವನಿಗೆ ಮನಸ್ಸಿನಲ್ಲಿ ಯಾವ ಚಾಂಚಲ್ಯವೂ ಆಗಲಿಲ್ಲ; ಆಕೆಯು ತನ್ನ ನಿಜವನ್ನು ಪ್ರಕಟಪಡಿಸಿಕೊಂಡು ತನ್ನ ಕಾಮಪೂರ್ಣತೆಗೆ ಅಡ್ಡಿಯಾಗಿದ್ದ ಸೀತೆಯನ್ನು ತಿಂದುಹಾಕುವೆನೆಂದು ಕೋಪಿಸಿದಾಗಲೂ ಅಂಜಿಕೊಂಡು ಅವಳ ಇಷ್ಟವನ್ನು ಸಲ್ಲಿಸುವ ಯೋಚನೆಯನ್ನು ಮಾಡಲಿಲ್ಲ ಅಲ್ಲವೆ?

ಶ್ರೀರಾಮನ ನಿತ್ಯಚರ್ಯೆಯಲ್ಲಿ ಕಾಣುತ್ತಿದ್ದ ಇನ್ನೂ ಕೆಲವು ಗುಣಗಳು ನಿಮಗೆ ಅನುಕರಣೀಯನಾಗಿರಬೇಕು. ತಾನು ಒಬ್ಬನೇ ಇದ್ದರೂ ಅನೇಕ ಸಹಸ್ರ ರಾಕ್ಷಸರುಗಳಿಗೆ ಅಂಜದೆ ಇದ್ದ ಧೈರ್ಯ, ರಾಕ್ಷಸರ ಉಪಟಳಕ್ಕೆ ಸಿಕ್ಕಿ ನರಳುತ್ತಿದ್ದ ಋಷಿಗಳನ್ನು ಕಾಪಾಡುವೆನೆಂದು ಅವನು ಹಿಂದುಮುಂದು ನೋಡದೆ ಮಾಡಿದ ಅಭಯಪ್ರದಾನ, ಸುಗ್ರೀವಾದಿ ಸ್ನೇಹಿತರಲ್ಲಿದ್ದ ಸ್ಥಿರಪ್ರೇಮ, ಅಹಲ್ಯೆ, ಗುಹ, ಶಬರಿ–ಮುಂತಾದವರಲ್ಲಿ ತೋರಿಸಿದ ದಯೆ–ಇವುಗಳೆಲ್ಲವೂ ನಿಮಗೆ ಗುರಿಯಲ್ಲಿರಬಹುದಾದ ಧರ್ಮಗಳು.

ಶ್ರೀರಾಮನು ಮನುಷ್ಯನೆಂದು ತಿಳಿದರೂ ಅವನಲ್ಲಿದ್ದ ಅನೇಕ ಗುಣಗಳು ನಿಮ್ಮ ಮನಸ್ಸನ್ನು ಸೆಳೆಯುವವು. ಆದರೆ ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ರಕ್ಷಿಸಿ, ಪತಿತರನ್ನು ಪಾವನಗೊಳಿಸಿ, ಭಯಂಕರವಾದ ಭೂಭಾಗಗಳನ್ನು ಪವಿತ್ರಕ್ಷೇತ್ರಗಳೆಂದೆನಿಸಿ ಭಾರತಭೂಮಿಯನ್ನೆಲ್ಲ ಧರ್ಮಕ್ಷೇತ್ರವಾಗಿ ಮಾರ್ಪಡಿಸಿದ ಶ್ರೀ ಮಹಾವಿಷ್ಣುವೇ ರಾಮಚಂದ್ರನು ಎಂಬ ನಮ್ಮ ಹಿರಿಯರ ನಂಬಿಕೆಯನ್ನು ಮನದಂದರಂತೂ ಆತನ ನಡೆನುಡಿಗಳು ನಿಮಗೆ ವೇದತುಲ್ಯವಾಗುವವು.

ನೀವೂ ನಿಮ್ಮ ಧರ್ಮಪತ್ನಿಯೂ ಹೃದಯದಲ್ಲಿ ಶ್ರೀ ಸೀತಾರಾಮರನ್ನು ಪ್ರತಿಷ್ಠಿಸಿ ಕೊಳ್ಳಬೇಕು. ಶ್ರೀರಾಮನ ಅನುಗ್ರಹದಿಂದ ನಿಮ್ಮಿಬ್ಬರಲ್ಲಿಯೂ ಧರ್ಮಾರ್ಥಕಾಮಗಳಲ್ಲಿ ಅವ್ಯಭಿಚರಿತವಾದ ಮಧುರಬಾಂಧವ್ಯವು ನೆಲಸಿರಬೇಕೆಂದು ಹಾರೈಸುತ್ತಿರಿ. ಮನೆಯಲ್ಲಿ ಶ್ರೀರಾಮಚಂದ್ರನ ಪೂಜೆ, ಭಜನೆ, ರಾಮನಾಮ ಜಪ–ಇವುಗಳನ್ನು ಮಾಡುತ್ತಿರಿ. ಆ ಪರಮಾತ್ಮನ ಪ್ರಸಾದವಾದರೆ ನಿಮ್ಮ ಸಂಸಾರನೌಕೆಯು ಸುಖವಾಗಿ ಮುಂದಕ್ಕೆ ಸಾಗುವದು. ಇಹದಲ್ಲಿ ಸೌಖ್ಯವೂ ಪರದಲ್ಲಿ ಸದ್ಗತಿಯೂ ದೊರಕುವವು.

ಸಂಸಾರವನ್ನು ಮಾಡುವಾಗ ಹಲವು ಕಷ್ಟಪರಂಪರೆಗಳೂ ಬಂದೊದಗುವದು ಸ್ವಾಭಾವಿಕವಷ್ಟೆ. ಅವುಗಳನ್ನು ದಾಟುವದಕ್ಕೆಂದು ಅವಿವೇಕಿಗಳು ಸುಳ್ಳು, ಮಾಯೆ, ವಂಚನೆ–ಮುಂತಾದವುಗಳನ್ನು ಅವಲಂಬಿಸುವ ವಕ್ರಮಾರ್ಗವನ್ನು ಅನುಸರಿಸುವರು. ನೀವು ಎಂದಿಗೂ ಇದಕ್ಕೆ ಎಡೆಗೊಡಬೇಡಿರಿ. ಧರ್ಮಾರ್ಥಕಾಮಗಳು ಗೃಹಸ್ಥಾಶ್ರಮದಲ್ಲಿ ಸಾಮಾನ್ಯವಾಗಿ ನಿಮ್ಮ ಗುರಿಯಾಗಿರಬೇಕು. ಈಶ್ವರಾರಾಧನೆಯಿಂದ ವೈರಾಗ್ಯವನ್ನೂ ಮುಮುಕ್ಷುತ್ವವನ್ನೂ ಸಂಪಾದಿಸಿಕೊಂಡು ಪರಮಪುರುಷಾರ್ಥವನ್ನು ಪಡೆದುಕೊಳ್ಳುವೆನೆಂಬ ಹೆಗ್ಗುರಿಯೂ ಮನಸ್ಸಿಗೆ ಕಾಣುತ್ತಿರಬೇಕು. ಗೃಹಸ್ಥಾಶ್ರಮದಲ್ಲಿ ನಿಮಗೆ ಈ ಪರಮಪುರುಷಾರ್ಥ ಸಾಧನವನ್ನೂ ಈಶ್ವರನು ಅನುಗ್ರಹಿಸಲಿ! ಎಂಬುದು ನನ್ನ ಹಾರೈಕೆ.

# 73. ಸಾಧಕನ ಗುರಿ

(ಜೂನ್ 1952)

*"ನಾನು ಚಿಕ್ಕಂದಿನಲ್ಲಿಯೇ ಮನೆಯನ್ನು ಬಿಟ್ಟು ದೂರದೇಶಕ್ಕೆ ಬಂದು ಏಕಾಂತವಾಸವನ್ನು ಮಾಡಿಕೊಂಡು ಹಲವು ವರ್ಷಗಳಿಂದ ಸಾಧನವನ್ನು ಮಾಡಿಕೊಂಡಿರುತ್ತೇನೆ. ತಕ್ಕಮಟ್ಟಿಗೆ ವೇದಾಂತವಿಚಾರವನ್ನೂ ಮಾಡಿರುತ್ತೇನೆ. ಆದರೂ ಈಗ ನನ್ನ ಮನಸ್ಸಿನಲ್ಲಿ ಹಲವು ಬಗೆಯ ವಿಕ್ಷೇಪಗಳು ಉಂಟಾಗುತ್ತಿವೆ. ಕೆಲವು ಜನ ದುಷ್ಟರು, ನನ್ನ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಮಾಡಿ ನನ್ನ ಜಾತಿ, ಆಚಾರ–ಮುಂತಾದವುಗಳ ವಿಷಯಕ್ಕೆ ಅಪಪ್ರಚಾರಮಾಡುತ್ತಿದಾರೆ. ಇದರಿಂದ ನನಗೆ ಶಾಂತಿ ದೊರೆಯುವದು ಕಷ್ಟವಾಗಿದೆ. ಈ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಲಿ?" ಎಂದು ನಿಮ್ಮ ಪತ್ರದಲ್ಲಿ ಕೇಳಿರುತ್ತೀರಿ.*

ಸಾಧಕನಾದವನಿಗೆ ಭಗವಂತನೇ ಗುರಿ. ಭಗವಂತನ ಆಶ್ರಯದಲ್ಲಲ್ಲದೆ ಮತ್ತೆಲ್ಲಿಯೂ ಶಾಂತಿಯು ಯಾರೊಬ್ಬರಿಗೂ ದೊರಕಲಾರದು. ನೀವು ನಿಜವಾಗಿಯೂ ಏಕಾಂತವಾಸವನ್ನು ಮಾಡಿದ್ದರೆ ನಿಮಗೆ ಭಗವಂತನ ಸ್ಮರಣೆಯೇ ದೊರಕಬೇಕಿತ್ತು, ನಿಮಗೆ ಎಲ್ಲರಲ್ಲಿಯೂ ಭಗವಂತನೇ ಕಾಣಬೇಕಿತ್ತು. ಹಾಗಿಲ್ಲದೆ ಇರುವದರಿಂದ ನಿಮ್ಮ ಏಕಾಂತವಾಸದಲ್ಲಿ ಏನೋ ಕಸುರು ಇತ್ತೆಂದು ಹೇಳಬೇಕಾಗಿದೆ. ನಿಮ್ಮ ಮನಸ್ಸನ್ನು ನೀವೇ ಪರೀಕ್ಷಿಸಿಕೊಳ್ಳಿರಿ. ಭಗವಂತನೊಬ್ಬನಲ್ಲಿಯೇ ನಿಲ್ಲುವದೇ ಏಕಾಂತವಾಸವೆಂಬುದನ್ನು ಮರೆಯದೆ ಇರಿ.

ಶರೀರಾದಿಗಳು ನಾವಲ್ಲ, ನಮ್ಮ ಆತ್ಮನು ಭಗವಂತನೇ; ಭಗವಂತನೇ ನಮಗೆ ಗತಿ, ಆತನೇ ನಮಗೆ ಬೇಕಾದವನು–ಎಂಬುದು ಸಾಧನೆಯ ತಿರುಳು. ಜಾತಿ, ಆಚಾರ, ರೂಪು, ಉಡುಪು–ಮುಂತಾದವುಗಳು ದೇಹಕ್ಕೆ ಸೇರಿದವುಗಳು. ನಿಮಗೆ ದೇಹವಾಸನೆಯಿದೆಯೆ? ಅದರಿಂದಲೇ ಹೀಗೆ ಮತ್ತೊಬ್ಬರು ಮಾಡುವ ಆರೋಪಕ್ಕೆ ಇಷ್ಟೊಂದು ಬೆಲೆ ಕೊಡುತ್ತಿದ್ದೀರ? ಇದನ್ನು ನೀವೇ ಮನದಲ್ಲಿ ವಿಚಾರಿಸಿಕೊಳ್ಳಿರಿ. "ನನ್ನ ಶರೀರವೇ ಮುಂತಾದವುಗಳಲ್ಲಿ ದೋಷಬುದ್ಧಿಯು ನಮಗೆ ಉಂಟಾದರೆ ಒಳ್ಳೆಯದೇ ಆಗುತ್ತದೆ. ತಿಳಿದೋ ತಿಳಿಯದೆಯೋ ನನ್ನನ್ನು ಯಾರಾದರೂ ಹಳಿದರೆ ನಾನೇಕೆ ಉದ್ವೇಗಗೊಳ್ಳಬೇಕು?" ಎಂದುಕೊಳ್ಳುತ್ತಿರಿ. ಇದರಿಂದ ಶರೀರ, ಇಂದ್ರಿಯಗಳು, ಮನಸ್ಸು–ಇವೆಲ್ಲವನ್ನೂ ದಾಟಿ ತೀರ ಒಳಗಿರುವ ಪರಮಾತ್ಮನಲ್ಲಿ ಏಕಾಂತವಾಸವು ನಿಮಗೆ ಖಂಡಿತವಾಗಿ ದೊರೆಯುವದು. ಶ್ರೀಹರಿಯ ಅನುಗ್ರಹದಿಂದ ಈ ಸಾಧನವು ನಿಮಗೆ ಲಭಿಸಲಿ !

# 74. ನಾಮಸ್ಮರಣೆಯೂ ವ್ಯವಹಾರವೂ

## (ಜುಲೈ 1952)

*ನಿಮ್ಮ ಪತ್ರದಲ್ಲಿ ಕೇಳಿರುವ ಪ್ರಶ್ನೆಯಲ್ಲಿ ಯಾವ ಹೆಚ್ಚಿನ ಸಮಸ್ಯೆಯೂ ಇರುವಂತೆ ನನಗೆ ಕಾಣುವದಿಲ್ಲ. ''ನನಗೆ ಕೆಲಸ ಮಾಡುವ ಇಷ್ಟವಿಲ್ಲ. ಸುಮ್ಮನೆ ಕುಳಿತಿರಬೇಕೆಂಬ ಅಪೇಕ್ಷೆಯಿದೆ, ನಾಮಸ್ಮರಣೆಯು ಸುಲಭವಾಗಿ ತೋರುತ್ತದೆ. ಕೆಲಸಮಾಡುವಾಗಲೂ ನಾಮಸ್ಮರಣೆ ಮಾಡುವದೇ ಮನಸ್ಸಿಗೆ ಬರುತ್ತದೆ. ಒಂದು ಕಡೆ ನಾಮಸ್ಮರಣೆ, ಮತ್ತೊಂದು ಕಡೆ ಕೆಲಸ– ಹೀಗೆ ಮಾಡುವದು ಸರಿಯೆ? ಇದಕ್ಕೇನು ಮಾಡಬೇಕು?'' ಎಂತ ಕೇಳಿರುತ್ತೀರಿ.*

ಶರೀರದಲ್ಲಿ ಶಕ್ತಿಯೂ ಮನಸ್ಸಿನಲ್ಲಿ ಉತ್ಸಾಹವೂ ಇರುವವರು ಕೆಲಸ ಮಾಡದೆ ಇರುವದು ಸಾಧ್ಯವೇ ಇಲ್ಲ. ''ಅಕರ್ಮಾಣೋ ಹಿ ತಿಷ್ಠನ್ತಿ ಸ್ಥಾವರಾ ನೇತರೇ ಜನಾಃ'' ಎಂಬಂತೆ ಸ್ಥಾವರಪ್ರಾಣಿಗಳ ಹೊರತು, ಉಳಿದವರು, ಅದರಲ್ಲಿಯೂ ಮನುಷ್ಯರಾದವರು, ಯಾವದೊಂದು ಕೆಲಸವನ್ನೂ ಮಾಡದೇ ಇರುವದು ಆಗದ ಮಾತು. ಊಟಕ್ಕೆ ಮತ್ತು ನಮಗೆ ಅತ್ಯವಶ್ಯಕವಾದ ವ್ಯವಹಾರದ ಸಾಮಗ್ರಿಗಳಿಗೆ ಅಷ್ಟಿಷ್ಟಾದರೂ ಕೆಲಸ ಮಾಡಲೇ ಬೇಕಷ್ಟೆ? ಶರೀರದಲ್ಲಿ ಶಕ್ತಿಯಿದ್ದು ಆಲಸ್ಯದಿಂದ ಕೆಲಸವನ್ನು ಮಾಡುವದಿಲ್ಲವೆಂದು ಕುಳಿತರೆ ಇಹಲೋಕದಲ್ಲಿಯೇ ರೋಗಾದಿಗಳು ನಮಗೆ ಬುದ್ಧಿಯನ್ನು ಕಲಿಸುವವು. ಆದ್ದರಿಂದ ಆ ವಿಷಯದಲ್ಲಿ ಹೆಚ್ಚು ವಿಚಾರವು ಬೇಕಿರುವದಿಲ್ಲ. ಇನ್ನು ಮನಸ್ಸಿನಲ್ಲಿ ಉತ್ಸಾಹವು ಮಾತ್ರ ಇದ್ದು ಶರೀರವು ಮುಪ್ಪು, ರೋಗ–ಮುಂತಾದ ಕಾರಣಗಳಿಂದ ಕೆಲಸವು ಆಗದೆ ಇರುವಾಗ, ಮತ್ತೊಬ್ಬರ ಸಹಾಯದಿಂದ ಅಥವಾ ಉಪಾಯಾಂತರಗಳಿಂದ ಕೆಲಸವನ್ನು ಮಾಡಿಕೊಳ್ಳಬೇಕೆಂಬುದು ಸ್ಪಷ್ಟವೇ ಆಗಿದೆ.

ಈ ಸಂದರ್ಭದಲ್ಲಿ 'ಕೆಲಸ' ಎಂದರೆ ಶರೀರದಿಂದಾಗುವ ವ್ಯಾಪಾರವೆಂದೇ ಇಟ್ಟುಕೊಂಡಿರುತ್ತೇವೆ. ಅಲ್ಲವೆ? ಆದರೆ ವಾಚಿಕ, ಮಾನಸಿಕ–ಈ ಎರಡು ಬಗೆಯ ಕೆಲಸಗಳೂ ಇದ್ದೇ ಇರುತ್ತವೆಯಷ್ಟೆ? ಅವುಗಳಲ್ಲಿ ಮಾನಸಿಕವ್ಯಾಪಾರವಿಲ್ಲದೆ ಹೊರಗಿನ ಯಾವ ಕೆಲಸವೂ ಆಗುವದೇ ಇಲ್ಲವಾದ್ದರಿಂದ ನಿಜವಾಗಿ ನೋಡಿದರೆ ಅದೊಂದೇ 'ಕೆಲಸ' ಎಂಬ ಶಬ್ದಕ್ಕೆ ಅರ್ಥವೆಂದು ನಿರ್ಣಯಿಸುವದು ತಪ್ಪಾಗಲಾರದು, ಆದ್ದರಿಂದ ಭಗವಚ್ಚಿಂತನೆ, ನಾಮಸ್ಮರಣೆ–ಮುಂತಾದವೂ ಈ ಅರ್ಥದಲ್ಲಿ ಕೆಲಸಗಳೇ ಆಗುತ್ತವೆ.

ಶಾರೀರಕವಾದ ಕೆಲಸವನ್ನು ಮಾಡುತ್ತಾ ನಾಮಸ್ಮರಣೆ ಮಾಡಿದರೆ ಎರಡು ಬೇರೆ ಬೇರೆಯ ವಿಧದ ವಿರುದ್ಧಕರ್ಮವಾಗುವದಿಲ್ಲವೆ? ಇದಕ್ಕೆ ಹೇಗೆ ಮಾಡಬೇಕು?– ಎಂಬುದೊಂದು ಪ್ರಶ್ನೆಯು ಉಳಿದುಕೊಂಡಿತಷ್ಟೆ. ಅದಕ್ಕೆ ನನಗೆ ತೋರುವ ಉತ್ತರವೇನೆಂದರೆ ಹೊರಗಿನ ಕೆಲಸವು ಲೌಕಿಕ, ಒಳಗಿನ ನಾಮಸ್ಮರಣೆ ಆಧ್ಯಾತ್ಮಿಕ–

ಹೀಗೆ ಅವೆರಡಕ್ಕೂ ಭೇದವನ್ನು ಕಲ್ಪಿಸಿಕೊಂಡವರಿಗೆ ಇದೊಂದು ವಿರುದ್ಧ ಜೀವನವೇ ಸರಿ. ಆದರೆ ಹೊರಗೆ ಮಾಡುವ ಕೆಲಸಗಳನ್ನು ಪೃಥಕ್ಕರಿಸದೆ, ಇದೆಲ್ಲವೂ ಪರಮಾತ್ಮನ ಸೇವೆಗೆ–ಎಂದು ಮಾಡುವವರಿಗೆ ಈ ಕಷ್ಟವು ಬರುವದಿಲ್ಲ. ಈ ಜಗತ್ತೆಲ್ಲವೂ ಪರಮಾತ್ಮನ ಶಾಸನಕ್ಕೆ ಒಳಪಟ್ಟಿರುತ್ತದೆ; ಗಾಳಿ, ಬೆಂಕಿ, ಮಳೆ–ಮುಂತಾದವುಗಳು ಕೂಡ ಆತನ ನಿಯಮವನ್ನು ಮೀರುವದಿಲ್ಲ–ಎಂಬ ಉತ್ತಮವಾದ ಭಾವನೆ ಯಾವ ಮಹನೀಯರಿಗೆ ಬರುತ್ತದೆಯೋ ಅವರಿಗೆ ಹೊರಗಿನ ಕೆಲಸವೂ ಪರಮಾತ್ಮನ ಅರ್ಚನೆಯೇ ಆಗುತ್ತದೆ. ಲೋಕದಲ್ಲಿನಾವು ಮಾಡುವ ವ್ಯವಹಾರವೆಲ್ಲ ಒಂದಾನೊಂದು ಅನುಭವವನ್ನು ಸಂಪಾದಿಸಿಕೊಳ್ಳುವದಕ್ಕೇ ಆಗಿರುತ್ತದೆ. ಆ ಅನುಭವವು ಬಂದ ಮೇಲೆ ಯಾವ ವ್ಯಾಪಾರವೂ ಮನುಷ್ಯನಿಗೆ ಉಳಿದಿರುವಂತಿಲ್ಲ ಎಂಬುದೇ ಅಧ್ಯಾತ್ಮ ಶಾಸ್ತ್ರದ ಬೋಧೆಯಾಗಿದೆ.

ನಮಗೆಲ್ಲ ಒಂದೇ ಒಂದು ಗುರಿಯಿದೆ. ನಾವು ಅದನ್ನು ಅರಿತಿರಲಿ, ಅರಿಯದಿರಲಿ, ಪರಮೇಶ್ವರನ ಅಸ್ತಿತ್ವವನ್ನು ಎಲ್ಲೆಲ್ಲಿಯೂ ಕಂಡುಕೊಳ್ಳುವದೇ ನಮ್ಮ ಎಲ್ಲಾ ಜೀವನದ, ಎಲ್ಲಾ ವ್ಯವಹಾರದ ಹೆಗ್ಗುರಿಯಾಗಿರುತ್ತದೆ. ಇದನ್ನು ಸತ್ಪುರುಷರ ಬೋಧೆಯಿಂದಲೂ, ಸತ್ಸಂಗದಿಂದಲೂ ಅರಿತುಕೊಂಡವನಿಗೆ ಲೌಕಿಕ ವ್ಯವಹಾರವೊಂದು, ಅಧ್ಯಾತ್ಮಸಾಧನದ ವ್ಯವಹಾರವೊಂದು–ಎಂಬ ಕೃತಕಭೇದವು ಇರುವದಿಲ್ಲ. ಅಂಥ ವಿವೇಕಿಯು ಮಾಡುವ ಕೆಲಸವೆಲ್ಲ ಭಗವಂತನ ಅರ್ಚನೆಯೇ, ಆಡುವ ಮಾತೆಲ್ಲ ಭಗವಂತನ ಸ್ತೋತ್ರವೇ, ಮಾಡುವ ಭಾವನೆಯೆಲ್ಲ ಭಗವದ್ಭಾವನೆಯೇ.

ಭಗವಂತನ ಮಹಿಮೆಯೇ ಈ ಇಡಿಯ ವಿಶ್ವವು. ಅದನ್ನು ನಾವು ನಮ್ಮನಮ್ಮ ಅಲ್ಪಪ್ರಜ್ಞೆಯಿಂದ ಬಗೆಬಗೆಯಾಗಿ ಕಾಣುತ್ತಿರುವೆವು. ಶಾಸ್ತ್ರದ ಮತ್ತು ಸತ್ಪುರುಷರ ದೃಷ್ಟಿಯನ್ನವಲಂಬಿಸಿದರೆ ಪ್ರಪಂಚವನ್ನು ಬಿಟ್ಟು ಪರಮಾರ್ಥದ ಕಡೆಗೆ ತಿರುಗುವೆನೆಂಬ ಮಾತಿಗೆ ಅರ್ಥವಿಲ್ಲದೆ ಹೋಗುವದು, ಎಲ್ಲವೂ ಪರಮೇಶ್ವರನ ದಿವ್ಯ ಮಹಿಮೆಯೇ ಆಗಿರುವಾಗ ಯಾವದನ್ನು ಬಿಟ್ಟು ಯಾವದನ್ನು ಹಿಡಿಯುವದು? ಈ ಉತ್ತಮದೃಷ್ಟಿಯು ಆ ಭಗವಂತನ ಅನುಗ್ರಹದಿಂದ ತಮಗೂ ದೊರಕಲಿ ಎಂಬುದೇ ನನ್ನ ಹಾರೈಕೆ.

## 75. ಹವ್ಯಾಸಗಳನ್ನು ತಪ್ಪಿಸುವದು

(ಆಗಸ್ಟ್ 1952)

*"ಚಿಕ್ಕಂದಿನಲ್ಲಿ ಯಾರೋ ಸೇದಿ ಬಿಸಾಡಿದ್ದ ಒಂದು ಸಿಗರೇಟನ್ನು ಕುತೂಹಲದಿಂದ ತೆಗೆದುಕೊಂಡು ಸೇದಿದೆ. ಬರುಬರುತ್ತಾ ಅದರ ಅಭ್ಯಾಸವು ಬಲವಾಯಿತು. ಈಗ ಕೆಮ್ಮಿನ*

*ನಿವಾರಣೆಗೆ ಧೂಮಪಾನವು ಅತ್ಯವಶ್ಯವಾಗಿಬಿಟ್ಟಿದೆ. ಅದನ್ನು ಬಿಡುವದಕ್ಕೆ ಕೆಲವು ಸಲ ಪ್ರಯತ್ನಿಸಿರುವೆನು; ಆದರೆ ಅದು ಸಾಗಲಿಲ್ಲ. ಅದನ್ನು ಬಿಡುವದಕ್ಕೆ ಏನು ಮಾಡಬೇಕು? ತಮಗೆ ಏನಾದರೂ ಉಪಾಯವು ತಿಳಿದರೆ ಸೂಚಿಸಬೇಕು'' ಎಂದು ಬರೆದಿರುತ್ತೀರಿ.*

ನಾನು ಅಧ್ಯಾತ್ಮವಿಚಾರದಲ್ಲಿ ಆಸಕ್ತಿಯುಳ್ಳವನು. ಆದ್ದರಿಂದ ಇಂಥ ಹವ್ಯಾಸಗಳನ್ನು ತಪ್ಪಿಸುವ ಉಪಾಯಗಳು ಡಾಕ್ಟರಿಗೆ ಹೊಳೆಯುವಂತೆ ನನಗೆ ಬೇಗ ಹೊಳೆಯುವದಿಲ್ಲ. ಆದರೂ ನಿಮ್ಮ ಪ್ರಶ್ನೆಗೆ ನನಗೆ ತಿಳಿಯುವ ಉತ್ತರವನ್ನು ಮರೆಮಾಚದೆ ಬರೆಯುವದು ನನ್ನ ಕರ್ತವ್ಯವಾದ್ದರಿಂದ ಒಂದೆರಡು ವಾಕ್ಯಗಳನ್ನು ಬರೆಯುತ್ತೇನೆ. ಪ್ರಯೋಜನವೇನಾದರೂ ಕಂಡರೆ ಇದನ್ನು ಉಪಯೋಗಿಸಿಕೊಳ್ಳಿರಿ.

ಕೆಲವು ವೇಳೆಗಳಲ್ಲಿ ಹೊಗೆಯಸುತ್ತುಗಳನ್ನು ಕೊಳ್ಳುವಷ್ಟು ಹಣವುಕೂಡ ಇರುವದಿಲ್ಲ ಎಂದು ಬರೆದಿದ್ದೀರಷ್ಟೆ. ಧೂಮಪಾನದಿಂದ ಆಗುವ ಖರ್ಚನ್ನು ಸ್ವಲ್ಪ ಮನದಂದುಕೊಳ್ಳುವದು ನಿಮಗೆ ಲಾಭಕರವಾಗಬಹುದು. ಬಾಲ್ಯದಿಂದ ಅರುವತ್ತನೆಯ ವರ್ಷದವರೆಗೆ ಬಿಡದೆ ಧೂಮಪಾನಮಾಡುವದಕ್ಕೆ 75000 ರೂಪಾಯಿಗಳಷ್ಟು ಹಣವು ಬೇಕಾಗುವದೆಂದು ಒಬ್ಬ ಗಣಿತಜ್ಞನು ಲೆಕ್ಕ ಹಾಕಿ ಹೇಳಿದ್ದನು. ಇದನ್ನು ಆಗಾಗ್ಗೆ ಭಾವನೆಗೆ ತಂದುಕೊಳ್ಳುತ್ತಿರಿ.

ಹವ್ಯಾಸಗಳಲ್ಲಿ ಎಲೆಯಡಿಕೆ, ತಂಬಾಕು, ನಶ್ಯ, ಧೂಮಪಾನ, ಕಾಫೀ, ಟೀ, ಮದ್ಯ, ಇಸ್ಪೀಟು ಮೊದಲಾದ ಜೂಜುಗಳು, ಅಗಮ್ಯಾಗಮನ–ಮುಂತಾದವು ಪ್ರಸಿದ್ಧವಾಗಿರುತ್ತವೆ. ಇದನ್ನು ಉಪಯೋಗಿಸದಿದ್ದರೆ ನನಗೆ ತಲೆನೋವು ಬರುತ್ತದೆ, ಸಾಫಾಗಿ ಮಲವಿಸರ್ಜನೆಯಾಗುವದಿಲ್ಲ, ಅನ್ನವು ಜೀರ್ಣವಾಗುವದಿಲ್ಲ, ನಿದ್ರೆ ಹತ್ತುವದಿಲ್ಲ, ಬುದ್ಧಿ ಚುರುಕಾಗಿ ಕೆಲಸಮಾಡುವದಿಲ್ಲ, ಕೆಲಸವನ್ನು ಮಾಡುವದಕ್ಕೆ ಉತ್ಸಾಹವಿರುವದಿಲ್ಲ– ಎಂದು ಮುಂತಾಗಿ ಈ ವ್ಯಸನಗಳನ್ನು ಇಟ್ಟುಕೊಂಡಿರುವವರು ಹೇಳುತ್ತಿರುತ್ತಾರೆ. ಆದರೆ ತಲೆನೋವಿಗೆ, ಮಲವಿಸರ್ಜನೆಗೆ, ಅನ್ನವು ಜೀರ್ಣವಾಗುವದಕ್ಕೆ, ನಿದ್ರೆಹತ್ತುವದಕ್ಕೆ ಅಥವಾ ಬುದ್ಧಿಯ ಚಟುವಟಿಕೆಗೆ ಇವು ಹೇತುಗಳೆಂದು ಯಾವ ವೈದ್ಯರೂ ಉಪದೇಶಿಸುತ್ತಿಲ್ಲ; ಇವುಗಳ ಸಂಬಂಧವಿಲ್ಲದವರೂ ಉಪಾಯಾಂತರಗಳಿಂದ ತಮ್ಮ ಇಷ್ಟಾರ್ಥವನ್ನು ಪಡೆಯುತ್ತಿದಾರೆ. ಅನಿಷ್ಟಗಳನ್ನು ನಿವಾರಣೆಮಾಡಿಕೊಳ್ಳುತ್ತಲೂ ಇರುತ್ತಾರೆ. ಆದ್ದರಿಂದ ಇವೆಲ್ಲ ಕುಂಟುನೆಪಗಳೆಂದು ಸಿದ್ಧವಾಗುವದಿಲ್ಲವೆ? ಬಹು ದಿನಗಳಿಂದ ಈ ಹವ್ಯಾಸಗಳಿಗೆ ದಾಸನಾಗಿರುವವನ ಮನಸ್ಸು ಸ್ವಭಾವದಿಂದ ಇವುಗಳು ಇಲ್ಲದಿದ್ದರೆ ಯಾವದೋ ಭೂಕಂಪದಂಥ ಉತ್ಪಾತವು

ಆಗುವದೆಂದು ತಲ್ಲಣಿಸುತ್ತಿರುತ್ತದೆಯೇ ಹೊರತು ಇದರಲ್ಲಿ ನಿಜದ ಅಂಶವು ಎಳ್ಳಷ್ಟೂ ಇರುವದಿಲ್ಲ. ತಂಬಾಕು ಮುಂತಾದವನ್ನು ವೈದ್ಯರು ಕೆಲಕೆಲರೋಗಗಳಿಗೆ ಹಿತಮಿತವಾದ ಪರಿಣಾಮದಲ್ಲಿ ಚಿಕಿತ್ಸಾರೂಪವಾಗಿ ವಿಧಿಸುವದುಂಟು. ಅಂಥ ಸಂದರ್ಭಗಳಲ್ಲಿ ಹೊರತು ಇವನ್ನು ಉಪಯೋಗಿಸುವದು ಅಯುಕ್ತ. ಇದು ಜೀವನಕ್ಕೆ ಅವಶ್ಯವಲ್ಲವೆಂಬುದಿಷ್ಟೇ ಅಲ್ಲ, ಇವುಗಳಿಂದ ಸುಖಮಯವಾದ ಪೂರ್ಣಜೀವನಕ್ಕೆ ಪ್ರತಿಬಂಧಕವೇ ಇರುತ್ತದೆ ಎಂಬುದನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರಬೇಕು.

ಕೆಟ್ಟ ಹವ್ಯಾಸಗಳನ್ನು ಬಿಡುವದಕ್ಕೆ ಪ್ರಯತ್ನಮಾಡಿ ಕ್ರಮಕ್ರಮವಾಗಿ ಬಿಡುವೆನೆಂಬ ಭ್ರಮೆಗೆ ಸಿಕ್ಕಿಕೊಳ್ಳಬಾರದು. ಒಬ್ಬಿಬ್ಬರು ಹಾಗೂ ಪ್ರಯತ್ನಿಸಿ ಜಯಶೀಲರಾಗಿರಬಹುದು, ಆದರೆ ಬಹುಮಟ್ಟಿಗೆ ಇವುಗಳಲ್ಲಿರುವ ದೋಷವನ್ನು ಮನಗಂಡ ಒಡನೆ ಅವನ್ನು ಬಿಟ್ಟುಬಿಡುವದು ಲಾಭಕರವಾಗಿರುತ್ತದೆ. ಶರೀರದಲ್ಲಿರುವ ಪರಮಾತ್ಮನಿಗೆ ಇವುಗಳಿಂದ ಅಪಚಾರವಾಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಇವುಗಳೆಲ್ಲವೂ ಅಶುಚಿಪದಾರ್ಥ ಗಳು. ಅಶುಚಿಯಾದ ಕೃತ್ಯಗಳು, ಅಶುಚಿಯಾದ ಅಪವಿತ್ರವಾದ ಭಾವನೆಗಳಿಗೆ ಹುಲುಸಾದ ಗೊಬ್ಬರವಾಗಿರುತ್ತವೆ ಎಂಬುದನ್ನು ಲಕ್ಷ್ಯದಲ್ಲಿಟ್ಟಿರಬೇಕು.

ಆದರೆ ಇವುಗಳ ವಿಷಯವನ್ನು ಅಷ್ಟಾಗಿ ಮನಸ್ಸಿಗೆ ತಂದುಕೊಳ್ಳಬಾರದು. ವ್ಯಸನಗಳಲ್ಲಿ ಅಧ್ಯಾತ್ಮವಿದ್ಯಾವ್ಯಸನವೊಂದು, ಹರಿಪಾದಸೇವನ ವ್ಯಸನವೊಂದು– ಇವೆರಡೇ ಸೇವಿಸಬೇಕಾದವು ಎಂದು ಒಬ್ಬ ಸುಭಾಷಿತಕಾರನು ಹೇಳಿರುತ್ತಾನೆ. ಪರಮಾತ್ಮನ ನಾಮಸ್ಮರಣೆ, ಪರಮಾತ್ಮನ ಧ್ಯಾನ, ಸಾಧುಸಂತರ ಸೂಕ್ತಿಗಳ ಪಠನಮನನ, ಸಜ್ಜನರ ಸಂಗ–ಇವೇ ಮುಂತಾದ ಉಪಾಯಗಳನ್ನು ತಡವಿಲ್ಲದೆ ಸಂಪಾದಿಸಿಕೊಳ್ಳಿರಿ. ಸತ್ಸಂಗವೂ ಸದ್ಭಾವನೆಯೂ ಹೆಚ್ಚಾದಂತೆಲ್ಲ ಇವುಗಳ ನೆನಪು ಅಳಿಸಿಹೋಗುತ್ತದೆ. ಒಂದೊಂದು ಸಲ ವಾಸನೆಯ ಬಲದಿಂದ ಇವು ಮನಸ್ಸಿನಲ್ಲಿ ಮಿಂಚಬಹುದು. ಆದರೆ ಸಾತ್ತ್ವಿಕವಾದ ಭಕ್ತಿಜ್ಞಾನವೈರಾಗ್ಯಗಳ ವಿಚಾರಗಳಿಂದ ತುಂಬಿರುವ ಮನಸ್ಸಿನಲ್ಲಿ ಇವುಗಳ ಭಾವನೆಗಳಿಗೆ ಒಲವು ಬರುಬರುತ್ತಾ ಕುಗ್ಗುವದು. ಬಿಸಿಲುಗಾಳಿಗಳಿರುವ ಬಟ್ಟ ಬಯಲಿನಲ್ಲಿ ವಿಷಕ್ರಿಮಿಗಳು ಬದುಕಲಾರವಲ್ಲವೆ? ಹಾಗೆಯೇ ಅಧ್ಯಾತ್ಮ ಸಾಧನೆಯ ಬಿಸಿಲುಗಾಳಿಗಳಿಗಿರುವ ಅಂತಃಕರಣದಲ್ಲಿ ಇವಕ್ಕೆ ಅವಕಾಶವೇ ಇರುವದಿಲ್ಲ.

# ಸಂಸ್ಥಾಪಕರ ಸ್ಮರಣೆ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರಜೀವನ ಮತ್ತು ಅವರ ಅಸಾಧಾರಣ ಶ್ರೇಷ್ಠ ಸಾಧನೆಯನ್ನು ಅವಲೋಕಿಸಿದಾಗ, ಅವರ ಜನ್ಮ ಮತ್ತು ಬಾಳು ಎಲ್ಲವೂ ವೇದಾಂತಾಧ್ಯಯನ ಮತ್ತು ವೇದಾಂತ ಪ್ರಸಾರಕ್ಕೇ ಮೀಸಲಾಗಿರಬೇಕೆಂದು ಭಗವಂತನ ಇಚ್ಛೆ ಮತ್ತು ನಿಯಾಮಕವಾಗಿತ್ತೆಂದು ತೋರುತ್ತದೆ. ಇದೇನೂ ಉತ್ಪ್ರೇಕ್ಷೆಯಲ್ಲ. ಏಕೆಂದರೆ ಇನ್ನೂ ಅವರ ವಿದ್ಯಾರ್ಥಿದೆಶೆಯಲ್ಲಿಯೇ ತರಗತಿಯ ಸಂಸ್ಕೃತ ಪಾಠ ಪುಸ್ತಕವನ್ನು ಕೇಳಿದಾಗ ಅಂಗಡಿಯವರು ಕೊಟ್ಟದ್ದು "ಭಗವದ್ಗೀತಾ ಭಾಷ್ಯ" (ಅತ್ಯಂತ ಅನಿರೀಕ್ಷಿತವಾದ ಘಟನೆಯಿಂದ ನನಗೆ ಅರಿವಿಲ್ಲದೆಯೇ ಭಗವದ್ಗೀತಾ ಭಾಷ್ಯದಲ್ಲಿ ಪ್ರವೇಶವಾಯಿತು – ಶ್ರೀಗಳು), ಮತ್ತೊಮ್ಮೆ ಅಗ್ಗದ ಸಣ್ಣ ಪುಸ್ತಕ ಕೋರಿದಾಗ ಕೈಗೆ ಬಂದದ್ದು 'ವಿವೇಕ ಚೂಡಾಮಣಿ', ಸೆಂಟ್ರಲ್ ಕಾಲೇಜಿನ ಎಫ್.ಎ. ತರಗತಿಯಲ್ಲಿದ್ದಾಗ ಶ್ರೀಕೃಷ್ಣಸ್ವಾಮಿ ಅಯ್ಯರ್‌ರವರ ಮನೆಯಲ್ಲಿ ಅವರಿಂದ ಕೆಲವು ವೇದಾಂತ ಪಾಠಗಳು ಹಾಗೂ ಸೂತ ಸಂಹಿತೆಯನ್ನು ಓದಲು ಅವರ ಪ್ರೋತ್ಸಾಹ...... ಹೀಗೆ ಪ್ರವೃತ್ತಿ, ಉತ್ಸುಕತೆ, ಕ್ರಿಯಾಪ್ರಯತ್ನ ಹರಿದದ್ದೇ ವೇದಾಂತ ಮಾರ್ಗದಲ್ಲಿ.

"ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ............ ಘಟನೆಗಳ ನಡುವೆ ಶ್ರೀ ಸುಬ್ಬರಾಯರು (ಶ್ರೀಗಳವರ ಪೂರ್ವಾಶ್ರಮದ ಹೆಸರು) ಸಾಧಿಸಿದ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ಶ್ರೀ ಶ್ರೀಶಿವಾಭಿನವನೃಸಿಂಹ ಭಾರತೀ ಸ್ವಾಮಿಗಳಿಂದ ಶ್ರೀ ಶಾಂಕರಭಾಷ್ಯ ಶಾಂತಿಪಾಠ, ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳ (ಮಾರ್ಗದರ್ಶನ), ಕೃಷ್ಣಸ್ವಾಮಿಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು ಮುಂತಾದವರ ಸಹವಾಸ ಸುಬ್ಬರಾಯರಿಗೆ ದೇವದತ್ತವರಗಳಾಗಿ ಪರಿಣಮಿಸಿದವು......... ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀಗಳೇ ನಿದರ್ಶನ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ, ಬಳಸಿದ ಪ್ರೌಢಪಾಂಡಿತ್ಯ, ಶೈಲಿ ವಿಸ್ಮಯಕಾರಿಯಾದದ್ದು. ಶ್ರೀಗಳವರ ಅಧ್ಯಯನ ಆಳ, ಜನೋಪಯೋಗವಾಗಲೆಂಬ ಹೃದಯದ ಕಳಕಳಿ ಗಮನೀಯ. ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು. ಮತ್ತೆ ಮತ್ತೆ ಓದಬೇಕಾದವು.– ಈ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ"– ಶ್ರೀ ಎಸ್.ರಂಗನಾಥ ಶರ್ಮ (ಶ್ರೀಗಳವರ ಆತ್ಮಚರಿತ್ರೆಯ 2006 ಮುನ್ನುಡಿಯಲ್ಲಿ). ಪಂಡಿತರಾಗಿದ್ದ ಶ್ರೀ ಲಕ್ಷ್ಮೀನರಸಿಂಹಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿದ 15–18 ಗ್ರಂಥಗಳು ಈ ಮೊದಲೇ ಪ್ರಕಟವಾಗಿವೆ. ಅನಂತರದಲ್ಲೂ ಕೆಲವು ಸಂಪುಟಗಳು ಬಂದಿವೆ. "ವೇದಾಂತ ಸಂದೇಶಗಳು" ಎಂಬ ಈ ಕೃತಿ ಶ್ರೇಣಿಯಲ್ಲಿ ಇದುವರೆಗೆ ನಾಲ್ಕು ಸಂಪುಟಗಳು ಪ್ರಕಟವಾಗಿ ಶ್ರೀಶ್ರೀಗಳವರ ಹಿತವಚನಗಳು ಎಂಬ ಶೀರ್ಷಿಕೆಯಲ್ಲಿ ಐದನೆಯ ಸಂಪುಟ ಪ್ರಕಾಶನಗೊಂಡಿದೆ. ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್॥